JJ50

(B) 025253

ಸುವರ್ಣ ಕರ್ನಾಟಕ–2006

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಹನ್ನೆರಡನೇ ವಿಧಾನಸಭೆ ಮೂರನೆಯ ಅಧಿವೇಶನ
THIRD SESSION OF THE TWELFTH LEGISLATIVE ASSEMBLY

ಸಂಪುಟ – ೩ (ಕ್ರಮಾಂಕ ೧ ರಿಂದ ೩) Volume - 3 (No. 1 to 3)

(೧ನೇ ಮಾರ್ಚ್ ೨೦೦೬, ೨ನೇ ಮಾರ್ಚ್ ೨೦೦೬ ಹಾಗೂ ೩ನೇ ಮಾರ್ಚ್ ೨೦೦೬)
(1st March 2006, 2nd March 2006 and 3rd March 2006)



ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

(B) 025253

ಕರ್ನಾಟಕ ವಿಧಾನಸಭೆ

ಹನ್ನೆರಡನೇ ವಿಧಾನಸಭೆ
ಮೂರನೆಯ ಅಧಿವೇಶನ

ಅಧ್ಯಕ್ಷರು
ಶ್ರೀ ಕೃಷ್ಣ

ಉಪಾಧ್ಯಕ್ಷರು
ಶ್ರೀ ಎನ್.ವೈ. ಗೋಪಾಲಕೃಷ್ಣ

ಕಾರ್ಯದರ್ಶಿ
ಶ್ರೀ ಟಿ. ರಾಜಣ್ಣ

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ಹನ್ನೆರಡನೇ ವಿಧಾನಸಭೆ ಮೂರನೆಯ ಅಧಿವೇಶನ

THIRD SESSION OF THE TWELFTH LEGISLATIVE ASSEMBLY

ಸಂಪುಟ – ೩ (ಕ್ರಮಾಂಕ ೧ ರಿಂದ ೩) Volume - 3 (No. 1 to 3)

(೧ನೇ ಮಾರ್ಚ್ ೨೦೦೬, ೨ನೇ ಮಾರ್ಚ್ ೨೦೦೬ ಹಾಗೂ ೩ನೇ ಮಾರ್ಚ್ ೨೦೦೬)

2) ವಿತ್ತೀಯ ಕಾರ್ಯಕಲಾಪ

– ಶ್ರೀ ಬಿ ಎಸ್ ಯಡಿಯೂರಪ್ಪ 5
(ಉಪ ಮುಖ್ಯಮಂತ್ರಿಗಳು)

3) ಮಾನ್ಯ ಸಭಾಧ್ಯಕ್ಷರು ನೀಡಿದ್ದ ತೀರ್ಪನ್ನು ಪುನರ್ ಪರಿಶೀಲನೆ ಮಾಡಲು ಮನವಿ

ವಿಷಯ ಸನ್ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯವನ್ನು ಮಂಡಿಸುವಂತೆ ನೀಡಿರುವ ತೀರ್ಪು. 5–38

– ಶ್ರೀ ಮಲ್ಲಿಕಾರ್ಜುನ ಖರ್ಗೆ
– ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)
– ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)
– ಶ್ರೀ ಜೆ ಸಿ. ಮಾಧುಸ್ವಾಮಿ
– ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)
– ಶ್ರೀ ಪಿ.ಜಿ.ಆರ್ ಸಿಂಧ್ಯಾ
– ಶ್ರೀ ಆರಗ ಜ್ಞಾನೇಂದ್ರ
– ಶ್ರೀ ಸಿದ್ದರಾಮಯ್ಯ
– ಶ್ರೀ ಬಿ ಎಸ್ ಹೊರಟ್ಟಿ
(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)
– ಶ್ರೀ ವಾಟಾಳ್ ನಾಗರಾಜ್

ಪುಟ ಸಂಖ್ಯೆ

– ಶ್ರೀ ಎ.ಟಿ. ರಾಮಸ್ವಾಮಿ
– ಶ್ರೀ ಕೃಷ್ಣ ಬೈರೇಗೌಡ
– ಶ್ರೀ ಜಿ.ವಿ. ಶ್ರೀರಾಮರೆಡ್ಡಿ
– ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು)
– ಶ್ರೀ ಮಲ್ಲಿಕಾರ್ಜುನ ಖರ್ಗೆ
– ಶ್ರೀ ಸಿದ್ದರಾಮಯ್ಯ

4) ವಿತ್ತೀಯ ಕಾರ್ಯಕಲಾಪ: **38–39**

2005–06ನೇ ಸಾಲಿನ ಪೂರಕ ಅಂದಾಜುಗಳ
(ಎರಡನೆಯ ಕಂತು) ಮಂಡನೆ.
– ಶ್ರೀ ಬಿ.ಎಸ್. ಯಡಿಯೂರಪ್ಪ
(ಉಪ ಮುಖ್ಯಮಂತ್ರಿಗಳು)
(ದಿನಾಂಕ: 02–03–06 ರಂದು ಮಂಡಿಸುವಂತೆ ಸೂಚಿಸಲಾಯಿತು)

5) ಪ್ರಕಟಣೆ: **39**

ವಿಷಯ: ವಿಧಾನ ಸಭೆಯ ಸರ್ಕಾರಿ ಮುಖ್ಯ ಸಚೇತಕರ ನೇಮಕ.

ಗುರುವಾರ, ದಿನಾಂಕ 2ನೇ ಮಾರ್ಚ್ 2006

1) ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಮಂಡಿಸುವ ಬಗ್ಗೆ. **40–43**

2) ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆ (ಮುಂದು). **43–46**

ಶ್ರೀ ಹೆಚ್.ಎಸ್. ಮಹದೇವಪ್ರಸಾದ್
ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ
ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)
(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

3) ಸಭೆಯ ಮುಂದಿಡಲಾದ ಕಾಗದ ಪತ್ರಗಳು. **46–55**

ಅ) ಮೊದಲನೆಯ ಮತ್ತು ಎರಡನೆಯ ಪಟ್ಟಿಯ
ಕಾಗದ ಪತ್ರಗಳು.

4) ವಿತ್ತೀಯ ಕಾರ್ಯಕಲಾಪ. **55–58**

2005–06ನೇ ಸಾಲಿನ ಪೂರಕ ಅಂದಾಜುಗಳ
(ಎರಡನೆಯ ಕಂತು)
(ಮಂಡಿಸಲಾಯಿತು ಮತ್ತು ಅಂಗೀಕರಿಸಲಾಯಿತು)
– ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಪುಟ ಸಂಖ್ಯೆ

5) **ಶಾಸನ ರಚನೆ.** 58–61
(ವಿಧೇಯಕದ ಮಂಡನೆ, ಚರ್ಚೆ ಮತ್ತು ಅಂಗೀಕಾರ)
ಕರ್ನಾಟಕ ಧನ ವಿನಿಯೋಗ ವಿಧೇಯಕ 2006 (ಅನುಬಂಧ–I)
– ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

6) **ಅನುಬಂಧ–I** 61-64

ಶುಕ್ರವಾರ, ದಿನಾಂಕ 3ನೇ ಮಾರ್ಚ್ 2006

1) **ಅಧ್ಯಕ್ಷರ ಅಪ್ಪಣೆ ಮೇರೆಗೆ:** 65–106
ವಿಷಯ: ಧರಣಿ ನಡೆದಾಗ 2005–06ನೇ ಸಾಲಿನ ಧನವಿನಿಯೋಗ ವಿಧೇಯಕವನ್ನು ಮಂಡಿಸಿ ಚರ್ಚೆಗೆ ಅವಕಾಶ ಕೊಡದೆ ಮಂಜೂರಾತಿ ಪಡೆದಿದ್ದರ ಬಗ್ಗೆ ಆಕ್ಷೇಪಣೆ.
ಶ್ರೀ ಜೆ.ಸಿ. ಮಾಧುಸ್ವಾಮಿ
ಶ್ರೀ ಜಿ.ವಿ. ಶ್ರೀರಾಮರೆಡ್ಡಿ
ಶ್ರೀ ಕೆ.ಆರ್. ರಮೇಶ್‌ಕುಮಾರ್
ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)
ಶ್ರೀ ಜಗದೀಶ್ ಶೆಟ್ಟರ್
ಶ್ರೀ ಮಲ್ಲಿಕಾರ್ಜುನ ಖರ್ಗೆ
ಶ್ರೀ ಆರಗ ಜ್ಞಾನೇಂದ್ರ

2) **ವರದಿಗಳನ್ನೊಪ್ಪಿಸುವುದು:** 106–107
ಅ) ಅಧೀನ ಶಾಸನ ರಚನಾ ಸಮಿತಿಯ ಮೂವತ್ತೊಂದನೇ ವರದಿ.
ಶ್ರೀ ಕೆ.ಆರ್. ರಮೇಶ್‌ಕುಮಾರ್
ಆ) ಸಾರ್ವಜನಿಕ ಉದ್ಯಮಗಳ ಸಮಿತಿಯ ನೂರಒಂಭತ್ತು, ನೂರಹತ್ತು ಹಾಗೂ ನೂರ ಹನ್ನೊಂದನೇ ವರದಿ.
ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ
ಇ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಎರಡನೇ ಹಾಗೂ ಮೂರನೇ ವರದಿ.
ಅಧ್ಯಕ್ಷರು

ಪುಟ ಸಂಖ್ಯೆ

ಈ) ಅಂದಾಜುಗಳ ಸಮಿತಿಯ ಮೊದಲನೇ ಹಾಗೂ ಎರಡನೇ ವರದಿ.

ಅಧ್ಯಕ್ಷರು

ಊ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿಯ ಎರಡನೇ ವರದಿ.

ಶ್ರೀ ಕೆ. ಪ್ರಭಾಕರ ಬಂಗೇರ

ಊ) ಸರ್ಕಾರಿ ಭರವಸೆಗಳ ಸಮಿತಿಯ ವಿಶೇಷ ವರದಿ (ಸರ್ಕಾರಿ ಸಮಾರಂಭಗಳಲ್ಲಿ ಮಾನ್ಯ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡುವುದರ ಬಗ್ಗೆ.)

ಅಧ್ಯಕ್ಷರು

3) **ಅಧ್ಯಕ್ಷರ ಅಪ್ಪಣೆ ಮೇರೆಗೆ:** **107–135**

ವಿಷಯ: ಧರಣಿ ನಡೆದಾಗ 2005–06ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಿ ಚರ್ಚೆಗೆ ಅವಕಾಶ ಕೊಡದೆ ಮಂಜೂರಾತಿ ಪಡೆದಿದ್ದರ ಬಗ್ಗೆ ಆಕ್ಷೇಪಣೆ. – (ಮುಂದುವರೆದ ಚರ್ಚೆ)

ಶ್ರೀ ವಾಟಾಳ್ ನಾಗರಾಜ್

ಶ್ರೀ ಮಹಿಮಾ ಜೆ. ಪಟೇಲ್

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಅಪೂರ್ಣ)

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಶ್ರೀ ಕೆ.ಆರ್. ರಮೇಶ್‌ಕುಮಾರ್

ಪುಟ ಸಂಖ್ಯೆ

6) ಸಭೆಯ ಮುಂದಿಡಲಾದ ಕಾಗದ ಪತ್ರಗಳು: 142

ಕರ್ನಾಟಕ ವಿಧಾನ ಪರಿಷತ್ತು ಸಹಮತಿ ನೀಡಿದ 2005–06ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕ.

(ಮಂಡಿಸಲಾಯಿತು)

7) ಶಾಸನ ರಚನೆ: 142–183

ವಿಧೇಯಕ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ

ಕರ್ನಾಟಕ ವಿಧಾನ ಪರಿಷತ್ತು ಸಹಮತಿ ನೀಡದ 2005–06ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕ.

ಶ್ರೀ ಬಿ.ಎಸ್. ಯಡಿಯೂರಪ್ಪ
(ಉಪ ಮುಖ್ಯಮಂತ್ರಿಗಳು)
ಶ್ರೀ ಜೆ.ಸಿ. ಮಾಧುಸ್ವಾಮಿ
ಶ್ರೀ ಎಸ್. ರಾಜೇಂದ್ರನ್
ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ
ಶ್ರೀ ಜಿ.ವಿ. ಶ್ರೀರಾಮರೆಡ್ಡಿ
ಶ್ರೀ ಎಂ.ಪಿ. ಪ್ರಕಾಶ್
ಶ್ರೀ ಕೆ.ಆರ್. ರಮೇಶ್‌ಕುಮಾರ್
ಶ್ರೀ ಹೆಚ್.ಡಿ. ರೇವಣ್ಣ
(ಅಂಗೀಕರಿಸಲ್ಪಟ್ಟಿತು)

8) ಅನುಬಂಧ–1 183–185

* * * *

ಕರ್ನಾಟಕ ವಿಧಾನಸಭೆ

ಬುಧವಾರ 1ನೇ ಮಾರ್ಚ್ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 12 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಅಧ್ಯಕ್ಷರು: ಈಗ ಸಭೆಯ ಮುಂದಿಡಲಾದ ಕಾಗದ ಪತ್ರಗಳು.

1) ಸಭೆಯ ಮುಂದಿಡಲಾದ ಕಾಗದ ಪತ್ರಗಳು.

ಅ) ಮೊದಲನೆಯ ಮತ್ತು ಎರಡನೆಯ ಪಟ್ಟಿಯ ಕಾಗದ ಪತ್ರಗಳು.

I. ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, 1978ರ ಕರ್ನಾಟಕ ನಾಗರೀಕ ಸೇವಾ ನಿಯಮ 8(3)ರ ಪ್ರಕರಣದ ಮೇರೆಗೆ:

1) ದಿನಾಂಕ 11.11.2005ರ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 3 ಎಸ್‌ಡಿಇ 2004ನ್ನು ತಿದ್ದೋಲೆ ಮಾಡಿ ದಿನಾಂಕ 31.12.2005ರಂದು ಹೊರಡಿಸಲಾದ ಡಿಪಿಎಆರ್ 3 ಎಸ್‌ಡಿಇ 2004ನೇ ಸಂಖ್ಯೆಯ ಅಧಿಸೂಚನೆ.

2) ಕರ್ನಾಟಕ ನಾಗರೀಕ ಸೇವಾ (ಕೋಮು ಗಲಭೆಗಳಲ್ಲಿ ಮೃತರಾದ ವ್ಯಕ್ತಿಗಳ ಕುಟುಂಬ ಸದಸ್ಯರ ಅನುಕಂಪದ ಆಧಾರದ ಮೇಲೆ ನೇಮಕಾತಿ) (ವಿಶೇಷ) ನಿಯಮಗಳು 1993ರ ನಿಯಮ 4ಕ್ಕೆ ತಿದ್ದುಪಡಿ ಮಾಡಿ ದಿನಾಂಕ 31.01.2006 ರಂದು ಹೊರಡಿಸಲಾದ ಡಿಪಿಎಆರ್ 44 ಎಸ್‌ಸಿಎ 2005ನೇ ಸಂಖ್ಯೆಯ ಅಧಿಸೂಚನೆ.

3) 1977ರ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳ ನಿಯಮ 16–ಎಗೆ ತಿದ್ದುಪಡಿ ಮಾಡಿ ದಿನಾಂಕ 25–07–2005ರಂದು ಹೊರಡಿಸಲಾದ ಡಿಪಿಎಆರ್ 147 ಎಸ್‌ಆರ್‌ಆರ್ 2004ನೇ ಸಂಖ್ಯೆಯ ಅಧಿಸೂಚನೆ.

4) 1974ರ ಕರ್ನಾಟಕ ನಾಗರೀಕ ಸೇವಾ (ಸೇವಾ ಮತ್ತು ಭಾಷಾ ಪರೀಕ್ಷೆಗಳು) ನಿಯಮಗಳ ಅನುಸೂಚಿ–1ಕ್ಕೆ ತಿದ್ದುಪಡಿ ಮಾಡಿ ದಿನಾಂಕ 05–08–2005ರಂದು ಹೊರಡಿಸಲಾದ ಡಿಪಿಎಆರ್ 32 ಎಸ್‌ಎಸ್‌ಆರ್ 2004ನೇ ಸಂಖ್ಯೆಯ ಅಧಿಸೂಚನೆ.

5) 1983ರ ಕರ್ನಾಟಕ ನಾಗರೀಕ ಸೇವಾ (ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರ ಹುದ್ದೆಗಳಿಗೆ ನೇಮಕಾತಿ) ನಿಯಮಗಳ ನಿಯಮ 1ಕ್ಕೆ ತಿದ್ದುಪಡಿ ಮಾಡಿ ದಿನಾಂಕ 21–06–2004 ರಂದು ಹೊರಡಿಸಲಾದ ಡಿಪಿಎಆರ್ 29 ಎಸ್‌ಸಿಆರ್ 2003ನೇ ಸಂಖ್ಯೆಯ ಅಧಿಸೂಚನೆ.

6) 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ಅನುಸೂಚಿ–2ಕ್ಕೆ ತಿದ್ದುಪಡಿ ಮಾಡಿ ದಿನಾಂಕ 01–08–2005ರಂದು ಹೊರಡಿಸಲಾದ ಡಿಪಿಎಆರ್ 7 ಎಸ್‌ಡಿಇ 2005ನೇ ಸಂಖ್ಯೆಯ ಅಧಿಸೂಚನೆ.

7) **ಮಾನ್ಯ ಸಚಿವರು:** ರಾಜ್ಯ ಸಚಿವರ ಆಪ್ತ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗುತ್ತಿಗೆ ಆಧಾರದ ಮೇಲೆ ಗ್ರೂಪ್ ಸಿ ಮತ್ತು ಡಿ ನೌಕರರನ್ನು ಕರ್ನಾಟಕ ಸರ್ಕಾರದ ಸಚಿವಾಲಯದ ಸೇವೆಯಲ್ಲಿ ಸಕ್ರಮಗೊಳಿಸುವ ಬಗ್ಗೆ ದಿನಾಂಕ 07–04–2005 ರಂದು ಹೊರಡಿಸಲಾದ ಡಿಪಿಎಆರ್ 118 ಎಸ್‌ಆರ್‌ಡಿ 2004ನೇ ಸಂಖ್ಯೆಯ ಅಧಿಸೂಚನೆ.

8) 1977ರ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳಿಗೆ ತಿದ್ದುಪಡಿ ಮಾಡಿ ದಿನಾಂಕ 03–09–2005 ರಂದು ಹೊರಡಿಸಲಾದ ಡಿಪಿಎಆರ್ 50 ಎಸ್ಆರ್ಆರ್ 2000ನೇ ಸಂಖ್ಯೆಯ ಅಧಿಸೂಚನೆ.

9) 1963ರ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳ ನಿಯಮ 2ಕ್ಕೆ ತಿದ್ದುಪಡಿ ಮಾಡಿ ದಿನಾಂಕ 02–09–2005ರಂದು ಹೊರಡಿಸಲಾದ ಡಿಪಿಎಆರ್ 2 ಎಸ್ಎಂಆರ್ 2005ನೇ ಸಂಖ್ಯೆಯ ಅಧಿಸೂಚನೆ.

10) 1974ರ ಕರ್ನಾಟಕ ಸಿವಿಲ್ ಸೇವೆಗಳು (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳಿಗೆ ತಿದ್ದುಪಡಿ ಮಾಡಿ ದಿನಾಂಕ 23–11–2005 ರಂದು ಹೊರಡಿಸಲಾದ ಡಿಪಿಎಆರ್ 38 ಎಸ್ಎಸ್ಆರ್ 2004ನೇ ಸಂಖ್ಯೆಯ ಅಧಿಸೂಚನೆ.

11) 1957ರ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 8ಕ್ಕೆ ತಿದ್ದುಪಡಿ ಮಾಡಿ ದಿನಾಂಕ 17–11–2005 ರಂದು ಹೊರಡಿಸಲಾದ ಡಿಪಿಎಆರ್ 16 ಎಸ್ಡಿಇ 2004ನೇ ಸಂಖ್ಯೆಯ ಅಧಿಸೂಚನೆ.

12) 1988ರ ಕರ್ನಾಟಕ ಲೋಕಾಯುಕ್ತ (ಅಧಿಕಾರಿಗಳು ಮತ್ತು ನೌಕರರ ವೃಂದ, ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳ 2ನೇ ಅನುಸೂಚಿಗೆ ತಿದ್ದುಪಡಿ ಮಾಡಿ ದಿನಾಂಕ 17–06–2005ರಂದು ಹೊರಡಿಸಲಾದ ಡಿಪಿಎಆರ್ 55 ಎಸ್ಎಲ್ಯು 2004ನೇ ಸಂಖ್ಯೆಯ ಅಧಿಸೂಚನೆ.

13) 1957ರ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, ಅನುಸೂಚಿ II ಮತ್ತು IIIರ (ಆಡಳಿತ ತರಬೇತಿ ಸಂಸ್ಥೆ ಮತ್ತು ಜಿಲ್ಲಾ ತರಬೇತಿ ಸಂಸ್ಥೆಗಳು) ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ 25.11.2005ರಂದು ಹೊರಡಿಸಲಾದ ಡಿಪಿಎಆರ್ 6 ಎಸ್ಡಿಇ 2005ನೇ ಸಂಖ್ಯೆಯ ಅಧಿಸೂಚನೆ.

2005ರ ಕೇಂದ್ರ ಅಧಿನಿಯಮ ಸೆಕ್ಷನ್ 29(2)ರ ಪ್ರಕರಣದ ಮೇರೆಗೆ.

14) 2005ರ ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ನಿಯಮಗಳು 4ನೇ ಪ್ರಕರಣದಡಿಯಲ್ಲಿ ಕೆಲವು ಇತರೆ ಮಾಹಿತಿ ಮುಂತಾದವುಗಳನ್ನು ಪ್ರಕಟಪಡಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ: 11.10.2005ರ ಡಿಪಿಎಆರ್ 74 ಆರ್ಟಿಐ 2005(ಭಾಗ–2)ರ ಅಧಿಸೂಚನೆ.

1964ರ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮ 20ನೇ ಪ್ರಕರಣದ ಮೇರೆಗೆ:

15) ಬಳ್ಳಾರಿ ಜಿಲ್ಲೆ ದೋಣಿಮಲೈನಲ್ಲಿರುವ ನ್ಯಾಷನಲ್ ಮಿನರಲ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಆಡಿಟೋರಿಯಂನಲ್ಲಿ ಪ್ರತಿ ಶನಿವಾರ ಮತ್ತು ಭಾನುವಾರ ಹಾಗೂ ಸಾರ್ವತ್ರಿಕ ರಜಾ ದಿನಗಳಿಗೆ ಮಾತ್ರ ಸೀಮಿತಗೊಳಿಸಿ ದಿನಾಂಕ: 01–09–2005ರಿಂದ 31–12–2005ರ ವರೆಗೆ 35 ಎಂ.ಎಂ. ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡಿರುವ ಬಗ್ಗೆ ದಿನಾಂಕ: 16–08–2005ರಂದು ಹೊರಡಿಸಲಾದ ಹೆಚ್‌ಡಿ 32 ಸಿಎನ್‌ಎ 2005ನೇ ಸಂಖ್ಯೆಯ ಅಧಿಸೂಚನೆ.

16) ಉತ್ತರ ಕನ್ನಡ ಜಿಲ್ಲೆ, ಕಾರವಾರ, ಬಿಣಗಾಲದಲ್ಲಿರುವ ಪಿ.ಡಿ ಮತ್ತು ಸಿ ಸೋಲಾರಿಸ್ ಕೆಮ್‌ಟೆಕ್ ಲಿಮಿಟೆಡ್ ಆವರಣದಲ್ಲಿರುವ ಬಯಲು ರಂಗಮಂದಿರದಲ್ಲಿ ಪ್ರತಿ ಶನಿವಾರ ಮತ್ತು ಭಾನುವಾರಗಳಿಗೆ ಮಾತ್ರ ಸೀಮಿತಗೊಳಿಸಿ ದಿನಾಂಕ 01–10–2005 ರಿಂದ 31–12–2005ರ ವರೆಗೆ 35 ಎಂ.ಎಂ. ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡಿರುವ ಬಗ್ಗೆ ದಿನಾಂಕ 22–08–2005 ರಂದು ಹೊರಡಿಸಲಾದ ಹೆಚ್‌ಡಿ 22 ಸಿಎನ್‌ಎ 2005ನೇ ಸಂಖ್ಯೆಯ ಅಧಿಸೂಚನೆ.

1982ರ ಕೇಂದ್ರ ಚೀಟಿ ಅಧಿನಿಯಮ 89(3)ರ ಪ್ರಕರಣದ ಮೇರೆಗೆ:

17) 1983ರ ಕರ್ನಾಟಕ ಚೀಟಿ ನಿಧಿ ನಿಯಮಗಳ ನಿಯಮ 33ಕ್ಕೆ ತಿದ್ದುಪಡಿ ಮಾಡಿ 33ಎ ಅನ್ನು ಹೊಸದಾಗಿ ಸೇರ್ಪಡೆಗೊಳಿಸಿ ದಿನಾಂಕ 22.11.2004ರಂದು ಹೊರಡಿಸಲಾದ ಸಿಎಂಡಬ್ಲ್ಯೂ:01:ಸಿಎಂಎಲ್:2004ನೇ ಸಂಖ್ಯೆಯ ಅಧಿಸೂಚನೆ.

1961ರ ಕರ್ನಾಟಕ ಗಿರಿವಿದಾರರ ಅಧಿನಿಯಮ 22(3)ರ ಪ್ರಕರಣದ ಮೇರೆಗೆ:

18) 1966ರ ಕರ್ನಾಟಕ ಗಿರಿವಿದಾರರ ನಿಯಮಗಳ ನಿಯಮ 3, 13, 20 ಮತ್ತು ನಮೂನೆಗಳಿಗೆ ತಿದ್ದುಪಡಿ ಮಾಡಿ ದಿನಾಂಕ 25.04.2005ರಂದು ಹೊರಡಿಸಲಾದ ಸಿಎಂಡಬ್ಲ್ಯೂ:06:ಸಿಎಂಎಲ್: 2004ನೇ ಸಂಖ್ಯೆಯ ಅಧಿಸೂಚನೆ.

1961ರ ಕರ್ನಾಟಕ ಲೇವಾದೇವಿದಾರರ ಅಧಿನಿಯಮ 44(3)ರ ಪ್ರಕರಣದ ಮೇರೆಗೆ:

19) 1965ರ ಕರ್ನಾಟಕ ಲೇವಾದೇವಿದಾರರ ನಿಯಮಗಳ ನಿಯಮ 5ಕ್ಕೆ ತಿದ್ದುಪಡಿ ಮಾಡಿ ದಿನಾಂಕ 25.04.2005ರಂದು ಹೊರಡಿಸಲಾದ ಸಿಎಂಡಬ್ಲ್ಯೂ:04:ಸಿಎಂಎಲ್: 2004ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

II 1952ರ ವಿಚಾರಣಾ ಆಯೋಗದ ಅಧಿನಿಯಮ 3(4)ರ ಮೇರೆಗೆ:

1) ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಯೆಡವನಹಳ್ಳಿಯ ಜಾತ್ರೆಯ ಬಗ್ಗೆ ಶ್ರೀ ಎಸ್.ಬಿ.ಎನ್. ಪ್ರಕಾಶ್ ವಿಚಾರಣಾ ಆಯೋಗ ವರದಿ.

ಭಾರತ ಸಂವಿಧಾನದ ಅನುಚ್ಛೇದ 323ರ ಪರಿಚ್ಛೇದ (2)ರ ಅನ್ವಯದ ಮೇರೆಗೆ:

1. ಕರ್ನಾಟಕ ಲೋಕಸೇವಾ ಆಯೋಗದ 2004–05ನೇ ಸಾಲಿನ ವಾರ್ಷಿಕ ವರದಿ.

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

1. ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ 1985ನೇ ಸಾಲಿನ ಕಾಯ್ದೆಯ ಅಧಿನಿಯಮ 13 ರನ್ವಯ:

1. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ವಾರ್ಷಿಕ ವರದಿ.

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5) ಮತ್ತು 49ನೇ ಪ್ರಕರಣದ ಮೇರೆಗೆ:

1. ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ 2003–04ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು 2004–05ನೇ ಸಾಲಿನ ವಾರ್ಷಿಕ ವರದಿ.
2. ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ 2003–04ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ ಹಾಗೂ 2004–05ನೇ ಸಾಲಿನ ವಾರ್ಷಿಕ ವರದಿ.
3. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ವಾರ್ಷಿಕ ವರದಿ.
4. ಗದಗ–ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

5. ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
6. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2001–02ನೇ ಸಾಲಿನ ವಾರ್ಷಿಕ ವರದಿ ಮತ್ತು 2004–05ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
7. ಮಡಕೇರಿ ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
8. ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
9. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
10. ಕೆ.ಜಿ.ಎಫ್., ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.
11. ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
12. ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
13. ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
14. ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
15. ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
16. ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
17. ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
18. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
19. ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
20. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ಲೆಕ್ಕ ತಪಾಸಣಾ ವರದಿ.
21. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ಲೆಕ್ಕ ತನಿಖಾ ವರದಿ.
22. ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ಲೆಕ್ಕ ತನಿಖಾ ವರದಿ.
23. ವಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

1973ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿನಿಯಮ, 39(1)ರ ಮೇರೆಗೆ:

1. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2004–05ನೇ ಸಾಲಿನ ವಾರ್ಷಿಕ ವರದಿ.

1964ರ ಬೆಂಗಳೂರು ಜಲಮಂಡಳಿಯ ಅಧಿನಿಯಮ 17(1)ರ ಪ್ರಕರಣದ ಮೇರೆಗೆ:

1. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

1. ಬೆಂಗಳೂರು ಸಮೂಹ ತ್ವರಿತ ಸಾರಿಗೆ ನಿಯಮಿತದ 2004–05ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

1. ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ 200I–02, 2002–03 ಹಾಗೂ 2003–04ನೇ ಸಾಲುಗಳ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
4. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
5. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ 2004–05ನೇ ಸಾಲಿನ ವಾರ್ಷಿಕ ವರದಿ.
6. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
7. ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ (ಮೆಸ್ಕಾಂ) ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
8. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
9. ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.

1962ರ ಉಗ್ರಾಣ ನಿಗಮ ಕಾಯ್ದೆಯ 31(ii)ರ ಪ್ರಕರಣದ ಮೇರೆಗೆ:

1. ಕರ್ನಾಟಕ ರಾಜ್ಯ ಉಗ್ರಾಣ ನಿಗಮದ 2002–03 ಹಾಗೂ 2003–04ನೇ ಸಾಲುಗಳ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

1. ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಶ್ರೀ ಕಂಠೀರವ ಸ್ಟುಡಿಯೋ ನಿಯಮಿತ, ಕಂಠೀರವ ನಗರ, ಬೆಂಗಳೂರಿನ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

2) ವಿತ್ತೀಯ ಕಾರ್ಯಕಲಾಪ

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವಂಥ 2005–06ನೇ ಸಾಲಿನ ಪೂರಕ . . . . . .

ಅಧ್ಯಕ್ಷರು: ಅದಲ್ಲ ಯಡಿಯೂರಪ್ಪನವರೆ,

ಶ್ರೀ ಬಿ.ಎಸ್. ಯಡಿಯೂರಪ್ಪ: ನನ್ನ ಹೆಸರಿನ ಮುಂದಿರುವ ಕಾಗದ . . .

3) ಮಾನ್ಯ ಸಭಾಧ್ಯಕ್ಷರು ನೀಡಿದ್ದ ತೀರ್ಪನ್ನು ಪುನರ್‌ಪರಿಶೀಲನೆ ಮಾಡಲು ಮನವಿ.

ವಿಷಯ: ಸನ್ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯವನ್ನು ಮಂಡಿಸುವಂತೆ ನೀಡಿರುವ ತೀರ್ಪು.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗುರುಮಿಠ್‌ಕಲ್): ಮಾನ್ಯ ಅಧ್ಯಕ್ಷರೆ, ಅದು ಇತ್ಯರ್ಥವಾಗುವುದಕ್ಕಿಂತ ಮೊದಲು ಇದನ್ನು ತೆಗೆದುಕೊಳ್ಳತಕ್ಕದ್ದು ಸರಿಯಲ್ಲ. ತಾವು ತೆಗೆದುಕೊಂಡಂಥ ನಿರ್ಣಯಕ್ಕೆ ನಾವೇನು ಪ್ರತಿಭಟನೆಯನ್ನೇನು ಮಾಡುತ್ತಿಲ್ಲವೆಂದು ನಾವು ಈಗಾಗಲೇ ಹೇಳಿದ್ದೇವೆ.

ಅಧ್ಯಕ್ಷರು: ಮೋಷನ್‌ಗೆ ಹೋದಾಗ ಇದರ ಬಗ್ಗೆ ಮಾತನಾಡೋಣ. ಮೊದಲು ಕಾಗದಪತ್ರಗಳನ್ನು ಮುಗಿಸೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ತೆಗೆದುಕೊಂಡ ನಿರ್ಣಯಕ್ಕೆ ನಾವೇನೂ ಪ್ರತಿಭಟನೆ ಮಾಡುತ್ತಿಲ್ಲ. ನಾವು ಮನವಿ ಮಾಡಿಕೊಳ್ಳುವುದೇನೆಂದರೆ, ತಾವು ಕೊಟ್ಟಂಥ ನಿರ್ಣಯವನ್ನು ಪನರ್‌ಪರಿಶೀಲನೆ ಮಾಡಿ. ಕಾರಣ ಇಷ್ಟೆ, ರೂಲ್ಸ್ ಆಫ್ ಪ್ರೊಸೀಜರ್ Cannot override the provisions of the Constitution. ಸಂವಿಧಾನ ಯಾವಾಗಲೂ ಕೂಡ ಸಾರ್ವಭೌಮ. ಅದರ ಕೆಳಗಡೆ ನಾವು ರೂಲ್ಸ್ ಮಾಡುತ್ತೇವೆ, ಕಾನೂನುಗಳನ್ನು ಮಾಡುತ್ತೇವೆ, ಇವೆಲ್ಲವನ್ನೂ ಕೂಡ ಮಾಡುವುದು ಸಂವಿಧಾನದ ಒಳಗಡೆ. ಆ ಸಂವಿಧಾನದ ವಿರುದ್ಧ ಯಾವುದೇ ಕಾನೂನು ಇರಲಿ, ರೂಲ್ಸ್ ಇರಲಿ ಅದು setaside ಆಗತಕ್ಕದ್ದು ಕೋರ್ಟ್‌ನಲ್ಲೂ ಇದೆ, ನಾವೂ ಕೂಡ ಅನೇಕ ಸಾರಿ ಕೋರ್ಟ್‌ಗೆ ಜಡ್ಜ್‌ಮೆಂಟ್ ಮೇಲೆ ಪುನರ್‌ಪರಿಶೀಲನೆ ಮಾಡುತ್ತೇವೆ. ಅದಕ್ಕೆ ನನ್ನ ಕಳಕಳಿಯ ಮನವಿ ಏನೆಂದರೆ ತಾವು ಪುನರ್‌ಪರಿಶೀಲನೆ ಮಾಡಿ. ಏಕೆಂದರೆ ಆರ್ಟಿಕಲ್ 175 ಕ್ಲಿಯರ್ ಆಗಿ ಇದೆ. ರಾಜ್ಯಪಾಲರು ಬಂದು ಮೆಸೇಜ್ ಕೊಡತಕ್ಕದ್ದಷ್ಟೇ ಹೊರತು 'Motion of Thanks' ಅದರಲ್ಲಿ ಬರುವುದಿಲ್ಲವೆಂದು ಕ್ಲಿಯರ್ ಕಟ್ ಆಗಿ ಆರ್ಟಿಕಲ್ 175ರಲ್ಲಿ ಹೇಳಿದೆ. ಅದೇ ರೀತಿ ತಮಗೂ ಗೊತ್ತಿದೆ, ಮನವರಿಕೆಯಾಗಿದೆ. ಆರ್ಟಿಕಲ್ 176ರ ಕೆಳಗೆ ಅದು ಮ್ಯಾಂಡೇಟರಿ ಪ್ರಾವಿಜನ್ ಇದ್ದು ಅವರು ಬಂದು ಈ ಸದನಕ್ಕೆ ಮಾತನಾಡಲೇಬೇಕು, ಮಾತನಾಡಿದ ನಂತರ ಅದಕ್ಕೆ ಟೈಮ್ ಫಿಕ್ಸ್ ಮಾಡತಕ್ಕದ್ದು, ಡೇಟ್ ಫಿಕ್ಸ್ ಮಾಡತಕ್ಕದ್ದು, ಚರ್ಚೆ ಮಾಡತಕ್ಕದ್ದು ಕಡ್ಡಾಯ, ಕಂಪಲ್ಸರಿ ಇರತಕ್ಕದ್ದು. ಅದಕ್ಕೆ ತಾವು ಇವತ್ತು ಮನ್ನಣೆ ಕೊಡಬೇಕಾಗಿತ್ತು. ಆದರೆ ದುರ್ದೈವವಶಾತ್ ಅದನ್ನು ತಾವು ತಳ್ಳಿಹಾಕಿದಿರಿ. ಇವತ್ತು ಆ ರೀತಿ ತಳ್ಳಿಹಾಕಿದ ಮೇಲೆ ನಮ್ಮ ಮುಂದೆ ಇರತಕ್ಕದ್ದು ಆರ್ಟಿಕಲ್ 175ರ ಕೆಳಗೆ ಮಾನ್ಯ ರಾಜ್ಯಪಾಲರು ಸ್ವತಃ ಒಂದು ನೋಟೀಸ್‌ನ್ನು ಕೊಟ್ಟು ನಾನು ಈ ಸದನಕ್ಕೆ ಬರುತ್ತೇನೆ, ನೀವೆಲ್ಲರೂ ಕೂಡ ಮೆಂಬರ್ಸ್ ಹಾಜರಾತಿಯನ್ನು ಕಡ್ಡಾಯಪಡಿಸಬೇಕೆಂದು ಹೇಳಿದ್ದರು. ಆದರೆ ಇದರ ಹಿಂದೆ ಆರ್ಟಿಕಲ್ 176 ಪ್ರಕಾರ ನೋಟೀಸ್ ಕೊಟ್ಟಿದ್ದರು ಅದರಲ್ಲೇನಿತ್ತು? ಅವರು ಹೇಳಿದ್ದೇನೆಂದರೆ ನಾನು

ಕೆಲವು ಕಾರಣಗಳಿಂದ ಈ ಸದನವನ್ನು ಕರೆಯಲು ಹೇಳುತ್ತಿದ್ದೇನೆ, ಆ ಕಾರಣಗಳೇನು ಎಂಬುದನ್ನು ಸದನದ ಮುಂದಿಡಬೇಕಾಗುತ್ತದೆ, ಅದಕ್ಕೆ ತಾವು ಸದನವನ್ನು ಕರೆಯಿರಿ ಎಂದು ಹೇಳಿದ ಮೇಲೆ ಆ ಬಗ್ಗೆ ವಿಶೇಷವಾಗಿ ತಾವೆಲ್ಲರೂ, ಸರ್ಕಾರದವರು ಒಂದು ನಿರ್ಣಯ ತೆಗೆದುಕೊಂಡು ಕ್ಯಾಬಿನೆಟ್‌ನಲ್ಲಿ ಅದರ ಬಗ್ಗೆ ಚರ್ಚೆ ಮಾಡಿ ಒಂದು ಸವಿಸ್ತಾರವಾದಂಥ ಡಾಕ್ಯುಮೆಂಟ್‌ನ್ನು ತಯಾರು ಮಾಡಿ ಅವರ ಮುಖಾಂತರ ಓದಿಸಿ ಅದು ಜಂಟಿ ಸದನದಲ್ಲಿ ಇಡತಕ್ಕದ್ದು ಮ್ಯಾಂಡೇಟರಿ ಪ್ರಾವಿಜನ್. ಅದಕ್ಕೆ ನಾವು ಅವರಿಗೂ ಕೂಡ ಗೌರವ ಕೊಡೋಣ. ಗೌರ್ನರ್‌ರವರಿಗೂ ಕೂಡ ಅವಮಾನ ಮಾಡತಕ್ಕದ್ದು ಬೇಡ, ಅವರ ಬಗ್ಗೆ ಮಾತನಾಡತಕ್ಕ ಅವಶ್ಯಕತೆ ಇಲ್ಲ. ತಾವು ಸಂವಿಧಾನ ಬಾಹಿರವಾಗಿ ಕೊಟ್ಟಂಥ ತೀರ್ಮಾನವೇನಿದೆ ಅದನ್ನು ಪುನರ್‌ಪರಿಶೀಲನೆ ಮಾಡಬೇಕೆಂದು ನಾವು ಏಕೆ ಹೇಳುತ್ತಿದ್ದೇವೆಂದರೆ ಸಂವಿಧಾನದಲ್ಲಿ ಇದು ಕ್ಲಿಯರ್ ಕಟ್ ಆಗಿದೆ. Discretion ನಿಮಗೆ ಇದ್ದರೆ ನಾವು question ಮಾಡುತ್ತಿರಲಿಲ್ಲ. Rules of Procedure ಪ್ರಕಾರ ತಮಗೆ Discretion ಇದ್ದು ಆ ರೂಲ್ಸ್ completely ತಮ್ಮ ಅಧೀನದಲ್ಲಿದ್ದು ಚಲಾಯಿಸಲೇಬೇಕು ಎಂಬ ಪ್ರಾವಿಜನ್ ಇದ್ದಿದ್ದರೆ ಮಾಡಬಹುದಿತ್ತು. ಇಲ್ಲವೇ entire rules suspend ಮಾಡಿ ಕೂಡ ತಾವು ಈ ಸದನಕ್ಕೆ ಹೇಳಬಹುದು. ಆದರೆ rules ಮೀರಿ ಸಂವಿಧಾನದಲ್ಲಿ ಇರತಕ್ಕಂಥ ಕಾನೂನುಗಳನ್ನು, articleಗಳನ್ನು suspend ಮಾಡುವುದಕ್ಕೆ ನಿಮಗೂ ಅಧಿಕಾರ ಇಲ್ಲ, ನಮಗೂ ಅಧಿಕಾರ ಇಲ್ಲ. Unless it is changed, ಅದರಲ್ಲಿ ಬದಲಾವಣೆ ಆದಾಗ ಮಾತ್ರ ನಾವು ಏನಾದರೂ ಗಮನಕ್ಕೆ ತೆಗೆದುಕೊಳ್ಳಬಹುದೆ ಹೊರತಾಗಿ as long as Article 174 is there, 175 is there, 176 is there, ಅದಕ್ಕೆ ನಾವು ಗೌರವ ಕೊಡಲೇಬೇಕಾಗುತ್ತದೆ. ಅದಕ್ಕಾಗಿ ನಾನು ತಮಗೆ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ, ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ, ದಯವಿಟ್ಟು ತಾವು prestige ಮೇಲೆ ನಿಲ್ಲಬೇಡಿ. ಏಕೆಂದರೆ ಇಲ್ಲಿ ಒಂದು ಸಲ ನಾನು ಒಂದು ತೀರ್ಮಾನವನ್ನು ಕೊಟ್ಟಿದ್ದೇನೆ, ಅದು ಅಂತಿಮ ಅನ್ನತಕ್ಕಂಥದ್ದು ಆಗಬಾರದು. ಅದು ಯಾವಾಗ ಹೇಳಬಹುದಾಗಿತ್ತು. ಎಂದರೆ, normal courseನಲ್ಲಿ ಅಥವಾ ತಾವು Rules of Procedureನಲ್ಲಿ discretion ಇದ್ದಾಗ, ಇಲ್ಲವೆಂದರೆ ತಮಗೆ suspend ಮಾಡತಕ್ಕಂಥ ಅಧಿಕಾರ ಇದೆ, ನಾನು suspend ಮಾಡಿ ಮಾಡಿದ್ದೇನೆ ಎಂದು ಹೇಳಿದರೆ ಒಂದು ತರಹ. ಸದನದ ಹೊರಗಡೆ ರಾಜ್ಯದ ಜನತೆಗೆ ಒಂದು ತಪ್ಪು message ಹೋಗಬಾರದು. ಏಕೆಂದರೆ, ವಿರೋಧ ಪಕ್ಷದವರು ಹಠ ಹಿಡಿದುಕೊಂಡು ಪದೇ ಪದೇ ಇವರು ಇದೇ ಹೇಳುತ್ತಿದ್ದಾರೆ ಮತ್ತು ಸದನದಲ್ಲಿ ನಡೆಯತಕ್ಕಂಥ ಕಲಾಪಗಳಿಗೆ ಅಡ್ಡಿ ಪಡಿಸುತ್ತಿದ್ದಾರೆ, ಇವರಿಗೆ ಸದಿಚ್ಛೆ ಇಲ್ಲ ಮತ್ತು ರಾಜ್ಯದ ಜನರ ಬಗ್ಗೆ ಅಥವಾ ಬೇರೆ ಬೇರೆ ಸಮಸ್ಯೆಗಳ ಬಗ್ಗೆ ಕಾಳಜಿ ವಹಿಸುತ್ತಿಲ್ಲ, ಬರೇ ಯಾವುದೋ ಒಂದು technical matter ಮೇಲೆ ಇವರು ಈ ವಿಷಯಗಳನ್ನು ಪ್ರಸ್ತಾಪ ಮಾಡುತ್ತಾರೆ ಅನ್ನತಕ್ಕಂಥ ಅಭಿಪ್ರಾಯ ಬರಬಾರದು. ಇದು technical question ಅಲ್ಲ. ಯಾವ ಸದನದಲ್ಲಿ ನಾವು ಕಾನೂನುಗಳನ್ನು ಮಾಡುತ್ತೇವೋ, ಯಾವ ಸಂವಿಧಾನದ ಪ್ರಕಾರ ಈ ಒಂದು ಸದನವನ್ನು ರಚಿಸಲಾಗಿದೆಯೋ, ಆ ಸದನದ ಗೌರವದ ಪ್ರಶ್ನೆ ಕೂಡ ಹೌದು ಮತ್ತು ಆ ಸಂವಿಧಾನದ ಗೌರವದ ಪ್ರಶ್ನೆ ಕೂಡ ಹೌದು. ಆ ಸಂವಿಧಾನದ ಗೌರವದ ಪ್ರಶ್ನೆ ಕೂಡ ಹೌದು. ಆ ಸಂವಿಧಾನವನ್ನು ಎತ್ತಿ ಹಿಡಿಯತಕ್ಕಂಥ ಕೆಲಸವನ್ನು ನಾವೆಲ್ಲರೂ ಕೂಡ ಮಾಡಬೇಕಾಗಿದೆ. ಅದೇ ರೀತಿಯಾಗಿ ಈ ಸದನಕ್ಕೆ ಗೌರವವನ್ನೂ ಕೂಡ ನಾವು ಕೊಡಬೇಕಾಗಿದೆ. ಅದಕ್ಕಾಗಿ ದಯವಿಟ್ಟು ಇನ್ನೊಮ್ಮೆ ತಮಗೆ

ಕೇಳಿಕೊಳ್ಳುತ್ತೇನೆ. ಹೊರಗಿನವರು ಅನೇಕ ಜನರೂ ಕೂಡ ತಮಗೆ ಇದರ ಬಗ್ಗೆ ಹೇಳಿರಬಹುದು, legal experts ಕೂಡ ಹೇಳಿರಬಹುದು, ಇದು ತಪ್ಪಾಗಿದೆ, ಏನೋ ಸರಿಪಡಿಸಿಕೊಂಡು ಹಾಗೆಯೇ ಮುಂದೆ ಹೋಗೋಣ ಅಂದರೆ naturally, ಸಂವಿಧಾನದ ವಿರುದ್ಧವಾಗಿ ನಡೆದುಕೊಳ್ಳುವುದಕ್ಕಾಗುವುದಿಲ್ಲ. ಏನೋ discretion ಇದ್ದಾಗ ತಪ್ಪು ಆಯಿತು ಅಥವಾ precedent ಇತ್ತು ಅಥವಾ ಏನಾದರೂ ಇಲ್ಲಿಯವರೆಗೆ ಒಂದು ಪದ್ಧತಿ ಇತ್ತು, ಆ ಪದ್ಧತಿ ಮುರಿದು ಹೋಗುತ್ತದೆ ಎಂದರೆ ಹೋಗಬಹುದು, ಆದರೆ ಇಲ್ಲಿ precedents ಇಲ್ಲ, customs ಇಲ್ಲ, ಆ ರೀತಿಯಾಗಿ usages ಕೂಡ ಇಲ್ಲ, ಅಥವಾ ಮತ್ತೆ ಬೇರೆ ರೀತಿಯಿಂದ ನಡೆದುಕೊಳ್ಳತಕ್ಕಂಥದ್ದಕ್ಕೆ ಇದರಲ್ಲಿ ಸಾಧ್ಯತೆ ಇಲ್ಲ. ಅದಕ್ಕೆ ಇಲ್ಲಿ Articleಗೆ distinction ಕೂಡ ಇದೆ. ಆರ್ಟಿಕಲ್ 175ರಲ್ಲಿ ಏನು ಮಾಡಬೇಕೆಂಬುದನ್ನು clear ಆಗಿ ಹೇಳಿದ್ದಾರೆ, ಆರ್ಟಿಕಲ್ 176 ರಲ್ಲಿ ಏನು ಮಾಡಬೇಕೆಂಬುದನ್ನೂ ಸಹ clear ಆಗಿ ಹೇಳಿದ್ದಾರೆ. ಅದೆರಡರಲ್ಲೂ ಕೂಡ ವ್ಯತ್ಯಾಸ ಇದೆ. ಅವೆರಡೂ Article create ಮಾಡತಕ್ಕಂಥ ಉದ್ದೇಶವೇನೆಂದರೆ, 175ರಲ್ಲಿ ಇರತಕ್ಕಂಥ ಉದ್ದೇಶ, ನೇರವಾಗಿ ಬಂದು ಅವರು message ಕೊಡತಕ್ಕಂಥದ್ದು, suo-moto ಬಂದು express ಮಾಡತಕ್ಕಂಥದ್ದು, ನಮ್ಮ ಹಾಜರಾತಿಯನ್ನು ತಮ್ಮ ಮುಖಾಂತರ ಕಡ್ಡಾಯ ಪಡಿಸತಕ್ಕಂಥದ್ದು ಆಗಿದೆ. ಈ ಕೆಲಸವನ್ನು ಮಾಡಿ any number of times he can give messages. Weekly he can give messages, fifteen daysಗೊಮ್ಮೆ message ಕೊಡಬಹುದು, ತಿಂಗಳಿಗೊಮ್ಮೆಯಾದರೂ ಕೊಡಬಹುದು, ಅವರಿಗೆ ಇಚ್ಛೆ ಬಂದಾಗ, ಸಲಹೆ ಕೊಡಬೇಕೆಂದಾಗ, ತಮಗೆ ಹೇಳಿ ತಮ್ಮ ಹಾಜರಾತಿಯನ್ನು ಕಡ್ಡಾಯ ಪಡಿಸಿ, ಇಲ್ಲಿ ಮಾಡಬಹುದು. ಆದರೆ ಆರ್ಟಿಕಲ್ಸ್ 176ರಲ್ಲಿ ಇದು ಕಡ್ಡಾಯ. ಪ್ರತಿ ವರ್ಷ first session ನಡೆಯುವಾಗ, ಅದು ಮಾಡಲೇಬೇಕು. ಇಲ್ಲವೇ ಹೊಸದಾಗಿ ಸರ್ಕಾರ ಚುನಾಯಿತವಾಗಿ ಬಂದಾಗ ಅದು ಆಗಲೇಬೇಕಾದಂತಹ ವಿಷಯವಾಗಿದೆ. ಇವೆರಡಕ್ಕೂ ಕೂಡ ಅಲ್ಲೇ clear ಆಗಿ distinction ಮಾಡಿದ ಮೇಲೆ ಪುನಃ ನಾವು ಅದಕ್ಕೆ interpretation ಮಾಡಿಕೊಂಡು, ತಪ್ಪು ದಾರಿಗೆ ಎಳೆಯುವಂಥಾದ್ದು, wrong precedent ಹಾಕತಕ್ಕಂಥದ್ದನ್ನು ನಾವು ಮಾಡಿದರೆ, ಅದು ತಪ್ಪಾಗುತ್ತದೆ. ದಯವಿಟ್ಟು ತಾವು ಅನ್ಯಥಾ ಭಾವಿಸಬಾರದು. ತಾವೂ ಕೂಡ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ. ಇಲ್ಲವೇ ಏನಾದರೂ ಇದರ ಮೇಲೆ ಚರ್ಚೆಯೇ ಮಾಡಬೇಕೆಂದರೆ, ಆರ್ಟಿಕಲ್ 175ರ ಮೇಲೆಯೇ ಚರ್ಚೆ ಮಾಡಿ, ಅದರಡಿ motion of thanks ಬರುವುದಿಲ್ಲ. ಏಕೆಂದರೆ, motion of thanksಗೆ specific ಆಗಿ ಆರ್ಟಿಕಲ್ 176ರಲ್ಲಿ ಹೇಳಿದ್ದಾರೆ. ಅದಕ್ಕಾಗಿ ದಯವಿಟ್ಟು ಆರ್ಟಿಕಲ್ 175(1)ರ ಕೆಳಗಡೆಯೇ ಚರ್ಚೆ ಮಾಡಬೇಕೆಂದರೆ, ತಾವು ಚರ್ಚೆ ಮಾಡಿ, ಆದರೆ motion of thanks ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಅದಕ್ಕೆ ಮತ್ತೊಮ್ಮೆ ನಾನು ತಮಗೆ appeal ಮಾಡುತ್ತೇನೆ, ಇದನ್ನು ತಾವು review ಮಾಡಿ. ಆ ಒಂದು Article 175 or 176 ರ ಕೆಳಗೆ ಮತ್ತು ತಾವೇನು ಎರಡು ನೋಟೀಸ್‌ಗಳನ್ನು ಕೊಟ್ಟಿದ್ದೀರಿ, Article 174ರಲ್ಲಿ ನೋಟೀಸ್ ಏನು ಕೊಟ್ಟಿದ್ದೀರಿ, ಅದನ್ನು ತಾವು ನೋಡಿ, Article 175(1)ರ ಕೆಳಗೆ ತಾವೇನು ನೋಟೀಸ್ ಕೊಟ್ಟಿದ್ದೀರೋ ಅದನ್ನೂ ಕೂಡ ತಾವು ನೋಡಿ. ಎರಡೂ ನೋಟೀಸ್‌ಗಳಲ್ಲಿ ವ್ಯತ್ಯಾಸವಿಲ್ಲವೆಂದರೆ, ತಾವು ಹೇಳಿದಂತೆ ನಾನು ಕೆಳಗೆ ಕುಳಿತುಕೊಳ್ಳುತ್ತೇನೆ. ಆ ಎರಡೂ ನೋಟೀಸ್‌ಗಳಲ್ಲಿ ವ್ಯತ್ಯಾಸ ಇದೆ. ಒಂದರಲ್ಲಿ ನಮ್ಮ presence ಇರಲೇಬೇಕೆನ್ನುವುದು,

ಮತ್ತೊಂದರಲ್ಲಿ ಆರ್ಟಿಕಲ್ 174ರಲ್ಲಿ ಈ ಒಂದು ಮನೆಗೆ ಅವರು ಕಡ್ಡಾಯವಾಗಿ address ಮಾಡಲೇಬೇಕು ಅನ್ನತಕ್ಕಂಥದ್ದಕ್ಕೆ ಬೇರೆ ನೋಟೀಸ್, ಬೇರೆ wordings ಇಲ್ಲವೆನ್ನುವುದಾದರೆ, ನಾನು ಈ ಮಾತನ್ನು ಕೇಳುವುದಿಲ್ಲ. ನಿಮ್ಮ Legislature Secretariatನಿಂದ ಕೊಟ್ಟಂತಹ ನೋಟೀಸ್‌ಗಳನ್ನೇ ನೋಡಿ ಅಥವಾ Governorರವರು ಉಪಯೋಗ ಮಾಡಿದಂತಹ ಅಂದರೆ direction ಕೊಟ್ಟಂತಹ ಭಾಷೆಯನ್ನೇ ನೋಡಿ, ಯಾವುದನ್ನು ನೋಡಿದರೂ ಕೂಡ ಅದರಲ್ಲಿ ಸ್ಪಷ್ಟವಾಗಿ ನಿಮಗೆ ಕಾಣುತ್ತದೆ. ಅದಕ್ಕಾಗಿ ದಯವಿಟ್ಟು ನಾನು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ, ತಾವು ಇದನ್ನು ಪುನರ್ ಪರಿಶೀಲನೆ ಮಾಡಿ, ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾದುಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದರಲ್ಲಿ . . . . . .

ಅಧ್ಯಕ್ಷರು: ವಿಧೇಯಕಗಳೆಲ್ಲಾ ಮಂಡನೆಯಾಗಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈಗಾಗಲೇ ಅವರು ಶುರು ಮಾಡಿದ್ದಾರಲ್ಲಾ.

Mr. Speaker: Papers laid ಇತ್ಯಾದಿಗಳೆಲ್ಲಾ ಆಗಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈಗಾಗಲೇ ಮಾನ್ಯ ಖರ್ಗೆಯವರು ಶುರು ಮಾಡಿದ್ದಾರಲ್ಲಾ. ಆದ್ದರಿಂದ ಎರಡೇ ಎರಡು ಮಾತನ್ನು ನಾನೂ ಕೂಡ ಆಡುತ್ತೇನೆ. ಸಾರ್, ಇದರಲ್ಲಿ . . . . . .

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ತಮ್ಮ ರೂಲಿಂಗ್‌ನ ಪುನರ್ ಪರಿಶೀಲನೆ ಸಲುವಾಗಿ ತಮಗೆ ಅವರು ವಿನಂತಿ ಮಾಡಿಕೊಂಡಿದ್ದಾರೆ. ಈಗ ಮತ್ತೆ ಅದನ್ನೇ ಏಕೆ ಹೇಳುವುದು? ಈಗಾಗಲೇ ಮಾನ್ಯ ಖರ್ಗೆಯವರು point ಏನು ಹೇಳಿದರೋ, ಮತ್ತೆ ಅದನ್ನೇ ಎಲ್ಲರೂ ಹೇಳುವಂಥಾದ್ದು ಆದರೆ ಹೇಗೆ? ಪುನರ್ ಪರಿಶೀಲನೆಗೆ ಅವರು ತಮಗೆ request ಮಾಡಿದ್ದಾರೆ. ಅದರ ಬಗ್ಗೆ ತೀರ್ಮ ನೀಡುವುದು ತಮಗೆ ಬಿಟ್ಟಿದ್ದು.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಜಗದೀಶ್ ಶೆಟ್ಟರ್‌ರವರಿಗೆ ನಾವು ಮತ್ತೆ ಅದನ್ನೇ ಹೇಳುತ್ತೇವೆ ಎನ್ನುವುದು ಹೇಗೆ ಗೊತ್ತು?

ಶ್ರೀ ಜಗದೀಶ್ ಶೆಟ್ಟರ್: ನಿಮ್ಮ ಬಗ್ಗೆ ಅಲ್ಲ. ಅವರು ಈಗಾಗಲೇ point ಹೇಳಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಬೇರೆ ಹೇಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಒಂದು ನಿಮಿಷ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಖರ್ಗೆಯವರು ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ಮಾನ್ಯ ಮಾಧುಸ್ವಾಮಿಯವರು ಬೇರೆಯದೇ ಆದ ಅಭಿಪ್ರಾಯವನ್ನು ಹೇಳಬಹುದು.

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ, ಈಗ ಮಾನ್ಯ ಸಭಾ ನಾಯಕರು ಏನು ಹೇಳುತ್ತಾರೆ, ಕೇಳೋಣ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈಗ ಆರ್ಟಿಕಲ್ 175 ಮತ್ತು 176ರ ವಿಷಯದಲ್ಲಿ ಕಳೆದ ಎರಡು ದಿವಸಗಳಿಂದ ಸದನದಲ್ಲಿ ಸುದೀರ್ಘವಾಗಿ, ಆ ಕಡೆ ಸದಸ್ಯರು ಮತ್ತು ಈ ಕಡೆ ಸದಸ್ಯರು ಚರ್ಚೆಯನ್ನೇನು ಮಾಡಿದ್ದಾರೆ, ಈಗ ಮತ್ತೆ ಅದೇ ವಿಷಯವನ್ನು ಚರ್ಚೆ ಮಾಡುವುದಕ್ಕೆ, ಹಿರಿಯ ಸದಸ್ಯರಾಗಿರತಕ್ಕಂಥ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತೆ ಅವರ ಭಾವನೆಗಳನ್ನು ವ್ಯಕ್ತಪಡಿಸಲಿಕ್ಕೆ ಹೊರಟಿದ್ದಾರೆ. ಈಗಾಗಲೇ ಮೊನ್ನೆ ಒಂದು ದಿವಸ ಸುದೀರ್ಘ ಚರ್ಚೆ ಮಾಡಿ, ಈ ವಿಷಯಗಳ ಬಗ್ಗೆ ಎಲ್ಲರ ಅಭಿಪ್ರಾಯ ಪಡೆದ ನಂತರ ತಾವೊಂದು ರೂಲಿಂಗ್ ಕೊಟ್ಟಿದ್ದೀರಿ. ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಟ್ಟ ಮೇಲೆ ಮತ್ತೆ ನಿನ್ನೆಯಿಂದ ಈ ವಿಷಯದಲ್ಲಿ ಏನು ಚರ್ಚೆಗಳಾಗಿ ಸಭೆಯನ್ನು ಮುಂದೂಡತಕ್ಕಂಥ ಕೆಲಸ ಏನಾಗುತ್ತಿದೆ. ಈ ಸಂದರ್ಭದಲ್ಲಿ ನಾನು ಮಾನ್ಯ ಸದಸ್ಯರಲ್ಲಿ ತಮ್ಮ ಮುಖಾಂತರ ಮನವಿ ಮಾಡಿಕೊಳ್ಳಲಿಕ್ಕೆ ಬಯಸುತ್ತೇನೆ, ಸಾಕಷ್ಟು ಚರ್ಚೆಗಳಾಗಿ ತಾವೇನು ರೂಲಿಂಗ್ ಕೊಟ್ಟಿದ್ದೀರಿ, ಮತ್ತೆ ಪುನಃ ಈ ವಿಷಯದಲ್ಲಿ ಚರ್ಚೆ ಮಾಡತಕ್ಕಂಥದ್ದು ಸೂಕ್ತವಲ್ಲ. ಈ ಸಂದರ್ಭದಲ್ಲಿ ರಾಜ್ಯದ ಹಲವಾರು ಸಮಸ್ಯೆಗಳೇನಿದೆ, ಆ ಸಮಸ್ಯೆಗಳನ್ನು ಇವತ್ತು ನಾವು ಈ ಸದನದ ಮುಖಾಂತರ ಚರ್ಚೆಯನ್ನು ಮಾಡಿ, ಸಮಸ್ಯೆಯನ್ನು ಬಗೆಹರಿಸತಕ್ಕಂಥದ್ದಕ್ಕೆ ಎಲ್ಲರ ಸಲಹೆಯನ್ನೇನು ಪಡೆಯಬೇಕಾಗಿದೆ, ಮತ್ತೆ ಸದನದಲ್ಲಿ ಈ ವಿಷಯಗಳ ಬಗ್ಗೆ ಚರ್ಚೆ ಮಾಡಿ ಸಮಯವನ್ನು ವ್ಯರ್ಥ ಮಾಡದೆ, ದಯವಿಟ್ಟು ನಾನು ಎಲ್ಲಾ ಶಾಸಕರಲ್ಲಿ ಮನವಿ ಮಾಡುತ್ತೇನೆ, ವಿರೋಧ ಪಕ್ಷದ ಶಾಸಕರಲ್ಲೂ ಮನವಿ ಮಾಡುತ್ತೇನೆ, ಈ ಸಂದರ್ಭದಲ್ಲಿ ದಯವಿಟ್ಟು ತಾವು ರೂಲಿಂಗ್ ಕೊಟ್ಟ ಮೇಲೆ ಮತ್ತೆ ಪುನಃ ಈ ವಿಷಯದಲ್ಲಿ ಚರ್ಚೆ ಮಾಡತಕ್ಕಂಥದ್ದು ಸೂಕ್ತವಲ್ಲ. ಆದ್ದರಿಂದ ಸದನವನ್ನು ಒಂದು ಒಳ್ಳೆಯ ರೀತಿಯಲ್ಲಿ ನಡೆಸುವಂಥಾದ್ದಕ್ಕೆ ಎಲ್ಲರ ಸಹಕಾರವನ್ನು ಕೋರಲಿಕ್ಕೆ ಬಯಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಒಳ್ಳೆಯ ಕೆಲಸಗಳು ಆಗಬೇಕು, ಕಾನೂನು ಬದ್ಧವಾಗಿ ಆಗಬೇಕು, ಶಾಸ್ತ್ರೀಯವಾಗಿ ಆಗಬೇಕು ಎನ್ನುವಂತಹ ಭಾವನೆ ಇಟ್ಟುಕೊಂಡೇ ನಾವೆಲ್ಲಾ ಇಲ್ಲಿ ಸದಸ್ಯರಾಗಿದ್ದೇವೆ. ಸರ್ಕಾರಕ್ಕೆ ನಾವು ಎಲ್ಲಾ ರೀತಿಯಲ್ಲಿ ಸಹಕಾರ ಕೊಡುತ್ತೇವೆ, ಅವರು ಬಹಳ ಕೆಲಸಗಳನ್ನು ಮಾಡಬೇಕಾಗಿದೆ, ಮಾಡಲಿ. ನಾವು ಇಲ್ಲಿ ಎತ್ತಿರುವುದು, ಯಾರನ್ನೋ ವಿರೋಧ ಮಾಡುವುದಕ್ಕೆ ಯಾರದೋ ಪರವಾಗಿ ಮಾತನಾಡುವುದಕ್ಕೆ ಈ ವಿಷಯವನ್ನು ಈ ಶಾಸನ ಸಭೆಯಲ್ಲಿ ನಾವಂತೂ ಎತ್ತಿಲ್ಲ. ಇಲ್ಲಿ Article 175,176ದ್ದು ಜಿಜ್ಞಾಸೆಯಾಯಿತು. ಮಾನ್ಯ Governorರವರಿಗೇ legal advice ಕೊಟ್ಟರು. ಎರಡನೇ ಭಾಷಣ ಮಾಡಲಿಕ್ಕಾಗುವುದಿಲ್ಲ, ನೀವು ಸಂದೇಶ ಕಳುಹಿಸಬಹುದು, ನಿಮಗೆ ಯಾವಾಗ ಬೇಕಾದರೂ ಶಾಸನ ಸಭೆಯಲ್ಲಿ ಹೋಗಿ ಕುಳಿತುಕೊಂಡು, ಅವರನ್ನು ಕರೆಸಿ ಮಾತನಾಡಲಿಕ್ಕೆ ಅಧಿಕಾರ ಇದೆ, ಆ Article ಕೆಳಗಡೆ ಶಾಸನ ಸಭೆಗೆ ನೀವು ಎರಡನೆ ಸಲ ಹೋಗಬಹುದು ಎಂದು legal advice ತೆಗೆದುಕೊಂಡು, ಅವರೇ ಅವರ ಭಾಷಣದಲ್ಲಿ ಹೇಳಿ, ನಾನು Article 175(1)ರ ಕೆಳಗೆ ಮಾತ್ರ ನಿಮ್ಮ ಸಭೆಗೆ ಬರುತ್ತಿದ್ದೇನೆ ಎಂದು ಹೇಳಿ, 176ರ ಕೆಳಗೆ ಬರುವಂತಹ ಅಧಿಕಾರ ನನಗಿಲ್ಲ ಎನ್ನುವುದನ್ನು ಅವರು ಒಪ್ಪಿಕೊಂಡು ಬಿಟ್ಟರು. ಆರ್ಟಿಕಲ್ 176ರಲ್ಲಿ ನಾವು ಅವರನ್ನು ಕರೆಯುವಾಗ, 174ರಲ್ಲಿ ನೋಟೀಸ್ ಕೊಡುತ್ತೇವೆ, ಅಂದರೆ ಶಾಸನ ಸಭೆಯನ್ನು ಕರೆದು, ನೀವು ಅವರನ್ನು ದಯಮಾಡಿ ಬನ್ನಿ ನಮ್ಮ ಶಾಸನಸಭೆಗೆ, ಭಾಷಣ ಮಾಡಿ ಎಂದು. ನಾವು ಕರೆದಾಗ ನಾವು ಅವರಿಗೆ ವಂದನೆ

ಸಲ್ಲಿಸಬೇಕಾದುದು, ಗೌರವ ಕೊಡಬೇಕಾದುದು ಎಲ್ಲವೂ ಸರಿ. ಆರ್ಟಿಕಲ್ 175ರಲ್ಲೇನು ಅವರು ನಮ್ಮನ್ನು ಕರೆದಿದ್ದಾರೆ, ಅವರ ಭಾವನೆಗಳನ್ನು ಹೇಳಲಿಕ್ಕೆ, ಅವರಿಗೆ ತಿಳಿದಿದ್ದನ್ನು ಹೇಳಲಿಕ್ಕೆ for a specific purpose, Article ಹೇಳುವುದು some purpose, Governorಗೆ ಅನಿಸಿದ purposeಗೆ ನಮ್ಮನ್ನು ಕರೆದಿದ್ದಾರೆ, ಅದನ್ನು ಚರ್ಚೆ ಮಾಡಲಿಕ್ಕೆ ನಮ್ಮ ತಕರಾರು ಇಲ್ಲ. ತಾವು ಘನತೆವೆತ್ತ ಅಧ್ಯಕ್ಷರಿದ್ದೀರಿ ಈ ಸಭೆಗೆ, ಯಾವ ವಿಷಯ ಬೇಕಾದರೂ considerationಗೆ ತಾವು ತೆಗೆದುಕೊಳ್ಳಬಹುದು, ಆದರೆ motion move ಮಾಡಿಸುವುದು ಒಂದು ಕೆಟ್ಟ ಸಂಪ್ರದಾಯವಾಗಬಹುದು ಅನ್ನುವುದಷ್ಟೇ ನಮ್ಮ ವಾದ. Motion ಅನ್ನು ಆರ್ಟಿಕಲ್ 176ರ ಕೆಳಗೆ move ಮಾಡಬೇಕು ಎಂದು ತಾವು ನಿಯಮ 20ನ್ನು ಶಾಸನ ಸಭೆಯಲ್ಲಿ ರಚಿಸಿಕೊಂಡು ಬಿಟ್ಟಿದ್ದೀರಿ. ಸ್ವಲ್ಪ ತಮ್ಮನ್ನೂ ಕೇಳಬೇಕು ಸಾರ್. ಆರ್ಟಿಕಲ್ 176ರ ಕೆಳಗೆ ಭಾಷಣ ಆಗಿದ್ದಕ್ಕೆ ತಾವು ಕಾಲ ನಿಗದಿ ಮಾಡಿ ಮೋಷನ್ ಒಬ್ಬರು ಮೂವ್ ಮಾಡಬೇಕು ಮತ್ತು ಒಬ್ಬರು ಸೆಕೆಂಡ್ ಮಾಡಬೇಕು ಎಂದು ರೂಲ್ಸ್ ಮಾಡಿ ಕೊಂಡಿದ್ದೀರಿ. ಅದರಂತೆ ಬೇರೆ ಪ್ರಾವಿಷನ್ ಇಲ್ಲವೆಂದೇ ನಾವು ಭಾವಿಸಿಕೊಳ್ಳಬೇಕು. ತಾವು ನಿನ್ನೆ ಹೇಳಿದಿರಿ, 19ನೇ ತಾರೀಖು ಅವರು ಮಾಡಿರುವ ಭಾಷಣವನ್ನು ನಾನು ನಲ್ಲಿಫೈ ಮಾಡಿದ್ದೇನೆ, ಇನ್‌ಫ್ರಕ್ಚುಯಸ್ ಎಂದು ನಾನು ಟ್ರೀಟ್ ಮಾಡಿದ್ದೇನೆ ಎಂದು ಹೇಳಿದಿರಿ. ನಮ್ಮದು ಯಾವುದೇ ತಕರಾರು ಇಲ್ಲ 19ನೇ ತಾರೀಖು ಯಾವ ಭಾಷಣವನ್ನು ತಾವು ಇಲ್ಲಿ ಓದಿಸಿದಿರಿ, ಆ ಸರ್ಕಾರ ಇವತ್ತು ಎಕ್ಸಿಸ್ಟೆನ್ಸ್‌ನಲ್ಲಿ ಇಲ್ಲ, ಸರ್ಕಾರ ಬಿದ್ದು ಹೋದ ಮೇಲೆ ಆ ಭಾಷಣದ ಬಗ್ಗೆ ಚರ್ಚೆ ಮಾಡಬೇಕೆಂದು ಒತ್ತಾಯ ಮಾಡುವ ಸ್ಥಿತಿಯಲ್ಲಿ ನಾವು ಇಲ್ಲ. 24ನೇ ತಾರೀಖು ಗೌವರ್ನರ್ ಭಾಷಣ ಏನಾಗಿದೆ ಅದರ ಬಗ್ಗೆ ನಮ್ಮದು ಒಂದೇ ಒಂದು ಬೇಡಿಕೆ, ದಯಮಾಡಿ ಅದರ ಮೇಲಿನ ವಂದನಾ ನಿರ್ಣಯವನ್ನು ಇಲ್ಲಿ ತೆಗೆದುಕೊಳ್ಳಬೇಡಿ; ಚರ್ಚೆ ಮಾಡಿಸಿ, ಯಾರಾದರೂ ಮಾತನಾಡಲಿ, ನಾವೂ ಸೇರಿಕೊಂಡು ಅನಧಿಕೃತವಾಗಿ ಗೌವರ್ನರ್‌ಗೆ ವಂದನೆಯನ್ನು ಹೇಳುತ್ತೇವೆ. ವಂದನಾ ನಿರ್ಣಯವೆಂದು ಹೇಳುವುದಿಲ್ಲ. ಗೌವರ್ನರ್‌ಗೆ ನಾವು ವಂದಿಸಲೇಬೇಕು. ಅವರು ಈ ರಾಜ್ಯದ ರಾಜ್ಯಪಾಲರು. ವಂದಾನ ನಿರ್ಣಯವನ್ನು ನೀವು ಸಂಪ್ರದಾಯವಾಗಿ ಪ್ರಾರಂಭ ಮಾಡಿದರೆ ಗವರ್ನರ್ ಯಾವ್ಯಾವತ್ತು ಈ ಸಭೆಗೆ ಬಂದು ಆರ್ಟಿಕಲ್ 175 ಕೆಳಗಡೆ ಭಾಷಣ ಮಾಡುತ್ತಾರೆ, ಅವತ್ತೆಲ್ಲಾ ವಂದನಾ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಗವರ್ನರ್ ಒಂದು ಬಿಲ್ ಪೆಂಡಿಂಗ್ ಇದೆ ಎಂದು ಹೇಳಿ ಇಲ್ಲಿ ಬಂದು ಭಾಷಣ ಮಾಡುತ್ತಾರೆ, ಆಗ ನಾವು ಅವರಿಗೆ ವಂದನಾ ನಿರ್ಣಯವನ್ನು ಸಲ್ಲಿಸಬೇಕಾ? ಗವರ್ನರ್ ಯಾವುದೋ ಕಾವೇರಿ ಟ್ರಿಬ್ಯುನಲ್ ಡಿಸಿಷನ್‌ನಲ್ಲಿ ನೀವು ಮಾಡಿದ ತೀರ್ಮಾನ ಸರಿ ಇಲ್ಲವೆಂದು ನಾಳೆ ಇಲ್ಲಿ ಬಂದು ಹೇಳಬೇಕೆಂದು ಬಯಸಿದರೆ ನಾವು ವಂದನಾ ನಿರ್ಣಯ ಮಾಡಬೇಕಾ? ನಮ್ಮ ಸಂಪ್ರದಾಯಕ್ಕಿಂತ ಹೆಚ್ಚಾಗಿ ನಾವು ಸಂವಿಧಾನವನ್ನು ಗೌರವಿಸಬೇಕಾಗಿದೆ. ತಾವು ಒಂದು ತೀರ್ಮ ಕೊಟ್ಟಿದ್ದೀರಿ. ನಾವು ತಮ್ಮ ತೀರ್ಪನ್ನು ಕ್ವೆಶ್ಚನ್ ಮಾಡುವಷ್ಟು ಧಾರ್ಷ್ಟ್ಯತನ ತೋರಿಸುವುದಿಲ್ಲ. ಅಪೀಲ್ ಮಾಡಲಿಕ್ಕೆ ನಮಗೆ ಅಧಿಕಾರವಿದೆ. ತಾವು ಸಂವಿಧಾನದ ಪ್ರಾವಿಷನ್‌ಗೆ ವಿರುದ್ಧವಾಗಿ ತೀರ್ಪು ಕೊಟ್ಟುಬಿಟ್ಟಿದ್ದೀರಿ. ದಯಮಾಡಿ ರೀಕನ್‌ಸಿಡರ್ ಮಾಡಿ. ಶಾಸನ ಸಭೆಯ ನಿಯಮಗಳನ್ನು ತಾವು ಬದಗಿಟ್ಟು ತೀರ್ಮ ಕೊಟ್ಟಿದ್ದರೆ ನಾವು ಪ್ರಶ್ನೆ ಮಾಡುತ್ತಿರಲಿಲ್ಲ. 'I have overtaken Rule 20' of the Rules of Procedure ಎಂದು ತಾವು ಹೇಳಿಬಿಟ್ಟಿದ್ದರೆ, ಅಧ್ಯಕ್ಷರು ಹೇಳಿದ್ದಾರೆ ಅವರಿಗೆ ಅಧಿಕಾರ ಇದೆ ಎಂದು ಒಪ್ಪಿಕೊಂಡು

ಬಿಡುತ್ತಿದ್ದೆವು. ಕಾನ್‌ಸ್ಟಿಟ್ಯೂಷನಲ್ ಪ್ರಾವಿಷನ್‌ನ್ನು ತಾವು ಆರ್ಟಿಕಲ್ 175ರ ನೋಟೀಸ್‌ನಲ್ಲಿ ಕರೆದಿರುವ ಸಭೆಯನ್ನು ಆರ್ಟಿಕಲ್ 176ರ ಕೆಳಗೆ ಚರ್ಚೆ ಮಾಡಬಹುದು ಎಂದು ತಾವು ಹೇಳಿದ್ದೀರಿ, ಬಹುಶಃ ನನಗೆ ನಾನು ಒಬ್ಬ ವಿದ್ಯಾರ್ಥಿಯಾಗಿ ನನಗನ್ನಿಸುವುದು ಆ ಅಧಿಕಾರವನ್ನು ತಾವು ಚಲಾಯಿಸಬಾರದಾಗಿತ್ತು ಏನೋ ಎಂದು. ಅದು ತಮಗೆ ಬಿಟ್ಟಿದ್ದು. ಸಂವಿಧಾನದ ಅವಕಾಶಗಳನ್ನು ನಾವು ವ್ಯಾಖ್ಯಾನಿಸುವುದು ಸ್ವಲ್ಪ ಕಷ್ಟವಾಗುತ್ತದೆ. ನಿಯಮ 175(1) ರ ಕೆಳಗೆನೇ ನಾನು ಭಾಷಣ ಮಾಡುತ್ತೇನೆಂದು ಗವರ್ನರ್‌ರವರು ಹೇಳಿರುವುದರಿಂದ ದಯಮಾಡಿ ಅದನ್ನು ಚರ್ಚೆಗೆ ಮಾತ್ರ ಸೀಮಿತ ಮಾಡಿ. ಚರ್ಚೆ ಆಗಲಿ, ನಾವು ಯಾರೂ ಚರ್ಚೆ ಬೇಡ ಎಂದು ಯಾವ ಕ್ಷಣದಲ್ಲಿಯೂ ಹೇಳಲಿಲ್ಲ. ವಂದನಾ ನಿರ್ಣಯಗಳನ್ನು ಗವರ್ನರ್‌ಗೆ ತಲುಪಿಸುತ್ತೇವೆ ಎಂದು ಹೇಳುವುದನ್ನು ನಿಲ್ಲಿಸಿಬಿಡಿ. ಇವತ್ತೇ ಕೊನೆ ಅಲ್ಲ. ನಾಳೆ ಇದಕ್ಕಿಂತ ಗಂಡಾಂತರಕಾರಿ ಸಮಯದಲ್ಲಿ ಗವರ್ನರ್ ಇಲ್ಲಿಗೆ ಬರಬಹುದು. ಹಾಗೆ ಅವರು ಬಂದಾಗಲೆಲ್ಲಾ ನಾವು ಇಲ್ಲಿ ಓಟ್ ಆಫ್ ಥ್ಯಾಂಕ್ಸ್ ಮೋಷನ್ ಮಾಡುವುದಕ್ಕೆ ಬರುವುದಿಲ್ಲ. ಮೋಷನ್ ಮೂವ್ ಮಾಡುವುದನ್ನು ಬಿಟ್ಟು ನೀವು ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ಹೇಳಿ, ತಮ್ಮ ತೀರ್ಪನ್ನು ರೀಕನ್‌ಸಿಡರ್ ಮಾಡಬೇಕೆಂದು ಹೇಳಿ ನಾನು ಮನವಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಇಲ್ಲಿ ಪ್ರತಿ ಪಕ್ಷದ ನಮ್ಮ ನಾಯಕರು ಬಹಳ ಸ್ಪಷ್ಟವಾಗಿ ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಈಗಾಗಲೇ ವಂದನಾ ನಿರ್ಣಯವನ್ನು ಮೂವ್ ಮಾಡಿ ಸ್ಪೀಕರ್ ರೂಲಿಂಗ್ ಕೊಟ್ಟಿದ್ದಾರೆ. ಅದನ್ನು ಮರು ಪರಿಶೀಲನೆ ಮಾಡಿ ಎಂದು ತಾವು ಹೇಳುತ್ತಿದ್ದೀರಿ. ಕೇಳುವುದಕ್ಕೆ ನಿಮಗೆ ಅಧಿಕಾರ ಇದೆ. ನನ್ನ ಪ್ರಶ್ನೆ ಇಷ್ಟೆ. ಎರಡು-ಮೂರು ಪ್ರಶ್ನೆ ನಮ್ಮ ಮುಂದೆ ಉದ್ಭವವಾಗಿದೆ. ಜಂಟಿ ಅಧಿವೇಶನವನ್ನು ಆರ್ಟಿಕಲ್ 176(1)ರ ಅಡಿಯಲ್ಲಿ ಏಕೆ ಕರೆಯಲಿಲ್ಲ ಎಂದು ನನಗೆ ಗೊತ್ತಿರುವ ಪ್ರಕಾರ ಆರ್ಟಿಕಲ್ 176(1) ರ ಅಡಿಯಲ್ಲಿ ಈಗಾಗಲೇ ಒಮ್ಮೆ ವರ್ಷದ ಪ್ರಾರಂಭದಲ್ಲಿಯೇ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡಿರುವುದರಿಂದ . . . ನಾನು ಪೂರ್ತಿ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರದ್ದು ಒಂದು ಕೇಳಿ ಉತ್ತರ ಕೊಟ್ಟರೆ ಸರಿ ಹೋಗುತ್ತದೆ ಎಂದು ನಾನು ಹೇಳಿದ್ದು.

ಶ್ರೀ ಕೆ. ಶ್ರೀನಿವಾಸಗೌಡ: ನೀವು ಇನ್ನೂ ವಿರೋಧ ಪಕ್ಷದಲ್ಲಿ ಇದ್ದ ಹಾಗೆ ಮಾತನಾಡಬೇಡಿ. ಮಾನ್ಯ ಉಪ ಮುಖ್ಯಮಂತ್ರಿಗಳು ಸ್ವಲ್ಪ ಸಂಯಮವನ್ನು ತೋರಿಸಬೇಕಾಗುತ್ತದೆ. ಅವರು, ನೀವು ಈಲ್ಡ್ ಆಗಿ ಎಂದರೆ ಈಲ್ಡ್ ಆಗುವುದಿಲ್ಲ ಎಂದು ತಾವು ಮೊಂಡತನ ಮಾಡಬಾರದು. ಕೋಪ-ತಾಪ ಸ್ವಲ್ಪ ಕಡಿಮೆ ಮಾಡಿಕೊಳ್ಳಿ. ಕೋಪ ತಾಪ ಸ್ವಲ್ಪ ಕಡಿಮೆ ಮಾಡಿಕೊಂಡರೆ ಈ ಮನೆಗೆ ಕೂಡ ಉಪಯೋಗವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಈ ವಿಶೇಷ ಸನ್ನಿವೇಶದಲ್ಲಿ ಆರ್ಥಿಕತೆ 175(1)ರ ಅಡಿಯಲ್ಲಿ ಅಧಿವೇಶನವನ್ನು ಕರೆಯಬೇಕಾಗಿತ್ತು ಎಂದು ಬಹಳ ಸ್ಪಷ್ಟವಾಗಿ ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ಪ್ರಶ್ನೆ ಏನು? ಆರ್ಟಿಕಲ್ 175(1)ರಲ್ಲಿ ಅಧಿವೇಶನವನ್ನು ಉದ್ದೇಶಿಸಿ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದರೆ ಅವರಿಗೆ ವಂದನೆ ಸಲ್ಲಿಸುವ ಅವಕಾಶ ಇಲ್ಲ ಎಂಬುದು ನಿಮ್ಮ ತರ್ಕ. ಆರ್ಥಿಕತೆ 175(1)ರ ಪ್ರಕಾರ ಮಾನ್ಯ ರಾಜ್ಯಪಾಲರಿಗೆ ವಂದನೆ ಸಲ್ಲಿಸಬಾರದು ಎಂದು ಯಾವತ್ತೂ ಯಾವ

ರೂಲ್‌ನಲ್ಲಿಯೂ ಹೇಳಲಿಲ್ಲ. ಸನ್ಮಾನ್ಯ ಸಭಾಧ್ಯಕ್ಷರು ರೂಲ್ 25ರ ಅಡಿಯಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೆ ಅವಕಾಶ ನೀಡಿದ್ದಾರೆ. ಅದರಂತೆ ಅವರು ಅವಕಾಶ ಕೊಟ್ಟ ನಂತರ ರಾಜ್ಯಪಾಲರ ಭಾಷಣದ ಮೇಲೆ ಚರ್ಚಿಸಲು ಮೋಷನ್ ಮೂವ್ ಮಾಡಿ ಆಗಿದೆ, ಒಂದು ತಿಂಗಳ ಅಂತರದಲ್ಲಿ ಮಾನ್ಯ ರಾಜ್ಯಪಾಲರು ಅದೇ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಎರಡನೇ ಬಾರಿ ಭಾಷಣ ಮಾಡುವುದು ಸರಿಯೋ ಎಂದು ಪ್ರಶ್ನೆ ಉದ್ಭವವಾಗಿದೆ. ದಿನಾಂಕ 19.1.06 ರಂದು ಮಾನ್ಯ ರಾಜ್ಯಪಾಲರು ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ಚರ್ಚೆ ನಡೆಯದೆ ಇದ್ದುದ್ದರಿಂದ ಮತ್ತು ಅವರಿಗೆ ವಂದನೆ ಸಲ್ಲಿಸದೇ ಇದ್ದುದ್ದರಿಂದ ಹಾಗೂ ಆ ಸಂದರ್ಭದಲ್ಲಿ ಇದ್ದ ಸರ್ಕಾರ ಬಿದ್ದು ಹೋದುದರಿಂದ ಈಗ, ಹೊಸ ಸರ್ಕಾರ ಅಸ್ಥಿತ್ವಕ್ಕೆ ಬಂದ ನಂತರ ಮಾನ್ಯ ರಾಜ್ಯಪಾಲರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಲು ಮತ್ತು ಆ ಬಗ್ಗೆ ಚರ್ಚಿಸಲು ಹಾಗೂ ಅವರಿಗೆ ವಂದನೆ ಸಲ್ಲಿಸಲಿಕ್ಕೆ ಅವಕಾಶ ಮಾಡಿಕೊಡಬೇಕಾಗಿದೆ. ಅದರಂತೆ ಅವಕಾಶ ಮಾಡಿಕೊಟ್ಟಿದ್ದೀರಿ. ಮಾನ್ಯ ರಾಜ್ಯಪಾಲರು ಹಿಂದೆ ಮಾಡಿದ ಭಾಷಣಗಳ ಮೇಲೆ ಚರ್ಚೆ ಮಾಡಿ ವಂದನೆ ಸಲ್ಲಿಸಬಹುದಾಗಿತ್ತು ಎಂಬ ಪ್ರಶ್ನೆ. ಮಾನ್ಯ ರಾಜ್ಯಪಾಲರು ಹಿಂದೆ ಮಾಡಿದ ಭಾಷಣ ಹಿಂದಿನ ಸರ್ಕಾರದ ಧ್ಯೇಯೋದ್ದೇಶಗಳನ್ನು ಬಿಂಬಿಸುತ್ತದೆ. ಆದರೆ ಈಗ ಆ ಸರ್ಕಾರ ಇಲ್ಲದೇ ಇರುವುದರಿಂದ ಹೊಸ ಸರ್ಕಾರದ ಧ್ಯೇಯೋದ್ದೇಶಗಳನ್ನು ಹೇಳಲು ಅವರು ಭಾಷಣ ಮಾಡುವ ಅವಶ್ಯಕತೆ ಇತ್ತು. ಅದಕ್ಕೋಸ್ಕರ ನಾವು ಮಾಡಿಸಿದ್ದೇವೆ. ರಾಜ್ಯಪಾಲರ ಈ ಭಾಷಣ ಸಂವಿಧಾನ ಬಾಹಿರ ಅಲ್ಲವೇ ಎಂಬ ಪ್ರಶ್ನೆಯನ್ನು ಎತ್ತಿದ್ದಾರೆ. ಖಂಡಿತ ಇಲ್ಲ ಆರ್ಟಿಕಲ್ 175(1) ರಲ್ಲಿ ರಾಜ್ಯಪಾಲರು ಸಚಿವ ಸಂಪುಟದ ಸಲಹೆಯನ್ನು ಪಾಲನೆ ಮಾಡಬೇಕಾಗುತ್ತದೆ. ಆದ್ದರಿಂದ ಅವರು ಸಂವಿಧಾನ ನೀಡಿದ ಅವಕಾಶವನ್ನು ಎತ್ತಿ ಹಿಡಿಯಬೇಕಾಗುತ್ತದೆ. ಆ ಕೆಲಸವನ್ನು ಅವರು ಮಾಡಿದ್ದಾರೆ. ಇದು ಒಂದು ಕೆಟ್ಟ ಸಂಪ್ರದಾಯವಾಗುತ್ತದೆ ಎನ್ನುವ ಮಾತನ್ನು ಅವರು ಎತ್ತಿದ್ದಾರೆ. ಹಿಂದೆ ಬೇರೆ ಬೇರೆ ರಾಜ್ಯಗಳಲ್ಲಿ ಇಂತಹ ವಿಶೇಷ ಸಂದರ್ಭಗಳಲ್ಲಿ ರಾಜ್ಯಪಾಲರು ಎರಡನೇ ಬಾರಿ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಉದಾಹರಣೆಗಳು ಇವೆ. ಪಂಜಾಬ್, ಉತ್ತರ ಪ್ರದೇಶ ಮತ್ತು ಗುಜರಾತ್ ಸರ್ಕಾರಗಳು ಬದಲಾವಣೆ ಆದಾಗ ಈ ರೀತಿ ರಾಜ್ಯಪಾಲರು ಭಾಷಣ ಮಾಡಿದ ಉದಾಹರಣೆಗಳು ಇವೆ. ಅದಕ್ಕಾಗಿ ಪ್ರತಿ ಪಕ್ಷದ ನಾಯಕರಲ್ಲಿ ವಿನಂತಿ ಮಾಡುವುದು, ಈಗಲಾದರೂ ರಾಜ್ಯಪಾಲರ ಭಾಷಣ ಬಗ್ಗೆ ಮೋಷನ್ ಮೂವ್ ಮಾಡಿ ಚರ್ಚೆ ಪ್ರಾರಂಭ ಆಗುವುದಕ್ಕೆ ಅವಕಾಶ ಕೊಡಿ. ದಯಮಾಡಿ ಸುಗಮವಾಗಿ ಚರ್ಚೆ ಮಾಡುವುದಕ್ಕೆ ಪ್ರತಿ ಪಕ್ಷದ ನಾಯಕರು ಆ ಕಡೆ ಕುಳಿತಿರತಕ್ಕಂತಹವರು ಅವಕಾಶ ಮಾಡಿಕೊಡಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ(ಕನಕಪುರ): ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ದಿವಸ ವಿರೋಧ ಪಕ್ಷ ಮತ್ತು ಈ ಸದನದ ಸದಸ್ಯರ ಸಹಕಾರವನ್ನು ರಾಜ್ಯದ ಅಭಿವೃದ್ಧಿ ಕೆಲಸಗಳಿಗೋಸ್ಕರ ಚರ್ಚೆ ಮಾಡೋಣ, ಅನೇಕ ಸಮಸ್ಯೆಗಳು ಇವೆ, ಎನ್ನತಕ್ಕಂತಹ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಖಂಡಿತ ಆ ವಿಷಯದಲ್ಲಿ ನಮ್ಮೆಲ್ಲರ ಸಹಕಾರ ಇದೆ. ನಾವು ಕಳೆದ ಎರಡು ದಿವಸಗಳಿಂದ ಎತ್ತಿರತಕ್ಕಂತಹ ವಿಚಾರ ಸರ್ಕಾರದ ಜೊತೆಯಲ್ಲಿ ಸಂಘರ್ಷ ಅಲ್ಲ. ಸಂಘರ್ಷ

ಮಾಡತಕ್ಕಂತಹ ವಿಚಾರದಲ್ಲಿ ಸಂಘರ್ಷ ಮಾಡುತ್ತೇವೆ. ಆದರೆ ಇವತ್ತು ನಮ್ಮ ಮುಂದಿರತಕ್ಕಂಥದ್ದು ತಾವು ಕೊಟ್ಟಿರತಕ್ಕಂತಹ ತೀರ್ಪು ಏನು ಇದೆ, ಆ ತೀರ್ಪು ಕೊನೆಯ ತೀರ್ಪು ಎನ್ನುವುದನ್ನು ನಾವೆಲ್ಲರೂ ಸಹ ಒಪ್ಪುತ್ತೇವೆ. ಆದರೆ ಆ ತೀರ್ಪು ಏನಿದೆ ಅದನ್ನು ಮತ್ತೆ ಪುನರ್ ಪರಿಶೀಲನೆ ಮಾಡಿ ಎಂದು ಹೇಳತಕ್ಕಂತಹ ಹಕ್ಕು ಎಂದು ನಾವು ಹೇಳುವುದಿಲ್ಲ. ನಮಗೆ ಆ ಕೋರಿಕೆಯ ಹಕ್ಕು ಇದೆ ಎಂದು ನಾನು ತಿಳಿದಿದ್ದೇನೆ. ಆದ್ದರಿಂದ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದಕ್ಕೆ ಬಯಸುತ್ತೇನೆ, ಮಾನ್ಯ ರಾಜ್ಯಪಾಲರು 18ನೇ ತಾರೀಖು ಜಾತ್ಯಾತೀತ ಜನತಾದಳದ ಮತ್ತು ಭಾರತೀಯ ಜನತಾ ಪಾರ್ಟಿ ಶಾಸಕರುಗಳು ಏನು ನಮಗೆ ಬಹುಮತ ಇದೆ, ಅದಕ್ಕೋಸ್ಕರ ಇವತ್ತಿನ ಶ್ರೀ ಧರ್ಮಸಿಂಗ್‌ರವರ ಸರ್ಕಾರವನ್ನು ಪತನ ಮಾಡಿ, ವಿಸರ್ಜನೆ ಮಾಡಿ ನಮಗೆ ಅವಕಾಶ ಕೊಡಿ ಎಂದು ಕೇಳಿದರು. ಆ ಸಂದರ್ಭದಲ್ಲಿ ಮಾನ್ಯ ರಾಜ್ಯಪಾಲರು ಶಾಸಕರ ಮನವಿ ಮೇರೆಗೆ ಕೆಲಸ ಮಾಡುವುದಕ್ಕೆ ಹೋಗಲಿಲ್ಲ. ಸಂವಿಧಾನ ತಜ್ಞರನ್ನು ಕರೆಸಿದರು, ಕಾನೂನು ತಜ್ಞರನ್ನು ಕರೆಸಿದರು. ಮಾನ್ಯ ಎಸ್.ಆರ್. ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದಂತಹ ಆ ಸಂದರ್ಭದಲ್ಲಿ ಅವರ ಸರ್ಕಾರವನ್ನು ವಿಸರ್ಜನೆ ಮಾಡಿದಂಥದ್ದು ಅಕ್ರಮ ಎನ್ನತಕ್ಕಂತಹ ಮಾತನ್ನು ಈ ರಾಷ್ಟ್ರದ ಉಚ್ಚ ನ್ಯಾಯಾಲಯ ಹೇಳಿದ್ದರ ತೀರ್ಪಿನ ಹಿನ್ನೆಲೆಯಲ್ಲಿ ಮಾನ್ಯ ರಾಜ್ಯಪಾಲರು ಮಾನ್ಯ ಧರ್ಮಸಿಂಗ್‌ರವರ ಸರ್ಕಾರಕ್ಕೆ ಬಹುಮತ ಇತ್ತೋ ಇರಲಿಲ್ಲವೋ ಆ ಪ್ರಶ್ನೆ ಅನೇಕ ಸಂದರ್ಭಗಳಲ್ಲಿ ಆಡಳಿತ ಪಕ್ಷದ ಮುಖಂಡರು ಹೇಳಿದ್ದನ್ನು ನಾನು ಕೇಳಿದ್ದೇನೆ. ನಾನು ಇವತ್ತು ಮಾನ್ಯ ರಾಜ್ಯಪಾಲರನ್ನು ಮೆಚ್ಚುತ್ತೇನೆ. ಮಾನ್ಯ ರಾಜ್ಯಪಾಲರು ಸಂವಿಧಾನಬದ್ಧವಾಗಿ, ಕಾನೂನು ಬದ್ಧವಾಗಿ ಅವತ್ತು ಮುಖ್ಯಮಂತ್ರಿಗಳಾಗಿದ್ದ ಧರ್ಮಸಿಂಗ್‌ರವರಿಗೆ 10 ದಿವಸಗಳ ಅವಕಾಶವನ್ನು ಸಹಿತ ಕೊಟ್ಟು ನೀವು ಬಹುಮತ ಸಾಬೀತು ಮಾಡಿ ಎಂದು ಹೇಳಿದರು. ಈಗ ನೈತಿಕವೋ ಅನೈತಿಕವೋ ಚುನಾವಣೆ ಘೋಷಣೆ ಏನು ಅದನ್ನೆಲ್ಲಾ .ಆ ಮೇಲೆ ಬೇರೆ ಸಂದರ್ಭಗಳಲ್ಲಿ ಮಾತನಾಡೋಣ. ಅಂತೂ ಸರ್ಕಾರ ರಚನೆಯಾಗಿದೆ. ಇವತ್ತು ಕುಮಾರಸ್ವಾಮಿಯವರ ನಾಯಕತ್ವದಲ್ಲಿ ಇರತಕ್ಕಂತಹ ಈ ಸರ್ಕಾರಕ್ಕೆ ಬಹುಮತ ಇಲ್ಲವೆಂದು ನಾವು ಯಾರೂ ಸಹಿತ ಹೇಳುವುದಕ್ಕೆ ಹೋಗುವುದಿಲ್ಲ. ಬಹುಮತ ಸಾಬೀತು ಮಾಡಿದ್ದಾರೆ. ಬಹುಮತಕ್ಕಿಂತ ಹೆಚ್ಚಿನ ಮತವನ್ನು ತಾವು ಗಳಿಸಿದ್ದೀರಿ. ಅದರ ಜೊತೆಗೆ ತಾವೂ ಸಹ ತಮ್ಮ ಸರ್ಕಾರದ ವಿವೇಚನೆ ಏನು ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದೀರಿ, ರಾಜ್ಯದ ಜನತೆಗೆ ಈ ವೇದಿಕೆ ಮೂಲಕ ಹೇಳತಕ್ಕಂತಹ ಹಕ್ಕು ಸಹಿತ ತಮಗೆ ಇದೆ. ಅದನ್ನು ನಾವು ಟೀಕೆ ಮಾಡುವುದಕ್ಕೆ ಬಯಸುವುದಿಲ್ಲ. ಆದರೆ ನಾವು ಕೇಳುವುದು ಒಂದೇ, ಮಾನ್ಯ ರಾಜ್ಯಪಾಲರಿಗೂ ಸಹಿತ ಹಕ್ಕು ಇದೆ. ಮಾನ್ಯ ರಾಜ್ಯಪಾಲರು ವಂದನಾ ನಿರ್ಣಯವನ್ನು ಬಯಸಿದ್ದರೆ, ಅವರ ಪ್ರಸ್ತಾವಿಕ ಭಾಷಣದಲ್ಲಿ ಮಾನ್ಯ ಮಾಧುಸ್ವಾಮಿಯವರು ಒತ್ತಿ ಒತ್ತಿ ಈ ಮಾತನ್ನು ಪ್ರಾರಂಭದ ದಿನದಿಂದ ಹೇಳುತ್ತಿದ್ದಾರೆ. ಅವರು ಹೇಳಿರತಕ್ಕಂಥದ್ದು, ಆ ನಮ್ಮ ಸಂವಿಧಾನದ ವಿಶೇಷವಾದ ಒಂದು ಪರಿಚ್ಛೇದವನ್ನು ಉದಾಹರಣೆ ಮಾಡುವುದಕ್ಕೆ ಹೋಗುತ್ತಿರಲಿಲ್ಲ. ನಾರ್ಮಲ್ ಆಗಿ ರಾಜ್ಯಪಾಲರ ಭಾಷಣ ಕಳೆದ 50 ವರ್ಷಗಳಿಂದ ನಡೆದಿದೆ. ಈ ಘನವಾದ ಅಧಿವೇಶನದಲ್ಲಿ ಮಾತನಾಡಿದ್ದಾರೆ. ಯಾವತ್ತೂ ಸಹಿತ ಯಾವ ರಾಜ್ಯಪಾಲರೂ ಸಹಿತ ಆ ರೀತಿಯ ವಿಶೇಷವಾದ ಒಂದು ಕಂಡಿಕೆಯನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತಿರಲಿಲ್ಲ. ಮಾನ್ಯ ಅಧ್ಯಕ್ಷರೆ, ಇವತ್ತು ಒಂದು ವಿಶೇಷವಾದ ಪರಿಸ್ಥಿತಿಯಲ್ಲಿ ತಾವೂ ಸಹಿತ ಸಿಕ್ಕಿ ಹಾಕಿಕೊಂಡಿದ್ದೀರಿ. ತಮ್ಮ ಒಂದು ಎಂಬರಾಸ್‌ಮೆಂಟ್ ಏನು ಇದೆ, ಅದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ತಾವು ಆ ಪೀಠದಲ್ಲಿ ಕುಳಿತಿರುವವರಿಗೆ ಸಹಿತ ತಾವು ಕೊಡತಕ್ಕಂತಹ ತೀರ್ಮಾನಗಳು ದೇಶದ 27 ವಿಧಾನ ಸಭೆಗಳಿಗೆ ಉದಾಹರಣೆಯಾಗುತ್ತದೆ.

ಇನ್ನು ಮುಂದೆ ಈ ರೀತಿ ಸರ್ಕಾರಗಳು ಪತನವಾಗತಕ್ಕಂಥದ್ದು, ರಚನೆ ಆಗತಕ್ಕಂಥದ್ದು, ಇದು ಎರಡು ತಿಂಗಳೋ, ಮೂರು ತಿಂಗಳೋ, ಆರು ತಿಂಗಳೋ ಎನ್ನತಕ್ಕಂಥ ಸಂದರ್ಭ ಬಂದುಬಿಡುತ್ತದೆ. ನಮ್ಮ ರಾಜ್ಯದಲ್ಲಿಯೇ ಯಾವತ್ತೂ ಕೂಡ ಕೇವಲ 18 ತಿಂಗಳುಗಳಲ್ಲಿಯೇ ಸರ್ಕಾರ ಹೋಗಿ ಅದೇ ವಿಧಾನಸಭೆಯಲ್ಲಿ ಸರ್ಕಾರ ರಚನೆಯಾಗಿರತಕ್ಕಂಥ ಉದಾಹರಣೆ ಇಲ್ಲ. ಗೋವಾದಲ್ಲಿ ಮಾತ್ರ ಆಗುತ್ತಿತ್ತು ಎಂದು ನಾವು ಕೇಳಿದ್ದೆವು, ಬಿಹಾರದಲ್ಲಿ ಮಾತ್ರ ಆಗುತ್ತಿತ್ತು ಎಂದು ನಾವು ಕೇಳಿದ್ದೆವು. ಈಗ ಇಲ್ಲೂ ಸಹಿತ ಆಗಿದೆ. ಆದುದರಿಂದ ಇನ್ನೊಂದು ರಾಜ್ಯಪಾಲರ ಭಾಷಣವನ್ನು ತಾವು ಮಾಡಿಸುವುದಕ್ಕೆ ಆಗುತ್ತದೆಯೇ? ತಾವು ಎರಡೂ ಕಡೆಯ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ತಮ್ಮಲ್ಲಿ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ, ತಾವು ಅವೇಶಕ್ಕೆ ಒಳಗಾಗದೆ ನನ್ನ ಅಭಿಪ್ರಾಯದಲ್ಲಿ ಕಾನೂನು ಪಂಡಿತರನ್ನು ತಾವೂ ಸಹಿತ ಕರೆಸಿಕೊಳ್ಳಿ, ತಜ್ಞರನ್ನು ಕರೆಸಿ, ಸಂವಿಧಾನ ತಜ್ಞರನ್ನು ಕರೆಸಿ, ನಾವೆಲ್ಲರೂ ಸಂಪೂರ್ಣವಾಗಿ ಸಹಕಾರವನ್ನು ಕೊಡುತ್ತೇವೆ. ತಾವು ಎರಡು ಗಂಟೆಯೋ, ಮೂರು ಗಂಟೆಯೋ ಆಡಳಿತ ಪಕ್ಷದವರಿಗೆ ಅಥವಾ ವಿರೋಧ ಪಕ್ಷದವರಿಗೆ ಸಮಯವನ್ನು ನಿಗದಿ ಮಾಡಿ. ನಾವು ಹೇಳತಕ್ಕಂಥ ವಿಚಾರಗಳನ್ನು ಹೇಳುತ್ತೇವೆ. ನಿರ್ಣಯವನ್ನು ಮಂಡಿಸಿರತಕ್ಕಂಥ ಘನವೆತ್ತ ಸದಸ್ಯರೂ ಕೂಡ ಅವರ ಭಾಷಣಗಳನ್ನು ಮಾಡಲಿ. ಆದರೆ ನಾನು ಹೇಳತಕ್ಕಂಥದ್ದು ತಾವು ಕೊಟ್ಟಿರತಕ್ಕಂಥ ತೀರ್ಪು ಏನಿದೆ ಅದಕ್ಕೆ ತಲೆಬಾಗುವುದು ಒಂದು ವಿಚಾರ, ಆದರೆ ಅದನ್ನು ಪುನರ್‌ಪರಿಶೀಲನೆಯನ್ನು ಮಾಡಬೇಕು. ಏಕೆಂದರೆ ಇಡೀ ರಾಷ್ಟ್ರಕ್ಕೆ ಮಾದರಿಯಾಗಿರತಕ್ಕಂಥ ಒಂದು ತೀರ್ಪಾಗುತ್ತದೆ. ಇಂಥ ಸನ್ನಿವೇಶಗಳು ಇನ್ನು ಮುಂದೆ ಬೇಗ ಬೇಗ, ಈ ವಿಧಾನಸಭೆಯಲ್ಲಿಯೇ ಬರಬಹುದು, ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ನಾವೂ ಕೂಡ, ಸರ್ಕಾರ ಐದು ವರ್ಷ ಇರುತ್ತದೆ, ಐದು ವರ್ಷ ಇರುತ್ತದೆ ಎಂದು ಹೇಳುತ್ತಿದ್ದೆವು. ಆದರೆ 18 ತಿಂಗಳುಗಳಲ್ಲಿಯೇ ಹೊರಟುಹೋಯಿತು. ಈಗಲೂ ಅದೇ ತರಹ ಆಡಳಿತ ಪಕ್ಷದವರು ಹೇಳುತ್ತಿದ್ದಾರೆ, ಇನ್ನೂ ನಲವತ್ತು ತಿಂಗಳು ಇರುತ್ತದೆ, ನಲವತ್ತು ತಿಂಗಳು ಇರುತ್ತದೆ ಎಂದು ಹೇಳುತ್ತಿದ್ದಾರೆ; ಹೇಳಲಿ. ಅವರು ಚೆನ್ನಾಗಿ ಕೆಲಸ ಮಾಡಬೇಕು. ಏನೇನು ಘೋಷಣೆಗಳನ್ನು ಮಾಡಿದ್ದಾರೆ ಅದೆಲ್ಲವನ್ನೂ ಮಾಡಿದರೆ ನಾವು ಅವರಿಗೆಲ್ಲಾ ಶಹಭಾಸ್‌ಗಿರಿಯನ್ನು ಕೊಡೋಣ. ಆದರೆ ಯಾವಾಗ ಹೋಗುತ್ತದೆಯೋ ಹೇಳುವುದಕ್ಕಾಗುವುದಿಲ್ಲ. ಆದರೆ ಇಲ್ಲಿ ಮತ್ತೊಂದು ಕೆಟ್ಟ ಸಂಪ್ರದಾಯ ಪ್ರಾರಂಭವಾಗಬಾರದು. ಆದ್ದರಿಂದ ದಯವಿಟ್ಟು ನಾನು ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ, ಇದನ್ನು ಪುನರ್ ಪರಿಶೀಲನೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ...

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೇಳಿರುವುದನ್ನು ಬಿಟ್ಟು ಮತ್ತೇನಾದರೂ ಹೇಳುವುದು ಇದೆಯೇ ಎಂದು ಹೇಳಿ. ಎಲ್ಲರೂ ಹೇಳಿದ್ದೇ ಹೇಳುತ್ತಿದ್ದಾರೆ. ಹೊಸ ವಿಚಾರಗಳು ಬರುತಿಲ್ಲ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಮೊನ್ನೆಯಿಂದಲೂ ಕೂಡ ಇದೇ ಚರ್ವಿತ ಚರ್ವಣ ಆಗುತ್ತಿದೆ. ಇದೇ ಶಬ್ದಗಳು. ಇಂಥದ್ದಕ್ಕೆ ಮತ್ತೆ ಮತ್ತೆ ಅವಕಾಶ ಕೊಡಬೇಕೆ? ಹೇಳಿ. ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡುವಾಗ ಈ ರಾಜ್ಯದ ಅನೇಕ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ಸದನದ ಮೂಲಕ ತರಬೇಕಾಗುತ್ತದೆ. ಇದಕ್ಕೆ ಅವಕಾಶ ಮಾಡಿಕೊಡಬೇಕು. ಅದರ ಬದಲು ಚರ್ವಿತ ಚರ್ವಣದಂತೆ ಹೇಳಿದ್ದನ್ನೇ ಹೇಳುವುದು, ಹೇಳಿದ್ದನ್ನೇ ಹೇಳುತ್ತಾ ಹೋದರೆ

ಅದಕ್ಕೇನಾದರೂ ಅರ್ಥವಿದೆಯೇ? ಅಧ್ಯಕ್ಷರಾದ ತಾವು ಈಗಾಗಲೇ ತೀರ್ಪನ್ನು ಕೊಟ್ಟಿದ್ದೀರಿ. ಆ ತೀರ್ಪಿಗೆ ಸಭೆ ಬದ್ಧವಾಗಿರತಕ್ಕಂಥದ್ದು ಅಗತ್ಯವಿದೆ. ತಮ್ಮ ತೀರ್ಪನ್ನೇ ಪ್ರಶ್ನೆ ಮಾಡತಕ್ಕಂಥದ್ದು. . . . ಕರ್ನಾಟಕ ರಾಜ್ಯದಲ್ಲಿ ಒಂದು ಹೊಸ ಇತಿಹಾಸವನ್ನೇ ಸೃಷ್ಟಿ ಮಾಡುತ್ತಿದ್ದಾರೆ ಇವರು. ಮಾನ್ಯ ರಾಜ್ಯಪಾಲರ ಬಗ್ಗೆಯೂ ಗೌರವವಿಲ್ಲ, ತಮ್ಮ ಬಗ್ಗೆಯೂ ಗೌರವವಿಲ್ಲ.

(ಗೊಂದಲ)

ಅಧ್ಯಕ್ಷರು: ಹೀಗೆ ಎಲ್ಲರೂ ಎದ್ದು ನಿಂತು ಮಾತನಾಡಿದರೆ ಹೇಗೆ? ರಾಮಸ್ವಾಮಿಯವರೆ, ತಾವು ಕುಳಿತುಕೊಳ್ಳಿ. ನಾನು ಈಗ ಮಾನ್ಯ ಸಿದ್ದರಾಮಯ್ಯನವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಸಿದ್ದರಾಮಯ್ಯನವರೆ, ಎರಡು ನಿಮಿಷದಲ್ಲಿ ತಮ್ಮ ಅಭಿಪ್ರಾಯ ಹೇಳಿಬಿಡಿ.

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ): ಮಾನ್ಯ ಅಧ್ಯಕ್ಷರೆ, ಭಾಷಣ ಮಾಡುವುದಕ್ಕೋಸ್ಕರವಾಗಿ ನಾನು ಇಲ್ಲಿ ಬಂದುನಿಂತಿಲ್ಲ. ನಮಗೆ ಸದನದ ಸಮಯ ಹಾಳುಮಾಡಬೇಕೆಂಬ ಉದ್ದೇಶವೂ ಕೂಡ ಇಲ್ಲ. ಅಭಿವೃದ್ಧಿ ಕೆಲಸಗಳಿಗೆ ಅಡ್ಡಿ ಪಡಿಸಬೇಕೆಂಬ ಉದ್ದೇಶವೂ ನಮಗೆ ಇಲ್ಲ. ಅಭಿವೃದ್ಧಿ ಕೆಲಸಗಳಿಗೆ ಎಷ್ಟು ಸಹಕಾರ ಕೊಡಬೇಕೋ ಅಷ್ಟು ಸಹಕಾರವನ್ನು ನಾವು ಕೊಡುತ್ತೇವೆ. ಬಹಳ ಒಳ್ಳೆಯ ಅಭಿವೃದ್ಧಿ ಕೆಲಸಗಳಿಗೆ ನಮ್ಮ ಸಹಕಾರ ಇದ್ದೇ ಇರುತ್ತದೆ. ಜನರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ನಮ್ಮೆಲ್ಲಾ ಸದಸ್ಯರ ಸಂಪೂರ್ಣ ಬೆಂಬಲ ಇದ್ದೇ ಇದೆ. ಇದನ್ನು ಅಡ್ಡಿಪಡಿಸುವುದಕ್ಕೆ ಹೋಗುವುದೇ ಇಲ್ಲ. ಆದರೆ ಈಗ ಇಲ್ಲಿ ಬಂದಿರತಕ್ಕಂಥ ವಿಚಾರ, ಇದು ರಾಜ್ಯಾಂಗದ ಸಮಸ್ಯೆ ಆಗಿರುವುದರಿಂದ, it is a constitutional matter. ಹಾಗಾಗಿ ಈ ಬಗ್ಗೆ ಚರ್ಚೆ ಆಗಬೇಕಾಗಿದೆಯೆಂದು ತಮ್ಮಲ್ಲಿ ನಾವು ಮನವಿ ಮಾಡುತ್ತಿದ್ದೇವೆ. ನಾವು ತಮ್ಮ ತೀರ್ಪಿನ್ನು ಪ್ರಶ್ನೆ ಮಾಡುತ್ತಿದ್ದೇವೆಂದು ತಾವು ಭಾವಿಸಿ ಕೊಳ್ಳಬಾರದು. ಆದರೆ ತಮ್ಮ ತೀರ್ಪನ ಬಗ್ಗೆ ನಾವು ಮತ್ತೆ ಅದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಮನವಿ ಮಾಡುತ್ತಿದ್ದೇವೆ. ಈ ರಾಜ್ಯದಲ್ಲಿ ರಾಜ್ಯಾಂಗಕ್ಕೆ ವಿರುದ್ಧವಾದಂಥ ಒಂದು ಪದ್ಧತಿಯಾಗಬಾರದು, ಸಂಪ್ರದಾಯವಾಗಬಾರದು ಎನ್ನತಕ್ಕಂಥ ಕಳಕಳಿಯಿಂದ ಈ ಮಾತನ್ನು ಹೇಳುತ್ತಿದ್ದೇವೆಯೇ ಹೊರತು ನಿಮ್ಮನ್ನು ಪ್ರಶ್ನೆ ಮಾಡಬೇಕೆನ್ನುವ ವಿಷಯ ನಮ್ಮಲ್ಲಿ ಇಲ್ಲವೇ ಇಲ್ಲ. ಇದನ್ನು ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ. ನಾವು ಏಕೆ ಇಷ್ಟೆಲ್ಲಾ ಕಳಕಳಿಯಿಂದ ಪ್ರಸ್ತಾಪ ಮಾಡುತ್ತಿದ್ದೇವೆಂದರೆ ತಾವು ಒಳಗಡೆ ಸಭೆ ಕರೆದಾಗಲೂ ಕೂಡ ಬಂದು ಹೇಳಿದ್ದೇವೆ. ನಮ್ಮ ಅಭಿಪ್ರಾಯಗಳನ್ನು ಅಲ್ಲಿ ಕೂಡ ಹೇಳಿದ್ದೇವೆ. ತಮ್ಮ ಗಮನಕ್ಕೆ ಎಷ್ಟು ತರುವುದಕ್ಕೆ ಸಾಧ್ಯವಾಗುತ್ತದೋ ಅವೆಲ್ಲವನ್ನೂ ಕೂಡ ಹೇಳಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ವಿಶೇಷ ಪರಿಸ್ಥಿತಿ ನಿರ್ಮಾಣ ಆಗಿರುವುದರಿಂದಲೇ ಮಾನ್ಯ ರಾಜ್ಯಪಾಲರು 24ನೇಯ ತಾರೀಖು ಮಾಡತಕ್ಕ ಭಾಷಣವನ್ನು ಆರ್ಟಿಕಲ್ 175(1)ರ ಪ್ರಕಾರ ಮಾಡಿದ್ದೇನೆ ಎಂದು ಹೇಳಿದ್ದಾರೆ. ಅವರು ಗೊಂದಲ ನಿವಾರಣೆ ಮಾಡಬೇಕು ಎನ್ನುವುದಕ್ಕೋಸ್ಕರವೇ ಹಾಗೆ ಹೇಳಿರುವುದು. ಗೊಂದಲ ಇಲ್ಲದಿದ್ದರೆ ನೇರವಾಗಿ ಮಾನ್ಯ ರಾಜ್ಯಪಾಲರು ಆರ್ಟಿಕಲ್ 176ರ ಅಡಿಯಲ್ಲಿ ಭಾಷಣ ಮಾಡುತ್ತಿದ್ದೇನೆ ಎಂದು ಹೇಳಿಬಿಡುತ್ತಿದ್ದರು. ಆರ್ಟಿಕಲ್ 175(1)ರಲ್ಲಿ ಮಾಡಿರತಕ್ಕಂಥದ್ದು ಮತ್ತು ಅವರೇ ನಿರ್ದೇಶನ ಕೊಟ್ಟು ಈ ಸಭೆ ಸಮನ್ ಮಾಡಿ ಸದಸ್ಯರೆಲ್ಲರೂ ಕೂಡ ಇಲ್ಲಿಗೆ ಬರಬೇಕು, ಬಂದು ನನ್ನ ಮೆಸೇಜ್‌ನ್ನು ಕೇಳಬೇಕು, ನನ್ನ ಮಾತನ್ನು ಕೇಳಬೇಕು ಎನ್ನುವ ಕಾರಣಕ್ಕೋಸ್ಕರವಾಗಿ ಅವರು ಕರೆಸಿರುವುದು. ಅವರೇ ಕರೆಸಿರುವಾಗ ಮತ್ತು ಆರ್ಟಿಕಲ್ 175(1)ರ ಪ್ರಕಾರ ಭಾಷಣ ಮಾಡುತ್ತಿದ್ದೇನೆ ಎಂದು

ಬಹಳ ಸ್ಪಷ್ಟವಾಗಿ ಹೇಳಿರುವಾಗ ನಾವು ಅವರಿಗೆ ವಂದನೆಯನ್ನು ಸಲ್ಲಿಸತಕ್ಕಂಥದ್ದು ಉದ್ಭವವಾಗುವುದೇ ಇಲ್ಲ. ಇದು ಬಹಳ ಸ್ಪಷ್ಟವಾಗಿರತಕ್ಕಂಥದ್ದು. ಆರ್ಟಿಕಲ್ 176ರ ಕೆಳಗಡೆ ಭಾಷಣ ಮಾಡಿದಾಗ ಮಾತ್ರ ನೀವು ಆಗ ಅವರಿಗೆ ಕರೆದಿರುತ್ತೀರಿ, ಸರ್ಕಾರದ ಕಾರ್ಯಕ್ರಮಗಳನ್ನು, ನೀತಿಯನ್ನು ಆರ್ಟಿಕಲ್ 176ರ ಕೆಳಗಡೆ ಅವರು ಹೇಳಿರುತ್ತಾರೆ. ಅದಕ್ಕೋಸ್ಕರವಾಗಿ ನಾವು ಅವರನ್ನು ಕರೆದು, ಅವರಿಂದ ಭಾಷಣ ಮಾಡಿಸುವುದರಿಂದ, ಈ ಸದನ ಅವರಿಗೆ ವಂದನೆಯನ್ನು ಸಲ್ಲಿಸತಕ್ಕಂಥದ್ದು ಈ ಸದನದ ಕರ್ತವ್ಯ. ಅದಕ್ಕೋಸ್ಕರವಾಗಿ ನಾವು ನಿರ್ಣಯವನ್ನು ಮಾಡಿ ಅವರಿಗೆ ವಂದನೆಯನ್ನು ಸಲ್ಲಿಸಿ ಕಳುಹಿಸಿಕೊಡುತ್ತೇವೆ. ಇದು ನಡೆದುಬಂದಿರತಕ್ಕಂಥದ್ದು. ಈಗ ಏನು ಉದ್ಭವವಾಗಿರತಕ್ಕಂಥದ್ದರಲ್ಲಿ ಕೆಲವರು ಮಾತನಾಡಿರತಕ್ಕಂಥದ್ದು ಏನು? ಮಾನ್ಯ ರಾಜ್ಯಪಾಲರು ಬಂದು ಭಾಷಣ ಮಾಡಬಾರದು ಎಂದು ಎಲ್ಲಿದೆ? ಆರ್ಟಿಕಲ್ 175ರ ಕೆಳಗಡೆ ಭಾಷಣ ಮಾಡಬಾರದು ಎಂದು ಎಲ್ಲಿದೆ? Constitution is silent!..... Constitution is not silent. ಆರ್ಟಿಕಲ್ 176ರಲ್ಲಿ ಬಹಳ ಸ್ಪಷ್ಟವಾಗಿ ಹೇಳಲಾಗಿದೆ. In Article 176 Clause (1) & (2) are very very clear. ಅದಕ್ಕೂ, ಇದಕ್ಕೂ ಡಿಸ್ಟಿಂಗ್‌ಷನ್ ಇದೆ. ಅದಕ್ಕೋಸ್ಕರವೇ ಎರಡು ಬೇರೆ ಬೇರೆ ಇರುವುದನ್ನು ಒಟ್ಟಿಗೇ ಒಂದೇ ಮಾಡಿ ನಾವು ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಆರ್ಟಿಕಲ್ 176ರಲ್ಲಿ ಇರತಕ್ಕಂಥ ವ್ಯಾಪ್ತಿ ಮತ್ತು ಪರಿಣಾಮವನ್ನು ನಾವು ಆರ್ಟಿಕಲ್ 175ರಲ್ಲಿ ನೋಡುವುದಕ್ಕಾಗುವುದಿಲ್ಲ. ಆರ್ಟಿಕಲ್ 175ರ ವ್ಯಾಪ್ತಿ, ಪರಿಣಾಮವನ್ನು ಆರ್ಟಿಕಲ್ 176ರಲ್ಲಿ ನೋಡುವುದಕ್ಕಾಗುವುದಿಲ್ಲ. ಅವೆರಡೂ ಬೇರೆ ಬೇರೆ ಇರುವುದರಿಂದ ಮಾನ್ಯ ರಾಜ್ಯಪಾಲರು ಆರ್ಟಿಕಲ್ 175(1)ರಲ್ಲಿ ಭಾಷಣ ಮಾಡಿರುವುದರಿಂದ ತಾವು ದಯಮಾಡಿ ಮತ್ತೆ ನಮ್ಮ ಮನವಿಯನ್ನು ಪುನರ್ ಪರಿಶೀಲನೆಯನ್ನು ಮಾಡಬೇಕು. ಆರ್ಟಿಕಲ್ 175(1)ರಲ್ಲಿ ಮಾಡಿರುವ ಭಾಷಣದ ಮೇಲೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಚರ್ಚೆ ಮಾಡೋಣ. ನಾವು ಮಾತನಾಡುವಾಗ ಬೇಕಾದರೆ ಒಂದು ಹೆಜ್ಜೆ ಮುಂದೆ ಹೋಗಿ ಅವರಿಗೆ ಮಾತಿನಲ್ಲಿ ವಂದನೆಯನ್ನೂ ಕೂಡ ಹೇಳೋಣ. ಆದರೆ ವಂದನಾ ನಿರ್ಣಯವನ್ನು ನಾವು ಮೂವ್ ಮಾಡಿ, ಒಬ್ಬರು ಮೂವ್ ಮಾಡಿದ್ದನ್ನು ಮತ್ತೊಬ್ಬರು ಸೆಕೆಂಡ್ ಮಾಡಿರುವುದು ಇದೆಯಲ್ಲಾ, ಅದು ರಾಜ್ಯಾಂಗಕ್ಕೆ ವಿರುದ್ಧವಾಗುತ್ತದೆ, ಸಂವಿಧಾನಕ್ಕೆ ವಿರುದ್ಧವಾಗುತ್ತದೆ. ಸಂವಿಧಾನಬಾಹಿರವಾದಂಥ ಕೆಲಸ ಇಲ್ಲಿ ಆಗಬಾರದು ಎನ್ನುವುದೇ ನನ್ನ ಕಳಕಳಿ. ಒಂದು ವೇಳೆ ಸರ್ಕಾರ ನಮಗೆ ಮೆಜಾರಿಟಿ ಇದೆ, ನಾವು ಮಾಡುತ್ತೇವೆ ಎನ್ನುವ ಧೋರಣೆಯಿಂದ ಹೋದರೆ ನಾವು ಅದಕ್ಕೆ ಭಾಗಿಯಾಗುವುದಕ್ಕಾಗುವುದಿಲ್ಲ. ರಾಜ್ಯಾಂಗಕ್ಕೆ ವಿರುದ್ಧವಾದಂಥ ನಿರ್ಣಯಗಳಿಗೆ ನಾವು ಭಾಗಿಯಾಗುವುದಕ್ಕಾಗುವುದಿಲ್ಲ. ಅದರಲ್ಲಿ ನಾವು ಭಾಗಿಯಾಗುವುದಕ್ಕಾಗುವುದಿಲ್ಲವೆಂದು ಬಹಳ ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಇದು ಅಸಹಕಾರ ಎಂದು ತಾವು ತಿಳಿದು ಕೊಳ್ಳಬಾರದು. ಅಸಹಕಾರ ಎಂದು ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲ. ರಾಜ್ಯಾಂಗದ ವಿರುದ್ಧವಾಗಿ ಸ್ಪೀಕರ್‌ರವರೂ ಕೂಡ ರಾಜ್ಯಾಂಗದ ವಿಧಿ ವಿಧಾನಗಳನ್ನು ಬಿಟ್ಟು ಮಾಡುವುದಕ್ಕೆ ಆಗುವುದಿಲ್ಲ. ಒಂದು ವೇಳೆ ನಾವೇ ಮಾಡಿಕೊಂಡಿರತಕ್ಕಂಥ ಸದನದ ಕಾರ್ಯವಿಧಾನ ಮತ್ತು ನಡಾವಳಿ ನಿಯಮಗಳು ಇದೆಯಲ್ಲಾ ಅದನ್ನು ಸಸ್ಪೆಂಡ್ ಮಾಡಿ ಬೇರೆ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರಿಗೆ ಅವಕಾಶವಿದೆ ಮತ್ತು ಅಧಿಕಾರವಿದೆ. ಇನ್‌ಹರೆಂಟ್ ಪವರ್ ಇದೆ. ಆದರೆ ರಾಜ್ಯಾಂಗದ ವಿಧಿ ಬದಲಾಯಿಸುವುದಕ್ಕೆ ಯಾವುದೇ ಇನ್‌ಹರೆಂಟ್ ಪವರ್ ಸ್ಪೀಕರ್‌ರವರಿಗೆ ಇಲ್ಲ ಎನ್ನತಕ್ಕಂಥದ್ದು

ನನ್ನ ಸ್ಪಷ್ಟ ಅಭಿಪ್ರಾಯ. ಆದುದರಿಂದ ವಂದನಾ ನಿರ್ಣಯವನ್ನು ಮಂಡನೆ ಮಾಡಿರುವುದೇ ತಪ್ಪು. ಆ ಕಾರಣದಿಂದ ಮಾನ್ಯ ಅಧ್ಯಕ್ಷರು ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ನಾವು ಕೇಳುತ್ತಿರುವುದು. ಇವೊತ್ತು ಅವರು ಹಠ ಮಾಡಿ ಅವರು ಅದನ್ನು ಒಂದು ಪ್ರೆಸ್ಟೀಜ್ ಎಂದು ಇಟ್ಟುಕೊಂಡುಬಿಟ್ಟರೆ ಬಾರಿ ಕಷ್ಟವಾಗುತ್ತದೆ. ಇಡೀ ರಾಜ್ಯದ ಜನರಿಗೆ ನಾವು ಹೇಳಬೇಕಾಗುತ್ತದೆ, ಯಾವ ಕಾರಣಕ್ಕೋಸ್ಕರವಾಗಿ ನಾವು ಇದಕ್ಕೆ ಸಹಕಾರ ಕೊಡುವುದಕ್ಕೆ ಆಗಲಿಲ್ಲ ಎನ್ನುವುದನ್ನು ನಾವು ರಾಜ್ಯದ ಜನರಿಗೆ ಹೇಳಬೇಕಾಗುತ್ತದೆ. ಇದು ರಾಜ್ಯಾಂಗಕ್ಕೆ ವಿರುದ್ಧವಾಗಿರುವುದರಿಂದ ನಾವು ಸಹಕಾರ ಕೊಡುವುದಕ್ಕಾಗುವುದಿಲ್ಲ. ಈ ಸರ್ಕಾರ ರಾಜ್ಯಾಂಗದ ಎಲ್ಲಾ ವಿಧಿವಿಧಾನಗಳನ್ನು ಗಾಳಿಗೆ ತೂರಿ ನಿರ್ಣಯ ಮಾಡುತ್ತಿದ್ದಾರೆ, ಆ ರೀತಿಯಲ್ಲಿ ಇಲ್ಲಿ ಆಗುತ್ತಿದೆ ಎಂದು ನಾವು ಜನರಿಗೆ ಹೇಳಬೇಕಾಗುತ್ತದೆ. ಆದಕಾರಣ, We cannot be a party to this type of unconstitutional decision. ಇದು ನಮ್ಮ ವಾದ.

(ಗೊಂದಲ)

ಅಧ್ಯಕ್ಷರು: ಈಗ ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಮಾತನಾಡಲು ಕರೆದಿದ್ದೇನೆ.

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್: ಹಿಂದಿನ ಸರ್ಕಾರದಲ್ಲಿ ವಂದನಾ ನಿರ್ಣಯ ಮಂಡನೆಯೇ ಆಗಿಲ್ಲ. ಹಿಂದಿನ ಸರ್ಕಾರದಲ್ಲಿ ಇದು ಮಂಡನೆ ಆಗಿದ್ದರೆ, ಸಿದ್ದರಾಮಯ್ಯನವರ ಮಾತನ್ನು ಒಪ್ಪಬಹುದು. ಆಗ ಸಿದ್ದರಾಮಯ್ಯನವರು ಹೇಳುವ ಮಾತಿಗೆ ಬೆಲೆ ಬರುತ್ತದೆ. ಆದರೆ ಹಿಂದಿನ ಸರ್ಕಾರದಲ್ಲಿ ಇದು ಮಂಡನೆ ಆಗಿಲ್ಲ. ಸರ್ಕಾರವೇ ಇರಲಿಲ್ಲ. ಅಂತಹ ಸಂದರ್ಭದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎನ್ನುವಂತಹ ಮಾತನ್ನು ಹೇಳಬೇಕಾಗುತ್ತದೆ.

(ಗೊಂದಲ)

ಮಾನ್ಯ ಸದಸ್ಯರು: ವಂದನಾ ನಿರ್ಣಯವನ್ನು ಮಂಡನೆ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶ ಪಡೆದುಕೊಳ್ಳಬಹುದು, ಆದರೆ ಮಂಡಿಸಿಲ್ಲವೆಂದು ಹೇಗೆ ಹೇಳುತ್ತೀರಿ?

(ಗೊಂದಲ)

ಅಧ್ಯಕ್ಷರು: ಈಗ ನನ್ನ ಮನವಿ ಏನೆಂದರೆ ಒಬ್ಬೊಬ್ಬರಾಗಿ ಮಾತನಾಡಿ. ವಿಷಯವನ್ನು ಚರ್ಚೆ ಮಾಡುವುದಕ್ಕೇ ಈ ಮನೆ ಇರುವುದು. ಒಬ್ಬರು ಎದ್ದತಕ್ಷಣ ಹತ್ತು ಜನ ಎದ್ದು ಗಲಾಟೆ ಮಾಡಬೇಡಿ. ಈಗ ನಾನು ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಕರೆದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ...

ಶ್ರೀ ಬಸವರಾಜ್ ಎಸ್. ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಇದು ಎಲ್ಲಿಯವರೆಗೆ .

ಅಧ್ಯಕ್ಷರು: ನಿಮಗೆ ಅವಕಾಶ ಕೊಡುತ್ತೇನೆ. ಈಗ ನಾನು ಅವರನ್ನು ಕರೆದಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ತಾವು ಒಂದು ಸಾರಿ ಚರ್ಚೆಗೆ ಅವಕಾಶ ಕೊಟ್ಟು ರೂಲಿಂಗ್ ಕೊಟ್ಟಮೇಲೆ ಮತ್ತೇ ಅದೇ ವಿಷಯವನ್ನು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ತಾವು ಆ ವಿಷಯದಲ್ಲಿ ರೂಲಿಂಗ್ ಕೊಟ್ಟಾಯಿತು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ . . . . . .

ಅಧ್ಯಕ್ಷರು: ದಯಮಾಡಿ ನಾನು ಹೇಳುವುದನ್ನು ಕೇಳಿ. ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ಈಗ ಕಾನೂನು ಸಚಿವರು ಹೇಳುತ್ತಿರುವುದೇನೆಂದರೆ, ಇದರ ಬಗ್ಗೆ ವಿಸ್ತೃತವಾಗಿ ಚರ್ಚೆಯಾಗಿದೆ. ಆ ಕಡೆಯವರು ಈ ಕಡೆಯವರು ಎಲ್ಲಾ ಮಾತನಾಡಿದ್ದೀರಿ. ಅದಾದಮೇಲೆ ನಾನೊಂದು ರೂಲಿಂಗ್ ಕೊಟ್ಟಿದ್ದೇನೆ. ಆ ರೂಲಿಂಗ್ ಅನ್ನು ಮರು ಪರಿಶೀಲನೆ ಮಾಡಿ ಎಂದು ಹೇಳುತ್ತೀರಿ. ಮರು ಪರಿಶೀಲನೆ ಮಾಡುವುದಕ್ಕೆ ಹೊಸ ವಿಚಾರಗಳೂ ಏನಿವೆ ಎಂದು ಹೇಳಬೇಕು? ಈಗ ನನ್ನ ರೂಲಿಂಗ್ ಇದೆ, ಯಾವ ಕಾರಣಕ್ಕೆ ಅದನ್ನು ಮರು ಪರಿಶೀಲನೆ ಮಾಡಬೇಕೆಂದು ಹೇಳಿ.

ಶ್ರೀ ಬಸವರಾಜ್ ಎಸ್. ಹೊರಟ್ಟಿ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಎಲ್ಲರೂ ಹೇಳಿದ್ದನ್ನೇ ಹೇಳುತ್ತಾರೆ. ಆರ್ಟಿಕಲ್ 175ರ ಬಗ್ಗೆ ಬಿಟ್ಟರೆ ಬೇರೆ ವಿಷಯ ಏನಾದರೂ ಇದೆಯಾ? ಎಲ್ಲಿಯವರೆಗೆ ಚರ್ಚೆ ನಡೆಸುವುದು? ಚರ್ಚೆಯಾಗಿ ಎಲ್ಲಾ ಆಗಿದೆ, ಅವರು ಹೇಳಿರುವುದಕ್ಕೆಲ್ಲಾ ಕ್ಲಾರಿಫೈ ಮಾಡಿ ತಾವು ರೂಲಿಂಗ್ ಕೊಟ್ಟಿದ್ದೀರಿ. ರೂಲಿಂಗ್ ಎಲ್ಲಾ ಆಗಿ ತಾವು ಹೇಳಿದಿರಿ, ಮುಂದಿನ ಕಾರ್ಯಕ್ರಮವನ್ನು ಸದನದಲ್ಲಿ ನಡೆಸಿ ಎಂದು ಇದನ್ನು ಎಲ್ಲಿಯವರೆಗೆ ತೆಗೆದುಕೊಂಡು ಹೋಗುವುದು? ಇನ್ನೂ ಎರಡು ದಿವಸ ಚರ್ಚೆ ಮಾಡಬಹುದು, ಆದರೆ ಈ ಚರ್ಚೆಗೆ ಒಂದು ಅಂತ್ಯ ಬೇಕಲ್ಲ?

ಅಧ್ಯಕ್ಷರು: ಈಗ ನಾಲ್ಕೈದು ಜನ ಸದಸ್ಯರು ಅವರವರ ಅಭಿಪ್ರಾಯಗಳನ್ನು ಕೊಡುತ್ತಾರೆ. ಮರು ಪರಿಶೀಲನೆ ಮಾಡುವ ವಿಚಾರದಲ್ಲಿ ಹೇಳುತ್ತೇನೆಂದು ಹೇಳುತ್ತಿದ್ದಾರೆ. What are the new points? ಹೇಳಿ.

ಶ್ರೀ ಬಸವರಾಜ್ ಎಸ್. ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಎಲ್ಲರೂ ಏನು ವಿಚಾರ ಮಾತನಾಡಿದ್ದಾರೆ, ಅದನ್ನೇ ಶ್ರೀ ವಾಟಾಳ್ ನಾಗರಾಜ್ ಅವರು ಹೇಳುತ್ತಾರೆ. ಆದ್ದರಿಂದ, ವಾಟಾಳ್ ನಾಗರಾಜ್ ಅವರು ಮಾತನಾಡುವ ಅವಶ್ಯಕತೆ ಇಲ್ಲ. ಹೊಸ ವಿಚಾರ ಏನಾದರೂ ಹೇಳುತ್ತಾರಾ? ಆರ್ಟಿಕಲ್ 175 ಅಥವಾ 176ರ ವಿಚಾರ ಬಿಟ್ಟು ಬೇರೆ ಏನಾದರೂ ಹೇಳುತ್ತಾರಾ? ಇಲ್ಲ. ಆದುದರಿಂದ ದಯಮಾಡಿ ಇಲ್ಲಿ ಚರ್ಚೆಯನ್ನು ಮುಂದುವರೆಸುವುದು ಸೂಕ್ತವಲ್ಲ. ನಾನು ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ, ದಯಮಾಡಿ ಚರ್ಚೆಯನ್ನು ಮುಂದುವರೆಸುವುದು ಯಾವುದೇ ರೀತಿಯಿಂದ ಸಾಧುವಾದುದಲ್ಲ. ಈ ಚರ್ಚೆಗೆ ಅವಕಾಶ ಕೊಡುವಂತಹ ಅವಶ್ಯಕತೆ ಇಲ್ಲ. ದಯಮಾಡಿ ತಾವು ಇನ್ನೊಂದು ಸಲ ಎಲ್ಲರನ್ನೂ ಕರೆದು ಮಾತನಾಡಿ. ಮಾನ್ಯ ಅಧ್ಯಕ್ಷರೆ, ಅವರನ್ನು ಬಹಳ ಸಲ ಕರೆದಿದ್ದೀರಿ; ಚರ್ಚೆ ಮಾಡಿದ್ದೀರಿ. ಬೆಳಿಗ್ಗೆ 11.00 ಗಂಟೆಯಿಂದ 1.00 ಗಂಟೆಯವರೆಗೆ ಒಟ್ಟು ಎರಡು ಗಂಟೆ ಚರ್ಚೆ ಮಾಡಿದ್ದೀರಿ. ಇನ್ನೊಂದು ಬಾರಿ ಬೇಕಾದರೆ ಅವರನ್ನು ಕರೆಯಿರಿ. ಕರೆದು ಅವರ ಜೊತೆ ಚರ್ಚೆ ಮಾಡಿ. ಆದರೆ ಈ ಸದನದ ವೇಳೆಯನ್ನು ಅಪವ್ಯಯ ಮಾಡುವುದು ನನಗಂತೂ ಸರಿಯೆನಿಸುವುದಿಲ್ಲ. ದಯಮಾಡಿ ನಾನು ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ, ಇದನ್ನು ಇಲ್ಲಿಗೆ ಮುಕ್ತಾಯ ಮಾಡಬೇಕೆನ್ನುವುದು ನನ್ನ ಕಳಕಳಿಯ ಮನವಿ. ದಯಮಾಡಿ ಈ ರಾಜ್ಯದ ಜನತೆ ಪರವಾಗಿ ಕೆಲಸ ಮಾಡುವುದಕ್ಕೆ ಅನುವು ಮಾಡಿಕೊಡಬೇಕೆಂದು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ತಾವು ಯಾವ ವಿಚಾರದಲ್ಲಿ ಮರು ಪರಿಶೀಲನೆ ಮಾಡಬೇಕೆಂದು ಇದೆ, ಅದರ ಬಗ್ಗೆ ಹೇಳಿ ಎಂದು ಹೇಳಿದಿರಿ. ನಾನು ಈಗ ಅದನ್ನೇ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಆರ್.ಎ. ದೇಶಪಾಂಡೆ: ಅವರು ಮಾತನಾಡಲಿ. ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ.

ಶ್ರೀ ಬಸವರಾಜ್ ಎಸ್. ಹೊರಟ್ಟಿ: ನೀವು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೀರಿ. ಇದನ್ನು ಬಿಟ್ಟು ಬೇರೆ ಹೇಳುವುದಕ್ಕೆ ಬರುವುದೇ ಇಲ್ಲ . . . . .

ಶ್ರೀ ಆರ್.ಎ. ದೇಶಪಾಂಡೆ: ಏಕೆ ಬರುವುದಿಲ್ಲ? ಯಾವಾಗ ಯಾವ ಸ್ಪಾರ್ಕ್ ಬರುತ್ತದೆಂದು ಹೇಳುವುದಕ್ಕೆ ಬರುವುದಿಲ್ಲ. ಇದು ಸಂವಿಧಾನದ ಪ್ರಶ್ನೆ ಇದೆ. ಇದನ್ನು ತಾವು ಅರ್ಥಮಾಡಿಕೊಳ್ಳಬೇಕು. ನಾವು ಸಹಕಾರ ಕೊಡಬಾರದು ಎಂದಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ತಾವು ನನ್ನನ್ನು ಕರೆದಿದ್ದೀರಿ, ನಾನು ಒಂದು ಒಳ್ಳೆಯ ಮನವಿ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್: ತಾನು ಯಾವ್ಯಾವ ವಿಚಾರವಾಗಿ ಮರುಪರಿಶೀಲನೆ ಮಾಡಬೇಕೆಂದು ಕೇಳಿದ್ದೀರಿ. ಅದರ ಬಗ್ಗೆ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು: ಹೀಗಾದರೆ ಹೇಗೆ? ಎಲ್ಲರೂ ಹೀಗೆ ಮಾತನಾಡಿದರೆ ನಾವೇನು ಮಾಡಲಿ? ನೀವೆಲ್ಲಾ ನನಗೆ ಕೋಪ ಮಾಡಿಕೊಳ್ಳುತ್ತೀರಿ ಎಂದು ಹೇಳುತ್ತೀರಿ. ಅದಕ್ಕೋಸ್ಕರ ನಾನು ಸುಮ್ಮನೆ ಕುಳಿತುಕೊಂಡಿದ್ದೇನೆ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್: ಕಾನೂನು ಸಚಿವರು ಏನು ಹೇಳಿದರು ಅದಕ್ಕೆ ಉತ್ತರ ಹೇಳುತ್ತಿದ್ದೇನೆ.

ಶ್ರೀ ಬಸವರಾಜ್ ಎಸ್. ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಇಲ್ಲಿ ಚರ್ಚೆ ಮಾಡಿದ್ದೇವೆ. ತಾವು ಮೂರ್ನಾಲ್ಕು ಬಾರಿ ಬೆಎಸಿ ಕರೆದಿದ್ದೀರಿ. ಚರ್ಚೆ ಮಾಡಿದಿರಿ, ಆದರೆ ಇನ್ನೂ ಎಲ್ಲಿಯವರೆಗೆ ಇದರ ಬಗ್ಗೆ ಚರ್ಚೆ ಮಾಡುತ್ತೀರಿ? ಇದಕ್ಕೆ ಏನಾದರೂ ಅಂತ್ಯವಿದೆಯೇ ಎಂದು ಕೇಳುತ್ತೇನೆ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರು ಯಾವ ಕಾರಣಕ್ಕೆ ಮರು ಪರಿಶೀಲನೆ ಮಾಡಬೇಕಾಗಿದೆ ಎಂದು ಕೇಳುತ್ತಿದ್ದಾರೆ. . . . .

ಶ್ರೀ ಕೆ. ಶ್ರೀನಿವಾಸ ಗೌಡ: ಮಾನ್ಯ ಅಧ್ಯಕ್ಷರೆ, ನಿಮ್ಮ ಮನಸ್ಸನ್ನು ನಮ್ಮ ಕಡೆ ಒಲಿಸಿಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಮರು ಪರಿಶೀಲನೆ ವಿಚಾರದಲ್ಲಿ ಅದಕ್ಕೆ ನಮಗೆ ಅವಕಾಶ ಮಾಡಿಕೊಡಿ. ನೀವೆ ಹೇಳಿದಿರಿ. ಮರು ಪರಿಶೀಲನೆ ಬಗ್ಗೆ ಮಾತನಾಡಿ ಎಂದು. ನಾನು ಮಾತನಾಡುತ್ತೇನೆ. ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: ಶ್ರೀನಿವಾಸ ಗೌಡರೆ, ಬಸವರಾಜ್ ಹೊರಟ್ಟಿಯವರು ಹೇಳುತ್ತಿರುವುದು ಹಳೇ ವಿಚಾರಗಳನ್ನೇ ಹೇಳುತ್ತಿದ್ದೀರಿ ಎಂದು.

(ಗೊಂದಲ)

ಶ್ರೀಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಯಾವ ಕಾರಣಕ್ಕಾಗಿ ಮರು ಪರಿಶೀಲನೆ ಮಾಡಬೇಕೆಂದು ಈ ರೂಲ್‌ನಲ್ಲಿ ಇದೆ ?

(ಗೊಂದಲ)

ಅಧ್ಯಕ್ಷರು: ಅವರು ಹೊಸ ವಿಚಾರ ಏನೂ ಹೇಳುತ್ತಿಲ್ಲ, ಮತ್ತೆ ಮತ್ತೆ ಹಳೇ ವಿಚಾರವನ್ನು ಹೇಳುತ್ತಿದ್ದಾರೆ ಎಂದು ಹೇಳಿದರು.

ಶ್ರೀ ಬಸವರಾಜ್ ಎಸ್. ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಇದು ಎಲ್ಲಿಯವರೆಗೆ ಚರ್ಚೆಯಾಗುವುದು ಕಾಲ ನಿಗದಿ ಮಾಡಿ ಇದಕ್ಕೆ ಏನಾದರೂ ಅಂತ್ಯ ಇದೆಯೆ? ಮತ್ತೆ ಏನಾದರೂ ಹೇಳಬೇಕಲ್ಲಾ. ಎಲ್ಲಿಯವರೆಗೆ ಚರ್ಚೆಯಾಗಬೇಕು ಎನ್ನುವುದಕ್ಕೆ ದಯಮಾಡಿ ಒಂದು ತೀರ್ಮಾನ ಮಾಡಿ ಇದು ಎಷ್ಟು ಗಂಟೆಯವರೆಗೂ ಚರ್ಚೆಯಾಗಬೇಕೆನ್ನುವುದರ ಬಗ್ಗೆ ತೀರ್ಮಾನ ಮಾಡಿ.

ಅಧ್ಯಕ್ಷರು: ಈಗ ಇಬ್ಬರು ಅಥವಾ ಮೂವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಏಕೆಂದರೆ ಮರು ಪರಿಶೀಲನೆ ಬಗ್ಗೆ ಹೇಳುತ್ತೇನೆ ಎಂದು ಹೇಳುತ್ತಿದ್ದಾರಲ್ಲಾ ಅದಕ್ಕೆ. ಆಮೇಲೆ ನಾನು ಏನು ಮಾಡಬೇಕೆಂದು ನೋಡಿ ಮಾಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನೀವು ನನ್ನನ್ನು ಕರೆದಿದ್ದೀರಿ.

ಅಧ್ಯಕ್ಷರು: ಮಾತನಾಡಿ. ಎರಡೇ ನಿಮಿಷ, ಈಗ ನಾಲ್ಕೈದು ಜನಕ್ಕೆ ಆ ಕಡೆ ಈ ಕಡೆಯವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಏಕೆಂದರೆ ಹೊಸ ವಿಚಾರ ಇದ್ದರೆ. . .

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ತಾವು ಬೆಳಿಗ್ಗೆ 10.30 ಗಂಟೆಯಲ್ಲಿ ನಮ್ಮನ್ನೆಲ್ಲಾ ಕರೆದಿದ್ದಿರಿ. ತಾವು ಸತ್ ಸಂಪ್ರದಾಯದ ಪ್ರಕಾರ ಎಲ್ಲಾ ಮುಖಂಡರನ್ನು ಕರೆದು ಈ ಸದನ ಮತ್ತೆ ಸರಿಯಾಗಿ ನಡೆಯಬೇಕು ಎನ್ನುವ ದೃಷ್ಟಿಯಿಂದ ತಾವು ಮಾತುಕತೆಯನ್ನು ನಡೆಸಿದಿರಿ. ನಾವು ತಮಗೆ ಆಭಾರಿಯಾಗಿದ್ದೇವೆ. ಮತ್ತೆ ತಮ್ಮ ತೀರ್ಪನ್ನು ಪ್ರಶ್ನೆ ಮಾಡುವಂತಹ ಸಂಗತಿಯೇ ಇಲ್ಲ. ಆದರೆ ನಿಮಗೆ ಎಷ್ಟು ಬೇಕಾದರೂ ಮನವಿ ಮಾಡಬಹುದು ಅದಕ್ಕೆ ಅವಕಾಶವಿದೆ. ಇನ್ನು ಎರಡನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡುವಾಗ ರಾಜ್ಯದ ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕು ಎನ್ನುವಂತಹ ವಿಚಾರವನ್ನು ಏನು ಹೇಳಿದ್ದಾರೆ, ಅದಕ್ಕೆ ನಾನೂ ಧ್ವನಿಗೂಡಿಸುತ್ತೇನೆ. ಅದರಲ್ಲಿ ಎರಡನೆಯ ಅಭಿಪ್ರಾಯವಿಲ್ಲ. ತಮ್ಮಲ್ಲಿ ನಾನು ಮತ್ತೊಮ್ಮೆ ಮನವಿ ಮಾಡುತ್ತಿದ್ದೇನೆ. ಇಂತಹ ಅನೇಕ ಸಂದರ್ಭದಲ್ಲಿ ಒಂದು ಬಾರಿ ಅಲ್ಲ ನಾಲ್ಕಾರು ಬಾರಿ ಕರೆದು ಮಾತನಾಡಿರುವುದು ಉಂಟು. ಲೋಕಸಭೆಯಲ್ಲೂ ತಾವು ಪ್ರತಿದಿನ ನೋಡುತ್ತಿದ್ದೀರಿ. ಇತ್ತೀಚಿನ ದಿನಗಳಲ್ಲಿ ಲೋಕಸಭೆಯಲ್ಲಿ ನಾಲ್ಕೈದು ಬಾರಿ ಮುಂದೆ ಹೋಗಿರುವುದು ಉಂಟು. ನಾವು ಇವತ್ತು ಯಾವುದನ್ನೂ ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಳ್ಳದೆ, ಒಂದು ಹೊಸ ಸೂಚನೆಯನ್ನು ತಾವು (ಅಧ್ಯಕ್ಷರು) ಕೊಡಬೇಕಾಗುತ್ತದೆ. ಆದುದರಿಂದ ಈ ಸದನವನ್ನು ನಡೆಸತಕ್ಕಂಥ ಜವಾಬ್ದಾರಿ ತಮಗೆ ಇದೆ. ಈ ಸದನ ಈ ರೀತಿ ಆಗಬೇಕು ಎನ್ನುವ ಇಚ್ಛೆ ಯಾರಿಗೂ ಇಲ್ಲ. ಆದರೆ ಕಾನೂನುಬಾಹಿರವಾಗಿ ಇದೆ ಎನ್ನುವಂತಹ ಮಾತನ್ನು ನಾವು ಹೇಳಿದರೂ ತಾವು ತೀರ್ಪನ್ನು ಕೊಟ್ಟಿದ್ದೀರಿ. ಅದನ್ನು ನಾವು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ದಯಮಾಡಿ ಮತ್ತೊಮ್ಮೆ ತಾವು ಸದನವನ್ನು ಮುಂದೂಡಿ ಇನ್ನೊಂದು ಸಾರಿ ಕರೆದು ಕೇಳಿ, ತಪ್ಪೇನೂ ಆಗುವುದಿಲ್ಲ. ನೀವು ಮಾಡಿ, ನಿಮಗೆ ಸೇರಿದ್ದು.

ಅಧ್ಯಕ್ಷರು: ಹೊಸ ವಿಚಾರ ಹೇಳಿ ಎಂದರೆ ಹಳೇ ವಿಚಾರ ಹೇಳುತ್ತಿದ್ದೀರಲ್ರೀ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: xxx ಮತ್ತೊಮ್ಮೆ ತಾವು ಸಭೆ ಕರೆಯಬೇಕು.ಒಂದಲ್ಲ, ಹತ್ತು ಸಾರಿ ಸಭೆಯನ್ನು ಕರೆಯಬೇಕು. ತಾವು ಒಂದಲ್ಲ ಹತ್ತು ಸಾರಿ ಸಭೆಯನ್ನು ಕರೆದು ಮಾತನಾಡಬೇಕಾಗುತ್ತದೆ. ತಾವು ಸದನವನ್ನು ಮುಂದೂಡಿ ಮತ್ತೆ ಸಭೆಯನ್ನು ಕರೆದು ಮಾತನಾಡಬೇಕು. ನಾವು ಮಾತನಾಡುವುದರಿಂದ ಒಳ್ಳೆಯದಾಗುತ್ತದೆ. ಇದನ್ನು ಬಿಟ್ಟು ತಾವು ಮಾಡಿದರೆ, ನಾವು x x. ಅದರ ಜೊತೆಯಲ್ಲಿ ರಾಜೀ ಆಗುವ ಪ್ರಶ್ನೆ ಇಲ್ಲವೇ ಇಲ್ಲವೆಂಬ ಮಾತನ್ನು ಸ್ಪಷ್ಟಪಡಿಸುತ್ತೇವೆ. ನಾನು ಮತ್ತೊಮ್ಮೆ ಮನವಿ ಮಾಡುವುದೇನೆಂದರೆ ತಾವು ಸದನವನ್ನು ಮುಂದೂಡಿ, ಸಭೆಯನ್ನು ಕರೆಯಿರಿ, ಎಂದು ನಾನು ಮತ್ತೊಮ್ಮೆ, ಮತ್ತೊಮ್ಮೆ ಮನವಿಯನ್ನು ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ರಾಮಸ್ವಾಮಿಯವರೇ, ತಾವು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ನಾನು ಇದು ಯಾವುದನ್ನೂ ಹೇಳುವುದಿಲ್ಲ. ನಾನು ಬೇರೆ ಒಂದು ವಿಚಾರ ಇದೆ, ಅದನ್ನು ಹೇಳುತ್ತೇನೆ.

ಅಧ್ಯಕ್ಷರು: ಈಗ ನಾನು ಮಾನ್ಯ ರಾಮಸ್ವಾಮಿಯವರನ್ನು ಮಾತನಾಡಲು ಕರೆದಿದ್ದೇನೆ.

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ(ಅರಕಲಗೂಡು): ಮಾನ್ಯ ಅಧ್ಯಕ್ಷರೇ, ವಿಧಾನಮಂಡಲದ ಇತಿಹಾಸದಲ್ಲಿ ಇದೊಂದು ಅಪೂರ್ವವಾದಂತಹ ಪ್ರಸಂಗವೆಂದು ನಾನು ಭಾವಿಸಿಕೊಂಡಿದ್ದೇನೆ. ಇಲ್ಲಿ ಒಂದು ಅನಿವಾರ್ಯವಾದಂತಹ ಸನ್ನಿವೇಶ ಕೂಡ ಸೃಷ್ಟಿಯಾಗಿದೆ. ಮಾನ್ಯ ರಾಜ್ಯಪಾಲರು ಒಂದು ತಿಂಗಳ ಅವಧಿಯಲ್ಲಿ ಎರಡು ಬಾರಿ, ವಿಧಾನಮಂಡಲದ ಜಂಟಿ ಸದನವನ್ನು ಉದ್ದೇಶಿಸಿ ಭಾಷಣ ಮಾಡತಕ್ಕಂಥ ಒಂದು ಸಂದರ್ಭ ಸೃಷ್ಟಿಯಾಗಿದೆ. ನಮ್ಮ ವಿರೋಧ ಪಕ್ಷದ ಎಲ್ಲಾ ಗೌರವಾನ್ವಿತ ಪ್ರಮುಖರು, ಆ ಬಗ್ಗೆ ಚರ್ಚೆ ಮಾಡಿದ್ದಾರೆ. ಇಲ್ಲಿ ಉತ್ತಮವಾಗಿ ಚರ್ಚೆಯನ್ನು ಮಾಡಿದ್ದಾರೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಈ ಸ್ಥಳವನ್ನು ರಾಜಕೀಯ ವೇದಿಕೆಯನ್ನಾಗಿ ಮಾಡಿಕೊಳ್ಳಬೇಡಿ, ಎಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ನಾನು ನನ್ನ ಅಭಿಪ್ರಾಯವನ್ನು ತಮ್ಮ ಮೂಲಕ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಬಿ. ಶಿವರಾಂ: ರಾಜಕೀಯ ವೇದಿಕೆಯನ್ನು ನೀವು ಮಾಡಿಕೊಂಡಿದ್ದೀರಿ, ನಾವು ಮಾಡಿಕೊಂಡಿಲ್ಲ.

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ(ಅರಕಲಗೂಡು): ನಾನು ನಿಮ್ಮನ್ನು ವಿನಂತಿ ಕೂಡ ಮಾಡಿಕೊಳ್ಳಬಾರದೆ? ನಾನು ಏನು ನಿಮ್ಮ ಮೇಲೆ ದೌರ್ಜನ್ಯ ಮಾಡಲು ಬಂದಿದ್ದೇನೆಯೆ? ನಾನು ಎಷ್ಟು ಸೌಜನ್ಯದಿಂದ ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅದಕ್ಕೂ ನಿಮ್ಮಲ್ಲಿ ತಾಳ್ಮೆ ಇಲ್ಲವೆಂದರೆ, ಈ ರಾಜ್ಯ ಮತ್ತು ರಾಷ್ಟ್ರದ ಆಡಳಿತವನ್ನು, ಮುಕ್ಕಾಲು ಭಾಗದ ಅವಧಿಯನ್ನು . . .

ಮಾನ್ಯ ಸದಸ್ಯರು: ಸಂವಿಧಾನವನ್ನು ಮುರಿದುಬಿಟ್ಟರಲ್ಲಾ . . . . . .

---

x ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ರಾಮಸ್ವಾಮಿಯವರು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಎ.ಟಿ. ರಾಮಸ್ವಾಮಿ: ನೀವು ಮಾತನಾಡುವಿರಂತೆ ಸುಮ್ಮನೆ ಇರಿ. ನೀವು ಎಲ್ಲಾ ಮಾತನಾಡುವಾಗ, ನೀವು ನೋಡಿರಬಹುದು. ನಾನು ಮಧ್ಯೆ ಎದ್ದು ಹಸ್ತಕ್ಷೇಪವನ್ನು ಮಾಡುವುದಿಲ್ಲ. ನಾನು ಇಲ್ಲಿ ಯಾವುದೂ ಕಾನೂನು ಬಾಹಿರವಾದಂತಹ ಮಾತುಗಳನ್ನು ಆಡುತ್ತಾ ಇಲ್ಲ. ನನಗೂ ಗಟ್ಟಿ ಧ್ವನಿ ಇದೆ, ತಾವುಗಳು ದಯವಿಟ್ಟು ಸಹಕರಿಸಬೇಕು. ನಾನು ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಯಾವತ್ತೂ ಕೂಡ ಇವರು ಮಾತನಾಡುವಾಗ, ಮಧ್ಯೆ ಹಸ್ತಕ್ಷೇಪವನ್ನು ಮಾಡಿಲ್ಲ, ಇಂಟರ್‌ಪಿಯರ್ ಆಗಿಲ್ಲ. ಈಗ ಮುಕ್ಕಾಲು ಭಾಗದ ಅವಧಿಯಲ್ಲಿ ಈ ರಾಷ್ಟ್ರ, ರಾಜ್ಯದ ಆಡಳಿತವನ್ನು ಮಹಾನ್ ಪಕ್ಷ ನಡೆಸಿದೆ. ನಾನು ಇದ್ದೆ, ಇಲ್ಲವೆಂದು ಹೇಳಿಲ್ಲ. ನೀವು ಹೇಳುವುದಕ್ಕೆ ಮುಂಚಿತವಾಗಿಯೇ ನಾನು ಹೇಳುತ್ತಿದ್ದೇನೆ. ನಾನು ಇರುವುದನ್ನು ಇಲ್ಲವೆಂದು ಹೇಳುವುದಿಲ್ಲ. ಈ ಕಡೆ ಕುಳಿತುಕೊಂಡು ಎಲ್ಲಾ ಮಹಾ ನಾಯಕರು, ಅಂಜನಮೂರ್ತಿಯವರೇ.....

(ಗೊಂದಲ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ, ಮಾನ್ಯ ಸದಸ್ಯರು ಮಾತನಾಡಲಿ, ಅವರು ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಎ.ಟಿ. ರಾಮಸ್ವಾಮಿ: ನಾವು ಜನರ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ಈ ವೇದಿಕೆಯನ್ನು ಉಪಯೋಗ ಮಾಡೋಣ. ಅದನ್ನು ಪರಿಹರಿಸುವಂಥಾದ್ದಕ್ಕೆ ಉಪಯೋಗ ಮಾಡೋಣ. ನಿಮ್ಮ ಪಕ್ಷದ ಆಂತರಿಕ ವಿಷಯವನ್ನು ಇಲ್ಲಿ ಚರ್ಚೆ ಮಾಡೋಣವೇ?

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ: ನಮ್ಮ ಹಿರಿಯ ನಾಯಕರುಗಳು ಇಲ್ಲಿ ಕುಳಿತುಕೊಂಡು ಮುಕ್ಕಾಲು ಭಾಗ ಅವಧಿಯ ಆಡಳಿತವನ್ನು ನಡೆಸಿ, ಈ ದೇಶದ ಸಂವಿಧಾನದ ಬಗ್ಗೆ, ಸಂವಿಧಾನದ ರಚನೆಯ ಬಗ್ಗೆ, ಮಾತನಾಡಿರುವುದನ್ನು ನಾವೆಲ್ಲರೂ ಕೇಳಿದ್ದೇವೆ. ನಾವು ತಪ್ಪು ಎಂದು ಭಾವಿಸಿಕೊಂಡಿಲ್ಲ. ಆದರೆ ಅದೇ ಪಕ್ಷದ ನಾಯಕರು ಇವತ್ತು ರಾಜ್ಯಪಾಲರು ಇವರು ಸಂವಿಧಾನದ ಮುಖ್ಯಸ್ಥರ ಬಗ್ಗೆ, ಘನತೆವೆತ್ತ ಅಧ್ಯಕ್ಷರ ಬಗ್ಗೆ ಧಿಕ್ಕಾರವನ್ನು ಕೂಗಿದ್ದು ನೋಡಿ, ನನ್ನ ಮನಸ್ಸಿಗೆ ನೋವಾಗಿದೆ. ಇದು ಒಳ್ಳೆಯದೆಂದು ನಿಮ್ಮ ಮನಸ್ಸಿಗೆ ಅನಿಸುತ್ತದೆಯೆ?

(ಗೊಂದಲ)

ಅಧ್ಯಕ್ಷರು: ಕುಳಿತುಕೊಳ್ಳಿ, ಮಾನ್ಯ ಶಿವರಾಂರವರೇ, ಕುಳಿತುಕೊಳ್ಳಿ ಅವರು ಮಾತನಾಡಲಿ.

ಶ್ರೀ ಎ.ಟಿ. ರಾಮಸ್ವಾಮಿ: ನಮ್ಮ ನಾಯಕರಾದಂತಹ ಮಾನ್ಯ ಕೆ.ಆರ್. ರಮೇಶ್ ಕುಮಾರ್‌ರವರು ಮಾತನಾಡುತ್ತಾ, 19ನೇ ತಾರೀಖಿನಂದು ಮಾನ್ಯ ರಾಜ್ಯಪಾಲರು ಇಲ್ಲಿಗೆ ಬಂತು ಜಂಟಿ ಸದನವನ್ನು ಉದ್ದೇಶಿಸಿ ಭಾಷಣವನ್ನು ಮಾಡಿದರು. ಆ ಭಾಷಣವನ್ನು ಮಾಡುವುದಕ್ಕಿಂತ ಮುಂಚಿತವಾಗಿ ಅವರು ಆಲೋಚನೆಯನ್ನು ಮಾಡಬೇಕಾಗಿತ್ತು. 18ನೇ ತಾರೀಖಿನಂದು ಜೆ.ಡಿ.ಎಸ್. ಮತ್ತು ಬಿ.ಜೆ.ಪಿ.ಯ ಶಾಸಕರುಗಳು ರಾಜ್ಯಪಾಲರಿಗೆ ಈ ಸರ್ಕಾರ ಬಹುಮತವನ್ನು ಕಳೆದುಕೊಂಡಿದೆಯೆಂದು ಸಹಿ ಮಾಡಿ ಕೊಟ್ಟಮೇಲೆ, ವಿಶ್ವಾಸ ಕಳೆದುಕೊಂಡಿದೆಯೆಂದು ಗೊತ್ತಾದ ಮೇಲೆ, ಬಂದು ಇಲ್ಲಿ 19ನೇ ತಾರೀಖಿನಂದು ಭಾಷಣವನ್ನು ಮಾಡಬಾರದಿತ್ತು, ಎಂಬ ಮಾತನ್ನು

ಹೇಳಿದರು. ಹೌದು, ನಾನು ಆ ಮಾತನ್ನು ಒಪ್ಪುತ್ತೇನೆ. ಅಂದಿನ ಸರ್ಕಾರಕ್ಕೆ ನೈತಿಕ ಹಕ್ಕು ಇದ್ದರೆ, ನಾವು ವಿಶ್ವಾಸವನ್ನು ಕಳೆದುಕೊಂಡಿದ್ದೇವೆಂಬ ಭಾವನೆ ನಿಮಗೆ ಇದ್ದಿದ್ದರೆ, ಮಾನ್ಯ ರಾಜ್ಯಪಾಲರಿಗೆ ನೀವು ಬಂದು ಭಾಷಣವನ್ನು ಮಾಡಬೇಡಿ, ಸಂವಿಧಾನ ಬಾಹಿರವಾಗುತ್ತದೆ. ನಾವು ವಿಶ್ವಾಸಮತವನ್ನು ಸಾಬೀತು ಮಾಡುತ್ತೇವೆ. ಅನಂತರ ತಾವು ಬಂದು ಭಾಷಣವನ್ನು ಮಾಡಿ ಎಂದು ಹೇಳಬಹುದಿತ್ತಲ್ಲಾ? ಅದನ್ನು ಏಕೆ ಮಾಡಲಿಲ್ಲ? . . . . .

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ರಾಮಸ್ವಾಮಿಯವರೇ, ತಾವು ಸ್ವಲ್ಪ ಈಲ್ಡ್ ಆಗುತ್ತಿರಾ? ತಾವು ಒಂದು ನಿಮಿಷ ಈಲ್ಡ್ ಆದರೆ ಹೇಳುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ: ನಾನು ಇಲ್ಲದ್ದನ್ನು ಹೇಳಿಲ್ಲ, ನಾನು ಉಲ್ಲೇಖ ಮಾಡಿ ಹೇಳಿದೆ ಅಷ್ಟೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ತಾವು ಒಂದು ನಿಮಿಷ ಈಲ್ಡ್ ಆಗುವುದಾದರೆ ನಾನು ಹೇಳುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ: ತಾವು ಆಮೇಲೆ ಮಾತನಾಡಿ.

Sri K.R. Ramesh Kumar: I am only appealing to you. ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಸ್ವಾಮಿಯವರಿಗೆ ತಮ್ಮ ಮುಖಾಂತರ ಒಂದೇ ಒಂದು ಕ್ಷಣ ಈಲ್ಡ್ ಆಗುವಂತೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ತಾವು ಒಂದು ನಿಮಿಷ ಈಲ್ಡ್ ಆದರೆ ಹೇಳುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ: ಸಾರಿ ನನಗೆ ಮಧ್ಯೆ ಡಿಸ್ಟರ್ಬ್ ಆಗುತ್ತದೆ ಸಾರ್.

ಶ್ರೀ ಕೆ.ಆರ್. ರಮೇಶ್‌ಕುಮಾರ್: ತಾವು ಒಂದೇ ನಿಮಿಷ ಈಲ್ಡ್ ಆಗಿ ಎಂದು ಕೇಳುತ್ತೇನೆ. ನಾನು ರಿಕ್ವೇಸ್ಟ್ ಮಾಡಿಕೊಳ್ಳುತ್ತಿದ್ದೇನೆ.

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ: ಇಲ್ಲಿ ಏನಾಗಿದೆಯೆಂದರೆ, "ಅವರವರ ಭಾವಕ್ಕೆ, ಅವರವರ ಭಕುತಿಗೆ ತಕ್ಕಂತೆ" ನಾವು ಚರ್ಚೆ ಮಾಡಿಕೊಂಡು ಹೋಗುತ್ತಿದ್ದೇವೆ. ನಾನು ಅಪೇಕ್ಷಿತನಲ್ಲ, ನಿಮಗೂ ಗೊತ್ತಿದೆ. ನನಗೆ ಕುರ್ಚಿಯ ಆಸೆ ಇಲ್ಲ. ನಾನು ನಿಮ್ಮನ್ನು ಹತ್ತಿರದಿಂದ ನೋಡಿದ್ದೇನೆ. ಏಕೆ? ನಿಮಗೆ ಆ ಆಸೆ ಇರಬಹುದು. ನಾನು ಅವತ್ತೇ ಹೇಳಿದೆ ಮೀನನ್ನು ತೆಗೆದು ದಡಕ್ಕೆ ಹಾಕಿದಾಗ ಅದು ಹೇಗೆ ವಿಲವಿಲನೆ ಒದ್ದಾಡುತ್ತದೆ ಹಾಗೆ ಒದ್ದಾಡುತ್ತಿರಬಹುದು. ನನಗೆ ಆ ಅಪೇಕ್ಷೆ, ಆ ಉತ್ಕಟಾಕಾಂಕ್ಷೆ ಇಲ್ಲ.

(ಗೊಂದಲ)

ಅಧ್ಯಕ್ಷರು: ಅವರು ಮಾತನಾಡಲಿ, ನೀವು ಮಾತನಾಡುವಾಗ ಮಾತನಾಡಿ.

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ: ಸನ್ಮಾನ್ಯ ಅಧ್ಯಕ್ಷರೇ, ಜನವರಿ 27ನೇ ತಾರೀಖು ಈ ಸದನದಲ್ಲಿ...

(ಗೊಂದಲ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ. ಅವರು ಮಾತನಾಡಲಿ.

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ: ಅವರು ನನ್ನ ಭಾಷಣಕ್ಕೆ ಅಡಚಣೆ ಮಾಡಿದರೆ, ಮುಂದೆ ಅವರು ಭಾಷಣ ಮಾಡುವಾಗ ನಾನು ಅಡಚಣೆ ಮಾಡಬೇಕಾಗುತ್ತದೆ. ನಾನು ಆಗಲೇ ಮನವಿ ಮಾಡಿಕೊಂಡೆ, ಬೇರೆ ಯಾರು ಮಾತನಾಡುವಾಗಲೂ ನಾನು ಎದ್ದು ಎಂದೂ ಇಂಟರ್‌ಫಿಯರ್ ಮಾಡಿಲ್ಲ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಮನರ್‌ಪರಿಶೀಲನೆ ವಿಚಾರ ಬಿಟ್ಟು ಬೇರೆಯದನ್ನು ಮಾತನಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಈಗ ರಾಮಸ್ವಾಮಿಯವರು ಮಾತನಾಡುತ್ತಿದ್ದಾರೆ. ನೀವು ಕುಳಿತುಕೊಂಡು ಅವರ ಮಾತನ್ನು ಕೇಳಿ. ನಿಮಗೆ ಅವಕಾಶ ಕೊಟ್ಟಾಗ ನೀವು ಮಾತನಾಡಿ. ಆಗ ಅದಕ್ಕೆ ಉತ್ತರ ಕೊಡಿ. ಪದೇಪದೇ ನಿಂತುಕೊಂಡು ಮಾತನಾಡಿದರೆ ಹೇಗೆ? ಗೊಂದಲವಾಗುತ್ತದೆ, ಪ್ರಯೋಜನವಾಗುವುದಿಲ್ಲ.

ಶ್ರೀ ಬಿ. ಶಿವರಾಮು: ಮರುಪರಿಶೀಲನೆ ವಿಚಾರ ಬಿಟ್ಟು ರಾಜಕೀಯವನ್ನು ಮಾತನಾಡುತ್ತಿದ್ದಾರೆ, ರಾಜಕೀಯ ಇಲ್ಲ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು: ಆಯಿತು, ಅದನ್ನು ನೀವು ಹೇಳಿ. ಈಗ ಅವರ ಅಭಿಪ್ರಾಯವನ್ನು ಕೇಳಿ. ರಾಮಸ್ವಾಮಿಯವರೇ, ಮಾತನಾಡಿ.

ಶ್ರೀ ದಿನೇಶ್ ಗುಂಡೂರಾವ್: ಥ್ಯಾಂಕ್ಸ್ ಮೋಷನ್ ಬಗ್ಗೆ ಮಾತನಾಡಿ.

ಶ್ರೀ ಎ.ಟಿ. ರಾಮಸ್ವಾಮಿ: ಥ್ಯಾಂಕ್ಸ್ ಮೋಷನ್ ಬಗ್ಗೆಯೇ ಹೇಳುತ್ತಿರುವುದು. ಸಂವಿಧಾನಕ್ಕೆ ಎಲ್ಲಿ ಅಪಚಾರವಾಗಿದೆ ಎನ್ನುವುದರ ಬಗ್ಗೆ ನಾನು ಹೇಳುತ್ತಿರುವುದು. 27ನೇ ತಾರೀಖು ಅಂದಿನ ಮುಖ್ಯಮಂತ್ರಿಗಳು, ಇಂದಿನ ವಿರೋಧ ಪಕ್ಷದ ನಾಯಕರು ಈ ಸದನದಲ್ಲಿ ವಿಶ್ವಾಸ ಮತ ಯಾಚನೆ ಮಾಡಿದರು. ಆ ಸಂದರ್ಭದಲ್ಲಿ, ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಮಾಡಿದಂಥ ಮಂತ್ರಿಗಳೇ ಹೋಗಿ ಬಾವಿಯಲ್ಲಿ ನಿಂತುಕೊಂಡು ಧಿಕ್ಕಾರ ಕೂಗಿದರು. ಇದು ಅವರು ಸಂವಿಧಾನಕ್ಕೆ ಕೊಟ್ಟಂಥ ಗೌರವ!

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ: ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಮಾಡಿದ ಇವರು ಕೂಗಿದರೆ ಅದು ಅಪಚಾರವಲ್ಲ. ನಾವು ಮಾಡುವುದು ಸಂವಿಧಾನದ ಉಲ್ಲಂಘನೆಯಾಗುತ್ತದೆ. ಸಂವಿಧಾನದ ಉಲ್ಲಂಘನೆ ಮಾಡಬೇಕು ಎಂದು ಸಮರ್ಥಿಸಿಕೊಳ್ಳಲು ನಾನು ಇಲ್ಲಿ ನಿಂತಿಲ್ಲ.

(ಗೊಂದಲ)

ಅಧ್ಯಕ್ಷರು: ಅವರು ಮಾತನಾಡಲಿ, ನಂತರ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ: ಸಂವಿಧಾನಕ್ಕೆ ಅಪಚಾರವಾಗಿದೆ ಎನ್ನುವ ಮಾತನ್ನು ಹೇಳಿ, ಸಂವಿಧಾನದ ಉಲ್ಲಂಘನೆ ಮಾಡಬೇಕು ಎನ್ನುವುದನ್ನು ಸಮರ್ಥನೆ ಮಾಡಲು ನಾನು ನಿಂತಿಲ್ಲ. ನಾವು ಸಂವಿಧಾನಕ್ಕೆ ಗೌರವ ಕೊಡಬೇಕು. ಆರ್ಟಿಕಲ್ 176(1)ರ ಅಡಿಯಲ್ಲಿ ಮಾನ್ಯ ರಾಜ್ಯಪಾಲರು ಇಲ್ಲಿಗೆ ಬಂದು ಭಾಷಣ ಮಾಡಿದ್ದಾರೆ. ಇಲ್ಲಿ ಆ ಬಗ್ಗೆ ಚರ್ಚೆಯಾದ ಮೇಲೆ ನಾನು ಪುಸ್ತಕವನ್ನು ಓದಿದೆ. ನೀವು ಬೆಳಕು ಚೆಲ್ಲಿದಿರಿ. ಅದಕ್ಕೆ ನಾನು ಆಗಲೇ ಹೇಳಿದೆ, ನಾನು ಸ್ವಾಗತ ಮಾಡುತ್ತೇನೆ ಎಂದು. ಆದರೆ ಸಂವಿಧಾನದಲ್ಲಿ ಎಲ್ಲಿಯೂ ಕೂಡ, ರಾಜ್ಯಪಾಲರು ಭಾಷಣ ಮಾಡಿದ ಮೇಲೆ ವಂದನೆ ಸಲ್ಲಿಸಿ ಎಂದು ಇಲ್ಲ. ಅದನ್ನು ನಾವು ನಮ್ಮ ರೂಲ್ಸ್ ಆಫ್ ಪ್ರೊಸೀಜರ್ ಬುಕ್‌ನಲ್ಲಿ ಮಾಡಿಕೊಂಡಿದ್ದೇವೆ. ನಾನು ಓದಿದ್ದೇನೆ. ನನ್ನ ಅಭಿಪ್ರಾಯವನ್ನು ನಾನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ: ನಮ್ಮ ರೂಲ್ಸ್‌ನಲ್ಲಿ ಅದನ್ನು ನಾವು ಮಾಡಿ ಕೊಂಡಿದ್ದೇವೆ ಎಂದು ಹೇಳುತ್ತಿದ್ದೇನೆ. ನನ್ನ ಮಾತನ್ನು ಕೇಳಿ. ಆ ರೂಲ್ಸ್‌ನಲ್ಲಿ ನಾವು ಮಾಡಿಕೊಂಡಿದ್ದೇವೆ. ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ ಮೇಲೆ ವಂದನೆ ಸಲ್ಲಿಸಬೇಕು ಎಂದು ಆರ್ಟಿಕಲ್ 176ರಲ್ಲಿ ಹೇಳಿಲ್ಲ, ವಂದನೆ ಸಲ್ಲಿಸಬೇಕು ಎಂದು ನಮ್ಮ ರೂಲ್ಸ್‌ನಲ್ಲಿ ನಾವು ಮಾಡಿಕೊಂಡಿದ್ದೇವೆ. ನಾನು ಒಪ್ಪಿಕೊಳ್ಳುತ್ತಿದ್ದೇನೆ, ನಾನೂ ಹೇಳುತ್ತಿದ್ದೇನೆ. ಆದರೆ ಆರ್ಟಿಕಲ್ 175(1)ರಲ್ಲಿ ಮಾನ್ಯ ರಾಜ್ಯಪಾಲರು ಬಂದು ಭಾಷಣ ಮಾಡಬಹುದು. ಆದರೆ ಅದಕ್ಕೆ ವಂದನೆ ಸಲ್ಲಿಸುವುದನ್ನು ನಮ್ಮ ರೂಲ್ಸ್‌ನಲ್ಲಿ ಮಾಡಿಕೊಂಡಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಗಳು ಬಂದಾಗ ನಮ್ಮ ಅಧ್ಯಕ್ಷರು ನಿರ್ಧಾರ ತೆಗೆದುಕೊಳ್ಳತಕ್ಕಂಥ ಅಧಿಕಾರವನ್ನು ಆ ರೂಲ್ಸ್‌ನಲ್ಲಿ ಕೊಟ್ಟಿದ್ದೇವೆ. ಅದನ್ನು ಬಳಕೆ ಮಾಡಿ ನೀವು ನಿರ್ಣಯ ಕೊಡಬೇಕು. 19ನೇ ತಾರೀಖು ಇಲ್ಲಿ ಮಾನ್ಯ ರಾಜ್ಯಪಾಲರು ಬಂದು ಭಾಷಣ ಮಾಡಿ ಹೋಗಿದ್ದಾರೆ. ಅದಕ್ಕೆ ವಂದನಾ ನಿರ್ಣಯದ ಸೂಚನೆಯನ್ನು ಮಂಡಿಸುವವರು ಯಾರು? ಆ ಸೂಚನೆಯನ್ನು ಮಂಡಿಸಿಯೇ ಇಲ್ಲ. ಅದು ಅನುಮೋದನೆಯಾಗಿಲ್ಲ.

(ಗೊಂದಲ)

ಅದನ್ನು ಇಲ್ಲಿ ಚರ್ಚೆ ಮಾಡಲು ಬರುತ್ತದೆಯೇ? ಅದಕ್ಕಾಗಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ನಮ್ಮ ಸಂವಿಧಾನದ, ರಾಜ್ಯದ ಮುಖ್ಯಸ್ಥರಾಗಿರತಕ್ಕಂಥ ಮಾನ್ಯ ರಾಜ್ಯಪಾಲರು ಇಲ್ಲಿಗೆ ಬಂದು ಭಾಷಣ ಮಾಡಿಕೊಟ್ಟು ಹೋಗಿದ್ದಾರೆ. ಅವರಿಗೆ ವಂದನೆ ಸಲ್ಲಿಸತಕ್ಕಂಥಾದ್ದು ನಮ್ಮೆಲ್ಲರ ಕರ್ತವ್ಯ. ಆದ್ದರಿಂದ 19ನೇ ತಾರೀಖು ಮಾನ್ಯ ರಾಜ್ಯಪಾಲರು ಮಾಡಿದ ಭಾಷಣವನ್ನು ಉಪೇಕ್ಷೆ ಮಾಡಿ, 24ನೇ ತಾರೀಖು ಮಾಡಿದಂಥ ಭಾಷಣಕ್ಕೆ ವಂದನೆ ಸಲ್ಲಿಸಲು ದಯವಿಟ್ಟು ಅವಕಾಶ ಮಾಡಿಕೊಡಬೇಕು ಎಂದು ತಮ್ಮ ಮೂಲಕ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಈಗ ಮಾನ್ಯ ಕೃಷ್ಣಬೈರೇಗೌಡರು.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಹೆಚ್. ಆಂಜನೇಯರವರು ಮಾತನಾಡಲು ಎದ್ದುನಿಂತರು)

ಅಧ್ಯಕ್ಷರು: ತಮಗೂ ಅವಕಾಶ ಕೊಡುತ್ತೇನೆ, ಈಗ ಅವರು ಮಾತನಾಡಲಿ.

ಶ್ರೀ ಸಿ.ಬಿ. ಕೃಷ್ಣಬೈರೇಗೌಡ(ವೇಮಗಲ್): ಮಾನ್ಯ ಅಧ್ಯಕ್ಷರೇ, ಇಂದು ಬೆಳಿಗ್ಗೆ ಮಾನ್ಯ ಸಭಾನಾಯಕರು ಉತ್ತಮವಾದಂಥ ವಿಚಾರವನ್ನು ತಮ್ಮ ಹಾಗೂ ನಮ್ಮೆಲ್ಲರ ಗಮನಕ್ಕೆ ತಂದಿದ್ದಾರೆ. ರಾಜ್ಯದಲ್ಲಿ ಆಗಬೇಕಾಗಿರತಕ್ಕಂಥ ಅಭಿವೃದ್ಧಿ ಕಾಮಗಾರಿಗಳು ಸಾಕಷ್ಟು ಇವೆ, ರಾಜ್ಯದಲ್ಲಿ ಸಾಕಷ್ಟು ಸಮಸ್ಯೆಗಳಿವೆ, ಅದರ ಬಗ್ಗೆ ನಾವೆಲ್ಲರೂ ಹೆಚ್ಚಿಗೆ ಗಮನ ಕೊಡೋಣ ಎಂದು ಮನವಿಯನ್ನೂ ಸಹ ಎಲ್ಲಾ ಸದಸ್ಯರಲ್ಲಿ ಮಾಡಿದ್ದಾರೆ. ಅವರಿಗೆ ಸಂಪೂರ್ಣ ಸಹಕಾರ ಕೊಡಲು ನಾವಂತೂ ಬದ್ಧರಾಗಿ, ಸಿದ್ಧರಾಗಿ ನಿಂತಿದ್ದೇವೆ. ಆದರೆ ಈ ಒಂದು ರೀತಿಯ ಹಠಮಾರಿತನ ಏನಿದೆ, ಇದರಿಂದ ರಾಜ್ಯಕ್ಕೆ ಹಾನಿಯಾಗುತ್ತದೆ ಎನ್ನತಕ್ಕಂಥಾದ್ದು ನಮ್ಮ ಅಭಿಪ್ರಾಯ. ಸಹಕಾರ ಕೊಡುವ ವಿಷಯದಲ್ಲಿ ನಾವು ಸಂಪೂರ್ಣವಾಗಿ ಸನ್ನದ್ಧರಾಗಿದ್ದೇವೆ. ಆದರೆ ಇವತ್ತು ಸಂವಿಧಾನದ ಪ್ರಶ್ನೆ ನಮ್ಮ ನಿಮ್ಮೆಲ್ಲರ ಮುಂದೆ ಇದೆ. ನಾನು ಅದಷ್ಟೂ ಸೂಕ್ಷ್ಮವಾಗಿ ಒಂದು ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಆರ್ಟಿಕಲ್ 176(1)ರ ಅಡಿಯಲ್ಲಿ ಮಾನ್ಯ ರಾಜ್ಯಪಾಲರು, ಕ್ಯಾಬಿನೆಟ್‌ನಿಂದ ಅಪ್ರೂವ್ ಆದಂಥ ಭಾಷಣವನ್ನು ಈ ಸದನದಲ್ಲಿ ಬಂದು ಮಾಡಿದಾಗ ಅದಕ್ಕೆ ವಂದನೆಯನ್ನು ಅರ್ಪಿಸತಕ್ಕಂಥಾದ್ದು ನಮ್ಮ ಕರ್ತವ್ಯ. ಅದು ನಿಯಮ. ಅದನ್ನು ನಾವು ಉಲ್ಲಂಘನೆ

ಮಾಡುವುದಕ್ಕಾಗುವುದಿಲ್ಲ. ಆದರೆ ಇವತ್ತು ನಾವು ಹೊಸ ಸಂಪ್ರದಾಯವನ್ನು ಶುರು ಮಾಡಲಿಕ್ಕೆ ಹೊರಟಿದ್ದೇವೆ. ಹೊಸ ಸಂಪ್ರದಾಯ ಎಂದೇ ಇಟ್ಟುಕೊಳ್ಳೋಣ. ಆರ್ಟಿಕಲ್ 175(1)ರ ಅಡಿಯಲ್ಲಿ ಮಾಡಿದ ಭಾಷಣಕ್ಕೂ ಕೂಡ ನಾವು ವಂದನೆಯನ್ನು ಅರ್ಪಿಸುತ್ತೇವೆ ಎನ್ನುವ ಸಂಪ್ರದಾಯವನ್ನು ನಾವು ಇವತ್ತು ಶುರು ಮಾಡುತ್ತಿದ್ದೇವೆ. ಇದರಿಂದ ಮುಂದೆ ಏನಾಗಬಹುದು ಎಂದು ನನ್ನ ಮನಸ್ಸಿನಲ್ಲಿದ್ದುದನ್ನು ಮಾನ್ಯ ಮಾಧುಸ್ವಾಮಿಯವರು ಸೂಕ್ಷ್ಮವಾಗಿ ಹೇಳಿದರು. ಅದನ್ನೇ ಸ್ವಲ್ಪ ಬಿಡಿಸಿ ಹೇಳಲು ನಾನು ಈ ಸಂದರ್ಭದಲ್ಲಿ ಬಯಸುತ್ತೇನೆ. ಕಳೆದ ವರ್ಷ ನಮ್ಮಲ್ಲಿ ಸಾಕಷ್ಟು ಮಳೆಯಾಯಿತು. ಇನ್ನೈದು ವರ್ಷಕ್ಕೆ ಪುನಃ ನಮಗೆ ಬರಗಾಲ ಬರುತ್ತದೆ ಎಂದು ಇಟ್ಟುಕೊಳ್ಳಿ. ಕಾವೇರಿ ನದಿ ಮತ್ತೆ ಬತ್ತಿ ಹೋಗುತ್ತದೆ ಎಂದು ಇಟ್ಟುಕೊಳ್ಳಿ. ಆಗ ಮತ್ತೆ ತಮಿಳುನಾಡಿಗೂ ನಮಗೂ ನೀರಿಗಾಗಿ ತಿಕ್ಕಾಟ ಬರುತ್ತದೆ. ಆವತ್ತು ನಮ್ಮ ರಾಜ್ಯದಲ್ಲಿ ಯಾರೋ ಒಬ್ಬರು ಗೌರವಾನ್ವಿತ ರಾಜ್ಯಪಾಲರು ಇರುತ್ತಾರೆ. ಆಗ ಅವರು ಬಂದು ಆರ್ಟಿಕಲ್ 75(1)ರಡಿ ನಮ್ಮ ರಾಜ್ಯಕ್ಕೆ ಅಪ್ಯಾಯಮಾನವಾದಂಥ ಒಂದು ಭಾಷಣವನ್ನು ಈ ಸದನದಲ್ಲಿ ಮಾಡಿದಾಗ, ಆವತ್ತಿನ ಸರ್ಕಾರ ಅದಕ್ಕೆ ವಂದನೆಯನ್ನು ಅರ್ಪಿಸಬೇಕಾಗುತ್ತದೆ. ಅದಕ್ಕೆ ತಾವು ತಯಾರಿದ್ದೀರಾ? ತಾವು ಮಂಡ್ಯ ಜಿಲ್ಲೆಯವರಿದ್ದೀರಿ. ಮಾನ್ಯ ಸಭಾನಾಯಕರು ರೈತರ ಹಿನ್ನೆಲೆಯಿಂದ ಬಂದಂಥವರಾಗಿದ್ದಾರೆ.

ಶ್ರೀ ಬಿ.ಸಿ. ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಆ ಪರಿಸ್ಥಿತಿ ಬಂದಾಗ ನೋಡಿಕೊಳ್ಳೋಣ.

ಶ್ರೀ ಸಿ.ಬಿ. ಕೃಷ್ಣಬೈರೇಗೌಡ: ಆವತ್ತು ನಮಗೆ ಬೇರೆ ವಿಧಿ ಇರುವುದಿಲ್ಲ. ವಂದನಾ ನಿರ್ಣಯವನ್ನು ಮಂಡಿಸಿ ವಂದನೆಯನ್ನು ಅರ್ಪಿಸಲೇಬೇಕಾಗುತ್ತದೆ. ನಮ್ಮ ರಾಜ್ಯಕ್ಕೆ ವಿರುದ್ಧವಾಗಿದ್ದರೂ ಸಹ ಅದಕ್ಕೆ ವಂದನೆಯನ್ನು ಅರ್ಪಿಸಬೇಕಾಗುತ್ತದೆ. ಅದಕ್ಕೆ ತಾವು ತಯಾರಿದ್ದೀರಾ ಎಂದು ನಾನು ಮಾನ್ಯ ಆಡಳಿತ ಪಕ್ಷವನ್ನು ಮತ್ತು ಆಡಳಿತ ಪಕ್ಷದ ಸದಸ್ಯರನ್ನು ಕೇಳಲು ಬಯಸುತ್ತೇನೆ. ಇಂಥ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಇವತ್ತು ನಮ್ಮನ್ನು ನಾವು ಸಿಕ್ಕಿಹಾಕಿಸಿಕೊಳ್ಳುತ್ತಿದ್ದೇವೆ. ಮುಂದೆಯೂ ರಾಜ್ಯಕ್ಕೆ ಸಂದೇಶವನ್ನು ಕೊಡತಕ್ಕಂಥ ಸಂಪೂರ್ಣ ಹಕ್ಕನ್ನು ರಾಜ್ಯಪಾಲರು ಹೊಂದಿದ್ದಾರೆ. ಅವರು ಯಾವುದೇ ಒಂದು ಸಂದರ್ಭದಲ್ಲಿ ಸಂದೇಶ ಕೊಡುತ್ತೇನೆ ಎಂದು ಹೇಳಿದಾಗ, ಅದಕ್ಕೆ ನಾವಾಗಲೀ, ತಾವಾಗಲೀ ಇಲ್ಲ ಎಂದು ಹೇಳಲಿಕ್ಕಾಗುವುದಿಲ್ಲ. ಆದರೆ ಅದನ್ನು ಚರ್ಚೆಗೆ ತೆಗೆದುಕೊಳ್ಳತಕ್ಕಂಥಾದ್ದು, ಬಿಡತಕ್ಕಂಥದ್ದು ನಿಮ್ಮ ವಿವೇಚನೆಗೆ ಬಿಟ್ಟಂಥಾದ್ದು. ಆದರೆ ಇವತ್ತು ನಾವು ಒಂದು ಸಂಪ್ರದಾಯವನ್ನು ಸೃಷ್ಟಿ ಮಾಡಿದಾಗ, ನಾಳೆ ನಾವು ಅದೇ ಸಂಪ್ರದಾಯವನ್ನು ಅನುಸರಿಸಬೇಕಾಗುತ್ತದೆ. ಹಾಗೆ ಅನುಸರಿಸಿದಾಗ, ಮತ್ತೆಮತ್ತೆ ನಾವು ಇಂಥ ಒಂದು ಇಕ್ಕಟ್ಟಿಗೆ, ಇಂಥ ಒಂದು ದುಸ್ಥಿತಿಗೆ ಸಿಕ್ಕಿಹಾಕಿಕೊಳ್ಳುತ್ತೇವೆ. ಏಕೆ ಈ ವಿಷಯದ ಬಗ್ಗೆ ನಾವು ಇಷ್ಟು ಪಟ್ಟುಹಿಡಿದಿದ್ದೇವೆ, ಇಂಥ ಒಂದು ಕೆಟ್ಟ ಸಂಪ್ರದಾಯ ಶುರು ಆಗಬಾರದು ಎಂದು. ಈ ರೀತಿಯ ಸಂದರ್ಭಗಳು ಮುಂದಿನ ದಿನಗಳಲ್ಲಿ ಬರಬಾರದು ಎನ್ನುವ ಒಂದು ಏಕೈಕ ಉದ್ದೇಶದಿಂದ ನಾವು ಇದನ್ನು ತಮಗೆ ಮತ್ತೆಮತ್ತೆ ಅತ್ಯಂತ ವಿನಯಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತಿದ್ದೇವೆ. ನಿಮ್ಮನ್ನು ಧಿಕ್ಕರಿಸಬೇಕು ಎಂದಾಗಲೀ ಅಥವಾ ಬೇರೆ ಯಾವುದೇ ಉದ್ದೇಶವಾಗಲೀ ನಮಗಿಲ್ಲ. ಜನವರಿ 19ನೇ ತಾರೀಖಿನ ಭಾಷಣವನ್ನು infructuous ಎಂದು ತಾವು ತೀರ್ಮಾನವನ್ನು ಕೊಟ್ಟಿದೀರಿ. ಅದನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. ಆ ತೀರ್ಪು ಕೊಡುವುದಕ್ಕೆ ತಮಗೆ ಸಂಪೂರ್ಣ ಹಕ್ಕು ಇದೆ. ಅದನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. ಆದರೆ 24ನೇ ತಾರೀಖಿನ ಭಾಷಣಕ್ಕೆ ವಂದನಾ ನಿರ್ಣಯವನ್ನು

ಅರ್ಪಿಸಬೇಕು ಎಂದು ಕೊಟ್ಟಿರುವ ತೀರ್ಮಾನವನ್ನು ತಾವು ಮರುಪರಿಶೀಲನೆ ಮಾಡಬೇಕು ಎಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇವೆ. ದಯವಿಟ್ಟು ಅದನ್ನು ವಾಪಸ್ಸು ತೆಗೆದುಕೊಂಡು, ಚರ್ಚೆಗೆ ಅವಕಾಶ ಕೊಡಿ. ನಾವೂ ಸಹ ಈ ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕು ಎಂದೇ ಇವತ್ತು ಇಲ್ಲಿಗೆ ಬಂದಿರುವುದು. ತಮ್ಮ ಜೊತೆಗೆ ನಾವೂ ಸೇರಿ ಈ ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡೋಣ. ರಾಜ್ಯದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯೋಣ; ಮಾನ್ಯ ರಾಜ್ಯಪಾಲರು ಆರ್ಟಿಕಲ್ 175(1) ರಡಿಯಲ್ಲಿ ಕೊಟ್ಟಿರುವ ಸಂದೇಶದ ಮೇಲೆ ನಾವೂ ಸಹ ಚರ್ಚೆಯಲ್ಲಿ ಭಾಗವಹಿಸುತ್ತೇವೆ. ನಾನು ಹೆಚ್ಚಿಗೆ ಒತ್ತಿ ಹೇಳುವುದಕ್ಕೆ ಹೋಗುವುದಿಲ್ಲ. ಮುಂದಿನ ದಿನಗಳಲ್ಲಿ ಇಂಥ ಸಂದಿಗ್ಧ ಪರಿಸ್ಥಿತಿಗೆ ಈ ತೀರ್ಮಾನ ನಮ್ಮನ್ನು ಸಿಕ್ಕಿಸುತ್ತದೆ. ಹಾಗಾಗಿ ಅದಕ್ಕೆ ಅವಕಾಶ ಮಾಡಿಕೊಡಬೇಡಿ. ದಯವಿಟ್ಟು ತಮ್ಮಲ್ಲಿ ಸವಿನಯವಾಗಿ ಮತ್ತೊಮ್ಮೆ ಪ್ರಾರ್ಥನೆ ಮಾಡುತ್ತೇನೆ. ತಮ್ಮ ತೀರ್ಪನ್ನು ಮರು ಪರಿಶೀಲನೆ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಿ, ನಾವೂ ಸಹ ಸದನದ ಚರ್ಚೆಯಲ್ಲಿ ಭಾಗವಹಿಸುತ್ತೇವೆ, ಇದರಿಂದ ಸರ್ಕಾರಕ್ಕೂ ಸಹ ಶೋಭೆಯನ್ನು ತರುತ್ತದೆ. ಮಾನ್ಯ ಸಭಾನಾಯಕರು ಬಹಳ ಸಹನೆಯಿಂದ ನಮ್ಮೆಲ್ಲರನ್ನೂ ಸಹ ಜೊತೆಗೆ ತೆಗೆದುಕೊಂಡು ಹೋದರೆ ಅವರಿಗೂ ಸಹ ಸರ್ಕಾರವನ್ನು ನಡೆಸಲಿಕ್ಕೆ ನಾವು ಸಂಪೂರ್ಣ ಸಹಕಾರವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಅವರಿಗೂ ಸಹ ತಮ್ಮ ಮುಖಾಂತರ ಮನವಿಯನ್ನು ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ. ಧನ್ಯವಾದಗಳು.

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಮಾತು ಹೇಳಿ ಮುಗಿಸುತ್ತೇನೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನನ್ನನ್ನು ಮಾನ್ಯ ಅಧ್ಯಕ್ಷರು ಕರೆದಿದ್ದಾರೆ.

ಶ್ರೀ ಎನ್. ಚಲುವರಾಯಸ್ವಾಮಿ: ಒಂದ್ನಿಮಿಷ. ನಿಮ್ಮನ್ನು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ. ಒಂದೇ ಒಂದು ನಿಮಿಷ ಅವಕಾಶ ಕೊಡಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನಾನೇ ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಆ ನಂತರ ನೀವು ಹೇಳಿ.

ಶ್ರೀ ಎನ್. ಚಲುವರಾಯಸ್ವಾಮಿ: ಒಂದೇ ಒಂದು ನಿಮಿಷ ಸಾರ್.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಏನಪ್ಪಾ ನೀವು. ನನ್ನನ್ನು ಮಾತನಾಡುವುದಕ್ಕೆ ಕರೆದಿದ್ದಾರೆ. ಒಂದು ನಿಮಿಷ ನೀವು ಕುಳಿತುಕೊಳ್ಳಿ.

ಶ್ರೀ ಎನ್. ಚಲುವರಾಯಸ್ವಾಮಿ: ತಪ್ಪು ತಿಳಿದುಕೊಳ್ಳಬೇಡಿ. ದಯಮಾಡಿ ಒಂದು ನಿಮಿಷ ತಾವು ಕುಳಿತುಕೊಳ್ಳಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನನ್ನನ್ನು ಮಾತನಾಡುವುದಕ್ಕೆ ಕರೆದಿದ್ದಾರೆ. ನೀವು ಕುಳಿತುಕೊಳ್ಳಿ.

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರ ಮೂಲಕ ನಿಮ್ಮಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ(ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರು ನನ್ನನ್ನು ಕರೆದಿದ್ದಾರೆ. ದಯವಿಟ್ಟು ಒಂದು ನಿಮಿಷ ನೀವು ಕುಳಿತುಕೊಳ್ಳಿ. ಮಾನ್ಯ ಅಧ್ಯಕ್ಷರೆ, ಇವರೆಲ್ಲಾ ಮಾತನಾಡಿದ ಯಾವುದೇ ವಿಚಾರವನ್ನು ನಾನೀಗ ಮಾತನಾಡುತ್ತಿಲ್ಲ. ನಿಮ್ಮ ತೀರ್ಪನ್ನು ಮರುಪರಿಶೀಲನೆ ಮಾಡಿ ಎಂದೂ

ಕೂಡ ನಾನು ನಿಮ್ಮನ್ನು ವಿನಂತಿ ಮಾಡಿಕೊಳ್ಳುತ್ತಿಲ್ಲ. ಅಥವಾ ನೀವು ಮಾಡಿರುವುದು ಸರಿ ಎಂದೂ ಸಹ ನಾನು ಹೇಳುವುದಿಲ್ಲ. ನಾನು ಬೇರೆ ವಿಚಾರದ ಬಗ್ಗೆ ಹೇಳುತ್ತೇನೆ. ಒಂದನೆಯದಾಗಿ, ಇಲ್ಲಿ ಡಾ: ಅಂಬೇಡ್ಕರ್‌ರವರ ಫೋಟೋ ಇದೆ. ಅವರು ಬರೆದಂಥ ಸಂವಿಧಾನವನ್ನು ಎತ್ತಿ ಹಿಡಿದಂಥ ಜನರ ಫೋಟೋಗಳನ್ನು ಇಲ್ಲೆಲ್ಲಾ ನಾವು ಹಾಕಿಕೊಂಡಿದ್ದೇವೆ. ನಮಗೆ ಏನಾದರೂ ಆತ್ಮ ಎನ್ನುವಂಥದ್ದು ಇದ್ದರೆ, ನಾವೆಲ್ಲರೂ ಸಂವಿಧಾನದ ಪ್ರಕಾರ ಪ್ರಮಾಣವಚನ ಸ್ವೀಕಾರ ಮಾಡಿ, ನೀವೂ ನಾವೂ ಸೇರಿ ಇಲ್ಲಿಗೆ ಬಂದಿದ್ದೇವೆ. ನನ್ನ ಪ್ರಶ್ನೆ ಏನೆಂದರೆ, ಸಂವಿಧಾನದ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿ ಬಂದಂಥ ನಾವು ಯಾರೂ ಕೂಡ ಆ ಸಂವಿಧಾನದ ಉಲ್ಲಂಘನೆ ಆಗತಕ್ಕಂಥ ಪರಿಸ್ಥಿತಿಯನ್ನು ಈ ಸದನದಲ್ಲಿ ಒಪ್ಪಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಅದರಲ್ಲಿ compromise ಇಲ್ಲ. ರಾಜಿ ಪ್ರಶ್ನೆ ಇಲ್ಲ. ಸಂವಿಧಾನದ ಬಗ್ಗೆ ruling ಕೊಡಲಿಕ್ಕೆ ಯಾರಿಗೂ ಅಧಿಕಾರವಿಲ್ಲ. ನಿಮ್ಮ rules, ನಿಮ್ಮ regulations ಬಗ್ಗೆ Speaker ಗೆ ಅಧಿಕಾರವಿದೆ. ನೀವು ಏನು ಬೇಕಾದರೂ ruling ಕೊಡಿ. That is your authority. But, nobody in this House is having authority to give a ruling on the Constitutional matters. ಅದು ಆಗಬಾರದು ಎನ್ನತಕ್ಕಂಥದ್ದೇ ನಮ್ಮ ಅಭಿಪ್ರಾಯವಾಗಿದೆ. ಏಕೆಂದರೆ, ನಮಗೆ ಓಟು ಹಾಕಿ ಕಳುಹಿಸಿದಂಥ ಜನರು ಇಲ್ಲಿ ಕುಳಿತಿದ್ದಾರೆ. ಆಚೆಕಡೆ ಕಾನೂನು ಪಂಡಿತರು ಕುಳಿತಿದ್ದಾರೆ. ಜಡ್ಜ್‌ಗಳು ಇದ್ದಾರೆ, ಹೈಕೋರ್ಟ್ ಇದೆ, ಸುಪ್ರೀಂಕೋರ್ಟ್ ಇದೆ, ಈ ಸದನದಲ್ಲಿ ಕುಳಿತಿರುವ ಶಾಸಕರಾದಂಥ ನಾವು ಶಾಸನವನ್ನು ರಚನೆ ಮಾಡತಕ್ಕಂಥ ನಾವು ಸಂವಿಧಾನದ ಹೆಸರಿನಲ್ಲಿ ಸಂವಿಧಾನವನ್ನು ಎತ್ತಿಹಿಡಿಯುತ್ತೇವೆಂದು ಹೇಳಿ ಪ್ರಮಾಣವಚನ ಸ್ವೀಕಾರ ಮಾಡಿ ಬಂದಂಥ ನಾವು ಆ ಸಂವಿಧಾನದ ಯಾವುದೇ ಒಂದು ಅಂಶ ಉಲ್ಲಂಘನೆ ಆಗಲಿಕ್ಕೆ ಅವಕಾಶ ಮಾಡಿಕೊಟ್ಟರೆ, ನಾವು ಈ ಸದನದಲ್ಲಿ ಒಂದು ಕ್ಷಣವೂ ಕೂಡ ಸದಸ್ಯರಾಗಿ ಇರಲಿಕ್ಕೆ ಅರ್ಹರಲ್ಲ. (ಗೊಂದಲ) ಏನಾಯಿತು? This is intolerable. ಎರಡನೆಯದಾಗಿ, ಇವರೆಲ್ಲರಲ್ಲಿ ಒಂದು feeling ಇದೆ. Ruling party ಯ ವಿರುದ್ಧ ಈಗ ನಮಗೂ ನಿಮಗೂ ತಕರಾರು ಇಲ್ಲ. (ಗೊಂದಲ) ನಮ್ಮ ತಕರಾರು ಇಲ್ಲ. ನಿಮಗೂ ನಮಗೂ ತಕರಾರು ಅಲ್ಲ. ನಮಗೂ ಅವರಿಗೂ ತಕರಾರು ಇರತಕ್ಕಂಥ ವಿಷಯ ಇದು. ದಯವಿಟ್ಟು ನೀವು ಎಂದೂ ಕೂಡ ತಪ್ಪು ತಿಳಿದುಕೊಳ್ಳಬೇಡಿ. ನಿಮಗೂ ನಮಗೂ ತಕರಾರು ನಡೆಯುತ್ತಿದೆ. ನಿಮಗೆ ಅನ್ಯಾಯ ಮಾಡಲಿಕ್ಕೆ ಇಲ್ಲಿ ನಾವು ಮಾತನಾಡುತ್ತಿದ್ದೇವೆ ಎಂದು ತಿಳಿದುಕೊಳ್ಳಬೇಡಿ. ಈ ತಕರಾರು ಇರತಕ್ಕಂಥದ್ದು between us and the Speaker. ಅಷ್ಟೆ.

Sri Jagadish Shetter(Minister for Revenue): Speaker ಎನ್ನುವ ಪ್ರಶ್ನೆ ಬಂದಂಥ ಸಂದರ್ಭದಲ್ಲಿ . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು yield ಆಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಒಂದು ಪ್ರಶ್ನೆ ಬಂದಂಥ ಸಂದರ್ಭದಲ್ಲಿ ಈ ತಕರಾರು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದವರ ನಡುವೆ ಅಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು yield ಆಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಆ ತಕರಾರು ಬಗ್ಗೆ ಮಾತನಾಡಬೇಡಿ. ಸಭಾಧ್ಯಕ್ಷರ ಪೀಠಕ್ಕೆ ಎಲ್ಲರೂ ಗೌರವ ಕೊಡುವಂಥದ್ದು ಆಗಬೇಕು. ಆ ruling ಅನ್ನು ನಾವು ಗೌರವಿಸುವಂಥ ಕೆಲಸ ಮಾಡಬೇಕು.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು yield ಆಗಿಲ್ಲ. ನಾನು yield ಆಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ನಾನು ಮಾನ್ಯ ಸಭಾಧ್ಯಕ್ಷರಿಗೆ ವಿನಂತಿ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು yield ಆಗಿಲ್ಲ ಮಾನ್ಯ ಜಗದೀಶ್ ಶೆಟ್ಟರೆ. ತಾವು ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈ ರೀತಿ ಚರ್ಚೆ ಮಾಡುವಂಥದ್ದು ಅದು ಸಂವಿಧಾನ . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು yield ಆಗಿಲ್ಲ. ನೀವು ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು. ನಾನು yield ಆಗಿಲ್ಲ. ನಮ್ಮ ತಕರಾರು ನಿಮ್ಮ ವಿರುದ್ಧ ಅಲ್ಲ. ಸಂವಿಧಾನದ ರಕ್ಷಣೆಗೋಸ್ಕರ ನಮ್ಮ ತಕರಾರು ಅಷ್ಟೆ. ನಮ್ಮದು ಯಾರ ವಿರುದ್ಧವೂ ತಕರಾರು ಇಲ್ಲ ಯಾರ ವಿರುದ್ಧವೂ ದ್ವೇಷವಿಲ್ಲ. ಯಾರ ವಿರುದ್ಧವೂ ಹೋರಾಟವಿಲ್ಲ. ನಮ್ಮ ಹೋರಾಟ ನಮ್ಮ ತಕರಾರು ಇರತಕ್ಕಂಥದ್ದು ಸಂವಿಧಾನವನ್ನು ರಕ್ಷಣೆ ಮಾಡಲಿಕ್ಕೆ ಅಷ್ಟೆ. ಇನ್ನು ಮೂರನೆಯದಾಗಿ, ಮೊನ್ನೆ 27ನೇ ತಾರೀಖು ಸದನ ಪ್ರಾರಂಭವಾದಾಗ ಮೊಟ್ಟಮೊದಲ ಬಾರಿಗೆ ನಾನು ಕ್ರಿಯಾಲೋಪವನ್ನು ಎತ್ತಿದೆ ನಾನು ಕ್ರಿಯಾಲೋಪವನ್ನು ಎತ್ತಿದ್ದು ಯಾವ ಕಾರಣಕ್ಕೆಂದರೆ, ನೀವು ಕೊಟ್ಟಿರತಕ್ಕಂಥ ನೋಟೀಸ್‌ನಲ್ಲಿ ಏನು ಅಂಶ ಒಳಗೊಂಡಿತ್ತು, ರಾಜ್ಯಪಾಲರು ಮಾಡಿದಂಥ ಭಾಷಣದಲ್ಲಿ ಏನು ಅಂಶ ಒಳಗೊಂಡಿತ್ತು? ಇದಕ್ಕೂ ಅದಕ್ಕೂ ಸಂಪೂರ್ಣವಾಗಿ ತದ್ವಿರುದ್ಧವಾಗಿದೆ, ಹಾಗಾಗಿ ಇದು ಕ್ರಿಯಾಲೋಪಕ್ಕೆ ಬರುತ್ತದೆನ್ನುವ ಅಂಶವನ್ನು ನಾನು ಪ್ರಸ್ತಾಪ ಮಾಡಿದೆ. ಆದರೆ ನನ್ನ ಕ್ರಿಯಾಲೋಪಕ್ಕೆ ಇವತ್ತಿಗೂ ನೀವು ruling ಕೊಟ್ಟಿಲ್ಲ. ಯಾವ ಪತ್ರಿಕೆಯವರೂ ಸಹ ಆ ಕ್ರಿಯಾಲೋಪದ ಬಗ್ಗೆ ಬರೆಯಲಿಲ್ಲ. ನಾನು ಪ್ರಸ್ತಾಪ ಮಾಡಿದಂಥ ಕ್ರಿಯಾಲೋಪಕ್ಕೆ ನೀವು ಇವತ್ತಿನವರೆಗೂ ruling ಕೊಟ್ಟಿಲ್ಲ. ಬೇರೆ ವಿಚಾರಕ್ಕೆ ನೀವು ruling ಕೊಟ್ಟಿದ್ದೀರಿ. ನಾನು ಆವತ್ತು ಪ್ರಸ್ತಾಪ ಮಾಡಿದಂಥ ಕ್ರಿಯಾಲೋಪಕ್ಕೆ ನೀವು ruling ಕೊಟ್ಟಿಲ್ಲ.

ಅಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರೆ, ನಾನು ಹೇಳುವುದನ್ನು ಸ್ವಲ್ಪ ಕೇಳಿ. ನೀವು ಆವತ್ತು ಏನು ಕ್ರಿಯಾಲೋಪದ ಮೂಲಕ ಪ್ರಸ್ತಾಪ ಮಾಡಿದಿರಿ, ಅದೇ ರೀತಿಯ ಕ್ರಿಯಾಲೋಪವನ್ನು ಮಾನ್ಯ ಧರ್ಮಸಿಂಗ್‌ರವರೂ ಸಹ ಎತ್ತಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇಲ್ಲ, ಇಲ್ಲ. ದಯವಿಟ್ಟು ನಾನು ಹೇಳುವುದನ್ನು ಕೇಳಿ. ದಯವಿಟ್ಟು ಕ್ಷಮಿಸಬೇಕು.

ಅಧ್ಯಕ್ಷರು: ನಾನು ಹೇಳುವುದನ್ನು ಕೇಳಿ ಸ್ವಾಮಿ. ಆ ಕ್ರಿಯಾಲೋಪದ ಮೇಲೆ ಏನು ಚರ್ಚೆ ಇದೆ, ಅದರ ಬಗ್ಗೆ ನನಗೂ ಅವಕಾಶ ಕೊಡಬೇಕು ಎಂದು ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳಿದ ಮೇಲೆ ಆ ಕಡೆಯವರಿಗೆ, ಈ ಕಡೆಯವರಿಗೆ ಆ ವಿಚಾರಗಳ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟೆ. ಆಗ ಎಲ್ಲಾ ಚರ್ಚೆ ಆದಮೇಲೆ ವಿಸ್ತೃತವಾಗಿ ನಾನು ruling ಕೊಟ್ಟಿದ್ದೇನೆ. 'ನಾನು ಪ್ರಸ್ತಾಪ ಮಾಡಿದ ಕ್ರಿಯಾಲೋಪಕ್ಕೆ ruling ಕೊಟ್ಟಿಲ್ಲವೆಂದು' ತಾವು ಹೇಳುವುದು ಸರಿಯಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗ ನಾನು ಹೇಳುವುದನ್ನು ದಯವಿಟ್ಟು ಕೇಳಿ. ನಾನು ಕ್ರಿಯಾಲೋಪ ಪ್ರಸ್ತಾಪ ಮಾಡಿದ ಮೇಲೆ ಮಾನ್ಯ ಧರ್ಮಸಿಂಗ್‌ರವರು ಎದ್ದು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರು. ದಯವಿಟ್ಟು ತಿಳಿದುಕೊಳ್ಳಿ. ನಾನು ಕ್ರಿಯಾಲೋಪ ಪ್ರಸ್ತಾಪ ಮಾಡುವುದಕ್ಕೆ ಮೊದಲು ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದು ಕ್ರಿಯಾಲೋಪ ಪ್ರಸ್ತಾಪ ಮಾಡಲಿಲ್ಲ. ನಾನು ಎದ್ದು ಕ್ರಿಯಾಲೋಪ ಪ್ರಸ್ತಾಪ ಮಾಡಿದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದಾಗ ಅವರಿಗೆ ಗೌರವ ಕೊಡಬೇಕೆನ್ನುವ ಕಾರಣಕ್ಕೋಸ್ಕರ ನಾನು ಕುಳಿತುಕೊಂಡೆ. ಆವಾಗ ಅವರು ಒಂದು ವಿಚಾರ ಹೇಳಿದರು. ಅದೇನೆಂದರೆ, ಶ್ರೀರಾಮರೆಡ್ಡಿಯವರು ಪ್ರಸ್ತಾಪ ಮಾಡಿದ ಕ್ರಿಯಾಲೋಪವನ್ನು ನಾನೂ ಸಹ ಪ್ರಸ್ತಾಪ ಮಾಡಬೇಕೆಂದಿದ್ದೆ. ಅವರೇ ಪ್ರಸ್ತಾಪ ಮಾಡಿದ್ದಾರೆಂದು ಹೇಳಿ ಅವರು ಪ್ರಾರಂಭ ಮಾಡಿದರು. ಆವತ್ತು ಇಷ್ಟೇ ಆಗಿರುವಂಥದ್ದು. ಅವರು ಆವತ್ತು ನಾನು ಪ್ರಸ್ತಾಪ ಮಾಡಿದ ಕ್ರಿಯಾಲೋಪದ ಬಗ್ಗೆ ಮಾತನಾಡಿದ್ದಲ್ಲ. ಅವರು ಬೇರೆ ಬೇರೆ ವಿಚಾರಗಳ ಬಗ್ಗೆ ಮಾತನಾಡಿದರು. ನನ್ನ ಕ್ರಿಯಾಲೋಪ ಸ್ಪಷ್ಟವಾಗಿ ಇನ್ನೂ ಹಾಗೆಯೇ ಇದೆ. ಅದರ ಬಗ್ಗೆ ನೀವು ಇನ್ನೂ ಸಹ ruling ಕೊಟ್ಟಿಲ್ಲ. ಆ ಕ್ರಿಯಾಲೋಪದ ಬಗ್ಗೆ ruling ಅನ್ನು ನಮಗೆ ಯಾವ ರೀತಿಯಾದರೂ ಕೊಡಿ. ನಾವು ಅದನ್ನು ಪ್ರಶ್ನೆ ಮಾಡುವುದಿಲ್ಲ. ನಮಗೆ ಆ ಅಧಿಕಾರವೂ ಇಲ್ಲ. ಆದರೆ ಸಂವಿಧಾನದ ವಿಚಾರಗಳಲ್ಲಿ ಯಾರಿಗೂ ruling ಕೊಡತಕ್ಕಂಥ ಅವಕಾಶವಿಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ವಿಸ್ತೃತವಾಗಿ ಚರ್ಚೆಯಾಗಿದೆ. 17ನೇ ತಾರೀಖು ಹೊಸದಾಗಿ ಬಂದಂಥ ಸರ್ಕಾರ ಕ್ಯಾಬಿನೆಟ್ ಮೀಟಿಂಗ್ ಮಾಡಿ ಆರ್ಟಿಕಲ್ 175ರ ಕೆಳಗಡೆ 'ತಾವು ಬಂದು ಇಲ್ಲಿ ಭಾಷಣ ಮಾಡಬೇಕೆಂದು' ಒಂದು resolution ಅನ್ನು ಮಾಡಿ ಮಾನ್ಯ ಘನತೆವೆತ್ತ ರಾಜ್ಯಪಾಲರಿಗೆ ಕಳುಹಿಸಿಕೊಟ್ಟರು. ಅದಾದಮೇಲೆ ಈ ವಿಚಾರ ನಮಗೆ ಗೊತ್ತಾದ ಮೇಲೆ ನಾವು ಈ ವಿಧಾನಮಂಡಲ, ವತಿಯಿಂದ ನಮ್ಮ ಲೋಕಸಭಾ Secretariat ಗೆ ಒಂದು ಪತ್ರವನ್ನು ಬರೆದೆವು. ಆ ಪತ್ರ ಬರೆದು ನಾವು ಈ ವಿಚಾರವನ್ನು ಹೇಳಿದಾಗ, ಅವರು ನಮಗೆ ಒಂದು ಉತ್ತರವನ್ನು ಕೊಟ್ಟಿದ್ದಾರೆ.

"Motion of Thanks on the Address by the Governor of Karnataka"
Sir, With reference to your letter No. KLCS/Secy/06/06 dated 20.2.2006 on the above subject, I am directed to inform you that there is no instance of a similar nature in Lok Sabha. Since a Motion of Thanks on the Address of the Governor dated 19 January, 2006 could not be moved and discussed by the House, in the changed circumstances, it may, perhaps, be appropriate to move Motion of Thanks on the Address to be made by the Governor on 24 February, 2006 and discuss on the floor of the House." ನಾವು ಈ ವಿಚಾರ ಗೊತ್ತಾದ ಮೇಲೆ 17ನೇ ತಾರೀಖು ಏನು ಮಂತ್ರಿಮಂಡಲದ ಸಭೆ ನಡೆಸಿ Governorರವರನ್ನು 24ನೇ ತಾರೀಖು ಬರಬೇಕೆಂದು ಕೇಳಿಕೊಂಡರು, ನಾವು ಈ provisions ಅನ್ನು ನೋಡಿ clarification ಅನ್ನು ಕೇಳಿದೆವು. ಯಾವುದೇ ವಿಚಾರದಲ್ಲಿ ಲೋಕಸಭೆಯಲ್ಲಿ ಇಂಥ ಘಟನೆಯಾದರೆ, (ಗೊಂದಲ) ನಾನು ಹೇಳುವುದನ್ನು ಸುಮ್ಮನೆ ಕೇಳಿ

(ಗೊಂದಲ) ಆ ಕಾರಣದಿಂದ ನಾವು ಈ ಒಂದು clarification ಕೇಳಿದೆವು. ನಾವು ಯಾವುದಕ್ಕೂ ಲೋಕಸಭಾ ಕಡೆಗೆ ನೋಡುತ್ತೇವೆ. ಆದ್ದರಿಂದ ಈ ತರಹ Motion of Thanks ಅನ್ನು ಮಂಡನೆ ಮಾಡಿ ಮುಗಿಸಿ, ಅದು appropriate ಆಗಿದೆ ಎನ್ನತಕ್ಕದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಅಷ್ಟೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ಅದು ಒಂದು ವೇಳೆ ಸರ್ಕಾರದ ಭಾಷಣ ಆಗಿದ್ದರೆ ಅದೇ ತಪ್ಪು. That itself is unconstitutional.

(ಗೊಂದಲ)

ಅಧ್ಯಕ್ಷರು: ಅದನ್ನು ತಮ್ಮ ಗಮನಕ್ಕೆ ತಂದೆ. ಏಕೆಂದರೆ, Constitutional point ತೆಗೆದುಕೊಂಡು discussion ಮಾಡುತ್ತಿದ್ದೀರಲ್ಲಾ, ಅದಕ್ಕೆ, the highest body, ಆ ಲೋಕಸಭಾ secretariat ನವರಲ್ಲಿ ಈ ಆರ್ಟಿಕಲ್ 175 ಮತ್ತು 176 ರ ಬಗ್ಗೆ ನಾವು ಕೇಳಿದೆವು. ಆ ಲೆಟರ್‌ನಲ್ಲಿ ನಾವು ಆರ್ಟಿಕಲ್ 175ರ ಕೆಳಗಡೆ ಕರೆದಿದ್ದಾರೆ, 176ರ ಕೆಳಗಡೆ ಕರೆದಿದ್ದರು, ಎಂದಲ್ಲಿ ಬರೆದ ಮೇಲೆ ಈ ತರಹ ಕೊಟ್ಟಿದ್ದಾರೆ.

ತಮ್ಮ ಅವಗಾಹನೆಗೆ ಅಂದರೆ, ನಿಮಗೇನು ಮುಖಂಡರುಗಳಿಗೆ ಒಳಗಡೆ ಹೇಳಿದ್ದೆ ಅದನ್ನು ಈ ಸಭೆಯ ಅವಗಾಹನೆಗೆ ತರುತ್ತಿದ್ದೇನೆ.

ಮಾನ್ಯ ಸದಸ್ಯರು: ನಾನು ಮೊನ್ನೆ ಇದೇ ಪ್ರಶ್ನೆಯನ್ನು ಕೇಳಿದ್ದೆ, ತಾವು ಉತ್ತರ ಹೇಳಲಿಲ್ಲ ....

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ . . . . . : ಖರ್ಗೆ ಸಾಹೇಬರೇ, ಒಂದೇ ಒಂದು ನಿಮಿಷ. ನಾನು ಹೆಚ್ಚಿಗೆ ಮಾತನಾಡುವುದಿಲ್ಲ.

ಅಧ್ಯಕ್ಷರು: ಒಳ್ಳೆ ತಮಾಷೆಯಲ್ಲ. ಈ ವಿಚಾರಕ್ಕೆ ಸ್ಪಷ್ಟೀಕರಣ ಕೊಡುವ ಅಗತ್ಯ ಇಲ್ಲವೆ? ನಾವು ಅದನ್ನು ಬರೆದಿದ್ದೆವು. ಅದಕ್ಕೆ ಈ ತರಹ ಬರೆದಿದ್ದಾರೆ. ಓದಿ ಹೇಳಿದೆನಲ್ಲಾ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸ್ವಲ್ಪ ಕೇಳಿ. ಒಂದು ನಿಮಿಷ. ಅವರಿಗೆ ಅವಕಾಶ ಕೊಟ್ಟಿದ್ದೀರಾ?

ಶ್ರೀ ಎನ್. ಚಲುವರಾಯಸ್ವಾಮಿ: ಖರ್ಗೆ ಸಾಹೇಬರೆ, ನನಗೆ ಅವಕಾಶ ಕೊಟ್ಟಿದ್ದಾರೆ. ಒಂದು ನಿಮಿಷ . . . . .

ಅಧ್ಯಕ್ಷರು: ನಾನು ಅವರನ್ನು ಕರೆದಿದ್ದೆ. ನೀವು ಮೊದಲು ಮಾತನಾಡುತ್ತೀರಾ? ಅವರು ಹಿರಿಯರು. . . . . ತಾವು ಮಾತನಾಡಿ. ಚಲುವರಾಯಸ್ವಾಮಿಯವರೆ.

ಶ್ರೀ ಎನ್. ಚಲುವರಾಯಸ್ವಾಮಿ(ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ತಾವು ಈ ವಿಚಾರವನ್ನು ಈ ಸಂಸ್ಥೆಯ ಗಮನಕ್ಕೆ ತಂದಿದ್ದೀರಿ. ನಾನು ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ. ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮುಂದಿನ ಸಾಲಿನಲ್ಲಿ ಕುಳಿತಿರುವ ವಿವಿಧ ಪಕ್ಷದ ಎಲ್ಲಾ ಮುಖಂಡರಿಗೆ ನಾನು ವಿನಂತಿ ಮಾಡಿಕೊಳ್ಳಲಿಚ್ಛೆಪಡುತ್ತೇನೆ. ವಿರೋಧ ಪಕ್ಷದ ಎಲ್ಲಾ ಸದಸ್ಯರಿಗೂ ಮತ್ತು ಮುಂದಿನ ಸಾಲಿನಲ್ಲಿ ಕುಳಿತಿರುವ ಪ್ರಮುಖವಾದಂಥ ಮುಖಂಡರಿಗೆ ವಿನಂತಿ ಎಂದು ಹೇಳಿದೆ. ಒಬ್ಬರನ್ನೂ ಬಿಟ್ಟಿಲ್ಲ. ಆದರೆ, ಸ್ಪಷ್ಟವಾಗಿ ಇಲ್ಲಿ ಮಾನ್ಯ ರಾಮಸ್ವಾಮಿಯವರು ಪದೇ ಪದೇ ಹೇಳಿದರು. ಆಗ ಮಧ್ಯೆ ಡಿಸ್ಟರ್ಬ್ ಮಾಡಿದರು. 59 ವರ್ಷಗಳಲ್ಲಿ 40 ವರ್ಷಗಳ ಆಡಳಿತವನ್ನು ಮಾಡಿರುವ ಪಕ್ಷ – ಇವತ್ತು ವಿರೋಧ ಪಕ್ಷದಲ್ಲಿ ಕುಳಿತಿರುವುದು. ನಿನ್ನೆ ಅಥವಾ ಮೊನ್ನೆ ಹೊಸದಾಗಿ ಹುಟ್ಟು ಹಾಕುವ ಪಕ್ಷ ಅಲ್ಲ. ಅಥವಾ ಈ ಸದನದಲ್ಲಿ ಹೊಸದಾಗಿ

ಪ್ರತಿಷ್ಠಾಪಿಸಿದ ಪಕ್ಷ ಅಲ್ಲ. ದಯಮಾಡಿ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು. ಇದ್ದಾರೆ, ಮಾನ್ಯ ದೇಶಪಾಂಡೆಯವರು ಇದ್ದಾರೆ, ಮಾನ್ಯ ರಮೇಶ್ ಕುಮಾರ್‌ರವರು ಆ ಸ್ಥಾನದಲ್ಲಿ ಕುಳಿತಿದ್ದವರು ಇದ್ದಾರೆ. ದಯಮಾಡಿ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು, ಇವತ್ತು ಆರ್ಟಿಕಲ್ 176 ಮತ್ತು 175 ಎರಡರ ಬಗ್ಗೆ ಇತಿಹಾಸದಲ್ಲಿ ಚರ್ಚೆಯಾಗಿಲ್ಲ, ಅಷ್ಟು ಇವತ್ತು ಸದನದಲ್ಲಿ ಚರ್ಚೆಯಾಗಿದೆ. ಸದನದಲ್ಲಿ ಚರ್ಚೆಯಾದುದು ಅಷ್ಟಕ್ಕೇ ಸೀಮಿತವಾಗಿಲ್ಲ. ತಾವು ರೂಲಿಂಗ್ ಕೊಟ್ಟ ಮೇಲೆ ಪ್ರತ್ಯೇಕವಾಗಿ ಎಲ್ಲಾ ನಾಯಕರನ್ನು 3–4 ಬಾರಿ ಕರೆದು, ಎಲ್ಲಾ ರೂಲಿಂಗ್ ಕೊಟ್ಟ ಮೇಲೆ ಪ್ರತ್ಯೇಕವಾಗಿ ಎಲ್ಲಾ ನಾಯಕರನ್ನು 3–4 ಬಾರಿ ಕರೆದು, ಎಲ್ಲಾ ವಿಚಾರದ ಬಗ್ಗೆ ಚರ್ಚೆಯಾಗಿದೆ. ಆದರೂ ಸಹ, ಅಂತಿಮವಾಗಿ ಇವತ್ತು ಆರ್ಟಿಕಲ್ 176ರಲ್ಲಿ, ಮತ್ತು 175ರಲ್ಲಿ ಏಕಾಯಿತು ಎನ್ನುವುದರ ಬಗ್ಗೆ ಇಡೀ ಜನತೆ ನೋಡಿದೆ, ಮಾಧ್ಯಮದಲ್ಲಿ, ಪತ್ರಿಕೆಯಲ್ಲಿ ಬಂದಿದೆ. ಇವತ್ತು ಆರ್ಟಿಕಲ್ 176ರಲ್ಲಿ ಮೋಷನ್ ಮೂವ್ ಆಗಿದ್ದರೆ, ಚರ್ಚೆ ಆಗಿದ್ದರೆ ಮತ್ತೆ ಮಾನ್ಯ ರಾಜ್ಯಪಾಲರ ಭಾಷಣದ ಅವಶ್ಯಕತೆ ಇರುತ್ತಿರಲಿಲ್ಲ; ಮಾಡಿಸುತ್ತಿರಲಿಲ್ಲ, ಸರ್ಕಾರಕ್ಕೆ ಚಟವೂ ಇಲ್ಲ, ಅಥವಾ ಪ್ರತಿಷ್ಠೆನೂ ಇಲ್ಲ. ನಾವು ಬಂದಿರುವುದು ಸಾರ್ವಜನಿಕ ಹಿತದೃಷ್ಟಿಯಿಂದ, ನಮಗೆ ಸಿಕ್ಕಿರುವ ಅವಕಾಶದಲ್ಲಿ ಕೆಲಸ ಮಾಡಲಿಕ್ಕೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಆಗಲೇ ಮನವಿ ಮಾಡಿಕೊಂಡಿದ್ದಾರೆ. ನಾವು ಇವತ್ತು ಆ ಸನ್ನಿವೇಶದಲ್ಲಿ ಅಲ್ಲಿ ಆರ್ಟಿಕಲ್ 176ರಲ್ಲಿ ಆಗಬೇಕಾದಂಥ ಪ್ರಕ್ರಿಯೆ ಇಲ್ಲಿ ಆಗದೇ ಇರುವುದರಿಂದ ಆರ್ಟಿಕಲ್ 175ರಲ್ಲಿ ಅನಿವಾರ್ಯವಾದ ಪರಿಸ್ಥಿತಿಯಲ್ಲಿ ಆಗಿರುವುದನ್ನು ಮನವರಿಕೆ ಮಾಡಿಕೊಂಡಿದ್ದೇವೆ. ಇವತ್ತು ಆರ್ಟಿಕಲ್ 175ರ ಪ್ರಕಾರ, ಮಾನ್ಯ ಸಿದ್ದರಾಮಯ್ಯನವರು ಹೇಳಬೇಕಾದ ಥ್ಯಾಂಕ್ಸ್ ಅನ್ನು ಹೇಳೋಣ, ರೆಸಲ್ಯೂಷನ್ ಬೇಡ ಎಂದು ಹೇಳಿದರು. ಒಳಗಡೆ ಚರ್ಚೆಯಾದಾಗಲೂ ಸ್ವಲ್ಪ ಹೆಚ್ಚು ಕಡಿಮೆ ಒಂದು ದಾರಿಗೆ ಬಂದಿದ್ದರು. ಆದರೆ, ಮತ್ತೆ ತಾವು ರೂಲಿಂಗ್ ಕೊಟ್ಟ ಮೇಲೆ 2–3 ಮೀಟಿಂಗ್ ಮಾಡಿ ಪುನಃ ಇಲ್ಲ ಇಷ್ಟೊಂದು ದೀರ್ಘವಾಗಿ ಚರ್ಚೆಯಾಯಿತು. ಮೊದಲೇ 2 ದಿವಸ ಚರ್ಚೆಯಾಗಿ ಮತ್ತೆ ಇಷ್ಟೊಂದು ದೀರ್ಘವಾದ ಚರ್ಚೆಯಾಗತಕ್ಕಂಥದ್ದು ಈ ಸದನದಲ್ಲಿ ಒಳ್ಳೆಯ ಸಂಪ್ರದಾಯ ಅಲ್ಲ ಎಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು ಮೊನ್ನೆ ಬಹಳ ಉದ್ವೇಗದಿಂದ ಮಾತನಾಡಿದರು. ಇವತ್ತು ಬಹಳ ಶಾಂತಿಯಾಗಿ ತಮ್ಮನ್ನು ಇನ್ನೊಂದು ಬಾರಿ ಮೀಟಿಂಗ್ ಅನ್ನು ಒಳಗಡೆ ಕರೆದು ತೀರ್ಮಾನ ತೆಗೆದುಕೊಳ್ಳಿ ಎಂದು ರಿಕ್ವೆಸ್ಟ್ ಮಾಡಿದರು. ಅದು ತಮ್ಮ ತೀರ್ಮಾನಕ್ಕೆ ಬಿಟ್ಟಿದ್ದು. ಒಳಗಡೆ ಕರೆಯತಕ್ಕಂಥದ್ದು, ತೀರ್ಮಾನ ಕೊಡತಕ್ಕಂಥದ್ದು, ಪರಿಶೀಲಿಸತಕ್ಕಂಥದ್ದು ಅದು ತಮಗೆ ಬಿಟ್ಟಿದ್ದು. ಆದರೆ, ಇವತ್ತು ಆರ್ಟಿಕಲ್ 176 ಮತ್ತು 175ರ ಬಗ್ಗೆ ಇಷ್ಟು ದೀರ್ಘವಾಗಿ ಚರ್ಚೆ ಮಾಡತಕ್ಕಂಥದ್ದು, ತಾವು ರೂಲಿಂಗ್ ಕೊಟ್ಟ ಮೇಲೆ ಯಾರೋ ಮುಂದಿನ ಸಾಲಿನಲ್ಲಿರತಕ್ಕಂಥ ಸಭಾ ನಾಯಕರು, ವಿರೋಧ ಪಕ್ಷದ ನಾಯಕರು, ಪಕ್ಷದ ಮುಖಂಡರುಗಳು 3 ಜನ ಮಾತನಾಡಿ, ತಾವು ಪುನರ್ ಪರಿಶೀಲನೆ ಮಾಡಿ ಅಥವಾ ಮತ್ತೊಂದು ಬಾರಿ ಕೊಠಡಿಯಲ್ಲಿ ಕರೆದು ತೀರ್ಮಾನ ಮಾಡಿ ಎನ್ನುವುದು ಸೂಕ್ತವೇ ವಿನಃ ಇಡೀ ದಿನ ಸದನದಲ್ಲಿ ಚರ್ಚೆಯಾಗತಕ್ಕಂಥದ್ದು ಇದು ಸದನಕ್ಕೂ ಗೌರವ ತರತಕ್ಕದ್ದು ಅಲ್ಲ, ತಮ್ಮ ಪೀಠಕ್ಕೂ ಸಹ ಗೌರವ ತರತಕ್ಕದ್ದಲ್ಲ ಇವತ್ತೇನು ಮಾನ್ಯ ಶ್ರೀರಾಮರೆಡ್ಡಿಯವರು ತಮ್ಮ ರೂಲಿಂಗ್ ಬಗ್ಗೆಯೇ ನಾವು ಪ್ರಶ್ನೆ ಮಾಡುತ್ತೇವೆ ಎನ್ನುವುದು ಸರಿಯಲ್ಲ ರೂಲಿಂಗ್ ಬಗ್ಗೆ ಪ್ರಶ್ನೆ ಮಾಡತಕ್ಕಂಥದ್ದಕ್ಕೆ ಸದನದ ಸದಸ್ಯರಿಗೆ

ಅಧಿಕಾರ ಇಲ್ಲ ಅನ್ನುವುದು ಗೊತ್ತಿದ್ದೂ ಸಹ ಪ್ರಶ್ನೆ ಮಾಡಿದ್ದಾರೆ. ಇದರ ಬಗ್ಗೆ ಇವತ್ತೇನು ಹೊರಗಡೆ ಇರತಕ್ಕಂಥ ಜನತೆ ನಮ್ಮನ್ನೇನು ನೋಡುತ್ತಿದ್ದಾರೆ ಅವರ ಬಗ್ಗೆ ನಾವೂ ಯೋಚನೆ ಮಾಡಿ ಈ ತೀರ್ಮಾನ ತೆಗೆದುಕೊಳ್ಳಬೇಕು. ದಯಮಾಡಿ, ಎಲ್ಲಾ ನಾಯಕರುಗಳಲ್ಲಿ, ಮುಂದಿನ ಸಾಲು ಮತ್ತು ಹಿಂದಿನ ಸಾಲಿನ ಸದಸ್ಯರಲ್ಲಿ ವಿನಂತಿಸುವುದೇನೆಂದರೆ, ಇದನ್ನು ಇಲ್ಲಿಗೇ ಬಿಟ್ಟು ತಾವೇನಾದರೂ ಒಂದು ತೀರ್ಮಾನ ಕೊಟ್ಟು ಇದನ್ನು ಕೊನೆಗಾಣಿಸಬೇಕೆಂದು ವಿನಂತಿ ಮಾಡುತ್ತೇನೆ.

(ಗೊಂದಲ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನನ್ನ ಹೆಸರು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಒಂದು ನಿಮಿಷ. ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ತಾವು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ ಮತ್ತು ಸದನದ ಗಮನಕ್ಕೂ ಕೂಡ ತಂದಿದ್ದೀರಿ. ಪಾರ್ಲಿಮೆಂಟಿನ, ಲೋಕಸಭಾ ಸೆಕ್ರೆಟರಿಯವರಿಗೆ ಒಂದು ಪತ್ರವನ್ನು ಬರೆದಿದ್ದು, ಅವರು ನಾನು ಕೇಳಿದ್ದಕ್ಕೆ ಕ್ಲಾರಿಫಿಕೇಷನ್ ಕೊಟ್ಟಿದ್ದಾರೆ, ಆ ಕ್ಲಾರಿಫಿಕೇಷನ್ ಈ ರೀತಿಯಾಗಿದೆ ಎಂದು ಹೇಳಿ ತಾವು ಸದನದಲ್ಲಿ ಹೇಳಿದ್ದೀರಿ. ಆದರೆ, ತಾವು ಕೇಳಿದಂಥ ಕ್ಲಾರಿಫಿಕೇಷನ್, 19ನೇ ತಾರೀಖು ಗೌರ್ನರ್‌ರವರು ಈ ಸದನದಲ್ಲಿ ಏನು ಭಾಷಣ ಮಾಡಿದ್ದರು. ಅಡ್ರೆಸ್ ಮಾಡಿದ್ದರು, ಆ ಅಡ್ರೆಸ್‌ನ ಬಗ್ಗೆ ತಾವು ಕ್ಲಾರಿಫಿಕೇಷನ್ ಕೇಳಿದ್ದಿರಿ. ಅದಕ್ಕೆ ತಮಗೆ ಉತ್ತರವನ್ನು 21ನೇ ತಾರೀಖು ಕೊಟ್ಟಿದ್ದಾರೆ. ನನಗೆ ಅನಿಸಿರುವುದು 20 ಅಥವಾ 21.

ಅಧ್ಯಕ್ಷರು: ಅಲ್ಲ . . . . .

ಶ್ರೀ ಮಲ್ಲಿಕಾರ್ಜುನ ಖರ್ಗೆ: ಒಂದು ನಿಮಿಷ. ನನ್ನದು ಮುಗಿದ ಮೇಲೆ ತಾವು ಹೇಳಿ.

ಅಧ್ಯಕ್ಷರು: ದಯಮಾಡಿ ಕೇಳಿ. 17ನೇ ತಾರೀಖು ಕ್ಯಾಬಿನೆಟ್ ಮೀಟಿಂಗ್ ಆಯಿತು. 18ಕ್ಕೆ ಗೌರ್ನರ್‌ಗೆ ಹೋಯಿತು. ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಆರ್ಟಿಕಲ್ 175ರ ಮೇಲೆ ಎಂದು ಹೇಳಿದ್ದಾರೆ. ಅದಕ್ಕೋಸ್ಕರ . . . . .

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆರ್ಟಿಕಲ್ 175ರ ಮೇಲೆ ಯಾವಾಗಲೂ ಕರೆದಿಲ್ಲ.

ಅಧ್ಯಕ್ಷರು: ದಯಮಾಡಿ ಕೇಳಿ. ಅದಕ್ಕೇ ನಾವು ಸ್ಪಷ್ಟೀಕರಣ ಕೇಳಿದೆವು. ಇಲ್ಲದಿದ್ದರೆ, ಈ ಪ್ರಶ್ನೆ ಬರುತ್ತಿರಲಿಲ್ಲ. ಆರ್ಟಿಕಲ್ 176ರಲ್ಲಿ ಕೇಳಿದ್ದರೆ, ಮತ್ತೆ ಅವರು ಅಪ್ರೋಪ್ರಿಯೇಟ್ ಎಂದು ಅವರು ಹೇಳುವ ಅಗತ್ಯವೇ ಇರಲಿಲ್ಲ. ಇದು ಆರ್ಟಿಕಲ್ 175ರ ಕೆಳಗಡೆ ದಿನಾಂಕ 24/2/2006ಕ್ಕೆ ಇಲ್ಲಿ ಮಾನ್ಯ ರಾಜ್ಯಪಾಲರನ್ನು ಭಾಷಣಕ್ಕೆ ಕರೆದಿದ್ದಾರೆ ಎಂದು ನಾವು ಅವರಿಗೆ ಒಂದು ಸ್ಪಷ್ಟೀಕರಣ ಕೇಳಿದ್ದೇವೆ. ಅದಕ್ಕೆ ಇವರು, ". . . . . it may, perhaps, be appropriate to move a Motion of Thanks on the Address to be made by the Governor on 24th February 2006. . . . ." ಎಂದು ಹೇಳಿದ್ದಾರೆ. ನಾವು ಆ ಒಂದು ಸ್ಪಷ್ಟೀಕರಣ ಕೇಳಿದ್ದೆವು. ಆರ್ಟಿಕಲ್ 176ರ ಮೇಲೆ ಇದು ಇದ್ದಿದ್ದರೆ ಮತ್ತೆ ಸ್ಪಷ್ಟೀಕರಣ ಕೇಳುವ ಅಗತ್ಯ ಇರಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೋ . . . . .ತಾವು ಸ್ಪಷ್ಟೀಕರಣ ಕೇಳಿದ್ದು 19ನೇ ತಾರೀಖಿನ ದಿವಸ ಅಡ್ರೆಸ್ ಆದಂಥ ಭಾಷಣದ ಮೇಲೆ. ತಾವು 20ನೇ ತಾರೀಖು ಪತ್ರ ಬರೆದಿರಿ, ಅದಕ್ಕೆ 21ನೇ ತಾರೀಖು ಉತ್ತರ ಬಂತು. ಆದರೆ, ಇವತ್ತು ಪ್ರಶ್ನೆ ಉದ್ಭವಿಸಿದ್ದು, 24ನೇ ತಾರೀಖು ಗೌರ್ನರ್‌ರವರು ಬಂದು ನಾನು ಆರ್ಟಿಕಲ್ 175(1)ರ ಕೆಳಗೆ ಭಾಷಣ ಮಾಡುತ್ತಿದ್ದೇನೆ ಅನ್ನತಕ್ಕಂಥದ್ದೆನ್ನೇನು ಹೇಳಿದ್ದಾರೋ ಅದರ ಕ್ಲಾರಿಫಿಕೇಷನ್ ಇಲ್ಲ.

ಅಧ್ಯಕ್ಷರು: ನೋ ನೋ . . ., ಕ್ಯಾಬಿನೆಟ್‌ನಲ್ಲಿ ಏನು ತೀರ್ಮಾನ ಮಾಡಿ ಕರೆದಿದ್ದಾರೆ ಅದರ ಪ್ರಕಾರ ಆರ್ಟಿಕಲ್ 175ರ ಮೇಲೆ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಅದಕ್ಕೋಸ್ಕರ ಕ್ಲಾರಿಫಿಕೇಷನ್ ತೆಗೆದುಕೊಂಡಿರುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸಾರ್, ನನ್ನ ಮಾತಾದರೂ ಕೇಳಿ. ತಾವು ಕ್ಲಾರಿಫಿಕೇಷನ್ ಕೇಳಿದ್ದು ಗೌರ್ನರ್‌ರವರು ಆರ್ಟಿಕಲ್ 175 ಸಬ್‌ಕ್ಲಾಸ್ (1)ರ ಕೆಳಗೆ ಅಡ್ರೆಸ್ ಮಾಡುವುದಕ್ಕೆ ಮುಂಚೆ. ಹಾಗೆ ಮುಂಚೆ ಕೇಳಿದ್ದಕ್ಕೆ ಕ್ಲಾರಿಫಿಕೇಷನ್ ಅವರೇನು ಕೊಟ್ಟಿದ್ದಾರೆ, ಅಂದರೆ, ಆರ್ಟಿಕಲ್ 176ರ ಪ್ರಕಾರ ಭಾಷಣ ಮಾಡಬಹುದು ಅನ್ನತಕ್ಕಂಥ ಅರ್ಥವೂ ಇರಬಹುದು, ಅಥವಾ ಇನ್ನೊಂದು ಆರ್ಟಿಕಲ್ 175ರ ಪ್ರಕಾರ ಬಂದು ಭಾಷಣ ಮಾಡತಕ್ಕಂಥದ್ದು ಅನ್ನುವುದೂ ಇರಬಹುದು. ಅದು ಏನೇ ಬರೆದರೂ ಕೂಡ ಅದು before 24th Address. ಅದಕ್ಕಾಗಿ ಅವರು 21ನೇ ತಾರೀಖು ಬರೆದರು. ಇಲ್ಲಿ ನಾವು ಪ್ರಶ್ನೆ ಎತ್ತಿದ್ದೇನೆಂದರೆ, 24ನೇ ತಾರೀಖು ಗೌರ್ನರ್‌ರವರು ಈ ಸದನಕ್ಕೆ ಆರ್ಟಿಕಲ್ 175(1)ರ ಕೆಳಗೆ ನಾನು ಅಡ್ರೆಸ್ ಮಾಡುತ್ತಿದ್ದೇನೆ, ಅದಕ್ಕೆ ತಾವು ಸದನವನ್ನು ಕರೆಯಿರಿ ಎಂದು ತಮಗೇನು ಆದೇಶವನ್ನು ಕೊಟ್ಟರು, ಆ ಆದೇಶ ಕೊಟ್ಟಿದ್ದು ಮೋಷನ್ ಆಫ್ ಥ್ಯಾಂಕ್ಸ್‌ನಲ್ಲಿ ಕೊಡುವುದಕ್ಕೆ ಬರುವುದಿಲ್ಲ. ಮೇಲ್ಮನೆಯಲ್ಲಿ ಅದರ ಬಗ್ಗೆ ಒಂದು ರೂಲಿಂಗ್ ಕೊಟ್ಟಿದ್ದಾರೆ. ನಾನು ಅದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಏನು ರೂಲಿಂಗ್ ಕೊಟ್ಟರು ಏನು ಎಂದು ಆರ್ಟಿಕಲ್ 175 ಸಬ್ ಕ್ಲಾಸ್ 1ರ ಕೆಳಗೆ ಡಿಸ್‌ಕಷನ್ ಮಾಡಬಹುದೇ ಹೊರತಾಗಿ ಅದನ್ನು ನಾವು ಮೋಷನ್ ಆಫ್ ಥ್ಯಾಂಕ್ಸ್‌ನಲ್ಲಿ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ ಎನ್ನತಕ್ಕಂಥ ರೂಲಿಂಗ್ ಕೂಡ ಮೇಲ್ಮನೆಯಲ್ಲಿ ಬಂದಿದೆ ಎಂದು ಹೇಳಿ ನಾನು ಕೇಳಿದ್ದೇನೆ. ಅದನ್ನು ನೋಡೋಣ. ಆದರೆ, ಇವತ್ತು ತಾವು ಇಲ್ಲಿ ಏನು ಕೋಟ್ ಮಾಡುತ್ತಿದ್ದೀರಿ, ಅದು 19ನೇ ತಾರೀಖಿನ ಅಡ್ರೆಸ್ ಬಗ್ಗೆ ಕ್ಲಾರಿಫಿಕೇಷನ್ ಮಾಡಿದಂಥದ್ದು. ಅದು ನಿಮಗೆ ಮುಟ್ಟಿದಂಥ ತಾರೀಖು 21ನೇ ತಾರೀಖು. ಗೌರ್ನರ್‌ರವರು ಈ ಸದನದಲ್ಲಿ ಮಾಡಿದಂಥ ಭಾಷಣವು 24ನೇ ತಾರೀಖು ಆ 24ನೇ ತಾರೀಖಿನ ಭಾಷಣದ ಬಗ್ಗೆ ಇವತ್ತು ನಾವು ಚರ್ಚೆ ಮಾಡುತ್ತಿದ್ದೇವೆಯೇ ಹೊರತಾಗಿ ಆ ಕ್ಲಾರಿಫಿಕೇಷನ್ ಇದಕ್ಕೆ ಅನ್ವಯಿಸುವುದಿಲ್ಲ. ಒಂದು ಏನಾಗುತ್ತದೆ ನೋಡಿ, ಪಾರ್ಲಿಮೆಂಟ್ ಸೆಕ್ರೆಟರಿಯೇಟ್‌ನಿಂದ ಕ್ಲಾರಿಫಿಕೇಷನ್ ತೆಗೆದುಕೊಂಡರೂ ಕೂಡ ಇವರು ಒಪ್ಪುತ್ತಿಲ್ಲ, ಇವರೆಲ್ಲಾ ಮೊಂಡರು ಅನ್ನತಕ್ಕಂಥ ತಪ್ಪು ಕಲ್ಪನೆ . . . . .

ಅಧ್ಯಕ್ಷರು: ಖರ್ಗೆ ಸಾಹೇಬರೆ, 17ನೇ ತಾರೀಖು ಕ್ಯಾಬಿನೆಟ್ ಮೀಟಿಂಗ್ ಆಯಿತು. ಮಾತನಾಡಿ ನಾನು ಸ್ಪಷ್ಟೀಕರಣ ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕ್ಯಾಬಿನೆಟ್ ಆಯಿತು. ಕ್ಯಾಬಿನೆಟ್ ಆದಮೇಲೆ ನಾವು 19ನೇ ತಾರೀಖು ಆ ಕ್ಯಾಬಿನೆಟ್ ಅಪ್ರೂವ್ ಮಾಡಿದಂತೆ ಭಾಷಣವನ್ನು ಗೌರ್ನರ್ ಓದಿದರು.

ಅಧ್ಯಕ್ಷರು: ಅದಲ್ಲ. 17ನೇ ತಾರೀಖು . . .

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಖರ್ಗೆಯವರೆ, ಇಲ್ಲಿ ಕೇಳಿ ತಾವು ಕನ್‌ಫ್ಯೂಷನ್ ಮಾಡಿಕೊಂಡಿದ್ದೀರಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸ್ವಲ್ಪ ಕೇಳಿ, ನಾನು ಆ ಲೆಟರ್ ನೋಡಿದ್ದೇನೆ, 21ನೇ ತಾರೀಖಿನ ಲೆಟರ್ ಅದು.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ: 19ನೇ ತಾರೀಖು ಮಾಡಿದ ಭಾಷಣದ ಬಗ್ಗೆ ಅಲ್ಲ ಅದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮೊದಲೇ ಹೇಗೆ ತೆಗೆದುಕೊಳ್ಳುತ್ತಾರೆ? ನೀವು ನಿನ್ನೆ ತಾನೆ ಓದಿದಿರಿ. . . .

(ಗೊಂದಲ)

ಅಧ್ಯಕ್ಷರು: ಸನ್ಮಾನ್ಯ ರಾಜ್ಯಪಾಲರು 19ನೇ ಜನವರಿಯಲ್ಲಿ ಮೊದಲನೆ ಸಾರಿ ಬಂದು ಆರ್ಟಿಕಲ್ 176ರ ಕೆಳಗಡೆ ಇಲ್ಲಿ ಭಾಷಣ ಮಾಡಿದ್ದಾರೆ. ಈಗ ಹೊಸ ಸರ್ಕಾರ ಬಂದಮೇಲೆ ಅವರು 17ನೇ ತಾರೀಖು ಮಂತ್ರಿಮಂಡಲದ ಸಭೆ ಮಾಡಿ, ನೀವು ಆರ್ಟಿಕಲ್ 175ರ ಕೆಳಗಡೆ ಬಂದು ಜಂಟಿ ಸದನವನ್ನು ಉದ್ದೇಶಿಸಿ ಭಾಷಣ ಮಾಡಬೇಕೆಂದು ರಿಕ್ವೇಸ್ಟ್ ಮಾಡಿದ್ದಾರೆ. 18ನೇ ತಾರೀಖು ಗೌರ್ನರ್ ಕಡೆಯಿಂದ ಒಂದು ಪತ್ರ ನಮಗೆ ಬಂದಿದೆ, ಆಗ ನಾವು ಲೋಕಸಭಾ ಸಚಿವಾಲಯಕ್ಕೆ, 20ನೇ ತಾರೀಖು ಕಾಗದ ಬರೆದು ಸ್ಪಷ್ಟೀಕರಣ ಕೇಳಿದೆವು. ಸ್ಪಷ್ಟೀಕರಣ ಏನು ಅಂದರೆ, ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. . ".....appropriate to move a Motion of Thanks on the Address to be made by the Governor on 24th February, 2006." ಅದಕ್ಕೆ ನಾವು ಮೊದಲೇ ಸ್ಪಷ್ಟೀಕರಣ ಕೇಳಿದೆವು. ಏಕೆಂದರೆ ಈ ಕ್ವೊಶ್ಚನ್ಸ್ ಎಲ್ಲಾ ಬರುತ್ತೆಂದು ಮೊದಲೇ ಕೇಳಿದೆವು.

(ಗೊಂದಲ)

ಶ್ರೀ ಎಸ್. ಕುಮಾರ ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ತಾವು ಈಗ ಉತ್ತರ ಓದುತ್ತಿದ್ದೀರಾ, ತಾವು ಯಾವ ಪ್ರಶ್ನೆಗಳನ್ನು ಪಾರ್ಲಿಮೆಂಟರಿ ಸೆಕ್ರೆಟರಿಯೇಟ್‌ಗೆ ಕೇಳಿದ್ದೀರಿ ಎನ್ನುವುದನ್ನು ಓದಿ you tell us.

(ಗೊಂದಲ)

ಅಧ್ಯಕ್ಷರು: ಕುಮಾರ್ ಬಂಗಾರಪ್ಪನವರೆ, ನಾನೇನು ಸಂಸ್ಕೃತದಲ್ಲಿ ಹೇಳುತ್ತಿದ್ದೇನೆಯೇ? ನೀವು ದಯಮಾಡಿ ಸದಸ್ಯರು ಅರ್ಥಮಾಡಿಕೊಳ್ಳಬೇಕು ಕನ್‌ಫ್ಯೂಷನ್ ಮಾಡಬೇಡಿ. ಆರ್ಟಿಕಲ್ 176ರ ಕೆಳಗಡೆ ಒಂದು ಸಾರಿ 19ನೇ ಜನವರಿಯಲ್ಲಿ ಭಾಷಣ ಮಾಡಿದ್ದಾರೆ. . . ಇಲ್ಲಿ ಕೇಳಿ, ಹೊಸ ಸರ್ಕಾರ ಬಂದಮೇಲೆ 17ನೇ ತಾರೀಖು ಮಂತ್ರಿಮಂಡಲದಲ್ಲಿ ತೀರ್ಮಾನ ಮಾಡಿ ಅವರು ಆರ್ಟಿಕಲ್ 175ರ ಕೆಳಗಡೆ ಭಾಷಣ ಮಾಡುವಂತೆ ವಿನಂತಿ ಮಾಡಿದ್ದಾರೆ. . 18ನೇ ತಾರೀಖು ನನಗೆ ಆ ಮಾಹಿತಿ ಬಂದಿದೆ. ಆಮೇಲೆ ನಾನು ಕ್ಲಾರಿಫಿಕೇಷನ್ ಕೇಳಿದ್ದು. It is our duty ನನ್ನ ಕ್ಲಾರಿಫಿಕೇಷನ್‌ಗೆ ಲೋಕಸಭಾ ಸೆಕ್ರೆಟರಿಯೇಟ್‌ನವರು ಈ ರೀತಿ ಉತ್ತರ ಕೊಟ್ಟಿದ್ದಾರೆ. . . . .

ಶ್ರೀ ಎಸ್. ಕುಮಾರ್ ಬಂಗಾರಪ್ಪ: ತಮಗೆ ಉತ್ತರ ಸಿಕ್ಕಿದೆ. . . . . .

ಅಧ್ಯಕ್ಷರು: ಅಲ್ಲ, ಅದನ್ನ ನಾನು ಸಭೆಯ ಗಮನಕ್ಕೆ ತಂದೆ ಎಂದು ಹೇಳಿದೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಲೋಕಸಭಾ ಸೆಕ್ರೆಟೆರಿಯವರಿಗೆ ಯಾವ ಲೆಟರ್ ಬರೆದಿದ್ದೀರಿ ಎನ್ನುವುದನ್ನೂ ಓದಿಬಿಡಿ . . . ತಾವು ಯಾವ ಪ್ರಶ್ನೆಯನ್ನು ಪಾರ್ಲಿಮೆಂಟರಿ ಸೆಕ್ರೆಟೆರಿಗೆ ಕಳುಹಿಸಿದ್ದೀರಿ ಎನ್ನುವುದನ್ನು ಓದಿ, ನಂತರ ಈ ಉತ್ತರ ಹೇಳಿ.

ಅಧ್ಯಕ್ಷರು: ಆಗಲೇ ಓದ್ದಿದ್ದೇನೆಲ್ಲಾ ಸ್ವಾಮಿ . . .

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಯಾವುದಕ್ಕೋಸ್ಕರ ಪ್ರಶ್ನೆ ಕೇಳಿದ್ದಿರಿ ಎಂಬುದನ್ನು ಇಲ್ಲಿ ಓದಿ . . .

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು): ಹೊಸ ಸರ್ಕಾರ ಬಂದ ಮೇಲೆ 17ನೇ ತಾರೀಖು ಕ್ಯಾಬಿನೆಟ್ ಆಯಿತು, ಅಲ್ಲಿ ಇದು ನಿರ್ಧಾರವಾಯಿತು. ನಿರ್ಧಾರವಾಗಿ 24ನೇ ತಾರೀಖಿಗೆ ಏನು ಮಾನ್ಯ ರಾಜ್ಯಪಾಲರು ಭಾಷಣ ಮಾಡಿದರು. ಆ ಬಗ್ಗೆ 17ನೇ ತಾರೀಖಿನ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಆಗಿದೆ. ಅದಾದ ಮೇಲೆ ತಾವು ಲೋಕಸಭಾ ಸೆಕ್ರೆಟೆರಿಯೇಟ್‌ಗೆ ಸ್ಪಷ್ಟೀಕರಣ ಕೇಳಿದಿರಿ.. ಮಾನ್ಯ ಖರ್ಗೆಯವರು ಹೇಳುತ್ತಿರುವುದು ಹಿಂದಿನ ಹಳೆಯ ಭಾಷಣ. ಹಿಂದಿನ ಸರ್ಕಾರದ ಬಗ್ಗೆ, 19ನೇ ತಾರೀಖಿನ ಬಗ್ಗೆ ಅವರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದಕ್ಕೆ ಅವರು ಸಾಕ್ಷಿ ಇದ್ದಾರೆ ನೋಡಿ. .

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಸ್ಪೀಕರ್‌ರವರು ಸ್ಪಷ್ಟೀಕರಣ ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ: ನೀವು ಆ ಲೆಟರ್ ಓದಿಲ್ಲ, ಅದನ್ನು ಇನ್ನೊಂದು ಸಲ ತರಿಸಿಕೊಂಡು ನೋಡಿ. ನೀವು ಓದಿರತಕ್ಕಂಥ ಕ್ಲಾರಿಫಿಕೇಷನ್ . . ಶೆಟ್ಟರ್‌ರವರೆ, ಒಂದ್ನಿಮಿಷ ಕುಳಿತುಕೊಳ್ಳಿ . . ನಾನು ಒಂದು ನಿಮಿಷದಲ್ಲಿ ಹೇಳಿಬಿಡುತ್ತೇನೆ. ಲೋಕಸಭಾ ಸೆಕ್ರೆಟರಿಯೇಟ್‌ಗೆ, ನೀವು ಅಲ್ಲಿ ಸೆಕ್ರೆಟರಿ ಜನರಲ್, ಲೋಕಸಭಾದಲ್ಲಿ ಯಾರು ಇದ್ದಾರೆ, ಅವರಿಗೆ ಬರೆದಿರತಕ್ಕಂಥದ್ದು. ಪಾರ್ಲಿಮೆಂಟರಿ ಸೆಕ್ರೆಟರಿಗೆ ಬರೆದಿರತಕ್ಕಂಥದ್ದು 19ನೇ ತಾರೀಖು ಜನವರಿ. ಅವರು 20ನೇ ತಾರೀಖು ಜನವರಿ ನಿಮಗೆ ಕ್ಲಾರಿಫಿಕೇಷನ್ ಕಳುಹಿಸಿದ್ದಾರೆ. ಇದು 24ನೇ ಫೆಬ್ರವರಿಯಲ್ಲಿ ಭಾಷಣ ಆಗಿರುವುದು, ಅವರು ಕಳುಹಿಸಿರತಕ್ಕಂಥ ಕ್ಲಾರಿಫಿಕೇಷನ್ 19ನೇ ಜನವರಿಯಲ್ಲಿ ಇವರು ಏನು ಪತ್ರ ಬರೆದಿದ್ದಾರೆ ಅದಕ್ಕೆ 20ನೇ ಜನವರಿ, ಇಲ್ಲಿ ಕೇಳಿ ಶೆಟ್ಟರ್‌ರವರೆ, ಆಮೇಲೆ ಮಾತನಾಡಿ . . . (ಗೊಂದಲ). ನಾನು ಓದಿದ್ದೇನೆ ಬಿಡಿ.

(ಗೊಂದಲ)

ಅಧ್ಯಕ್ಷರು: ಅವರು 20ನೇ ತಾರೀಖು ನಮಗೆ ಪತ್ರ ಬರೆದಿದ್ದಾರೆ. .

ಶ್ರೀ ಜಗದೀಶ್ ಶೆಟ್ಟರ್: ಕನ್‌ಫ್ಯೂಷನ್ ಮಾಡಬೇಡಿ.

ಶ್ರೀ ಎನ್. ಚಲುವರಾಯಸ್ವಾಮಿ: 24ಕ್ಕೆ ಆಗುತ್ತದೆ ಎಂದೇ ಅವರು ಬರೆದಿರುವುದು.

ಶ್ರೀ ಸಿದ್ದರಾಮಯ್ಯ: ನಾನು ಆ ಪತ್ರ ಓದಿದೆ, ಮಾನ್ಯ ಖರ್ಗೆಯವರು ಕೂಡ ಓದಿದ್ದಾರೆ ನಾನು ಕೂಡ ಓದಿದ್ದೇನೆ. 19ನೇ ತಾರೀಖು ಲೆಟರ್ ಹೋಗಿದೆ, 20ನೇ ತಾರೀಖು ಅವರು ಉತ್ತರ ಬರೆದಿರುವುದು. 24ನೇ ತಾರೀಖು ಭಾಷಣ ಆಗಿರುವುದು. 175(1)ರ ಕೆಳಗಡೆ ಭಾಷಣ ಮಾಡಿದ್ದಾರೆ, ಅದಕ್ಕೂ ಆ ಕ್ಲಾರಿಫಿಕೇಷನ್‌ಗೆ ಏನು ಸಂಬಂಧವಿದೆ ಮಾನ್ಯ ಅಧ್ಯಕ್ಷರೆ?

ಅಧ್ಯಕ್ಷರು: ಹೌದು ಸ್ವಾಮಿ ದಯಮಾಡಿ, ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

Sri Siddaramaiah: The clarification by the Parliamentary Secretariat is nothing to do . . . . .

(Interruptions)

Mr. Speaker: It is very clear. ಕ್ಲಿಯರ್ ಆಗಿದೆ. ಹೊಸ ಮಂತ್ರಿಮಂಡಲ ಬಂದಮೇಲೆ 17ರ ಮಂತ್ರಿಮಂಡಲದ ಸಭೆಯಲ್ಲಿ ತೀರ್ಮಾನವಾದಂತೆ ಆರ್ಟಿಕಲ್ 175ರ ಕೆಳಗಡೆ ಮಾನ್ಯ ರಾಜ್ಯಪಾಲರು ಬಂದು ಭಾಷಣ ಮಾಡಬೇಕೆಂದು ಅವರಿಗೆ ವಿನಂತಿ ಮಾಡಿದ ಮೇಲೆ, ನಾವು 18ನೇ ತಾರೀಖು ನೋಟಿಫಿಕೇಷನ್ ಇಶ್ಯೂ ಮಾಡಿದೆವು ಅದರ ಮೇಲೆ ನಾವು ಕ್ಲಾರಿಫಿಕೇಷನ್ ಕೇಳಿದೆವು. 20ನೇ ತಾರೀಖು ಲೋಕಸಭಾ ಸಚಿವಾಲಯಕ್ಕೆ ಪತ್ರ ಬರೆದೆವು, ಅವರು 21ನೇ ತಾರೀಖಿಗೆ ಪತ್ರ ಬರೆದಿದ್ದಾರೆ. ಆ ಪತ್ರವನ್ನು ನಾನು ಇಲ್ಲಿ ಓದಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಹೊಸ ಸರ್ಕಾರ ಬಂದಮೇಲೆ ಮಂತ್ರಿಮಂಡಲದ ತೀರ್ಮಾನದಂತೆ ಮನವಿ ಮಾಡಿಕೊಂಡು ನಂತರ ಅವರು ಬಂದು ಇಲ್ಲಿ ಭಾಷಣ ಮಾಡಿದರು. . ಆದರೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಮಾನ್ಯ ಸಿದ್ದರಾಮಯ್ಯನವರು ಹಿಂದಿನ ಜನವರಿ ತಿಂಗಳಲ್ಲಿ ಆಗಿರುವಂಥದ್ದನ್ನು ಹೇಳುತ್ತಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ: ಅವರು ಏನು ಹೇಳಿದರೂ ಒಪ್ಪುವ ಸ್ಥಿತಿಯಲ್ಲಿ ಇಲ್ಲ.

(ಗೊಂದಲ)

ಅಧ್ಯಕ್ಷರು: ಈಗ ಸದನವನ್ನು ಮುಂದೂಡುವುದಕ್ಕೆ ಮುನ್ನ ಮತ್ತೊಂದು ಸಾರಿ ನಾನು ಎಲ್ಲಾ ವಿರೋಧ ಪಕ್ಷದ ಮುಖಂಡರನ್ನು ಕರೆಯುತ್ತೇನೆ, ಮತ್ತೊಂದು ಸಲ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ. ಈಗ ಸದನವನ್ನು ಮಧ್ಯಾಹ್ನ 3-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1 ಗಂಟೆ 46 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3-00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಸಂಜೆ 5.22ಕ್ಕೆ ಸಮಾವೇಶಗೊಂಡಿತು. ಮಾನ್ಯ ಸಭಾಧ್ಯಕ್ಷರು (ಶ್ರೀಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)

4. ವಿತ್ತೀಯ ಕಾರ್ಯಕಲಾಪ

2005-06ನೇ ಸಾಲಿನ ಪೂರಕ ಅಂದಾಜುಗಳ (ಎರಡನೆಯ ಕಂತು) ಮಂಡನೆ.

ಅಧ್ಯಕ್ಷರು: ಯಡಿಯೂರಪ್ಪನವರೆ, ಒಂದು . . .

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ತಾವು ತಮ್ಮ ತೀರ್ಪನ್ನು ಪುನರ್ ಪರಿಶೀಲನೆ ಮಾಡಿ ಅನೌನ್ಸ್ ಮಾಡುತ್ತೇನೆಂದು : . . . .

ಅಧ್ಯಕ್ಷರು: ಅದಲ್ಲ, ವಿತ್ತೀಯ ಕಾರ್ಯಕಲಾಪಕ್ಕೆ ಸಂಬಂಧಪಟ್ಟ ಹಾಗೆ ಇವತ್ತು ಮೂವ್ ಮಾಡಿ ನಾಳೆ ಡಿಸ್‌ಕಸ್ ಆಗಬೇಕು.

ಶ್ರೀ ವಾಟಾಳ್ ನಾಗರಾಜ್: ಬೇಡಿ, ಅದೆಲ್ಲಾ ಬೇಡ.

ಅಧ್ಯಕ್ಷರು: ದಯಮಾಡಿ ಅರ್ಥ ಮಾಡಿಕೊಳ್ಳಿ, ಈಗ ಮೂವ್ ಮಾಡಿ . . .

ಶ್ರೀ ವಾಟಾಳ್ ನಾಗರಾಜ್: ಬೇಡಿ, ಅದು ಒಳ್ಳೆಯ ಸಂಪ್ರದಾಯವಲ್ಲ. ಬೆಳಿಗ್ಗೆ ತಾವು ಲೋಕಸಭಾದಿಂದ ಬಂದಿರುವುದನ್ನು ಓದಿದಿರಿ, ಇನ್ನು ರಾಜ್ಯಸಭೆಯಿಂದ ಬಂದಿರುವಂತಹ ನಿರ್ಣಯವನ್ನು ತಾವು ಓದಿ.

ಅಧ್ಯಕ್ಷರು: ಅದನ್ನು ಓದುವುದು ಬೇರೆ ವಿಷಯ, ಈಗ ಇದನ್ನು ಮೂವ್ ಮಾಡಲಿ. ಆದರೆ ಇದನ್ನು ನಾಳೆ ಡಿಸ್‌ಕಷನ್‌ಗೆ ತೆಗೆದುಕೊಳ್ಳುವುದು. ಅದಕ್ಕೋಸ್ಕರ ಈಗ ಪೂರಕ ಅಂದಾಜುಗಳನ್ನು . . . .

ಶ್ರೀ ಬಸವರಾಜ್ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, x x x

ಅಧ್ಯಕ್ಷರು: ಯಾವ ಸಂಪ್ರದಾಯ? ಈಗ ಪೂರಕ ಅಂದಾಜುಗಳನ್ನು ಮಂಡನೆ ಮಾಡಬೇಕು, in the interest of the House. ಇವತ್ತು ಮಂಡನೆ ಮಾಡುವುದಕ್ಕೆ ಅವಕಾಶ ಕೊಡಿಯಪ್ಪ...

(ಗೊಂದಲ)

ಅಧ್ಯಕ್ಷರು: ಇಲ್ಲ, ಇವತ್ತು ಅವರು ಮಂಡನೆ ಮಾಡುತ್ತಾರೆ ಅಷ್ಟೆ. ಡಿಸ್‌ಕಷನ್ ನಾಳೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು 2005–06ನೇ ಸಾಲಿನ ಪೂರಕ ಅಂದಾಜುಗಳನ್ನು(ಎರಡನೇ ಕಂತು) . . . . .

ಅಧ್ಯಕ್ಷರು: ಮಂಡನೆ ಮಾಡುತ್ತಿದ್ದಾರೆ ಅಷ್ಟೆ.

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಹಾಗೂ ಕನ್ನಡ ಚಳುವಳಿ ಪಕ್ಷದ ಮಾನ್ಯ ವಾಟಾಳ್ ನಾಗರಾಜ್‌ರವರು ಪೂರಕ ಅಂದಾಜು ಮಂಡನೆ ಮಾಡುತ್ತಿರುವುದನ್ನು ವಿರೋಧಿಸಿ ತಮ್ಮ ಆಸನಗಳನ್ನು ಬಿಟ್ಟು ಅಧ್ಯಕ್ಷರ ಪೀಠದ ಹತ್ತಿರ ಬಂದರು.)

ಅಧ್ಯಕ್ಷರು: ಮಂಡನೆ ಮಾಡುತ್ತಿದ್ದಾರೆ ಅಷ್ಟೆ. ಇದು ನಾಳೆ ಡಿಸ್‌ಕಷನ್‌ಗೆ ಬರುವುದು. ಆಯಿತು, ಮಾನ್ಯ ಯಡಿಯೂರಪ್ಪನವರೆ, ತಾವು ನಾಳೆ ಮಂಡನೆ ಮಾಡಿ. No. No. Why are you standing? ಅವರು ಮಂಡನೆ ಮಾಡುತ್ತಾರೆ ಅಷ್ಟೆ.

(ಗೊಂದಲ)

ಅಧ್ಯಕ್ಷರು: ಏಕೆಂದರೆ ಇದು ಅರ್ಜೆಂಟ್ ಇದೆ. ಆಯಿತು, ನಾಳೆ ಮಂಡಿಸಿ ಮಾನ್ಯ ಯಡಿಯೂರಪ್ಪನವರೇ, ಈಗ ಒಂದು ಪ್ರಕಟಣೆ ಇದೆ.

5. ಪ್ರಕಟಣೆ

ವಿಷಯ: ವಿಧಾನಸಭೆಯ ಸರ್ಕಾರಿ ಮುಖ್ಯ ಸಚೇತಕರ ನೇಮಕ

ಶೃಂಗೇರಿ ವಿಧಾನಸಭಾ ಕ್ಷೇತ್ರದ ಸದಸ್ಯರಾದ ಶ್ರೀ ಡಿ.ಎನ್. ಜೀವರಾಜ್ ಅವರನ್ನು ವಿಧಾನಸಭೆಯಲ್ಲಿ ಸರ್ಕಾರಿ ಮುಖ್ಯ ಸಚೇತಕರನ್ನಾಗಿ ನೇಮಕ ಮಾಡಲಾಗಿದೆ. ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿರುತ್ತಾರೆ.

ಅಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 5.00 ಗಂಟೆ 24 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 2ನೇ ಮಾರ್ಚ್ 2006ರ ಗುರುವಾರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

x ಈ ಪದಗಳನ್ನು ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಕರ್ನಾಟಕ ವಿಧಾನಸಭೆ

ಗುರುವಾರ 2ನೇ ಮಾರ್ಚ್ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 12 ಗಂಟೆ 36 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ವಿಷಯ: ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಮಂಡಿಸುವ ಬಗ್ಗೆ.

ಅಧ್ಯಕ್ಷರು: ಈಗ ಸಭೆಯ ಮುಂದೆ ಇಡಲಾಗುವ ಕಾಗದ ಪತ್ರಗಳ ಮಂಡನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಯಾವ ಕಾಗದ ಪತ್ರಗಳನ್ನು ಮಂಡಿಸ ಬೇಡಿ. ಈಗ ಸೇರಿರುವ ಸಭೆ ಸರಿ ಇಲ್ಲ. ಮೊದಲು ಅದನ್ನು ಸರಿಪಡಿಸಿ . . . (ಈ ಹಂತದಲ್ಲಿ ವಾಟಾಳ್ ನಾಗರಾಜ್‌ರವರು ಹಾಗೂ ಕಾಂಗ್ರೆಸ್ ಪಕ್ಷದ ವಿಧಾನಸಭೆಯ ಸದಸ್ಯರೆಲ್ಲರೂ ಸದನದ ಬಾವಿಗೆ ಬಂದು ಸರ್ಕಾರದ ವಿರುದ್ಧ ಮತ್ತು ಮಾನ್ಯ ಸಭಾಧ್ಯಕ್ಷರ ನಿಲುವಿಗೆ ಧಿಕ್ಕಾರ ಎಂದು ಕೂಗುತ್ತಿದ್ದರು)

ಅಧ್ಯಕ್ಷರು: ಸದನದ ಬಾವಿಯಲ್ಲಿರುವ ಮಾನ್ಯ ಸದಸ್ಯರೆಲ್ಲರೂ ಗಲಾಟೆ ಮಾಡದೆ ಎಲ್ಲರೂ ತಮ್ಮ ತಮ್ಮ ಸ್ಥಾನಕ್ಕೆ ಹೋಗಬೇಕು. ನಿನ್ನೆ, ಮೊನ್ನೆ ಮತ್ತು ಆಚೆಮೊನ್ನೆ ಬಹಳಷ್ಟು ಚರ್ಚೆ ಈಗಾಗಲೇ ಈ ಮನೆಯಲ್ಲಿ ನಡೆದಿದೆ. ಲೋಕಸಭೆ ಹಾಗೂ ರಾಜ್ಯಸಭೆ ಸಚಿವಾಲಯಕ್ಕೂ ಪತ್ರ ಬರೆದು ಕೇಳಿದ್ದೇವೆ. ಆ ಪತ್ರಗಳಲ್ಲಿ ಏನು ಹೇಳಲಾಗಿದೆ ಅಂದರೆ, ...

Now, after the formation of the new Government, headed by Sri H.D. Kumaraswamy, Chief Minister of Karnataka, His Excellency the Governor of Karnataka under Article 175(1) of the Constitution of India, have pleased to address members of both Houses of Karnataka Legislature on 24.2.2006 at 10.00 A.M.

In the light of these developments, since there will be two addresses by His Excellency the Governor of Karnataka successively, I request you to kindly give your considered opinion **as to which Governor's Address has to be taken for moving the Motion of Thanks.** ಈ ಪತ್ರಕ್ಕೆ ಲೋಕಸಭಾ ಸಚಿವಾಲಯದವರು ಈ ರೀತಿ ಉತ್ತರ ನೀಡಿದ್ದಾರೆ.

From
D.R. KALRA
DIRECTOR

TO,
The Secretary
Karnataka Legislative Council
Bangalore
Karnataka

Sub: Motion of Thanks on the Address by Governor of Karnataka.

Sir,

With reference to your letter no. KLCS/Secy/06/06 dated 20.2.2006 on the above subject, I am directed to inform you that there is no instance of a similar nature in Lok Sabha. Since a Motion of Thanks on the Address of the Governor dated 19 January, 2006 could not be moved and discussed by the House, in the changed circumstances, may, perhaps, be appropriate to move a Motion of Thanks on the Addr to be made by the Governor on 24 February, 2006 and discuss it on floor of the House.

Yours faithfully,

(D.R. Kalra)

ಈ ರೀತಿ ಲೋಕ ಸಭಾ ಸಚಿವಾಲಯದವರು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅದೇ ರೀತಿ a similar letter was addressed to the Secretary General of the Rajya Sabha. ಅವರು ಏನು ಹೇಳಿದ್ದಾರೆಂದರೆ:

SECRETARY-GENERAL, RAJYA SABHA

DO.No.Rs.17/1/2006-L **February 22, 2006**

Dear Sir Jayashankara murthy,

Please refere to your FAX letter dated 20.2.2006 regarding Governor's Address to the Karnataka Legislature. I have got the mater examined. The constitutional requirement in this regard is clearly difined in articles 87 and 176. Only the first Session of after each General Election to Lok Sabha/Legislative Assembly and the first session of each calendar year begins with an Address by the President/Governor, as the case may be. A second Address to Parliament/Legislature by the President/Governor in the same calendar year merely on the ground that a new Government has been formed after the Address of the President/Governor has not been envisaged in the Constitution.

2. A situation somewhat similar to the one cited by you in your FAX letter, had arisen in Parliament in 1996 when the 12th Lok Sabha was constituted after the General Elections. Pursuant to provisions of Article 87 of the Constitution, the President addressed the Joint Session of Parliament on 24th May, 1996 but the Government could not prove its majority and accordingly, resigned on the 29th May, 1996 and as such the Motion of Thanks could not be discussed and passed. The Session (177th) of the Rajya Sabha was prorogued on the 13th June 1996. Subsequently, a new Government came to the power and the next session (178th) of the Rajya Sabha commenced on the 10th July, 1996 without an Address by the President to a Joint Session of the Parliament nor was any Motion of Thanks moved.

Yours sincerely,

(YOGENDRA NARAIN)

Shri K. Jayashankaramurthy,
Secretary,
Karnataka Legis lative Council,
Bangalore.

(ಗೊಂದಲ)

ಅಧ್ಯಕ್ಷರು: ಆದ್ದರಿಂದ ಆರ್ಟಿಕಲ್ 175(1) ರಡಿಯಲ್ಲಿ ಭಾಷಣ ಮಾಡಿಸಿರುವುದು ಮತ್ತು ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಮಂಡಿಸಿರುವುದು ಸರಿ ಇದೆ ಎಂದು ಲೋಕಸಭಾ ಸಚಿವಾಲಯದವರೂ ಕೂಡ ಹೇಳಿದ್ದಾರೆ. ಆದುದರಿಂದ 24–02–2006ರಂದು ರಾಜ್ಯಪಾಲರಿಂದ ಭಾಷಣ ಮಾಡಿಸಿರುವುದು ಹಾಗೂ ವಂದನಾ ನಿರ್ಣಯ ಮಂಡಿಸತಕ್ಕದ್ದು ಸರಿಯಾಗಿದೆ ಎಂಬ ಅಭಿಪ್ರಾಯವನ್ನು ಹೇಳಿದ್ದಾರೆ. ಬೇರೆ ಏನು ನಿಯಮಾವಳಿಗಳನ್ನು ನಾವು ಮಾಡಿಕೊಂಡಿದ್ದೇವೆ, ಅದರ ಪ್ರಕಾರ ಆ ವಿಚಾರವನ್ನು ಪ್ರಸ್ತಾಪ ಮಾಡಲಾಗಿದೆ. ಆ ನಿಯಮಾವಳಿಗಳನ್ನು ರದ್ದು ಮಾಡಲಿಕ್ಕೆ ಅಥವಾ ಬದಲಾವಣೆ ಮಾಡಲಿಕ್ಕೆ ನನಗೆ ವಿಶೇಷವಾದ ಅಧಿಕಾರ ಇದೆ. ಆ ಅಧಿಕಾರವನ್ನು ಬಳಸಿ ನಾನು ಆಗಲೇ ರೂಲಿಂಗ್ ಕೊಟ್ಟಿದ್ದೇನೆ.

(ಧರಣಿ ನಿರತ ಸದಸ್ಯರೆಲ್ಲರೂ ಸರ್ಕಾರಕ್ಕೆ ಧಿಕ್ಕಾರ ಎಂದು ಕೂಗುತ್ತಿದ್ದರು)

(ಗೊಂದಲ)

ಅಧ್ಯಕ್ಷರು: ಆದ್ದರಿಂದ ನೀವು ಅದನ್ನು ರೀ ಕನ್ಸಿಡರ್ ಮಾಡಿ ಎಂದು ಹೇಳಿ ವಾದ ಇಟ್ಟಿರಿ. ಆದರೆ ಹೊಸ ವಿಚಾರಗಳನ್ನು ಹೇಳಿಲ್ಲ. ಆ ಕಾರಣದಿಂದ ನಾನು ಈಗಾಗಲೇ ಏನು ರೂಲಿಂಗ್ ಕೊಟ್ಟಿದ್ದೇನೆ ಅದು ಕ್ರಮಬದ್ಧವಾಗಿದೆ. ಅದು ಸರಿಯಾಗಿದೆ. ಆದುದರಿಂದ ನಾನು ತಮ್ಮಲ್ಲೆ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ತಾವೆಲ್ಲಾ ತಮ್ಮ ಆಸನಗಳಿಗೆ ಹೋಗಿ, ಈ ಸದನದ ಕಲಾಪಗಳು ಸರಿಯಾದ ರೀತಿಯಲ್ಲಿ ನಡೆಯುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ವಂದನಾ ನಿರ್ಣಯದ ಮೇಲೆ ಚರ್ಚೆ, ಮಾನ್ಯ ಮಹದೇವ ಪ್ರಸಾದ್‌ರವರು ಮಾತನಾಡಿ.

(ಗೊಂದಲ)

2) ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆ. (ಮುಂದು)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್(ಗುಂಡ್ಲುಪೇಟೆ): ಮಾನ್ಯ ಅಧ್ಯಕ್ಷರೆ, ಫೆಬ್ರವರಿ 24 ರಂದು ಘನತೆವೆತ್ತ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ ಮಾಡಿರತಕ್ಕಂಥ ಭಾಷಣಕ್ಕೆ ವಂದನೆಯನ್ನು ಈ ಸದನದಲ್ಲಿ ಸಲ್ಲಿಸಬೇಕೆಂದು ಹೇಳಿ ನಾನು ಈಗೇನು ಮಂಡನೆಯನ್ನು ಮಾಡಿದ್ದೇನೆ ಅದರ ಬಗ್ಗೆ ನಾಲ್ಕು ಮಾತುಗಳನ್ನು ತಮ್ಮ ಮುಂದೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕಳೆದ ಮೂರು ದಿನಗಳಿಂದ ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಸಂವಿಧಾನ ಆರ್ಟಿಕಲ್ 175 ಮತ್ತು 176ರ ಬಗ್ಗೆ ಸಾಕಷ್ಟು ಸುದೀರ್ಘವಾಗಿ ಚರ್ಚೆ ನಡೆದು, ಈ ನಿಟ್ಟಿನಲ್ಲಿ ತಾವು ಒಂದು ರೂಲಿಂಗ್ ಅನ್ನು ನೀಡಿದ್ದರೂ ಕೂಡ, ಇವತ್ತು ಸಂವಿಧಾನಕ್ಕೆ ಮತ್ತು ಮಾನ್ಯ ರಾಜ್ಯಪಾಲರಿಗೆ ಗೌರವ ತರುವ ರೀತಿಯಲ್ಲಿ ನಮ್ಮ ವಿರೋಧ ಪಕ್ಷದ ಸದಸ್ಯರುಗಳು ನಡೆದುಕೊಳ್ಳದೆ, ಅವರೇನು ಅಧಿಕಾರದಿಂದ ಕಳೆದ ತಿಂಗಳು ವಂಚಿತರಾಗಿದ್ದಾರೆ, ಅದರಿಂದ ಅವರು ಹೊರಬರುವುದಕ್ಕೆ ಆಗದೆ ಈ ರೀತಿಯಾಗಿ ಧರಣಿಯನ್ನು ತಮ್ಮ ವಿರುದ್ಧ ಮಾಡುವಂಥಾದ್ದು ದುರಾದೃಷ್ಟಕರ ಸನ್ನಿವೇಶ ಎಂದು ನಾನಾದರೂ ಈ ಸಂದರ್ಭದಲ್ಲಿ ಹೇಳುತ್ತಾ, ಈ ಒಂದು ಸರ್ಕಾರ ಏನು ರಾಜ್ಯದಲ್ಲಿ ರಚನೆಯಾಗಿದೆ ಅದರ ದೃಷ್ಟಿಕೋನ ಗ್ರಾಮೀಣ ಜನರ ಮತ್ತು ರೈತರ ಪರವಾದಂತಹ, ನಗರ ಪ್ರದೇಶ ಹಾಗೂ ರಾಜ್ಯದ ಒಟ್ಟಾರೆ ಅಭಿವೃದ್ಧಿಯ ಬಗ್ಗೆ

ತಮ್ಮ ದೃಷ್ಟಿಕೋನವನ್ನು ಮತ್ತು ಮುಂದಿನ ಪತ್ರದಲ್ಲಿ ತಿಳಿಸತಕ್ಕಂಥ ವಿಚಾರಗಳ ಬಗ್ಗೆ ಪೂರ್ವಭಾವಿಯಾಗಿ ರಾಜ್ಯಪಾಲರು ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಅದನ್ನು ಈ ಸದನ ಅನುಮೋದಿಸಬೇಕೆಂದು ಸರ್ವಾನುಮತದಿಂದ ತಮಗೆಲ್ಲಾ ಹೇಳುತ್ತಾ ಮಾನ್ಯ ರಾಜ್ಯಪಾಲರಿಗೆ ಗೌರವವನ್ನು ಸೂಚಿಸುವ ನಿಟ್ಟಿನಲ್ಲಿ ಅವರಿಗೆ ವಂದನೆಯನ್ನು ಸಲ್ಲಿಸಬೇಕೆಂದು ಹೇಳುತ್ತಾ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲಾ): ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು 24ನೇ ತಾರೀಖು ಈ ಸದನಕ್ಕೆ ಬಂದು ಅತ್ಯುತ್ತಮವಾಗಿ ಈ ಸಮ್ಮಿಶ್ರ ಸರ್ಕಾರದ ಭಾಷಣವನ್ನು ಮಾಡಿದ್ದಾರೆ. ನಮ್ಮ ಕಾಂಗ್ರೆಸ್ ಸ್ನೇಹಿತರಿಗೆ ಈ ಸಮ್ಮಿಶ್ರ ಸರ್ಕಾರದ ರಾಜ್ಯದ ಅಭಿವೃದ್ಧಿಯ ಪರವಾಗಿರುವಂತಹ ಮಾನ್ಯ ರಾಜ್ಯಪಾಲರ ಭಾಷಣವನ್ನು ಕೇಳುವುದಕ್ಕೆ ಸಾಧ್ಯವಾಗದೆ, ಅವರಿಗೆ ರಾಜ್ಯಕ್ಕೆ ಒಳ್ಳೆಯದಾಗುವಂತಹ ಭಾಷಣವನ್ನು ಕೇಳುವುದಕ್ಕೆ ಸಾಧ್ಯವಾಗದೆ ಈ ರೀತಿಯಾಗಿ ಸಂವಿಧಾನಬಾಹಿರವಾದಂತಹ, ಸಂವಿಧಾನಕ್ಕೆ ವಿರೋಧವಾದ, ಮಾನ್ಯ ರಾಜ್ಯಪಾಲರಿಗೆ ಹಾಗೂ ಮಾನ್ಯ ಸಭಾಧ್ಯಕ್ಷರಿಗೆ ಅಗೌರವ ತೋರಿಸುವಂತಹ ರೀತಿಯಲ್ಲಿ ಈ ಸದನದಲ್ಲಿ ನಡೆದುಕೊಳ್ಳುತ್ತಿರುವುದು ಅತ್ಯಂತ ಮಾರಕವಾದಂತಾದ್ದು ಎಂದು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಈ ಸದನಕ್ಕೆ ಬಂದು ಬಿಜೆಪಿ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅತ್ಯುತ್ತಮವಾದ ನೀತಿಯನ್ನು ಹೇಳಿದ್ದಾರೆ. ಗ್ರಾಮೀಣ ಜನತೆಯ ಪರವಾಗಿರುವಂತಹ, ರೈತರ ಪರವಾಗಿರುವಂತಹ, ಐಟಿಬಿಟಿ ಉದ್ಯಮದ ಪರವಾಗಿರುವಂತಹ, ಯುವಕರು, ಮಹಿಳೆಯರು ಪರಿಶಿಷ್ಟ ಜಾತಿ ಹಾಗೂ ಪಂಗಡದ ಸರ್ವಾಂಗೀಣ ಏಳಿಗೆಗೆ ರಾಜ್ಯದ ಯಾವ ಹಿಂದಿನ ಸರ್ಕಾರಗಳು ಘೋಷಣೆ ಮಾಡದೆ ಇರುವಂತಹ ಅತ್ಯುತ್ತಮ ವಿಚಾರವನ್ನು ಮಾನ್ಯ ರಾಜ್ಯಪಾಲರು ದಿನಾಂಕ 24 ರಂದು ಮಾಡಿದ್ದಾರೆ. ಈ ರೀತಿಯಾದಂತಹ ಭಾಷಣವನ್ನು ಅವರಿಂದ ಸಹಿಸಿಕೊಳ್ಳುವುದಕ್ಕೆ ಆಗದೇ ಅವರು ಕುಂಟುನೆಪ ಹೇಳಿಕೊಂಡು ಕಾರ್ಯಕಲಾಪಕ್ಕೆ ಅಡ್ಡಿ ಪಡಿಸುತ್ತಿದ್ದಾರೆ. ಇದು ಅತ್ಯುತ್ತಮವಾದಂತಹ ಭಾಷಣ, ರಾಜ್ಯದ ಅಭಿವೃದ್ಧಿಗೆ ಇದೊಂದು ಹೊಸ ದಿಕ್ಕನ್ನು ತೋರಿಸುತ್ತಿರುವಂತಹ ಕಾರ್ಯಕ್ರಮ. ಸುವರ್ಣ ಕರ್ನಾಟಕದ ವರ್ಷದಲ್ಲಿ ನವ ಕರ್ನಾಟಕವನ್ನು ನಿರ್ಮಾಣ ಮಾಡುವುದಕ್ಕೆ, ಒಂದು ಸಮೃದ್ಧ ಕರ್ನಾಟಕವನ್ನು ನಿರ್ಮಾಣ ಮಾಡುವುದಕ್ಕೆ ಒಂದು ಅತ್ಯುತ್ತಮವಾಂದಹ ಭಾಷಣವನ್ನು ಮಾನ್ಯ ರಾಜ್ಯಪಾಲರು ಈ ಬಾರಿ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ಇವತ್ತು ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಸರ್ಕಾರ ಮುಂದಿನ ದಿನಗಳಲ್ಲಿ ಒಂದು ಅತ್ಯುತ್ತಮವಾದಂತಹ ಆಡಳಿತವನ್ನು ಈ ರಾಜ್ಯದಲ್ಲಿ ಕೊಡುತ್ತದೆ. ಹಿಂದಿನ ಕಾಂಗ್ರೆಸ್ ನೇತೃತ್ವದಲ್ಲಿ ಇದ್ದಂತಹ ಸರ್ಕಾರ ರಾಜ್ಯದ ಅಭಿವೃದ್ಧಿಯನ್ನು ಸಂಪೂರ್ಣವಾಗಿ ಕಡೆಗಣಿಸಿರುವುದರಿಂದ ಇವತ್ತು ಈ ಸರ್ಕಾರವನ್ನು ನಾವು ಮತ್ತು ಜೆಡಿಎಸ್‌ನವರು ಕೂಡಿ ಮಾಡಿದ್ದೇವೆ. ಅವರು ಮೈತ್ರಿ ಧರ್ಮವನ್ನು ಪಾಲಿಸಲಿಲ್ಲ. ಅಷ್ಟೇ ಅಲ್ಲ ಅಭಿವೃದ್ಧಿಯನ್ನು ಸಾಧಿಸುವಂತಹ ಕೆಲಸವನ್ನು ಮಾಡಲಿಲ್ಲ. ನಮ್ಮ ಈ ಸಮ್ಮಿಶ್ರ ಸರ್ಕಾರದ ಒಂದೇ ಒಂದು ಮಂತ್ರ ಅಭಿವೃದ್ಧಿ, ಅಭಿವೃದ್ಧಿ, ಅಭಿವೃದ್ಧಿ. ಅಭಿವೃದ್ಧಿಯನ್ನು ಮಾಡುವ ಮೂಲಕ ಈ ರಾಜ್ಯವನ್ನು ಅತ್ಯುತ್ತಮವಾದಂತಹ ರಾಜ್ಯವನ್ನಾಗಿ ಈ ದೇಶದಲ್ಲಿ ಮಾಡುವುದಕ್ಕೆ ನಮ್ಮ ಈ ಸಮ್ಮಿಶ್ರ ಸರ್ಕಾರ ಬದ್ಧವಾಗಿದೆ. ಮೈತ್ರಿ ಧರ್ಮವನ್ನು ಪಾಲಿಸುವುದರ ಜೊತೆಯಲ್ಲಿ

ಅಭಿವೃದ್ಧಿ ಮಂತ್ರವನ್ನು ಹೇಳುತ್ತಾ, ಅಭಿವೃದ್ಧಿಯಲ್ಲಿ ಈ ರಾಜ್ಯವನ್ನು ಮುನ್ನೆಡೆಸುವುದಕ್ಕೆ ನಾವು ಬದ್ಧವಾಗಿದ್ದೇವೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇವೆ. ನಮ್ಮ ಈ ಸರ್ಕಾರ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಬೇಕಾಗಿರುವಂತಹ ನೀಲಿನಕ್ಷೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅತ್ಯುತ್ತಮವಾದಂತಹ ಸಂಗತಿಗಳಿವೆ. ನಾವು, ಹಿಂದೆಂದೂ ಯಾವ ಸರ್ಕಾರಗಳು ಮಾಡದೆ ಇರುವಂತಹ ಅಭಿವೃದ್ಧಿಯ ಪರವಾದಂತಹ ಒಳ್ಳೆಯ ರಾಜ್ಯಪಾಲರ ಭಾಷಣವನ್ನು ಮಾಡಿದ್ದೇವೆ. ಮುಂದಿನ ಬಜೆಟ್ ಹಾಗೂ ಮುಂದಿನ ಆಡಳಿತಕ್ಕೆ ನಾವು ಹೇಗೆ ಒಂದು ಅತ್ಯುತ್ತಮವಾದಂತಹ ಕಾರ್ಯಕ್ರಮವನ್ನು ಕೊಡುತ್ತಿದ್ದೇವೆ ಎನ್ನುವುದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇದೆ. ಹಾಗಾಗಿ ಅತ್ಯುತ್ತಮವಾದಂತಹ ನೀತಿಯನ್ನು ಹೊಂದಿರುವಂತಹ ರಾಜ್ಯದ ಅಭಿವೃದ್ಧಿಗೆ ಬೇಕಾಗಿರುವಂತಹ ಅನೇಕ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವಂತಹ ಗ್ರಾಮೀಣ ಜನತೆಯ ಪರವಾಗಿ, ಯುವಕರ ಹಾಗೂ ಮಹಿಳೆಯರ ಪರವಾಗಿ ಇರುವಂತಹ ಒಂದು ಅತ್ಯುತ್ತಮವಾದಂತಹ ನೀತಿಯನ್ನು ಹೊಂದಿರುವಂತಹ ಮಾನ್ಯ ರಾಜ್ಯಪಾಲರ ಭಾಷಣವನ್ನು ನಾನು ಅನುಮೋದಿಸುತ್ತೇನೆ ಮತ್ತು ಈ ಸದನ ತುಂಬು ಹೃದಯದಿಂದ ರಾಜ್ಯಪಾಲರಿಗೆ ಗೌರವವನ್ನು ಸಮರ್ಪಿಸುತ್ತದೆ. ಮಾನ್ಯ ರಾಜ್ಯಪಾಲರು ಇಂತಹ ಸಂದರ್ಭದಲ್ಲಿ ಸಂವಿಧಾನ ಬದ್ಧವಾಗಿ ನಡೆದುಕೊಂಡಿದ್ದಾರೆ. ಮಾನ್ಯ ರಾಜ್ಯಪಾಲರ ಸ್ಥಾನಕ್ಕೆ ಅಗೌರವ ತರುವ ರೀತಿಯಲ್ಲಿ ಕಾಂಗ್ರೆಸ್‌ನವರು ನಡೆದು ಕೊಳ್ಳುತ್ತಿರುವಂಥಾದ್ದು ಈ ಸದನದ ಘನತೆ ಗೌರವವನ್ನು ಕಡಿಮೆ ಮಾಡುತ್ತಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೆ, ಸದನದ ಘನತೆ ಗೌರವಕ್ಕೆ ಕುಂದು ಬರುವಂತಹ ರೀತಿಯಲ್ಲಿ ಕಾಂಗ್ರೆಸ್‌ನವರು ನಡೆದುಕೊಳ್ಳುತ್ತಿದ್ದಾರೆ. ರಾಜಕಾರಣವನ್ನು ಮಾಡುವುದಕ್ಕೆ ಈ ಸದನವನ್ನು ಬಳಸಿಕೊಳ್ಳುತ್ತಿದ್ದಾರೆ. ಅದರು ರಾಜಕಾರಣವನ್ನು ಸದನದ ಹೊರಗಡೆ ಹೋಗಿ ಮಾಡಲಿ. ಸದನದ ಒಳಗಡೆ ರಾಜ್ಯದ ಜನತೆಯ ಹಾಗೂ ರಾಜ್ಯದ ಅಭಿವೃದ್ಧಿಯ ಪರವಾಗಿ ಯೋಚನೆಯನ್ನು ನಾವು ಮಾಡಬೇಕು. ಅದನ್ನು ಬಿಟ್ಟು ರಾಜಕಾರಣಕ್ಕೆ ಈ ಸದನವನ್ನು ಬಳಸಿಕೊಳ್ಳುತ್ತಿದ್ದಾರೆ. ಈ ರೀತಿ ಈ ಸದನದ ಘನತೆ ಗೌರವವನ್ನು ಕಾಪಾಡುವುದಕ್ಕೆ ವಿಫಲವಾದಂತಹ ಈ ಕಾಂಗ್ರೆಸ್ ನೀತಿಯನ್ನು ನಾವು ಖಂಡಿಸುತ್ತೇವೆ. ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಈ ಅತ್ಯುತ್ತಮವಾದಂತಹ ಭಾಷಣವನ್ನು ನಾವು ಅಭಿನಂದನೆಯನ್ನು ಸಲ್ಲಿಸುತ್ತೇವೆ. ಹಾಗೂ ಇದನ್ನು ಅನುಮೋದಿಸುತ್ತೇವೆ. ಈ ಸದನ ಸರ್ವಾನುಮತದಿಂದ ಮಾನ್ಯ ರಾಜ್ಯಪಾಲರಿಗೆ ಅಭಿನಂದನೆಯನ್ನು ಸಲ್ಲಿಸಬೇಕು ಎಂದು ವಿನಂತಿಯನ್ನು ಮಾಡುತ್ತಾ ನಾನು ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಡಿ. ಕುಮಾರಸ್ವಾಮಿ(ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ಘನತೆವೆತ್ತ ರಾಜ್ಯಪಾಲರು ಎರಡು ಸದನಗಳ ಸದಸ್ಯರುಗಳ ಮುಂದೆ ಹೊಸ ಸರ್ಕಾರದ ರಾಜ್ಯದ ಅಭಿವೃದ್ಧಿಯನ್ನು ಮಾಡತಕ್ಕಂಥ ಕಾರ್ಯಕ್ರಮಗಳ ಬಗ್ಗೆ, ರಾಜ್ಯದ ಜನತೆಗೆ ಒಂದು ಒಳ್ಳೆಯ ಸಂದೇಶವನ್ನು ಕೊಟ್ಟಿದ್ದಾರೆ; ಆ ವಿಷಯದಲ್ಲಿ ಕಳೆದ ಮೂರು ದಿವಸಗಳಿಂದ ಎಲ್ಲಾ ಸದಸ್ಯರುಗಳು ಮಾಡಿದಂತಹ ಚರ್ಚೆಗಳನ್ನು ಕೇಳಿ, ತಾವು ಕೊಟ್ಟಿರತಕ್ಕಂಥ ನಿರ್ಣಯದ ನಂತರವೂ ಈ ರೀತಿ ಮುಂದುವರಿಸುವುದು ಸರಿಯಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ಮಾನ್ಯ ರಾಜ್ಯಪಾಲರಿಗೆ ವಂದನೆಯನ್ನು ಸಲ್ಲಿಸುವ ವಂದನಾ ನಿರ್ಣಯದ ಪ್ರಸ್ತಾಪವನ್ನು ಈ ಸದನವು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

"24ನೇ ಫೆಬ್ರವರಿ 2006 ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ಮಾನ್ಯ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ವಂದನಾ ನಿರ್ಣಯದ ಪ್ರಸ್ತಾವಕ್ಕೆ ಸಭೆಯ ಅನುಮತಿ ದೊರಕಿದೆ.

(ಗೊಂದಲ)

ಅಧ್ಯಕ್ಷರು: ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

3) ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಅ) ಮೊದಲನೆಯ ಮತ್ತು ಎರಡನೆ ಪಟ್ಟಿಯ ಕಾಗದ ಪತ್ರಗಳು

(ಗೊಂದಲ)

I. ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, **2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ ಕಲಂ 89ನೇ ಪ್ರಕರಣದ ಮೇರೆಗೆ:**

1) ಕಂದಸಾರಿ ಸಕ್ಕರೆ ಮತ್ತು ಐಸ್ ಮೇಲೆ ವರ್ತಕರು ಪಾವತಿಸಬೇಕಾದ ಮಾರಾಟ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 16–09–2005ರಂದು ಹೊರಡಿಸಲಾದ ಎಫ್‌ಡಿ 416 ಸಿಎಸ್‌ಎಲ್ 2005(1)ನೇ ಸಂಖ್ಯೆಯ ಅಧಿಸೂಚನೆ.

2) ಒಣ ದ್ರಾಕ್ಷಿ, ಸೀಗೆಕಾಯಿ ಮತ್ತು ಸೀಗೆಕಾಯಿ ಪುಡಿ, ಬೇಸಾಯದ ಧೂಳು ತೆಗೆಯುವ ಉಪಕರಣ, ಸಿಂಪಡಣೆ, ಹನಿ ನೀರಾವರಿ ಉಪಕರಣಗಳು ಹಾಗೂ ಅದರ ಭಾಗಗಳು ಮತ್ತು ಕಾಫಿ ಪುಡಿ ಸೇರಿದಂತೆ ಫ್ರೆಂಚ್ ಕಾಫಿಯ ಮೇಲೆ ವರ್ತಕರು ಪಾವತಿಸಬೇಕಾದ ಮಾರಾಟ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 16–09–2005ರಂದು ಹೊರಡಿಸಲಾದ ಎಫ್‌ಡಿ 416 ಸಿಎಸ್‌ಎಲ್ 2005(2)ನೇ ಸಂಖ್ಯೆಯ ಅಧಿಸೂಚನೆ.

3) ಸಾರ್ವಜನಿಕರ ಹಿತದೃಷ್ಟಿಯಿಂದ ಅಂತರ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯದ ಮೇಲೆ ನೋಂದಾಯಿತ ವರ್ತಕರಿಗೆ ಮಾರಾಟ ಮಾಡುವ ಒಣ ಮೆಣಸಿನಕಾಯಿ ಮೇಲೆ ವರ್ತಕರು ಪಾವತಿಸಬೇಕಾದ ಮಾರಾಟ ತೆರಿಗೆಯನ್ನು ಶೇ.1ಕ್ಕೆ ನಿಗದಿಪಡಿಸಿ ನಮೂನೆ 'ಸಿ' ಯಲ್ಲಿ ಘೋಷಣೆ ಅಥವಾ ನಮೂನೆ–ಡಿ ಯಲ್ಲಿ ದೃಢೀಕರಣ ಪತ್ರ ಸಲ್ಲಿಸುವ ಷರತ್ತಿನ ಮೇಲೆ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ 16–09–2005ರಂದು ಹೊರಡಿಸಲಾದ ಎಫ್‌ಡಿ 416 ಸಿಎಸ್‌ಎಲ್ 2005(4)ನೇ ಸಂಖ್ಯೆಯ ಅಧಿಸೂಚನೆ.

4) ಬಂಡವಾಳ ವಸ್ತುಗಳ ಮೇಲಿನ ಉದ್ದೇಶದಿಂದ ಮೌಲ್ಯವರ್ಧಿತ ತೆರಿಗೆಯ ಪ್ರವೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿಗದಿಪಡಿಸಿ ದಿನಾಂಕ 05–08–2005ರಂದು ಹೊರಡಿಸಲಾದ ಎಫ್‌ಡಿ 316 ಸಿಎಸ್‌ಎಲ್ 2005(1)ನೇ ಸಂಖ್ಯೆಯ ಅಧಿಸೂಚನೆ.

5) ದಿನಾಂಕ 30–04–2005ರ ಅಧಿಸೂಚನೆ ಸಂಖ್ಯೆ: ಎಫ್‌ಡಿ 197 ಸಿಎಸ್‌ಎಲ್ 2005(6)ಕ್ಕೆ ತಿದ್ದುಪಡಿ ಮಾಡಿ ತಕ್ಷಣದಿಂದ ಜಾರಿಗೆ ಬರುವಂತೆ ಮೌಲ್ಯವರ್ಧಿತ ತೆರಿಗೆಯನ್ನು ನಿಗದಿಪಡಿಸಿ ದಿನಾಂಕ 05–08–2005 ರಂದು ಹೊರಡಿಸಲಾದ ಎಫ್‌ಡಿ 316 ಸಿಎಸ್‌ಎಲ್ 2005(2)ನೇ ಸಂಖ್ಯೆಯ ಅಧಿಸೂಚನೆ.

6) 2005ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ನಿಯಮ 3ಕ್ಕೆ ತಿದ್ದುಪಡಿ ಮಾಡಿ ದಿನಾಂಕ 15–09–2005ರಂದು ಹೊರಡಿಸಲಾದ ಎಫ್‌ಡಿ 306 ಸಿಎಸ್‌ಎಲ್ 2005(1)ನೇ ಸಂಖ್ಯೆಯ ಅಧಿಸೂಚನೆ.

7) ದಿನಾಂಕ 23–03–2005ರ ಅಧಿಸೂಚನೆ ಸಂಖ್ಯೆ: ಎಫ್‌ಡಿ 55 ಸಿಎಸ್‌ಎಲ್ 2005(7)ಗೆ ತಕ್ಷಣದಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ 26–07–2005ರಂದು ಹೊರಡಿಸಲಾದ ಎಫ್‌ಡಿ 306 ಸಿಎಸ್‌ಎಲ್ 2005(2)ನೇ ಸಂಖ್ಯೆಯ ಅಧಿಸೂಚನೆ.

8) ಉಪಯೋಗಿಸಿದ ಕಾರುಗಳ ಮಾರಾಟದ ಮೇಲೆ ತಕ್ಷಣದಿಂದ ಜಾರಿಗೆ ಬರುವಂತೆ ಶೇ.4ರಷ್ಟು ಕರ್ನಾಟಕ ಮೌಲ್ಯವರ್ಧಿತ ತೆರಿಗೆಯನ್ನು ಕಡಿಮೆಗೊಳಿಸಿ ದಿನಾಂಕ:24.10.2005ರಂದು ಹೊರಡಿಸಲಾದ ಎಫ್‌ಡಿ 300 ಸಿಎಸ್‌ಎಲ್ 2005ನೇ ಸಂಖ್ಯೆಯ ಅಧಿಸೂಚನೆ.

9) ದಿನಾಂಕ:18.04.2005 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಫ್‌ಡಿ 56 ಸಿಎಸ್‌ಎಲ್ 2005 (3) ಯಲ್ಲಿ ಖಂಡ 9 ಮತ್ತು 11ಕ್ಕೆ ತಿದ್ದುಪಡಿ ಮಾಡಿ ದಿನಾಂಕ: 25.10.2005 ರಂದು ಹೊರಡಿಸಲಾದ ಎಫ್‌ಡಿ 482 ಸಿಎಸ್‌ಎಲ್ 2005 (1)ನೇ ಸಂಖ್ಯೆಯ ಅಧಿಸೂಚನೆ.

10) ದಿನಾಂಕ: 18.04.2005 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಎಫ್‌ಡಿ 56 ಸಿಎಸ್‌ಎಲ್ 2005 (2) ಯಲ್ಲಿ ಖಂಡ 5ಕ್ಕೆ ತಿದ್ದುಪಡಿ ಮಾಡಿ ದಿನಾಂಕ: 25.10.2005 ರಂದು ಹೊರಡಿಸಲಾದ ಎಫ್‌ಡಿ 482 ಸಿಎಸ್‌ಎಲ್ 2005(2)ನೇ ಸಂಖ್ಯೆಯ ಅಧಿಸೂಚನೆ.

11) ದಿನಾಂಕ: 18.04.2005 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಎಫ್‌ಡಿ 56 ಸಿಎಸ್‌ಎಲ್ 2005 (3) ಯಲ್ಲಿ ಖಂಡ 7 ಮತ್ತು 9ಕ್ಕೆ ತಿದ್ದುಪಡಿ ಮಾಡಿ ದಿನಾಂಕ:25.10.2005 ರಂದು ಹೊರಡಿಸಲಾದ ಎಫ್‌ಡಿ 482 ಸಿಎಸ್‌ಎಲ್ 2005(3)ನೇ ಸಂಖ್ಯೆಯ ಅಧಿಸೂಚನೆ.

1965ರ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 71(4)ರ ಪ್ರಕರಣದ ಮೇರೆಗೆ:

12) 1967ರ ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಗಳ ನಿಯಮ 2ಕ್ಕೆ ತಿದ್ದುಪಡಿ ಮಾಡಿ ದಿನಾಂಕ: 23–06–2005ರಂದು ಹೊರಡಿಸಲಾದ ಎಫ್‌ಡಿ 38 ಪಿಇಎಸ್ 2002(1)ನೇ ಸಂಖ್ಯೆಯ ಅಧಿಸೂಚನೆ.

13) 1968ರ ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳ ನಿಯಮ 1ಎ ಗೆ ತಿದ್ದುಪಡಿ ಮಾಡಿ ದಿನಾಂಕ:23–06–2005ರಂದು ಹೊರಡಿಸಲಾದ ಎಫ್‌ಡಿ 38 ಪಿಇಎಸ್ 2002(2)ನೇ ಸಂಖ್ಯೆಯ ಅಧಿಸೂಚನೆ.

1957ರ ಕರ್ನಾಟಕ ಕೃಷಿ ವರಮಾನ ತೆರಿಗೆ ಕಾಯ್ದೆ 612(1)(2)ರ ಪ್ರಕರಣದ ಮೇರೆಗೆ:

14) ತೋಟದ ಬೆಳೆ ಮತ್ತು 50 ಎಕರೆಗಿಂತ ಕಡಿಮೆ ಜಮೀನು ಹೊಂದಿರುವ ಎಲ್ಲಾ ತೆರಿಗೆದಾರರು ಕರ್ನಾಟಕ ಕೃಷಿ ವರಮಾನ ತೆರಿಗೆಯನ್ನು 2004–05ನೇ ಅವಧಿಗೆ ಮತ್ತು ಸಂಬಂಧಪಟ್ಟ 2005–06 ಕರ ನಿರ್ಧಾರಣಾ ವರ್ಷಕ್ಕೆ ಪಾವತಿಸಬೇಕಾದ ತೆರಿಗೆಯನ್ನು ಮನ್ನಾ ಮಾಡುವ ಬಗ್ಗೆ ದಿನಾಂಕ 16–09–2005ರಂದು ಹೊರಡಿಸಲಾದ ಎಫ್‌ಡಿ 416 ಸಿಎಸ್‌ಎಲ್ 2005(3)ನೇ ಸಂಖ್ಯೆಯ ಅಧಿಸೂಚನೆ.

1959ರ ಕರ್ನಾಟಕ ಮನರಂಜನಾ ತೆರಿಗೆ ಕಾಯ್ದೆ 18ರ ಪ್ರಕರಣದ ಮೇರೆಗೆ:

15) 1959ರ ಕರ್ನಾಟಕ ಮನರಂಜನಾ ತೆರಿಗೆ ನಿಯಮಗಳಿಗೆ ನಿಯಮ 17–ಬಿ ಯನ್ನು ಹೊಸದಾಗಿ ಸೇರ್ಪಡಿಸಿ ದಿನಾಂಕ 27–09–2005ರಂದು ಹೊರಡಿಸಲಾದ ಎಫ್‌ಡಿ 20 ಸಿಇಎಕ್ಸ್ 2005ನೇ ಸಂಖ್ಯೆಯ ಅಧಿಸೂಚನೆ.

1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ ಕಲಂ 31ರ ಪ್ರಕರಣದ ಮೇರೆಗೆ:

16) ವಿದೇಶಿ ರಾಯಭಾರಿ ಧೂತ ವರ್ಗದವರು ತರುವ ವಾಹನಗಳಿಗೆ ಅಥವಾ ವರ್ತಕರು ವಿದೇಶಿ ರಾಯಭಾರಿ ವರ್ಗದವರಿಗೆ ಅಥವಾ ಸದಸ್ಯರಿಗೆ ಅವರ ಅಧಿಕೃತ ಉಪಯೋಗಕ್ಕಾಗಿ ಮಾರಾಟ ಮಾಡುವ ವಾಹನಗಳಿಗೆ ದಿನಾಂಕ 01.10.2003 ರಿಂದ 31.10.2003 ರವರೆಗೆ ಜಾರಿಗೆ ಬರುವಂತೆ ಘೋಷಣಾ ಪತ್ರವನ್ನು ಸಲ್ಲಿಸುವ ಷರತ್ತಿನ ಮೇಲೆ ಪ್ರವೇಶ ತೆರಿಗೆಯಿಂದ ವಿನಾಯಿತಿ ನೀಡಿ ದಿನಾಂಕ 29.10.2005 ರಂದು ಹೊರಡಿಸಲಾದ ಎಫ್‌ಡಿ 72 ಸಿಇಟಿ 2003ನೇ ಸಂಖ್ಯೆಯ ಅಧಿಸೂಚನೆ.

1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ ಕಲಂ 39ರ ಪ್ರಕರಣದ ಮೇರೆಗೆ:

17) ಕ್ಯಾಪಿಟೇವ್ ಜನರೇಷನ್ ಸೆಟ್‌ಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಗುರುತಿಸಲ್ಪಟ್ಟ ಕೆಲವು ಕೈಗಾರಿಕಾ ಭಾಗಗಳಿಗೆ (ತಯಾರಿಕಾ ಅಥವಾ ಸಂಸ್ಕರಣೆಗೆ ತೊಡಗಿರುವುದಕ್ಕೆ ಸಂಬಂಧಿಸಿದಂತೆ) ಮಾರಾಟ ಮಾಡುವ ಡೀಸಲ್ ಮೇಲೆ ವರ್ತಕರು ಪಾವತಿಸಬೇಕಾದ ಮಾರಾಟ ತೆರಿಗೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಶೇಕಡ 4ಕ್ಕೆ ಕಡಿಮೆಗೊಳಿಸಿ ಸಂಬಂಧಪಟ್ಟ ಪ್ರಾಧಿಕಾರದವರು ಘೋಷಣಾ ಪತ್ರವನ್ನು ಸಲ್ಲಿಸುವ ಷರತ್ತಿನ ಮೇಲೆ ದಿನಾಂಕ 11.11.2005 ರಂದು ಹೊರಡಿಸಲಾದ ಎಫ್‌ಡಿ 360 ಸಿಎಸ್‌ಎಲ್ 2005ನೇ ಸಂಖ್ಯೆಯ ಅಧಿಸೂಚನೆ.

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ:

18) ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 171ಕ್ಕೆ ತಿದ್ದುಪಡಿ ಮಾಡಿ ದಿನಾಂಕ 22.12.2005 ರಂದು ಹೊರಡಿಸಲಾದ ಎಫ್‌ಡಿ 9 ಎಸ್‌ಆರ್‌ಎ 2004ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

II 1951ರ ರಾಜ್ಯ ಹಣಕಾಸು ಸಂಸ್ಥೆ ಕಾಯ್ದೆ ಕಲಂ 37(7) ಮತ್ತು 38(3)ರ ಮೇರೆಗೆ:

1. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ 2003–04ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ 2004–05ನೇ ಸಾಲಿನ ವಾರ್ಷಿಕ ವರದಿ.

1956ರ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಕಾಯಿದೆಯ 5(26)ರ ಮೇರೆಗೆ:

1. ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ 2003–04ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ 1966ರ ಪ್ರಕರಣ 28(4)ರ ಮೇರೆಗೆ:

1. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ 2003–04ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

1. ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮ ನಿಯಮಿತದ 2002–03ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ದಿ ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತದ 2002–03 ಹಾಗೂ 2003–04ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿ.
3. ಮೈಸೂರು ಪೇಯಿಂಟ್ಸ್ ಮತ್ತು ವಾರ್ನಿಷ್ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
4. ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
5. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
6. ದಿ ಮೈಸೂರು ಕ್ರೋಮ್‌ಟ್ಯಾನಿಂಗ್ ಕಂಪನಿ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
7. ದಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
8. ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
9. ಮೈಸೂರು ಮಿನರಲ್ಸ್ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

III. ಶ್ರೀ ಬಸವರಾಜ ಎಸ್. ಹೊರಟ್ಟಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ಅವರು: 1978ರ ಕರ್ನಾಟಕ ಶಿಕ್ಷಣ ಅಧಿನಿಯಮ (1991ರ ಕರ್ನಾಟಕ ಅಧಿನಿಯಮ 1) 145 (4)ರ ಪ್ರಕರಣದ ಮೇರೆಗೆ:

1) 1999ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಾವಳಿಯ ಅನುಸೂಚಿ 4ಕ್ಕೆ ತಿದ್ದುಪಡಿ ಮಾಡಿ ದಿನಾಂಕ 12.08.2005 ರಂದು ಹೊರಡಿಸಲಾದ ಇಡಿ 94 ಎಸ್‌ಇಪಿ 2005ನೇ ಸಂಖ್ಯೆಯ ಅಧಿಸೂಚನೆ.

2) 1997ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ ಮತ್ತು ನೋಂದಣಿ) ನಿಯಮಗಳ

3) 1999ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳ ನಿಯಮ 11ಕ್ಕೆ ತಿದ್ದುಪಡಿ ಮಾಡಿ ದಿನಾಂಕ 22.11.2005ರಂದು ಹೊರಡಿಸಲಾದ ಇಡಿ 1007 ಎಸ್‌ಇಡಬ್ಲ್ಯೂ 2001ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

III. A 1987ರ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಅಧಿನಿಯಮ ಪರಿಚ್ಛೇದ 18(4)ರ ಮೇರೆಗೆ:

1. ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರಿನ 2004–05ನೇ ಸಾಲಿನ ವಾರ್ಷಿಕ ವರದಿ.

1986ರ ಕರ್ನಾಟಕ ಕಾಯ್ದೆ 22ರ ಪರಿಚ್ಛೇದ 26(2)ರ ಮೇರೆಗೆ:

1. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ನಾಗರಬಾವಿ, ಬೆಂಗಳೂರಿನ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

1966ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಅಧಿನಿಯಮ 25(3) ರನ್ವಯ:

1. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ 2003–04ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಮಂಡಿಸುತ್ತೇನೆ.

IV ಶ್ರೀ ಕೆ.ಎಸ್. ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಅವರು:

1980ರ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮ 25ರನ್ವಯ:

1. ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರದ ನೀರಾವರಿ ಯೋಜನೆಗಳ ವಲಯ, ಗುಲ್ಬರ್ಗಾದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
3. ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ಬೆಳಗಾವಿಯ 2004–05ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
4. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಕೃಷ್ಣ ಮೇಲ್ದಂಡೆ ಯೋಜನೆ, ಭೀಮರಾಯನಗುಡಿ, ಗುಲ್ಬರ್ಗಾದ 2004–05ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
5. ತುಂಗಭದ್ರ ಯೋಜನೆ, ಮುನಿರಾಬಾದ್‌ನ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

V ಶ್ರೀ ಸಿ. ಚನ್ನಿಗಪ್ಪ (ಅರಣ್ಯ ಮತ್ತು ಪರಿಸರ ಸಚಿವರು) ಅವರು:

1974ರ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕಾಯ್ದೆ ಕಂಡಿಕೆ 40 (7)ರ ಮೇರೆಗೆ:

1. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 2002–03ನೇ ಹಾಗೂ 2003–04ನೇ ಸಾಲುಗಳ ಲೆಕ್ಕಪರಿಶೋಧನಾ ವರದಿ.

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

1. ಕರ್ನಾಟಕ ಪಲ್ಪ್‌ವುಡ್ ನಿಯಮಿತದ 2003–04ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

VI ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) ಅವರು:–

1973ರ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಅಧಿನಿಯಮ 19(3)ರ ಮೇರೆಗೆ:

1. ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ, ಬೆಂಗಳೂರಿನ 2003–04ನೇ ಸಾಲಿನ ಲೆಕ್ಕಪರಿಶೋಧಕರ ಪ್ರಾಮಾಣೀಕೃತ ಲೆಕ್ಕಪತ್ರಗಳ ವರದಿ.

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

1. ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

VII ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) ಅವರ ಪರವಾಗಿ ಶ್ರೀ ಕೆ.ಎಸ್. ಈಶ್ವರಪ್ಪ(ಜಲಸಂಪನ್ಮೂಲ ಸಚಿವರು):

2000 ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮದ 50(2)ರ ಮೇರೆಗೆ:

1. ಮೈಸೂರು ವಿಶ್ವವಿದ್ಯಾಲಯದ 2002–03 ಹಾಗೂ 2003–04ನೇ ಸಾಲುಗಳ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಮತ್ತು ಲೆಕ್ಕಪತ್ರಗಳು ಹಾಗೂ 2004–05ನೇ ಸಾಲಿನ ವಾರ್ಷಿಕ ವರದಿ.
2. ಬೆಂಗಳೂರು ವಿಶ್ವವಿದ್ಯಾಲಯದ 2002–03 ಹಾಗೂ 2003–04ನೇ ಸಾಲುಗಳ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಹಾಗೂ 2003–04ನೇ ಸಾಲಿನ ವಾರ್ಷಿಕ ವರದಿ.
3. ಗುಲ್ಬರ್ಗಾ ವಿಶ್ವವಿದ್ಯಾಲಯದ 2002–03ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ಅನುಸರಣಾ ವರದಿ ಮತ್ತು 2003–04ನೇ ಸಾಲಿನ ವಾರ್ಷಿಕ ವರದಿ.
4. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ 2004–05ನೇ ಸಾಲಿನ ವಾರ್ಷಿಕ ವರದಿ.
5. ಮಂಗಳೂರು ವಿಶ್ವವಿದ್ಯಾಲಯದ 2004–05ನೇ ಸಾಲಿನ ವಾರ್ಷಿಕ ವರದಿ.
6. ಕುವೆಂಪು ವಿಶ್ವವಿದ್ಯಾಲಯದ 2003–04ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

VIII ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) ಅವರು:

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 1950ರ ಅಧಿನಿಯಮ 33(2), 35ರ ಪ್ರಕರಣದ ಮೇರೆಗೆ:

1. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿಯ 2003–04ನೇ ಸಾಲಿನ ವಾರ್ಷಿಕ ಆಡಳಿತ ವರದಿ ಮತ್ತು 2004–05ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಹಾಗೂ ಪರಿಶೋಧನಾ ವರದಿ.
2. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ 2003–04ನೇ ಸಾಲಿನ ವಾರ್ಷಿಕ ಆಡಳಿತ ವರದಿ.
3. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ 2004–05ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಮತ್ತು ಪರಿಶೋಧನಾ ವರದಿ.

4. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರಿನ 2002–03ನೇ ಸಾಲಿನ ವಾರ್ಷಿಕ ಆಡಳಿತ ವರದಿ.

5. ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗುಲ್ಬರ್ಗಾದ 2004–05ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಹಾಗೂ ಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

IX ಶ್ರೀ ರಾಮಚಂದ್ರಗೌಡ (ಯೋಜನೆ, ಸಣ್ಣ ಉಳಿತಾಯ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) ಅವರು:

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

1. ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ ಅಭಿವೃದ್ಧಿ ನಿಗಮ ನಿಯಮಿತದ (ಕಿಯೋನಿಕ್ಸ್) 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುವುದು.

X ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾಂತರ ಕಲ್ಯಾಣ ಸಚಿವರು)ಅವರು:

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

1. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳ ತಃಖ್ತೆಯನ್ನು ಮಂಡಿಸುತ್ತೇನೆ.

XI ಡಾ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) ಅವರ ಪರವಾಗಿ ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

1. ಕರ್ನಾಟಕ ಮ್ಹಾಂಸ ಮತ್ತು ಕೋಳಿ ಮಾರಾಟ ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

2. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ 2001–03 (ದಿನಾಂಕ 05.12.2005 ರಿಂದ 31.03.2003) ನೇ ಸಾಲಿನ ಲೆಕ್ಕಪತ್ರ ವರದಿ ಮತ್ತು 2003–04ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

XII ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) ಅವರು:

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ನೇ ಮತ್ತು 300(5)ನೇ ಪ್ರಕರಣದ ಮೇರೆಗೆ:

1. ಮೈಸೂರು ಜಿಲ್ಲಾ ಪಂಚಾಯತ್‌ನ 2001–02 ಹಾಗೂ 2002–03ನೇ ಸಾಲುಗಳ ವಾರ್ಷಿಕ ಲೆಕ್ಕಪತ್ರ ವರದಿ ಮತ್ತು 2004–05ನೇ ಸಾಲಿನ ವಾರ್ಷಿಕ ಆಡಳಿತ ವರದಿ.

2. ರಾಯಚೂರು ಜಿಲ್ಲಾ ಪಂಚಾಯತ್‌ನ 2001–02ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಹಾಗೂ ತನಿಖಾ ವರದಿ.

3. ಬಳ್ಳಾರಿ ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿ.

4. ಬೀದರ್ ಜಿಲ್ಲಾ ಪಂಚಾಯತ್‌ನ 2003–04ನೇ ಸಾಲಿನ ವಾರ್ಷಿಕ ಆಡಳಿತ ವರದಿ.

5. ಧಾರವಾಡ ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ಲೆಕ್ಕಗಳ ಮೇಲಿನ ಲೆಕ್ಕಪರಿಶೋಧನಾ ವರದಿ ಮತ್ತು 2003–04ನೇ ಸಾಲಿನ ವಾರ್ಷಿಕ ಆಡಳಿತ ವರದಿ.
6. ಬಾಗಲಕೋಟೆ ಜಿಲ್ಲಾ ಪಂಚಾಯತ್‌ನ 2000–01 ಹಾಗೂ 2001–02ನೇ ಸಾಲುಗಳ ವಾರ್ಷಿಕ ಲೆಕ್ಕಪತ್ರ ವರದಿ.
7. ಉಡುಪಿ ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿ.
8. ಶಿವಮೊಗ್ಗ ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿ ಹಾಗೂ 2004–05ನೇ ಸಾಲಿನ ವಾರ್ಷಿಕ ಆಡಳಿತ ವರದಿ.
9. ಗುಲ್ಬರ್ಗಾ ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ವರದಿ.
10. ಕೊಪ್ಪಳ ಜಿಲ್ಲಾ ಪಂಚಾಯತ್‌ನ 2002–03 ಹಾಗೂ 2003–04ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.
11. ಬೆಂಗಳೂರು ನಗರ ಜಿಲ್ಲಾ ಪಂಚಾಯತ್‌ನ 2003–04ನೇ ಸಾಲಿನ ವಾರ್ಷಿಕ ಆಡಳಿತ ವರದಿ ಮತ್ತು 2002–03ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನಾ ವರದಿ.
12. ದಾವಣಗೆರೆ ಜಿಲ್ಲಾ ಪಂಚಾಯತ್‌ನ 2003–04ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು 2004–05ನೇ ಸಾಲಿನ ವಾರ್ಷಿಕ ಆಡಳಿತ ವರದಿ.
13. ವಿಜಾಪುರ ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು 2004–05ನೇ ಸಾಲಿನ ವಾರ್ಷಿಕ ಆಡಳಿತ ವರದಿ.
14. ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಮತ್ತು 2003–04ನೇ ಸಾಲಿನ ವಾರ್ಷಿಕ ಆಡಳಿತ ವರದಿ.
15. ಹಾಸನ ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಮತ್ತು 2004–05ನೇ ಸಾಲಿನ ವಾರ್ಷಿಕ ಆಡಳಿತ ವರದಿ.
16. ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ವರದಿ.
17. ಬೆಳಗಾವಿ ಜಿಲ್ಲಾ ಪಂಚಾಯತ್‌ನ 2003–04 ಹಾಗೂ 2004–05ನೇ ಸಾಲುಗಳ ವಾರ್ಷಿಕ ಆಡಳಿತ ವರದಿ.
18. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ಲೆಕ್ಕ ತನಿಖಾ ವರದಿ.
19. ಕೋಲಾರ ಜಿಲ್ಲಾ ಪಂಚಾಯತ್‌ನ 2004–05ನೇ ಸಾಲಿನ ವಾರ್ಷಿಕ ಆಡಳಿತ ವರದಿ.
20. ಗದಗ ಜಿಲ್ಲಾ ಪಂಚಾಯತ್‌ನ 2001–02ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ವರದಿ.
21. ಕೊಡಗು ಜಿಲ್ಲಾ ಪಂಚಾಯತ್‌ನ 2003–04ನೇ ಸಾಲಿನ ವಾರ್ಷಿಕ ಲೆಕ್ಕ ತಃಖ್ತೆಗಳು.
22. ತುಮಕೂರು ಜಿಲ್ಲಾ ಪಂಚಾಯತ್‌ನ 2004–05ನೇ ಸಾಲಿನ ವಾರ್ಷಿಕ ಆಡಳಿತ ವರದಿ.
23. ಉತ್ತರಕನ್ನಡ ಜಿಲ್ಲಾ ಪಂಚಾಯತ್, ಕಾರವಾರದ 2002–03ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

XIII ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) ಅವರು:

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

1. ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

XIV ಶ್ರೀ ಬಂಡೆಪ್ಪ ಕಾಶೆಂಪೂರ್ (ಕೃಷಿ ಸಚಿವರು) ಅವರು:

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

1. ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತದ 2003–04ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ದಿ ಮೈಸೂರು ಟೊಬ್ಯಾಕೋ ಕಂಪನಿ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
3. ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣಾ ಹಾಗೂ ರಫ್ತು ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
4. ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
5. ಕರ್ನಾಟಕ ತೋಗರಿ ಅಭಿವೃದ್ಧಿ ಮಂಡಳಿ ನಿಯಮಿತದ 2003–04ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

1963ರ ಕೃಷಿ ವಿಶ್ವವಿದ್ಯಾನಿಲಯದ ಕಾಯ್ದೆ ಕಲಂ 38(3)ರ ಮೇರೆಗೆ:

1. ಕೃಷಿ ವಿಶ್ವವಿದ್ಯಾಲಯ, ಧಾರವಾಡದ 2002–03ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಕರಣಾ ವರದಿ.
2. ಕೃಷಿ ವಿಶ್ವವಿದ್ಯಾಲಯ, ಬೆಂಗಳೂರಿನ 2004–05ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

XV ಶ್ರೀ ಬಾಲಚಂದ್ರ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) ಅವರು:

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

1. ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರಿನ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳ ವರದಿಗಳನ್ನು ಮಂಡಿಸುತ್ತೇನೆ.

XVI ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) ಅವರು:

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

1. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

XVII ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) ಅವರ ಪರವಾಗಿ

ಶ್ರೀ ಬಿ. ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಜವಳಿ ಸಚಿವರು) ಅವರು

1956 ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

1. ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆ, ಬೆಂಗಳೂರಿನ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಎಲ್ಲಾ ಕಾಗದ ಪತ್ರಗಳನ್ನು ಮಂಡಿಸಲಾಯಿತು.

(ಗೊಂದಲ)

4) ವಿತ್ತೀಯ ಕಾರ್ಯಕಲಾಪ

2005–06ನೇ ಸಾಲಿನ ಪೂರಕ ಅಂದಾಜುಗಳು (ಎರಡನೆಯ ಕಂತು) (ಮಂಡನೆ ಮತ್ತು ಅಂಗೀಕಾರ)

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು): ಮಾನ್ಯ ಅಧ್ಯಕ್ಷರೆ, 2005–06ನೇ ಸಾಲಿನ ಪೂರಕ ಅಂದಾಜುಗಳನ್ನು (ಎರಡನೆಯ ಕಂತು) ಮಂಡಿಸುತ್ತೇನೆ.

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಗಿದೆ.

(ಗೊಂದಲ)

ಅಧ್ಯಕ್ಷರು: ನಾನು ಈಗ 2005–06ನೇ ಸಾಲಿನ ಪೂರಕ ಅಂದಾಜುಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ.

"ಪ್ರಸ್ತಾವ ಏನೆಂದರೆ, 31.03.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಪೂರಕ ಅಂದಾಜುಗಳ ಅಭಿಯಾಚನೆ ಕ್ರಮಾಂಕ 1 ರಿಂದ 5, 7 ರಿಂದ 22, 24 ರಿಂದ 29 ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ಮತ್ತು ಬಂಡವಾಳ ಖಾತೆಯಲ್ಲಿ ಮಂಜೂರು ಮಾಡುವ ಮೊಬಲಗೂ ಸೇರಿದಂತೆ ಪೂರಕ ಅಂದಾಜುಗಳ ಪಟ್ಟಿಯಲ್ಲಿ ನಮೂದಿಸಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡುವುದು".

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಪೂರಕ ಅಂದಾಜುಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಪೂರಕ ಅಂದಾಜುಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಪೂರಕ ಅಂದಾಜುಗಳು 2005–2006

(ಎರಡನೆಯ ಕಂತು)

ಪ್ರಾರಂಭಿಕ ಟಿಪ್ಪಣಿ

ವಿನಿಯೋಗ ಅಧಿನಿಯಮವು ನೀಡಿದ ಅಧಿಕಾರದ ಮೇರೆಗೆ ಪ್ರಸಕ್ತ ವರ್ಷಕ್ಕಾಗಿ ಒಂದು ವಿಶಿಷ್ಟ ಸೇವೆಗೆ ವೆಚ್ಚ ಮಾಡತಕ್ಕ ಮೊಬಲಗು ಆ ವರ್ಷದ ಉದ್ದೇಶಕ್ಕಾಗಿ ಸಾಕಾಗದಿದ್ದರೆ ಅಥವಾ ಆ ವರ್ಷದ ವಾರ್ಷಿಕ ನಿರೂಪಣೆಯಲ್ಲಿ ಹೇಳಿರದ ಹೊಸಸೇವೆಗಾಗಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಪೂರಕ ಅಥವಾ ಹೆಚ್ಚಿನ ವೆಚ್ಚದ ಅವಶ್ಯಕತೆಯುಂಟಾಗಿದ್ದರೆ ಅಂದಾಜು ಮಾಡಿದ ವೆಚ್ಚದ ಮೊಬಲಗನ್ನು ತೋರಿಸುವ ಮತ್ತೊಂದು ವಿವರಣೆಯನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಲು ಸಂವಿಧಾನದ 205(1)ನೆಯ ಅನುಚ್ಛೇದವು ಅವಕಾಶ ಕಲ್ಪಿಸಿದೆ.

ಸಂವಿಧಾನ ಸದರಿ ಉಪಬಂಧಕ್ಕನುಸಾರವಾಗಿ 163882.45 ಲಕ್ಷ ರೂಪಾಯಿಯ ಒಟ್ಟು ಮೊತ್ತದಷ್ಟು ಪೂರಕ ಅಂದಾಜುಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಲಾಗಿದೆ. ಈ ಅಂದಾಜುಗಳು ವಿಧಾನಮಂಡಲದ ಮುಂದೆ 2005ರ ಆಗಸ್ಟ್ ತಿಂಗಳಲ್ಲಿ ಮಂಡಿಸಲಾದ 2005–06ನೆಯ ಸಾಲಿನ ಪೂರಕ ಅಂದಾಜುಗಳ ಮೊದಲನೆಯ ಕಂತನ್ನು ಮಂಡಿಸಿದ ತರುವಾಯ ಸಾದಿಲ್ವಾರು ನಿಧಿಯಿಂದ ಮಂಜೂರಾದ ಮುಂಗಡಗಳಿಗೆ ಸಂಬಂಧಿಸಿವೆ.

3. ಸಾದಿಲ್ವಾರು ನಿಧಿಯಿಂದ ಮಂಜೂರಾದ ಮತ್ತು ಅದನ್ನು ಭರಿಸಲು ಪೂರಕ ಅಂದಾಜುಗಳಲ್ಲಿ ಸೇರಿಸಲಾದ ಮುಂಗಡವನ್ನು ತೋರಿಸುವ ವಿವರಣೆಯನ್ನು ಅನುಬಂಧದಲ್ಲಿ ತೋರಿಸಲಾಗಿದೆ.

4. ಪೂರಕ ಅಂದಾಜುಗಳಲ್ಲಿ ಒದಗಿಸಿರುವ 163882.45 ಲಕ್ಷ ರೂ.ಗಳಲ್ಲಿ 48134.04 ಲಕ್ಷ ರೂ.ಗಳು ಕೇಂದ್ರ ಸಹಾಯಕ್ಕೆ ಸಂಬಂಧಿಸಿದೆ, 277.28 ಲಕ್ಷ ರೂ.ಗಳು ಜಮೆಗಳಿಗೆ ಮತ್ತು 381.46 ಲಕ್ಷ ರೂ.ಗಳು ಲೆಕ್ಕ ಹೊಂದಾಣಿಕೆಗೆ ಸಂಬಂಧಿಸಿದೆ. ಸಾಮಾನ್ಯ ರಾಜಸ್ವದಿಂದ ಹೊರಹೋಗುವ ನಿವ್ವಳ ಮೊತ್ತ 115089.67 ಲಕ್ಷ ರೂಪಾಯಿ ಮಾತ್ರವಾಗಿದೆ.

ಪೂರಕ ಅಂದಾಜುಗಳು 2005–2006 (ಎರಡನೇ ಕಂತು)

(ಲಕ್ಷ ರೂ.ಗಳಲ್ಲಿ)

ಅಭಿಯಾಚನೆ ಸಂಖ್ಯೆ	ಸೇವೆ ಮತ್ತು ಉದ್ದೇಶ		ಮೊತ್ತ ಪ್ರಭೃತ	ಪುರಸ್ಕೃತ	ಒಟ್ಟು
01	ಕೃಷಿ ಮತ್ತು ತೋಟಗಾರಿಕೆ	ರಾಜಸ್ವ	0.00	1308.36	1308.36
02	ಪಶುಸಂಗೋಪನೆ ಮತ್ತು ಮೀನುಗಾರಿಕೆ	ರಾಜಸ್ವ	0.00	312.61	312.61
03	ಆರ್ಥಿಕ	ರಾಜಸ್ವ	0.00	1036.50	1036.50
		ಬಂಡವಾಳ	0.00	25.00	25.00
04	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	ರಾಜಸ್ವ	475.50	469.04	944.54

(ಲಕ್ಷ ರೂ.ಗಳಲ್ಲಿ)

ಅಭಿಯಾಚನೆ ಸಂಖ್ಯೆ	ಸೇವೆ ಮತ್ತು ಉದ್ದೇಶ		ಮೊತ್ತ		
			ಪ್ರಭೃತ	ಪುರಸ್ಕೃತ	ಒಟ್ಟು
05	ಒಳಾಡಳಿತ ಮತ್ತು ಸಾರಿಗೆ	ರಾಜಸ್ವ	0.00	1683.85	1683.85
07	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್	ಬಂಡವಾಳ	0.00	23576.00	23576.00
08	ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ	ರಾಜಸ್ವ	0.46	363.34	363.80
09	ಸಹಕಾರ	ರಾಜಸ್ವ	0.00	55.00	55.00
		ಬಂಡವಾಳ	0.00	980.50	980.50
10	ಸಮಾಜ ಕಲ್ಯಾಣ	ರಾಜಸ್ವ	0.00	651.55	651.55
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	ರಾಜಸ್ವ	0.00	516.45	516.45
12	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು	ರಾಜಸ್ವ	0.00	285.50	285.50
13	ಆಹಾರ ಮತ್ತು ನಾಗರೀಕ ಸರಬರಾಜು	ರಾಜಸ್ವ	0.00	18002.00	18002.00
14	ಕಂದಾಯ	ರಾಜಸ್ವ	0.00	49554.00	49554.00
15	ಮಾಹಿತಿ ತಂತ್ರಜ್ಞಾನ	ರಾಜಸ್ವ	0.00	318.00	318.00
		ಬಂಡವಾಳ	0.00	610.00	610.00
16	ವಸತಿ	ರಾಜಸ್ವ	0.00	6025.78	6025.78
		ಬಂಡವಾಳ	0.00	4640.00	4640.00
17	ಶಿಕ್ಷಣ	ರಾಜಸ್ವ	0.00	2241.16	2241.16
18	ವಾಣಿಜ್ಯ ಮತ್ತು ಕೈಗಾರಿಕಾ	ರಾಜಸ್ವ	0.00	236.76	236.76
		ಬಂಡವಾಳ	0.00	2821.69	2821.69
19	ನಗರಾಭಿವೃದ್ಧಿ	ರಾಜಸ್ವ	0.00	100.00	100.00
20	ಲೋಕೋಪಯೋಗಿ	ರಾಜಸ್ವ	0.00	20512.92	20512.92
		ಬಂಡವಾಳ	0.00	5103.72	5103.72
21	ಜಲ ಸಂಪನ್ಮೂಲ	ರಾಜಸ್ವ	0.00	371.56	371.56
		ಬಂಡವಾಳ	0.00	6550.00	6550.00
22	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	ರಾಜಸ್ವ	0.00	2751.82	2751.82
24	ಇಂಧನ	ಬಂಡವಾಳ	0.00	5000.00	5000.00

(ಲಕ್ಷ ರೂ.ಗಳಲ್ಲಿ)

ಅಭಿಯಾಚನೆ ಸಂಖ್ಯೆ	ಸೇವೆ ಮತ್ತು ಉದ್ದೇಶ		ಮೊತ್ತ ಪ್ರಭೃತ	ಪುರಸ್ಕೃತ	ಒಟ್ಟು
25	ಕನ್ನಡ ಮತ್ತು ಸಂಸ್ಕೃತಿ	ರಾಜಸ್ವ	0.00	151.70	151.70
26	ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ	ರಾಜಸ್ವ	0.00	188.40	188.40
27	ಕಾನೂನು	ರಾಜಸ್ವ	50.00	40.74	90.74
28	ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ	ರಾಜಸ್ವ	12.94	1166.66	1179.60
29	ಋಣ ಮೇಲುಸ್ತುವಾರಿ	ರಾಜಸ್ವ	39.46	0.00	39.46
		ಬಂಡವಾಳ	5653.48	0.00	5653.48
	ಜುಮ್ಲಾ	ರಾಜಸ್ವ	578.36	108343.70	108922.06
		ಬಂಡವಾಳ	5653.48	49306.91	54960.39
	ಒಟ್ಟು ಜುಮ್ಲಾ		6231.84	157650.61	163882.45

(ಗೊಂದಲ)

ಅಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ ಮೂರು ಗಂಟೆಯವರೆಗೆ ಮುಂದೂಡಲಾಗಿದೆ.

(ಸಭೆಯು 12 ಗಂಟೆ 56 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 3-00 ಗಂಟೆಗೆ ಸೇರಲು ನಿಶ್ಚಯಿಸಿತು)

ಸದನವು ಮಧ್ಯಾಹ್ನ 3-13 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು.

ಅಧ್ಯಕ್ಷರು: ಈಗ, ಮಾನ್ಯ ಉಪ ಮುಖ್ಯಮಂತ್ರಿಗಳು ವಿಧೇಯಕವನ್ನು ಮಂಡಿಸಬೇಕು.

5) ಶಾಸನ ರಚನೆ (ವಿಧೇಯಕದ ಮಂಡನೆ, ಚರ್ಚೆ ಮತ್ತು ಅಂಗೀಕಾರ)

ಕರ್ನಾಟಕ ಧನವಿನಿಯೋಗ ವಿಧೇಯಕ, 2006

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, "2006ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ".

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"2006ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, "2006ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು:ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ–1

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಧನವಿನಿಯೋಗ ವಿಧೇಯಕ, 2006

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, "2006ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಒಟ್ಟು 1638.82 ಕೋಟಿ ರೂಪಾಯಿಗಳ ಪೂರಕ ಅಂದಾಜುಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಲಾಗುತ್ತಿದೆ. 1638.82 ಕೋಟಿ ರೂಪಾಯಿಗಳಲ್ಲಿ 481.34 ಕೋಟಿ ರೂಪಾಯಿಗಳಷ್ಟು ಹಣ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದಿದೆ. ಪೂರಕ ಅಂದಾಜುಗಳಲ್ಲಿ ಕೋರಲಾಗಿರುವ ಪ್ರಸ್ತಾವನೆಯಲ್ಲಿ ಕೆಲವು ಮುಖ್ಯವಾದ ಪ್ರಸ್ತಾವನೆಗಳು ಹೀಗಿವೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆ ಬೇಡಿಕೆಯಲ್ಲಿ ಕೇಂದ್ರ ಸರ್ಕಾರ ಕೃಷಿ ಯಾಂತ್ರೀಕರಣ ಯೋಜನೆಯಲ್ಲಿ ಹೆಚ್ಚುವರಿಯಾಗಿ 10.98 ಕೋಟಿ ರೂಪಾಯಿಗಳಷ್ಟು ಹಣವನ್ನು ಒದಗಿಸಿರುತ್ತಾರೆ. ಈ ಹಣವನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ಬಿಡುಗಡೆ ಮಾಡುವ ಪ್ರಸ್ತಾವವನ್ನು ಮಂಡಿಸಲಾಗಿದೆ. ಬೇಡಿಕೆ ಸಂಖ್ಯೆ: 5 ರಲ್ಲಿ ಗೃಹ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ವೀರಪ್ಪನ್ ಅನ್ನು ಕೊಂದ S.T.F. ಅಧಿಕಾರಿಗಳಿಗೆ ಬಹುಮಾನವನ್ನು ಕೊಡಲು 6 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಇದಲ್ಲದೆ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಯಾವುದೇ ಕಾನೂನಿನ ತೊಂದರೆಯಿಲ್ಲದೆ ಸುಗಮವಾಗಿ ನಡೆಸಿ ಪೊಲೀಸ್ ಇಲಾಖೆಗೆ 9.95 ಕೋಟಿ ರೂಪಾಯಿಗಳನ್ನು ನೀಡಲು ಪ್ರಸ್ತಾವನೆಯನ್ನು ಮಂಡಿಸಲಾಗಿದೆ. ಇದರಲ್ಲಿ bus fare ಹೋಂಗಾರ್ಡ್ಸ್ ಮತ್ತು ಬ್ಯಾರೇಜ್ ಎಕ್ಸ್‌ಪ್ರೆಸ್ ಸಲುವಾಗಿ . . .

(ಮಾನ್ಯ ವಿರೋಧ ಪಕ್ಷದ ನಾಯಕರಾದಿಯಾಗಿ ಕಾಂಗ್ರೆಸ್ ಪಕ್ಷದ ಸದಸ್ಯರು ಮತ್ತು ವಾಟಾಳ್ ಪಕ್ಷದ ಮಾನ್ಯ ವಾಟಾಳ್ ನಾಗರಾಜ್ ಹಾಗೂ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಸದನದ ಬಾವಿಗೆ ಬಂದು ಧರಣಿ ನಿರತರಾಗಿ ಘೋಷಣೆ ಕೂಗುತ್ತಿದ್ದರು.)

(ಗೊಂದಲ)

ಬೇಡಿಕೆ ಸಂಖ್ಯೆ: 7ರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಕೇಂದ್ರ ಸರ್ಕಾರದಿಂದ M.N.P. ಕಾರ್ಯಕ್ರಮದಡಿ ಹೆಚ್ಚುವರಿಯಾದ ಹಣವನ್ನು ಪಡೆಯಲಿರುವುದರಿಂದ ರಾಜ್ಯ ಸರ್ಕಾರದ ಪರವಾಗಿ 86.47 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ನೀಡಲಾಗುತ್ತಿದೆ. ಕೇಂದ್ರ ಸರ್ಕಾರದ ತ್ವರಿತ ನೀರು ಸರಬರಾಜು ಯೋಜನೆಯಲ್ಲಿ ರಾಜ್ಯಸರ್ಕಾರದ ಭಾರತ ನಿರ್ಮಾಣ ಯೋಜನೆಯ ಹಣ ಬಂದಿರುವುದರಿಂದ 199.27 ಕೋಟಿ ರೂಪಾಯಿಗಳನ್ನು ನೀಡಬೇಕಾಗುತ್ತದೆ.

ಇದಲ್ಲದೆ ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸರ್ಕಾರ ಖಾತರಿ ನೀಡುವ ಬದಲು ಆಯವ್ಯಯದ ಮುಖೇನ 40 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಬೇಡಿಕೆ ಸಂಖ್ಯೆ 9ರಲ್ಲಿ ಸಹಕಾರ ಇಲಾಖೆಗೆ ಸಂಬಂಧಿಸಿದ ನಬಾರ್ಡ್ ಸಹಯೋಗದಿಂದ R.I.D.F. ಯೋಜನೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಮಾರುಕಟ್ಟೆಗಳನ್ನು ನಿರ್ಮಿಸಲು 6.11 ಕೋಟಿ ರೂಪಾಯಿಗಳು ಬಂದಿದ್ದು ಅದನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಎಲ್ಲಾ ಕಾರಣಕ್ಕಾಗಿ ನಾನು ಬೇಡಿಕೆಯನ್ನು ಮಂಡಿಸುತ್ತಿದ್ದೇನೆ. ತಾವು ಇದಕ್ಕೆ ಅನುಮತಿ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಇದನ್ನು ನಾನು ಮಂಡಿಸಿದ್ದೇನೆ.

(ಗೊಂದಲ)

ಅಧ್ಯಕ್ಷರು: ದಯಮಾಡಿ ನಿಮ್ಮ ನಿಮ್ಮ ಆಸನಗಳಿಗೆ ಹೋಗಿ. ಈಗ ಅವರು ಧನವಿನಿಯೋಗ ಮಸೂದೆಯನ್ನು ಮಂಡನೆ ಮಾಡಿದ್ದಾರೆ. ತಾವೆಲ್ಲಾ ಅದರಲ್ಲಿ ಭಾಗವಹಿಸಿರಿ. ಅದು ಬಿಟ್ಟು ವೆಲ್‌ಗೆ ಬಂದುಬಿಟ್ಟು ನೀವೆಲ್ಲಾ ಬಾಯಿಗೆ ಬಂದ ರೀತಿಯಲ್ಲಿ ಘೋಷಣೆ ಕೂಗಿಕೊಂಡರೆ ಏನಿದು? ನಾನು ನಿಮಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ನೀವು 30–35 ವರ್ಷ ಈ ಸಭೆಯ ಸದಸ್ಯರಾಗಿದ್ದೀರಿ. ನಾಲ್ಕು ಸಾರಿ ಐದು ಸಾರಿ ಬಂದವರಿದ್ದೀರಿ. ಈ ರೀತಿ ನೀವು ನಡವಳಿಕೆ ಮಾಡುತ್ತಿರುವುದು ಸರಿ ಎಂದು ನೀವು ಆತ್ಮಾವಲೋಕನ ಮಾಡಿಕೊಳ್ಳಿ. ಈಗ ಜನ ನೋಡುತ್ತಿದ್ದಾರೆ. ದಯವಿಟ್ಟು ಬಾಯಿಗೆ ಬಂದಂತೆ ಮಾತನಾಡುವುದಾದರೆ ಇದು ವಿಧಾನಸಭೆ ಆಗುವುದಿಲ್ಲ. ದಯಮಾಡಿ ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಿಮ್ಮ ನಿಮ್ಮ ಆಸನಗಳಿಗೆ ಹೋಗಿ. ಇವರು ಮಸೂದೆ ಮಂಡನೆ ಮಾಡಿದ್ದಾರೆ. ಅದರ ಬಗ್ಗೆ ಚರ್ಚೆ ನಡೆಯುತ್ತಿದೆ. ಚರ್ಚೆಯಲ್ಲಿ ಭಾಗವಹಿಸಿ.

(ಗೊಂದಲ)

(ಬಾವಿಯಿಂದ ಕಾಂಗ್ರೆಸ್ ಸದಸ್ಯರು ಘೋಷಣೆಗಳನ್ನು ಕೂಗುತ್ತಿದ್ದರು.)

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ವಿಧೇಯಕವನ್ನು ಅಂಗೀಕರಿಸಬೇಕೆಂದು ನಾನು ಸೂಚಿಸುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"2006ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು" ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಹಾಗೂ 3

ಪ್ರಸ್ತಾವ ಏನೆಂದರೆ:–

ಅಧ್ಯಕ್ಷರು: "ಖಂಡ 2 ಹಾಗೂ 3, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಹಾಗೂ 3, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, "2006ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

" 2006ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಬಾವಿಯಿಂದ ಕಾಂಗ್ರೆಸ್ ಸದಸ್ಯರು ಘೋಷಣೆಗಳನ್ನು ಕೂಗುತ್ತಿದ್ದರು.)

(ಗೊಂದಲ)

ಅಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಗ್ಗೆ 10–00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 3 ಗಂಟೆ 19 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ: 3ನೇ ಮಾರ್ಚ್ 2006ರ ಶುಕ್ರವಾರದಂದು ಬೆಳಗ್ಗೆ 10–00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ–1

ಕರ್ನಾಟಕ ಧನವಿನಿಯೋಗ ವಿಧೇಯಕ, 2006

(2006ರ ವಿಧಾನಸಭೆಯ ವಿಧೇಯಕ ಸಂಖ್ಯೆ 2)

2005–06ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

2005–06ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ,

1. ಸಂಕ್ಷಿಪ್ತ ಹೆಸರು: ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ ಅಧಿನಿಯಮ 2006 ಎಂದು ಕರೆಯತಕ್ಕದ್ದು.

2. **ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ** 2005–06ನೇ **ಹಣಕಾಸು ವರ್ಷಕ್ಕಾಗಿ ₹6388245000 ರೂಪಾಯಿಗಳ ನೀಡಿಕೆ:–** ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ 2005–06ನೇ ಹಣಕಾಸು ಅವಧಿಯಲ್ಲಿ ಸಂದಾಯ ಮಾಡುವಾಗ ಒದಗಿ ಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಮೊತ್ತದಲ್ಲಿ **ಒಂದು ಸಾವಿರದ ಆರುನೂರ ಮೂವತ್ತೆಂಟು ಕೋಟಿ ಎಂಬತ್ತೆರಡು ಲಕ್ಷದ ನಲವತ್ತೈದು ಸಾವಿರ ರೂಪಾಯಿಗಳಿಗೆ** ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದ್ದು ಎತ್ತು ಉಪಯೋಗಿಸತಕ್ಕದ್ದು.

3. **ಧನವಿನಿಯೋಗ:** ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

(ಲಕ್ಷ ರೂ.ಗಳಲ್ಲಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶ		ಮೀರದ ಮೊಬಲಗು ವಿಧಾನಸಭೆ ಯಿಂದ ಪುರಸ್ಕೃತ ವಾದುದು	ಸಂಚಿತ ನಿಧಿಯಿಂದ ಪ್ರಭೃತ ವಾದುದು	ಒಟ್ಟು
1	2		3	4	5
1	ಕೃಷಿ ಮತ್ತು ತೋಟಗಾರಿಕೆ	ರಾಜಸ್ವ	1308.36	–	1308.36
2	ಪಶುಸಂಗೋಪನೆ ಮತ್ತು ಮೀನುಗಾರಿಕೆ	ರಾಜಸ್ವ	312.61		312.61
3	ಆರ್ಥಿಕ	ರಾಜಸ್ವ	1036.50		1036.50
		ಬಂಡವಾಳ	25.00	–	25.00
4	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	ರಾಜಸ್ವ	469.04	475.50	944.54
5	ಒಳಾಡಳಿತ ಮತ್ತು ಸಾರಿಗೆ	ರಾಜ್ಯಸ್ವ	1683.85	–	1683.85
7	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್	ಬಂಡವಾಳ	23576.00	–	23576.00
8	ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ	ರಾಜಸ್ವ	363.34	0.46	363.80

9	ಸಹಕಾರ	ರಾಜಸ್ವ	55.00	–	55.00
		ಬಂಡವಾಳ	980.50	–	980.50
10	ಸಮಾಜ ಕಲ್ಯಾಣ	ರಾಜಸ್ವ	651.55	–	651.55
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	ರಾಜಸ್ವ	516.45	–	516.45
12	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು	ರಾಜಸ್ವ	285.50	–	285.50
13	ಆಹಾರ ಮತ್ತು ನಾಗರೀಕ ಸರಬರಾಜು	ರಾಜಸ್ವ	18002.00	–	18002.00
14	ಕಂದಾಯ	ರಾಜಸ್ವ	49554.00	–	49554.00
15	ಮಾಹಿತಿ ತಂತ್ರಜ್ಞಾನ	ರಾಜಸ್ವ	318.00	–	318.00
		ಬಂಡವಾಳ	610.00	–	610.00
16	ವಸತಿ	ರಾಜಸ್ವ	6025.78	–	6025.78
		ಬಂಡವಾಳ	4640.00	–	4640.00
17	ಶಿಕ್ಷಣ	ರಾಜಸ್ವ	2241.16	–	2241.16
18	ವಾಣಿಜ್ಯ ಮತ್ತು ಕೈಗಾರಿಕೆ	ರಾಜಸ್ವ	236.76	–	236.76
		ಬಂಡವಾಳ	2821.69	–	2821.69
19	ನಗರಾಭಿವೃದ್ಧಿ	ರಾಜಸ್ವ	100.00	–	100.00
20	ಲೋಕೋಪಯೋಗಿ	ರಾಜಸ್ವ	20512.92	–	20512.92
		ಬಂಡವಾಳ	5103.72	–	5103.72
21	ಜಲ ಸಂಪನ್ಮೂಲ	ರಾಜಸ್ವ	371.56	–	371.56
		ಬಂಡವಾಳ	6550.00	–	6550.00
22	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	ರಾಜಸ್ವ	2751.82	–	2751.82
24	ಇಂಧನ	ಬಂಡವಾಳ	5000.00	–	5000.00
25	ಕನ್ನಡ ಮತ್ತು ಸಂಸ್ಕೃತಿ	ರಾಜಸ್ವ	151.70	–	151.70
26	ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ	ರಾಜಸ್ವ	188.40	–	188.40
27	ಕಾನೂನು	ರಾಜಸ್ವ	40.74	50.00	90.74
28	ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ	ರಾಜಸ್ವ	1166.66	12.94	1179.60
29	ಋಣ ಮೇಲುಸ್ತುವಾರಿ	ರಾಜಸ್ವ	–	39.46	39.46
		ಬಂಡವಾಳ	–	5653.48	5653.48
	ಒಟ್ಟು:	ರಾಜಸ್ವ	108343.70	578.36	108922.06
		ಬಂಡವಾಳ	49306.91	5653.48	54960.39
	ಒಟ್ಟು ಮೊತ್ತ		157650.61	6231.84	163882.45

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2005–06ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿ ಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 205ನೇ (1)(ಎ) ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಬಿ.ಎಸ್. ಯಡಿಯೂರಪ್ಪ
ಉಪ ಮುಖ್ಯಮಂತ್ರಿ ಹಾಗೂ
ಹಣಕಾಸು ಸಚಿವರು

ಟಿ. ರಾಜಣ್ಣ
ಕಾರ್ಯದರ್ಶಿ.

ಕರ್ನಾಟಕ ವಿಧಾನಸಭೆ

ಶುಕ್ರವಾರ 3ನೇ ಮಾರ್ಚ್ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು(ಶ್ರೀಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ:

ವಿಷಯ:– ಧರಣಿ ನಡೆದಾಗ 2005–06ನೇ ಸಾಲಿನ ಧನವಿನಿಯೋಗ ವಿಧೇಯಕವನ್ನು ಮಂಡಿಸಿ ಚರ್ಚೆಗೆ ಅವಕಾಶ ಕೊಡದೆ ಮಂಜೂರಾತಿ ಪಡೆದಿದ್ದರ ಬಗ್ಗೆ ಆಕ್ಷೇಪಣೆ.

ಅಧ್ಯಕ್ಷರು: ಈಗ ವರದಿಗಳನ್ನೊಪ್ಪಿಸುವುದು. ಮಾನ್ಯ ರಮೇಶ್‌ಕುಮಾರ್‌ರವರು.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ. ನಿನ್ನೆ ತಾವು ಇಲ್ಲಿ ಸುಮಾರು ಶಾಸನಗಳನ್ನು ಇಂಟ್ರಡ್ಯೂಸ್ ಮಾಡಿದಾಗ ಅವರು ಧರಣಿಯನ್ನು ಮಾಡಿದರು. ನಾನು ಸೀಟಿನಲ್ಲಿ ನಿಂತುಕೊಂಡು ಕೈಮಾಡಿ ನನಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ, ಅದು ಏನಿದೆ, ಪರ್ಯಾಲೋಚನೆಗೆ ಹಾಕಿದ್ದೀರಿ ಎಂದಾಗ ತಾವು ಒಂದೂ ಈ ಕಡೆ ನೋಡದೆ ಅಂಥ ದೊಡ್ಡ ದೊಡ್ಡ ಘನತರವಾದ ಆರ್ಥಿಕವಾಗಿ ಇಂಪ್ಲಿಕೇಷನ್ಸ್ ಇರತಕ್ಕ ಶಾಸನಗಳನ್ನು ಈ ಸಭೆ ಪಾಸು ಮಾಡುವುದು ಗೌರವ ಬರುತ್ತಾ ಅಧ್ಯಕ್ಷರೇ? ನಾನು ಧರಣಿಯಲ್ಲಿ ಇರಲಿಲ್ಲ.

ಅಧ್ಯಕ್ಷರು: ದಯಮಾಡಿ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ನಾನು repeatedly I requested the members to go to their seats.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ತಮ್ಮ ಗಮನವನ್ನು ಹರಿಸಲಿಕ್ಕೆ ಬಹಳ ಪ್ರಯತ್ನವನ್ನು ಮಾಡಿದೆ.

ಅಧ್ಯಕ್ಷರು: ಯಾರು ನಿಂತಿದ್ದರು, ಯಾರು ಕುಳಿತಿದ್ದರು ಎಂದು ಏನೂ ಗೊತ್ತಾಗಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅಂಥ ಸ್ಥಿತಿಯಲ್ಲಿ ತಾವು ಶಾಸನವನ್ನು ಪಾಸು ಮಾಡಬಹುದಾ?

ಅಧ್ಯಕ್ಷರು: ಆಯಿತು.

ಶ್ರೀ ಧರಂಸಿಂಗ್(ವಿರೋಧ ಪಕ್ಷದ ನಾಯಕರು): ಹಾಗೆ ಆಗುವುದಿಲ್ಲ ಅಧ್ಯಕ್ಷರೇ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಸೀಟಿನಲ್ಲಿ ನಿಂತುಕೊಂಡು ತಮಗೆ ಬೇಡಿದ್ದೇನೆ. ನಾನು ಕೂಗಿದ್ದೇನೆ. ಸಾರ್, ನನಗೆ ಇಂಟ್ರಡ್ಯೂಸ್ ಮಾಡುತ್ತಿರುವ ಬಿಲ್ಲಿನ ಬಗ್ಗೆ ನನಗೆ ಮಾತನಾಡಲು ಅವಕಾಶ ಮಾಡಿಕೊಡಿ ಎಂದು ಕೂಗಿದ್ದೇನೆ. ನೀವು ನಮ್ಮ ಕಡೆ ನೋಡಲೇ ಇಲ್ಲ. ಏನಾಗುತ್ತಿದೆ ಎಂದು ಅಸೆಂಬ್ಲಿಯಲ್ಲಿ ಹೇಳುವ ಹಾಗೆ ಇಲ್ಲ. ಈ ರೀತಿ ಶಾಸನಗಳನ್ನು ಪಾಸು ಮಾಡಿಕೊಟ್ಟರೆ ಹೇಗೆ ಸಾರ್? ಈ ಶಾಸನಸಭೆಯ ಗತಿಯೇನು ಸಾರ್?

ಅಧ್ಯಕ್ಷರು: ಅದಕ್ಕೇನೇ ನಾನು ಎಲ್ಲರಿಗೂ ವಿನಂತಿಯನ್ನು ಮಾಡಿದೆ. ಈಗ ಬೆಳಿಗ್ಗೆ ಏನೋ ಸರಿ ಮಧ್ಯಾಹ್ನ ತಮ್ಮ ತಮ್ಮ ಸೀಟುಗಳಲ್ಲಿ ಕೂತು . . . . . .

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಸೀಟಿಯಲ್ಲಿ ಇದ್ದೆನಲ್ಲಾ ಸಾರ್.

ಅಧ್ಯಕ್ಷರು: ಇಲ್ಲಿ ಕೂತಿರುವವರು ಯಾರು? ನಿಂತಿರುವವರು ಯಾರು ಏನು ಗೊತ್ತಾಗುತ್ತದೆ?

ಶ್ರೀ ಜೆ.ಸಿ. ಮಾಧುಸ್ವಾಮಿ: ಅಂಥ ಟೈಮ್‌ನಲ್ಲಿ ನೀವು ಅಸೆಂಬ್ಲಿಯನ್ನು ನಡೆಸಬಹುದಾ?

(ಗೊಂದಲ)

ಅಧ್ಯಕ್ಷರು: ನಾನು ಅದಕ್ಕೇ ಎಲ್ಲಾ ಸದಸ್ಯರಿಗೂ ವಿನಂತಿ ಮಾಡುವುದು, ತಾವು ಸರಿಯಾದ ರೀತಿಯಲ್ಲಿ ಕಲಾಪಗಳನ್ನು ನಡೆಸುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು.

(ಗೊಂದಲ)

ಅಧ್ಯಕ್ಷರು: ಆಯಿತು, ಈಗ ಮತ್ತೆ ಇದೇ ಗಲಾಟೆಗಳನ್ನು ಮಾಡಿಕೊಂಡು ಕಲಾಪಕ್ಕೆ ಅಡ್ಡಿ ಮಾಡಬೇಕೆಂದರೆ ನನ್ನದೇನೂ ಅಡ್ಡಿ ಇಲ್ಲ. ಕಲಾಪಕ್ಕೆ ಅಡ್ಡಿ ಮಾಡುವುದೇ ನಿಮ್ಮ ದಿನನಿತ್ಯದ ಕೆಲಸಗಳಾದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: 1600 ಕೋಟಿ ರೂ. ಯಾರ ದುಡ್ಡು? ಸದನ ಇರುವುದು ಏಕೆ? 1600 ಕೋಟಿ ರೂಪಾಯಿಗಳನ್ನು without discussion ಪಾಸು ಮಾಡಿಕೊಂಡು ಹೋಗಿಬಿಟ್ಟರೆ ಹೇಗೆ? ಅದಕ್ಕೇನೂ ಅರ್ಥ ಇಲ್ಲವೇ? 1600 ಕೋಟಿ ರೂಪಾಯಿ ಅಪ್ರೊಪ್ರಿಯೇಷನ್ ಬಿಲ್ ಚರ್ಚೆ ಇಲ್ಲದೇ ಸದನದಲ್ಲಿ ತೆಗೆದುಕೊಂಡು ಹೋಗುತ್ತೀರಲ್ಲಾ, ಸದನಕ್ಕೇನಾದರೂ ಘನತೆ ಗೌರವ ಇದೆಯಾ?

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಸೀಟಿನಲ್ಲೇ ಇದ್ದೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹಾಗಾದರೆ ಗಲಾಟೆ ಎಬ್ಬಿಸಿಬಿಡಿ. ಎಲ್ಲಾ ಬಿಲ್‌ಗಳನ್ನೂ ಪಾಸು ಮಾಡಿಕೊಂಡು ಹೋಗಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಮಗೆ ಚರ್ಚೆ ಇಲ್ಲದೇ ಯಾವುದೇ ಬಿಲ್‌ನ್ನು ಪಾಸು ಮಾಡಿಕೊಳ್ಳಬೇಕೆಂಬ ಉದ್ದೇಶ ಇಲ್ಲ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಆ ಸಂದರ್ಭದಲ್ಲಿ House is not in order ಎಂದು ಏಕೆ ಹೇಳಲಿಲ್ಲ?

(ಗೊಂದಲ)

ಅಧ್ಯಕ್ಷರು: ಆಯಿತು. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸಾರ್, ಇದು ನಮಗೆ ಹಕ್ಕುಚ್ಯುತಿಯಾಗುತ್ತಿದೆ. ನಾನು ಇಲ್ಲಿ ನಿಂತುಕೊಂಡು ತಮಗೆ ಕೇಳಿದ್ದೇನೆ.

(ಗೊಂದಲ)

ಅಧ್ಯಕ್ಷರು: ನೀವು ಯಾರು ನಿಂತಿದ್ದರೋ ಯಾರು ಕೂತಿದ್ದರೋ ಏನೂ ಅರ್ಥ ಆಗುತ್ತಾ ಇಲ್ಲ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ಸನ್ಮಾನ್ಯ ಅಧ್ಯಕ್ಷರೆ, My right is infringed. ನನಗೆ ಹಕ್ಕುಚ್ಯುತಿಯಾಗುತ್ತಿದೆ.

(ಗೊಂದಲ)

ಅಧ್ಯಕ್ಷರು: ನೀವೆಲ್ಲಾ ಸಹಕಾರವನ್ನು ಕೊಡದಿದ್ದರೆ ಈ ಕಲಾಪವನ್ನು ಸರಿಯಾದ ರೀತಿಯಲ್ಲಿ ನಡೆಸುವುದು ಕಷ್ಟವಾಗುತ್ತದೆ. ಏನೆಂದರೆ ನಾನು ರಿಪೀಟೆಡ್ ಆಗಿ ರಿಕ್ವೆಸ್ಟ್ ಮಾಡಿದರೂ ಸಹಾ ನೀವ್ಯಾರೂ ಸಹಕಾರವನ್ನು ಕೊಡುತ್ತಿಲ್ಲ.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್(ಶ್ರೀನಿವಾಸಪುರ): ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ. ನಿನ್ನೆ ಈ ಎಲ್ಲಾ ಗಲಾಟೆ, ಗೊಂದಲದ ಮಧ್ಯೆ ಅವರೇನು ಬಿಲ್ ಪಾಸ್ ಮಾಡಿಕೊಂಡರು. The House was in order ಎನ್ನತಕ್ಕದ್ದು ತಮ್ಮ ನಿರ್ಧಾರ ಆಗುವುದಾದರೆ Mr. Madhuswamy was very much in his seat. ಈ ಬಿಲ್ ಮೇಲೆ ನಾನು ಪಾರ್ಟಿಸಿಪೇಟ್ ಮಾಡಬೇಕೆಂದು ಹೇಳಿ ಕೈ ಎತ್ತುತ್ತಾರೆ. ತಮ್ಮ ಗಮನ ಸೆಳೆಯಲಿಕ್ಕೆ ಪ್ರಯತ್ನ ಮಾಡುತ್ತಾರೆ. 1700 ಕೋಟಿ ರೂಪಾಯಿ ಬಿಲ್ ನಾವು ಮಂಜೂರಾತಿ ಕೊಡುವ ವಿಚಾರ ಇತ್ತು. ಅವರಿಗೆ ಅವಕಾಶನೇ ಕೊಡದೇ ಬಿಲ್ ಪಾಸ್ ಮಾಡುತ್ತೀರಿ. ಅಥವಾ if you take a stand that the House was not in order when the Bill was passed you should give your ruling. can the House bypass .....

ಅಧ್ಯಕ್ಷರು: ಮಾನ್ಯ ರಮೇಶ್‌ಕುಮಾರ್ ಅವರೇ, ನೀವೂ ಸೇರಿದಂತೆ ಹಿಂದೆ ಅನೇಕ ಜನ ಈ ಪೀಠದಿಂದ ಕೊಟ್ಟಿರತಕ್ಕ ರೂಲಿಂಗ್ .....

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಾನು ತಮಗೆ ಕೇಳುತ್ತೇನೆ. ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು: ಈ ಪೀಠದಿಂದ ರೂಲಿಂಗ್ ಕೊಟ್ಟಿರತಕ್ಕಂಥ ರೂಲಿಂಗ್ಸ್ ಇವೆ. ಧರಣಿ ಇದ್ದಾಗಲೂ ಸಹ .....

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ಸ್ವಲ್ಪ ಕುಳಿತುಕೊಳ್ಳಿ, ನಾನು ಮಾತನಾಡುತ್ತಿದ್ದೇನೆ. Allow me to speak.

ಒಬ್ಬ ವಿರೋಧ ಪಕ್ಷದ ಸದಸ್ಯರು ತಮ್ಮ ಧ್ವನಿ ಎತ್ತಿ . .

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನೀವು ಸ್ಪೀಕರ್ ಇದ್ದಾಗ ಏನು ಆಗಿತ್ತು?

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ಆಯಿತು, ನಾನು ಸ್ಪೀಕರ್ ಆಗಿದ್ದಾಗ ಗೊತ್ತಿದೆ, ಸ್ವಲ್ಪ ಕುಳಿತುಕೊಳ್ಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ತಾವು ಸ್ಪೀಕರ್ ಆಗಿದ್ದಾಗ ಹಾಸ್ ಆರ್ಡರ್‌ನಲ್ಲಿತ್ತಾ? ತಾವು ಯಾವ ರೀತಿ ಆರ್ಡರ್ಸ್ ಪಾಸ್ ಮಾಡಿದ್ದೀರಿ ಎಂದು ಸ್ವಲ್ಪ ವರದಿ ತರಿಸಿಕೊಂಡು ನೋಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಹೌದು, ಹೌದು, ಆಯಿತು ಕುಳಿತುಕೊಳ್ಳಿ. ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಸಭಾಧ್ಯಕ್ಷರಾಗಿ ಆ ಸ್ಥಾನದಲ್ಲಿ ಕುಳಿತುಕೊಂಡು 1700 ಕೋಟಿ ರೂಪಾಯಿಗೆ ಈ ಸದನ ಮಂಜೂರಾತಿ ಕೊಡುವ ವೇಳೆಗೆ ವಿರೋಧ ಪಕ್ಷದ ಒಬ್ಬ ಜವಾಬ್ದಾರಿಯುತ ಸದಸ್ಯರು, ಒಬ್ಬ ಫ್ಲೋರ್ ಲೀಡರ್ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕು ಎಂದು ಹೇಳಿ ಪ್ರಯತ್ನ ಪಟ್ಟಾಗಲೂ ಕೂಡ ಅದಕ್ಕೆ ಅವಕಾಶ ಕೊಡದೇನೇ ಬಿಲ್ ಪಾಸ್ ಮಾಡಿ ಕೊಡತಕ್ಕದ್ದು ಈ ಸದನದ ಪದ್ಧತಿ ಎಂದು ತಾವು ಹೇಳಿದರೆ . .

ಅಧ್ಯಕ್ಷರು: ಅವಕಾಶ ಕೊಡದೇನೆ ಎನ್ನತಕ್ಕ ಪದವನ್ನು ತಾವು ಉಪಯೋಗಿಸಬಾರದು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಾವು ತಮ್ಮ ಆರ್ಡರನ್ನು ಫೈನಲ್ ಎಂದು ಹೇಳುತ್ತೇನೆ.

ಅಧ್ಯಕ್ಷರು: ಯಾವ ರೀತಿ ಆಗಿತ್ತು ಎಂದರೆ ಏನೂ ಕೇಳಿಸುತ್ತಿರಲಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಸಾರ್ವಜನಿಕರಿಗೆ ಅದರ ಮೇಲೆ ತೀರ್ಮಾನ ಕೊಡುವುದಕ್ಕೆ ಅವಕಾಶ ಕೊಡುತ್ತೇವೆ.

ಅಧ್ಯಕ್ಷರು: ಏನೂ ಕೇಳುತ್ತಿರಲಿಲ್ಲ. ಆ ರೀತಿ ಆಗುವುದಕ್ಕೆ ಯಾರು ಕಾರಣ? ಅದನ್ನೂ ಯೋಚನೆ ಮಾಡಿ. ನೀವು ಇಲ್ಲಿ ಬಂದು ಇಷ್ಟ ಬಂದ ರೀತಿಯಲ್ಲಿ ಕೂಗಾಡಿಕೊಂಡು, ಇಷ್ಟ ಬಂದ ರೀತಿಯಲ್ಲಿ ಸ್ಪೀಕರ್ ಮೇಲೆ ರಾಜ್ಯಪಾಲರ ಮೇಲೆ ಟೀಕೆ ಮಾಡತಕ್ಕದ್ದು ಕಾನೂನು ಮತ್ತು ರಾಜ್ಯಾಂಗ ಬದ್ಧವಾಗಿದೆಯೇ?

(ಗೊಂದಲ)

ಏನೂ ಕೇಳಿಸುತ್ತಿರಲಿಲ್ಲ. ನಿಮಗೆ ಇಷ್ಟ ಬಂದ ರೀತಿಯಲ್ಲಿ ನಾವು ಸದನವನ್ನು ನಡೆಸಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ನೀವು ಆಕ್ಷನ್ ತೆಗೆದುಕೊಳ್ಳಿ ಸಾರ್.

(ಗೊಂದಲ)

Sri K.R. Ramesh Kumar: When the House is not in order, it is your duty to control the House, not my duty.

Mr. Speaker: Every thing was in order. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹಾಗಾದರೆ ನಿಮಗೆ ಇಷ್ಟ ಬಂದ ಹಾಗೆ ಸದನ ನಡೆಸಬೇಕಾ? ನಿಮಗೆ ಇಷ್ಟ ಬಂದ ಹಾಗೆ ಸದನ ನಡೆಸಬೇಕಾ?

ಶ್ರೀ ಜಗದೀಶ್ ಶೆಟ್ಟರ್: ಈ ರೀತಿ ಹಲವಾರು ಘಟನೆಗಳು ನಡೆದಿದ್ದಾವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಈ ಸದನವನ್ನು ಇಚ್ಛೆ ಬಂದ ಹಾಗೆ ನಡೆಸಲು ಆಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಚರ್ಚೆ ಮಾಡಿ ಪಾಸ್ ಮಾಡಲು ಸಿದ್ಧ ಇದ್ದೇವೆ. ಇದು ಬಹಳ ಸಾರ್ವಜನಿಕ ಮಹತ್ವದ ಬಿಲ್ ಮೇಲೆ ಚರ್ಚೆಗೆ ಅವಕಾಶ ಕೊಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ನಿನ್ನೆ ತಾವು ನಡೆದುಕೊಂಡ ರೀತಿ ಸರಿಯಲ್ಲ. ಅತ್ಯಂತ ಅಪಾಯಕಾರಿ ಬೆಳವಣಿಗೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಪ್ರತಿಪಕ್ಷದಲ್ಲಿದ್ದವರು ಸಹಕಾರ ಕೊಡಬೇಕು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಮಾಧುಸ್ವಾಮಿಯವರು ಧರಣಿ ಕುಳಿತಿರಲಿಲ್ಲ. He was in his seat.

(ಗೊಂದಲ)

ಅಧ್ಯಕ್ಷರು: ಇದು ಒಳ್ಳೆಯ ಸಂಪ್ರದಾಯ ಅಲ್ಲ. ಎಲ್ಲಾ ಕೆಟ್ಟ ಸಂಪ್ರದಾಯ ಹಾಕುತ್ತಿರುವವರೇ ನೀವು. ಕೆಟ್ಟ ಸಂಪ್ರದಾಯ ಹಾಕುತ್ತಿರುವವರೇ ನೀವು ಸ್ವಾಮಿ. ನಾನು ರಿಪೀಟೆಡ್ ಆಗಿ ನಿಮ್ಮ ನಿಮ್ಮ ಆಸನಗಳಿಗೆ ಹೋಗಿ ಚರ್ಚೆ ಮಾಡಿ, ಜಗಳ ಮಾಡಬೇಡಿ ಎಂದರೂ ತಾವು ಅವಕಾಶ ಕೊಡಲ್ಲ.

ಶ್ರೀ ವಾಟಾಳ್ ನಾಗರಾಜ್: ತಾವು ಚರ್ಚೆಗೆ ಅವಕಾಶ ಕೊಡಲಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ತಾವು ತಮ್ಮ ಬುದ್ಧಿವಂತಿಕೆಯನ್ನು ಉಪಯೋಗಿಸಿ ಸದನವನ್ನು ಮುಂದೂಡಿ, ಆ ತೀರ್ಮಾನಕ್ಕೆ ಬರಬೇಕಾಗಿತ್ತು. ಇದೇ ಸಂದರ್ಭದಲ್ಲಿ . . . . . .

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಇದೇ ಸಂದರ್ಭದಲ್ಲಿ ಒಟ್ಟಿಗೇ ಬಿಲ್ ಅನ್ನು ತರತಕ್ಕದ್ದು, ಸರ್ಕಾರದ ಎಲ್ಲಾ ಮಸೂದೆಗಳನ್ನು ಒಟ್ಟಿಗೇ ಮಂಡಿಸತಕ್ಕದ್ದು ಇದೆಯಲ್ಲಾ, ಅದು ಸಭೆಗೆ ಘನತೆ ಅಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈ ರೀತಿ ಹಿಂದೆ ಘಟನೆಗಳು ನಡೆದಿವೆ. ಈ ರೀತಿ ಘಟನೆ ನಡೆದಿರುವುದು ಇದೇ ಮೊದಲಲ್ಲ. ಬೇಕಾದಷ್ಟು ಘಟನೆಗಳು ಆಗಿದ್ದಾವೆ.

(ಗೊಂದಲ)

ಶ್ರೀ ಜೆ.ಎ. ಶ್ರೀರಾಮರೆಡ್ಡಿ: ನೀವು x x x ಅಥವಾ x x x

(ಗೊಂದಲ)

ಅಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರೇ, ಬಾಯಿ ಸರಿಯಾಗಿ ಹಿಡಿತ ಇಟ್ಟುಕೊಂಡು ಮಾತನಾಡಿ. ನಿಮ್ಮ ವರ್ತನೆ ಇದೆಯಲ್ಲಾ, ಹದ್ದು ಮೀರಿ ವರ್ತಿಸುತ್ತಿದ್ದೀರಿ. ಇಲ್ಲಿ ಬಂದು ನೀವು ಕೂಗಾಡಿದರೆ ನಿಮಗೆ ಕಿರೀಟ ಬರುತ್ತದೆ ಎಂದು ತಿಳಿದುಕೊಳ್ಳಬೇಡಿ. ಏನೆಂದು ನೀವು ತಿಳಿದುಕೊಂಡಿದ್ದೀರಿ?

(ಗೊಂದಲ)

ನೀವು ನಡೆದುಕೊಳ್ಳುತ್ತಿರುವಂತಹ ರೀತಿ ಸರಿಯಾಗಿದೆಯೇ ಎಂದು ಆತ್ಮಶೋಧನೆ ಮಾಡಿಕೊಳ್ಳಿ. ಕಿರೀಟ ಇದೆ ಎಂದು ನೀವು ತಿಳಿದುಕೊಂಡಿದ್ದೀರಿ.

(ಗೊಂದಲ)

ಈ ಸದನ ನಡೆಯುವುದಕ್ಕೆ ಎಲ್ಲಾ ರೀತಿಯಲ್ಲಿ ಅಡ್ಡಿ ಮಾಡುತ್ತಿದ್ದೀರಿ ನೀವು.

---

x ಈ ಪದಗಳನ್ನು ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಿಮಗೆ x x x

(ಗೊಂದಲ)

ಅಧ್ಯಕ್ಷರು: ಸದನ ನಡೆಯುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಸದನವನ್ನು ನೀವೆಲ್ಲಾ ಗುತ್ತಿಗೆ ತೆಗೆದುಕೊಂಡಿದ್ದೀರೇನು? ನಾನು ರಿಪೀಟೆಡ್ ಆಗಿ ರಿಕ್ವೆಸ್ಟ್ ಮಾಡಿಕೊಂಡಾಗ ಕುಳಿತುಕೊಳ್ಳುವುದಿಲ್ಲ, ನಿಮ್ಮ ಸ್ಥಾನಗಳಿಗೆ ಹೋಗುವುದಿಲ್ಲ. ಚರ್ಚೆಯಲ್ಲಿ ಭಾಗವಹಿಸುವುದಿಲ್ಲ.

(ಗೊಂದಲ)

(ಒಟ್ಟಿಗೇ 20-30 ಸದಸ್ಯರು ಎದ್ದು ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು: ಈಗ ಸದನವನ್ನು ಅರ್ಧ ಗಂಟೆ ಕಾಲ ಮುಂದೂಡಲಾಗಿದೆ.

(ಸದನವು 10.35ಕ್ಕೆ ಮುಂದೂಡಲ್ಪಟ್ಟು ಅರ್ಧ ಗಂಟೆ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು)

ಸದನವು ಪುನಃ ಮಧ್ಯಾಹ್ನ 12.31 ಗಂಟೆಗೆ ಸಮಾವೇಶಗೊಂಡಿತು.

ಸನ್ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದ್ದರು.

† **ಶ್ರೀ ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು):** ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು, ಶ್ರೀರಾಮರೆಡ್ಡಿಯವರು, ರಮೇಶ್‌ಕುಮಾರ್‌ರವರು ಎಲ್ಲರೂ ಕೂಡ ನಿನ್ನೆ ಏನೊಂದು Finance Bill pass ಆಗಿದೆ, ಯಾವ ರೀತಿಯಲ್ಲಿ ತಾವು pass ಮಾಡಿದ್ದೀರಿ, 1700 ಕೋಟಿ ರೂಪಾಯಿಗಳ ಮೊತ್ತದ್ದನ್ನು ಪಾಸ್ ಮಾಡಿದ್ದೀರಿ ಎಂಬ ಬಗ್ಗೆ ಹೇಳಿದ್ದಾರೆ. ಇಲ್ಲಿ ನಾವೆಲ್ಲಾ well ನಲ್ಲಿ ಕುಳಿತಿದ್ದೆವು. ಘೋಷಣೆಗಳನ್ನು ಕೂಗುತ್ತಿದ್ದೆವು. ಮೊಟ್ಟಮೊದಲನೆಯ ಸಲ ಅಲ್ಲ. ಯಾವತ್ತೂ ಕಾರ್ಯಕಲಾಪದಲ್ಲಿ ಭಾಗವಹಿಸತಕ್ಕಂಥ ಕಾಲದಲ್ಲಿ ಸಂವಿಧಾನ ಬಾಹಿರವಾಗಿ ಆಗತಕ್ಕಂಥ ಕೆಲಸಕಾರ್ಯಗಳ ಬಗ್ಗೆ ಎತ್ತಿಹಿಡಿಯತಕ್ಕಂಥದ್ದು ನಮ್ಮ ವಿರೋಧ ಪಕ್ಷದ ಕೆಲಸ. ತಾವೇನು ನಿನ್ನೆ ಇಲ್ಲಿ ತೀರ್ಮ ಕೊಟ್ಟಿದ್ದೀರಿ, ಆ ಮನೆಯಲ್ಲಿ ಒಂದು ತೀರ್ಮ, ತಾವು ಕೊಟ್ಟಿದ್ದಂಥದ್ದು ಒಂದು 175(1)ರಲ್ಲಿ ವಂದನಾ ನಿರ್ಣಯಕ್ಕೆ ಅನುಮತಿ ಕೊಡತಕ್ಕಂಥದ್ದು ಇವತ್ತಿನವರೆಗೂ ಯಾವುದೂ ಇಲ್ಲ, ಎಲ್ಲಿಯೂ ಆಗಿಲ್ಲ. ನಿಮಗೆ ನಾವು ಹೇಳಿದ್ದೆವು, ಈ ತರಹ 1952ರಲ್ಲಿ ಕೋಲ್ಕತ್ತಾ ಅಸೆಂಬ್ಲಿಯಲ್ಲಿ ಆದಂಥ ತೀರ್ಪಿಗೆ ವೆಸ್ಟ್‌ಬೆಂಗಾಲ್ ಹೈಕೋರ್ಟ್ ಈಗಾಗಲೇ ತೀರ್ಮಾನ ಕೊಟ್ಟಿದೆ. 176ರ ಪ್ರಕಾರ ಈ ಸದನದಲ್ಲಿ ವಂದನಾ ನಿರ್ಣಯ ಆಗಲಾರದಂಥ ಪಕ್ಷದಲ್ಲಿ ಆ ಪಕ್ಷದ ಅವಧಿಯಲ್ಲಿ ಬರತಕ್ಕಂಥ ಮುಂದಿನ ಎಲ್ಲಾ ಕಾರ್ಯಕಲಾಪಗಳನ್ನು ಕೂಡ illegal ಆಗುತ್ತದೆಂದು ಅವರು ಹೇಳಿದ್ದಾರೆ. ಇದನ್ನು ನಾವು ತಮ್ಮ ಗಮನಕ್ಕೆ ತಂದಿದ್ದೇವೆ. ನಾವೇನೂ ಹೊಸದಾಗಿ ಗಲಾಟೆ ಮಾಡತಕ್ಕಂಥ ಉತ್ಸಾಹದಲ್ಲಿ ಇಲ್ಲ. ತಮ್ಮ ಕೊಠಡಿಯಲ್ಲೂ ಕೂಡ ಹೇಳಿದ್ದೇವೆ. ಮುಖ್ಯಮಂತ್ರಿಗಳಿಗೂ ಹೇಳಿದ್ದೇವೆ, ಉಪ ಮುಖ್ಯಮಂತ್ರಿಗಳಿಗೂ ಹೇಳಿದ್ದೇವೆ. ಏನೆಂದರೆ, ತಾವು ಕಾನೂನು ಬಾಹಿರವಾದಂಥ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಹೊರಗಡೆ ಹೋಗಿ ಮುಖ್ಯಮಂತ್ರಿಗಳು--ಅಭಿವೃದ್ಧಿ ಕೆಲಸಕಾರ್ಯಗಳಲ್ಲಿ ನಾವು ಸಹಕಾರ ಮಾಡುತ್ತಿಲ್ಲ ಎಂದು ಹೇಳಿದರು. ಯಾವ ಅಭಿವೃದ್ಧಿ ಕೆಲಸಕಾರ್ಯಗಳು? ಇವತ್ತು

† ಈ ನಡವಳಿಯು ಮಾನ್ಯ ಸದಸ್ಯರಿಂದ ಪರಿಷ್ಕರಿಸಲ್ಪಟ್ಟಿದೆ.

ಹಿಂದಿನ ಬಾಗಿಲಿನಿಂದ ತಂದು ಏಕಾಏಕಿ ಎಲ್ಲಾ ಬಿಲ್ ಪಾಸ್ ಮಾಡತಕ್ಕಂಥದ್ದು ತಮ್ಮಿಂದ ಮಾಡಿಸುತ್ತಿದ್ದಾರೆ. ತಮಗೆ ಗೊತ್ತಿರಬಹುದು. ಈ ಸದನದಲ್ಲಿ ಗೋಪಾಲಗೌಡರು ನಮ್ಮ ಅಜೀಜ್ ಸೇಠ್‌ರವರು ಸದಸ್ಯರಾಗಿದ್ದಾಗ ಕೂಡ ಅಂದಿನ ಅಧ್ಯಕ್ಷ ಕೊಠಾವಳೆಯವರಿಗೆ ಕೆಳಗಡೆ ಕೂರಿಸಿ ಮೇಲೆ ಹೋಗಿ ಕುಳಿತು ಕಾರ್ಯಕಲಾಪಗಳನ್ನು ನಡೆಸಿದ್ದಾರೆ ಮತ್ತೆ ಎಂ.ಪಿ. ಪ್ರಕಾಶ್‌ರವರಿಗೂ ಕೂಡ ಗೊತ್ತಿರಬಹುದು. 1983ರಲ್ಲಿ ಕ್ರಾಂತಿ ಸಂಪಾದಕರ ಕೊಲೆ ಆದ ಮೇಲೆ ನಾವು, ಖರ್ಗೆಯವರು, ದಿವಂಗತ ಮಾಣಿಕ್ಯರಾವ್ ಪಾಟೀಲ್‌ರವರು ಸದನದಲ್ಲಿ ಇದ್ದೆವು. ಡಿ.ಬಿ. ಚಂದ್ರೇಗೌಡರು ತಮ್ಮ ಸ್ಥಾನದಲ್ಲಿ ಇದ್ದರು. ನಾವು ಅಲ್ಲಿಯವರೆಗೆ ಹೋಗಿದ್ದೆವು ಮತ್ತು ರಾಮಕೃಷ್ಣ ಶ್ರೀ ಹೆಗಡೆಯವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಕೂಡ ಇಂಥ ಘಟನೆಗಳು ನಡೆದಿವೆ. ಅಂತಹ ಒಂದು ಘಟನೆ ಮತ್ತೆ ಇಲ್ಲಿ ಪ್ರಾರಂಭ ಮಾಡಲಿಕ್ಕೆ ನಿಂತಿದ್ದೇವೆ. ನಾವು ನಮ್ರವಾಗಿ ವಿನಂತಿಸಿದ್ದೇವೆ. ಅಧ್ಯಕ್ಷರು ಸ್ಪಂದಿಸುವುದು ಅವರ ಕರ್ತವ್ಯವಾಗಿದೆ. ಇವತ್ತು ಎಲ್ಲಿ ನಮ್ಮ ಒಂದು ಕಾನೂನು ಬಾಹಿರವಾದಂಥ ಒಂದು ವರ್ತನೆ ತಮ್ಮಿಂದ ಈ ಸರ್ಕಾರ ಮಾಡಿಸುತ್ತಿದೆ. ಮೊನ್ನೆ ಕೂಡ ಒಂದು ದಿನದ ಕಾಲ ಚರ್ಚೆಯಾಯಿತು. ನಿನ್ನೆ ಕೂಡ ಚರ್ಚೆಯಾಯಿತು. ಇವತ್ತು ಸೇರಿದ್ದೆವು. 10.20ಕ್ಕೆ ಅವರು ಬಂದರು. ನಾವು ಎಲ್ಲಾ ವಾದವಿವಾದದ ಮಧ್ಯೆದಲ್ಲಿ ತಾವು ಅರ್ಧ ಗಂಟೆ ಕಾಲ ಸಭೆ ಮುಂದೂಡಿದೆ ಎಂದು ಹೇಳಿದಿರಿ. ನಾವೆಲ್ಲಾ ತಮ್ಮ ಕೊಠಡಿಗೆ ಬಂದಿದ್ದೆವು. ತಮಗೆ ಈ ವರ್ತಮಾನ ಗೊತ್ತಿರಬಹುದು. ಕೊಠಡಿಗೆ ಬಂದು ಇಷ್ಟು ದೀರ್ಘ ಕಾಲ ನಮ್ಮನ್ನು ಹೊರಗಿಟ್ಟು ನಡೆಯತಕ್ಕಂಥದ್ದು ಅಲ್ಲ. ಇವತ್ತಿನ ಸದನದಲ್ಲಿ ಮುಖ್ಯಮಂತ್ರಿಗಳು ಇಲ್ಲ, ಉಪ ಮುಖ್ಯಮಂತ್ರಿಗಳೂ ಇಲ್ಲ. ಇವತ್ತಿನ ದಿವಸ ಏನು ಮೆರವಣಿಗೆ ಆಗಬೇಕಾಗಿದೆಯೋ ಅದನ್ನು ನಾಳೆ ಮಾಡಬಹುದಾಗಿತ್ತು. ಇವತ್ತು ಎಲ್ಲರೂ ಕೂಡ ಮಂಡ್ಯ ಜಿಲ್ಲೆಗೆ ಹೋಗಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದಾರೆ. ಸದನ ನಡೆಯುತ್ತಿದೆ. ಮಹತ್ವದ ಕೆಲಸ ಇದೆ. xxxxxx

ಇದು ಬರತಕ್ಕಂಥ ದಿವಸಗಳಲ್ಲಿ ಕರ್ನಾಟಕದ; ವಿಧಾನಮಂಡಲದ ಇತಿಹಾಸದಲ್ಲಿ ನಿಮಗೆ ಮತ್ತು ನೀವೇನು ಅಧ್ಯಕ್ಷರಾಗಿದ್ದೀರಿ, ಆ ಸ್ಥಾನದಿಂದ ನಿಷ್ಪಕ್ಷಪಾತದಿಂದ ಈ ಸದನವನ್ನು ನಡೆಸಬೇಕಾಗಿದೆ. ಸದನದಲಿ ನಾವೆಲ್ಲಾ ಪ್ರಸ್ತಾಪ ಮಾಡುವಂಥ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾಗಿದೆ. xxxxx

ಈ ಪ್ರಕಾರವಾಗಿ Finance Bill ಕೂಡ ಮಂಡಿಸಲಾಗುತ್ತಿದೆ. 1700 ಕೋಟಿ ರೂಪಾಯಿ ಮಂಜೂರು ಮಾಡಿಕೊಂಡಿದ್ದಾರೆ. ಇವತ್ತು ನಮ್ಮ ವಿರೋಧ ಪಕ್ಷದ ಎಲ್ಲಾ ನಾಯಕರು ಸದಸ್ಯರ ಅಭಿಪ್ರಾಯದ ಬಗ್ಗೆ ನೀವು ವಿಚಾರ ಮಾಡುತ್ತಿಲ್ಲ. ಆಕ್ಷೇಪಣೆ ಎತ್ತಿದ್ದೇವೆ, ಅದಕ್ಕೆ ಸಮರ್ಪಕವಾದಂಥ ಉತ್ತರ ಕೊಡಬೇಕು. ಇವತ್ತು ಬೇರೆ ಪಕ್ಷದವರು ಕೂಡ ಅಧಿಕಾರ ದಾಹದಲ್ಲಿ ಬಂದು ಅಧಿಕಾರದಲ್ಲಿ ಕುಳಿತಿದ್ದಾರೆ. ಯಾವಾಗಲೂ ಕೂಡ ಕಣ್ಣಿಗೆ ಅವರು ಕಾಣಿಸುತ್ತಿಲ್ಲ. ಅಪವಿತ್ರವಾದಂಥ ಈ ದಿವಸ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿದೆ. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಚುನಾವಣೆಯಾದ ಮೇಲೆ ಒಂದು ಜಿಲ್ಲೆಯಲ್ಲೂ ಕೂಡ ಬಿ.ಜೆ.ಪಿ.ಗೆ ಬಹುಮತ ಇಲ್ಲ, ಮತ್ತು ಜನತಾ ದಳ(ಎಸ್)ಗೂ ಕೂಡ ಬಹುಮತ ಇಲ್ಲ. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್‌ನಲ್ಲಿ ಸೋತು ಹೋದ ಮೇಲೆ ಅಪವಿತ್ರವಾದಂಥ ಮೈತ್ರಿ ಇದಾಗಿದೆ ಇದು ಬಹಳ ದಿವಸ ನಡೆಯತಕ್ಕಂಥದ್ದು ಅಲ್ಲ. ಇದಕ್ಕೆ ತಾವು ಭಾಗಿಯಾಗಬಾರದು. ನಾವು ಪದೇ ಪದೇ ಹೇಳಿದ್ದೇವೆ. ಇವತ್ತಿನ ದಿವಸ ತಾವು ಆ ಪೀಠದಲ್ಲಿ

x ಈ ಪದಗಳನ್ನು ಮಾನ್ಯ ಸಭಾಧ್ಯಕ್ಷರವರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಕುಳಿತಿದ್ದೀರಿ. ಆ ಪೀಠದಿಂದ ಜನಾಭಿಪ್ರಾಯ ಮೂಡಿಸತಕ್ಕಂಥ ರೀತಿಯಲ್ಲಿ ನಿಷ್ಪಕ್ಷಪಾತದ ತೀರ್ಮಾನವನ್ನು ತಾವು ಕೊಡಬೇಕಾಗಿದೆ. ಹಾಗೆ ತೀರ್ಮಾನ ಕೊಡತಕ್ಕಂಥ ಸಂದರ್ಭದಲ್ಲಿ ನಾವು ವಿರೋಧ ಪಕ್ಷದಲ್ಲಿ ಕುಳಿತು ಆಕ್ಷೇಪ ಎತ್ತಿದ್ದೇವೆ. ಮಾಧುಸ್ವಾಮಿಯವರು ಹೇಳಿದರು. ಅವರು well ನಲ್ಲಿ ಕುಳಿತಿರಲಿಲ್ಲ. ನನಗೆ ಅವಕಾಶ ಕೊಡಬೇಕೆಂದು ಅವರು ಕೇಳಿದರು. ಅದಕ್ಕೆ ತಾವು ಗಮನ ಕೊಡಲಿಲ್ಲ. . . . . ಮತ್ತು ಇದರ ಬಗ್ಗೆ ನಾವು ಹಾಗೆಯೇ ಆಕ್ಷೇಪವನ್ನು ಮುಂದುವರೆಸಿಕೊಂಡು ಹೋಗಬೇಕೆನ್ನತಕ್ಕಂಥ ಭಾವನೆ ಇದೆ. ಅದಕ್ಕೆ ತಾವು ಸರಿಯಾದ ರೀತಿಯಲ್ಲಿ ನಡೆಸಿ. ಇವತ್ತು ಮಂಡ್ಯದಲ್ಲಿ ಮುಖ್ಯಮಂತ್ರಿಗಳಿಗೆ ಅಥವಾ ಆ ಹೌಸ್‌ನಲ್ಲಿರುವ ಉಪ ಮುಖ್ಯಮಂತ್ರಿ ಕೇಳಿ ತಾವು ನಿರ್ಣಯಿಸತಕ್ಕದ್ದು ಅಲ್ಲ. You have to take your own decision. ನಿಷ್ಪಕ್ಷಪಾತದಿಂದ ತಾವು ಅದರ ಬಗ್ಗೆ ನಿರ್ಣಯ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಇವತ್ತು ಆಡಳಿತ ಪಕ್ಷವು ವಿರೋಧ ಪಕ್ಷದವರಿಗೆ ಸಹಕಾರ ಕೊಡಲಿಕ್ಕೆ ತಯಾರಿದ್ದೇವೆ ಮತ್ತು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯ ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ನಾವು ತಯಾರಿದ್ದೆವು. ಅವರು ಅಸಹಕಾರ ಕೊಟ್ಟರು. well ನಲ್ಲಿ ಬಂದರು protest ಮಾಡಿದರು.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ಜಗದೀಶ್ ಶೆಟ್ಟರ್‌ರವರೆ, ನೀವೂ . . . . .

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನನಗೂ ಮಾತನಾಡಲಿಕ್ಕೆ ಹಕ್ಕಿದೆ, ಮಾತನಾಡುತ್ತೇನೆ. ನೀವು ಆಮೇಲೆ ಮಾತನಾಡಿ.

(ಗೊಂದಲ)

ಶ್ರೀ ಜಗದೀಶ್‌ಶೆಟ್ಟರ್: ಚರ್ಚೆ ಮಾಡಲಿಕ್ಕೆ ಸಹಕಾರ ಕೊಡಲಿಕ್ಕೆ ನಾವು ತಯಾರಿದ್ದೇವೆ. ಅವರು ಚರ್ಚೆ ಮಾಡಲಿಕ್ಕೆ ತಯಾರಿದ್ದರೆ, ಚರ್ಚೆ ಮಾಡಲಿಕ್ಕೆ ನಾವು ತಯಾರಿದ್ದೇವೆ. ಅವರೇ ಚರ್ಚೆ ಮಾಡಲಿಕ್ಕೆ ತಯಾರಾಗಲಾರದೆ . . . . . .

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಾವು ಚರ್ಚೆ ಬೇಡವೆಂದೆವೆ?

ಅಧ್ಯಕ್ಷರು: ಅವರು ಮಾತನಾಡಲಿ. ಕುಳಿತುಕೊಳ್ಳಿ Let him speak.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಿಮ್ಮ ಕೊಠಡಿಯಲ್ಲಿ ಸಂಧಾನಕ್ಕೆ ಕರೆದಿದ್ದಿರಿ. ಚರ್ಚೆಯನ್ನು ನಾವು ಬೇಡವೆಂದೆವೆ? ಏಕೆ ಹೀಗೆ ಮಾತನಾಡುತ್ತಾರೆ?

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ವೆಲ್ ನೊಳಗೆ ಯಾರು ಬಂದಿದ್ದು? ವೆಲ್ ನೊಳಗೆ ಬನ್ನಿ ಎಂದು ಹೇಳಿದೆವಾ? ಚರ್ಚೆ ಮಾಡಿ ಎಂದು ಹೇಳಿದರೆ ಚರ್ಚೆ ಮಾಡುವುದಿಲ್ಲ. ವೆಲ್ ನೊಳಗೆ ಬಂದರು ಅತ್ಯಂತ ಹಿರಿಯ ಮುಖಂಡರಾದ ನೀವು ಈ ರೀತಿ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಪ್ರತಿಪಕ್ಷದ ಸದಸ್ಯರು ಅನೈತಿಕ ಸರ್ಕಾರ ಎಂದು ಹೇಳಿದರು. ಏನು ಅನೈತಿಕ ಸರ್ಕಾರ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸದನದಲ್ಲಿ ಇವರು ಧರಣಿ ಮಾಡುತ್ತಾರೆ. ಸದನದಲ್ಲಿ ಚರ್ಚೆ ಮಾಡಲಿಕ್ಕೆ ನಿಮಗೆ ಮನಸ್ಸಿಲ್ಲ ಎನ್ನುವುದು ಸ್ಪಷ್ಟವಾಗಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇವರಿಗೆ ಚರ್ಚೆ ಮಾಡಲಿಕ್ಕೆ ಮನಸ್ಸಿಲ್ಲ. ಚರ್ಚೆ ಮಾಡಲಿಕ್ಕೆ ವಿಷಯಗಳೂ ಇಲ್ಲ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಮಹತ್ವದ Appropriation Bill ಗೆ ಇವರು ಬಹಿಷ್ಕಾರ ಹಾಕಿ well ಒಳಗೆ ಕುಳಿತುಕೊಂಡಿದ್ದಾರೆ. ಈಗ ಹೇಗೆ pass ಮಾಡಿಕೊಂಡಿರಿ ಎಂದು ಕೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಈಗ ಒಬ್ಬೊಬ್ಬರಾಗಿ ಮಾತನಾಡಿ.

(ಗೊಂದಲ)

ಶ್ರೀ ಆಗರ ಜ್ಞಾನೇಂದ್ರ: ಅವರು ಬಹಳ ಹಿರಿಯ ಮುಖಂಡರು, ಇದು ಸದನದೊಳಗಡೆ ಅವರು ಮಾತನಾಡುವ ರೀತಿಯೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಸಭಾಧ್ಯಕ್ಷರೆ, ನಾನು ಮಾತನಾಡುತ್ತಿದ್ದೇನೆ. ನನಗೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಮತ್ತೆ ನಿಮಗೆ threatening ಹಾಕುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಆಮೇಲೆ ಖರ್ಗೆಯವರೂ ಮಾತನಾಡಲಿ. ಉಳಿದ ಸದಸ್ಯರೂ ಮಾತನಾಡಲಿ. ಈಗ ನಾನು ಮಾತನಾಡುತ್ತಿದ್ದೇನೆ.

ಅಧ್ಯಕ್ಷರು: ಈಗ ನನ್ನ ವಿನಂತಿ ಏನೆಂದರೆ, ಯಾರ್ಯಾರನ್ನು ನಾನು ಕರೆದು ನನ್ನ permission ತೆಗೆದುಕೊಂಡು ಮಾತನಾಡುತ್ತಿದ್ದರೆ ಮಧ್ಯೆ ಮಧ್ಯೆ ಪ್ರವೇಶ ಮಾಡತಕ್ಕಂಥದ್ದು ಸರಿಯಲ್ಲ. ಅದರಿಂದ ಈ ಸದನದ ಕಲಾಪಗಳು ಸರಿಯಾಗಿ ನಡೆಯುವುದಿಲ್ಲ. ಒಂದು ಸಮಯ ಅವರು ಮಾತನಾಡಿದಾಗ ಏನಾದರೂ Point of Order ಇದ್ದರೆ ಪ್ರಸ್ತಾಪ ಮಾಡಬಹುದು. ಮಾನ್ಯ ಮಾಧುಸ್ವಾಮಿಯವರೆ, ನಾನು ಹೇಳುತ್ತಾ ಇದ್ದರೂ ಕೂಡ ನೀವೇ ಮಾತನಾಡುತ್ತಿದ್ದರೆ ಏನಿದು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಏನು ಹೇಳಬಾರದು? . . .

(ಗೊಂದಲ)

ಅಧ್ಯಕ್ಷರು: ಮಾನ್ಯ ಜಗದೀಶ್ ಶೆಟ್ಟರ್‌ರವರೇ, ದಯಮಾಡಿ ಕುಳಿತುಕೊಳ್ಳಿ. ದಯಮಾಡಿ ಕುಳಿತುಕೊಳ್ಳಿ. ನಾನು ಮಾತನಾಡುತ್ತಿದ್ದೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನೀವೆಲ್ಲರೂ ಮಾತನಾಡುವವರೆಗೆ ನಾವು wait ಮಾಡಬೇಕು. ನಾವೇನೂ points ಹೇಳಬಾರದೇ?

(ಗೊಂದಲ)

ಅಧ್ಯಕ್ಷರು: ನಾನು ನಿಮಗೆ permission ಕೊಟ್ಟಿಲ್ಲ. ದಯಮಾಡಿ ಕುಳಿತುಕೊಳ್ಳಿ. ಈಗ ನಾನು ಯಾರಿಗೆ ಅನುಮತಿ ಕೊಟ್ಟಿದ್ದೇನೆ ಅವರು ಮಾತ್ರ ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ್: ಒಂದ್ನಿಮಿಷ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ ಸ್ವಾಮಿ. ನಾನು ಹೇಳುತ್ತಿದ್ದೇನೆ. ನೀವು ಕುಳಿತುಕೊಳ್ಳಿ. ನನ್ನ ಅನುಮತಿ ಪಡೆದು ಮಾತನಾಡಿ. ಅವರು ಮಾತನಾಡುವಾಗ ಬೇರೆಯವರು ಅಡ್ಡವಾಗಿ ಮಾತನಾಡಬೇಡಿ. ಅವರು ಏನು ಹೇಳಬೇಕೋ ಹೇಳಲಿ. ಅದಕ್ಕೆ ಅನಂತರ permission ತೆಗೆದುಕೊಂಡು ಮಾತನಾಡಿ. ಆ ತರಹ ಆದರೆ ಕಲಾಪಗಳನ್ನು ಸರಾಗವಾಗಿ ನಡೆಸುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲದಿದ್ದರೆ ಎಲ್ಲರೂ ಕುಳಿತುಕೊಂಡು ಮಾತನಾಡಿದರೆ ಯಾರು ಏನು ಮಾತನಾಡಿದರು ಎಂಬುದು ಗೊತ್ತಾಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ ಸ್ವಾಮಿ.

ಶ್ರೀ ವಾಟಾಳ್ ನಾಗರಾಜ್: ಮಂತ್ರಿಗಳಾದವರು ಕೊನೆಯಲ್ಲಿ ಮಾತನಾಡಿ.

ಅಧ್ಯಕ್ಷರು: ನಾಗರಾಜ್‌ರವರೇ, ಕುಳಿತುಕೊಳ್ಳಿ, ನಾನು ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ತಾವು ತಾವೇ ಎದ್ದುನಿಂತುಕೊಂಡು ಅಡ್ಡವಾಗಿ ಮಾತನಾಡತಕ್ಕಂಥ ಈ ಒಂದು ಸಂಪ್ರದಾಯ ಏನು ಬೆಳೆದುಕೊಂಡು ಬಂದಿದೆ, ಅದನ್ನು ಇನ್ನು ಮೇಲೆ ನಿಲ್ಲಿಸಿರಿ. ಸರಾಗವಾಗಿ ಕಲಾಪಗಳು ನಡೆಯುವುದಕ್ಕೆ ಅವಕಾಶ ಮಾಡಿ ಕೊಡಿ. ಈಗ ಜಗದೀಶ್ ಶೆಟ್ಟರ್‌ರವರೇ, ನೀವು ಮುಗಿಸಿದ್ದಿರಾ? ಇಲ್ಲವೇ, ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೆ, ನಮ್ಮದು ಕೇಳಿದ ಮೇಲೆ ಅವರು ಮಾತನಾಡಲಿ.

ಅಧ್ಯಕ್ಷರು: ಇಲ್ಲ ಅವರು ಮಾತನಾಡಲಿ ನಂತರ ನೀವು ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಇವತ್ತು ನಾವು ಆಡಳಿತ ಪಕ್ಷದವರು ಪ್ರತಿಪಕ್ಷದವರಿಗೆ ಯಾವುದೇ ವಿಷಯದ ಬಗ್ಗೆ ಅದರಲ್ಲೂ ರಾಜ್ಯಪಾಲರ ಭಾಷಣ ಅದರ ಮೇಲೆ ವಂದನಾರ್ನಿರ್ಣಯದ ಬಗ್ಗೆ ಸಾಕಷ್ಟು ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಟ್ಟಿದಿರಿ.

(ಗೊಂದಲ)

ಅಧ್ಯಕ್ಷರು: ಅಡ್ಡ ಮಾತನಾಡಬೇಡಿ. ಅವರು ಏನು ಹೇಳುತ್ತಾರೆ ಹೇಳಲಿ.

ಶ್ರೀ ಜಗದೀಶ್ ಶೆಟ್ಟರ್: ಅದರ ಬಗ್ಗೆನೇ ಅದು ಸಂವಿಧಾನಬದ್ಧವಾಗಿ ಇದೆಯೋ ಅಥವಾ ಇಲ್ಲವೋ ಎನ್ನುವಂಥದ್ದರ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೀರಿ.

(ಗೊಂದಲ)

ಅಧ್ಯಕ್ಷರು: ಕುಳಿತುಕೊಳ್ಳಿ, ಅವರು ಏನು ಹೇಳುತ್ತಾರೆ ಹೇಳಲಿ, ನಿಮಗೆ ಎಷ್ಟು ಹೇಳಿದರೂ ಅಷ್ಟೇ. .

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಸಭಾಧ್ಯಕ್ಷರು ಒಂದು ತೀರ್ಪನ್ನು ಕೊಟ್ಟಿದ್ದಾರೆ. ಸಭಾಧ್ಯಕ್ಷರು ತೀರ್ಪು ಏನು ಕೊಟ್ಟಿದ್ದಾರೆ, ಅದನ್ನು ರೆವ್ಯೂ ಮಾಡಬೇಕು ಎನ್ನುವಂಥ ವಿನಂತಿಯನ್ನು ನೀವು ಮಾಡಿಕೊಂಡಿದ್ದೀರಿ. ಇದಾದ ಮೇಲೆ ಅದರ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ಬಹುಶಃ ನಾನು ಕರ್ನಾಟಕದ ವಿಧಾನ ಸಭೆಯ ಇತಿಹಾಸದಲ್ಲಿ ನೋಡಿದ್ದೇನೆ, ಸಭಾಧ್ಯಕ್ಷರ ಒಂದು ಪೀಠಕ್ಕೆ ಬಹಳ ಒಂದು ಗೌರ ಇದೆ. ಅದು ಸಂವಿಧಾನಬದ್ಧವಾದಂಥ ಆ ಪೀಠ, ಸಭಾಧ್ಯಕ್ಷರ ಪೀಠಕ್ಕೆ ಗೌರವ ಇರುವಂಥದ್ದು, ಮತ್ತು ಕರ್ನಾಟಕದ ಇತಿಹಾಸದಲ್ಲಿ:

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಇದರ ಬಗ್ಗೆನೇ ಚರ್ಚೆಯಾಗಲಿ.

ಅಧ್ಯಕ್ಷರು: ರೀ ಕುಳಿತುಕೊಳ್ಳಿ, ನಾನು ಅಡ್ಡ ಮಾತನಾಡಬೇಡಿ ಎಂದರೂ ನೀವು ಏಕೆ ಮಾತನಾಡುತ್ತೀರಿ? Let him finish. ಅಡ್ಡವಾಗಿ ಮಾತನಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ನೀವು ಅವರು ಮಾತನಾಡಿದ ಮೇಲೆ ಅವರಿಗೆ ಉತ್ತರ ಕೊಡಿ. ಈಗ ದಯಮಾಡಿ ಕುಳಿತುಕೊ

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನೀವು ಡೈರೆಕ್ಷನ್ ಮಾಡಿದ ಹಾಗೆ ನಾವು ಮಾತನಾಡಬೇಕಾ? ನೀವು ಎಲ್ಲಾ ವಿಷಯ ಮಾತನಾಡಬಹುದು; ಆದರೆ ನಾವು ಲಿಮಿಟೇಷನ್ ಹಾಕಿಕೊಂಡು ಮಾತನಾಡಬೇಕು.

ಅಧ್ಯಕ್ಷರು: ಕುಳಿತುಕೊಳ್ಳಿ. ಎಷ್ಟು ಹೇಳಿದರೂ ಪ್ರಯೋಜನವಿಲ್ಲವಲ್ಲಾ ಅವರು ಮಾತನಾಡುವಾಗ ಅಡ್ಡ ಮಾತನಾಡಬೇಡಿ, ಎಲ್ಲಾ ಎದ್ದು ನಿಂತುಕೊಂಡು ಮಾತನಾಡಬೇಡಿ, ಒಬ್ಬೊಬ್ಬರಾಗಿ ಮಾತನಾಡಿ, ಈ ರೀತಿ ಆದರೆ ಹೇಗೆ? . . ದಯಮಾಡಿ ರೀ ಆಂಜನೇಯರವರೇ, ಕುಳಿತುಕೊಳ್ಳಿ . . ಅವರಿಗೆ ನಾನು ಅವಕಾಶ ಕೊಟ್ಟಿದ್ದೇನೆ ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್: ತಾವು ಮಾನ್ಯ ರಾಜ್ಯಪಾಲರ ಭಾಷಣ ಮತ್ತು ವಂದನಾ ನಿರ್ಣಯದ ಬಗ್ಗೆ ತಾವು ತೀರ್ಪು ಕೊಟ್ಟಿದ್ದೀರಿ; ಅವರು ಆ ತೀರ್ಪಿನ ಬಗ್ಗೆ ರೆವ್ಯೂ ಮಾಡಬೇಕೆನ್ನುವ ಮನವಿಯನ್ನೂ ಕೂಡ ಮಾಡಿದರು. ಆಮೇಲೂ ತಮ್ಮ ಅಭಿಪ್ರಾಯವನ್ನು ತಾವು ಹೇಳಿದಿರಿ. ನಂತರ ಆಯವ್ಯಯ ಮಂಡನೆ. ಮಾನ್ಯ ಉಪ ಮುಖ್ಯಮಂತ್ರಿಗಳು ಆಯವ್ಯಯವನ್ನು ಮಂಡನೆ ಮಾಡಿದರು. ಆಯವ್ಯಯದ ಬಗ್ಗೆ ಫೈನಾನ್ಸ್ ಬಿಲ್ ಬಗ್ಗೆ ಮಂಡನೆ ಮಾಡಿದರು. ಅಪ್ರೋಪ್ರಿಯೇಷನ್ ಬಿಲ್. ಅನ್ನೇ ಅವರು ಮಂಡನೆ ಮಾಡಿದರು.

ಅಧ್ಯಕ್ಷರು: ಗಲಾಟೆ ಮಾಡಬೇಡಿ, ಅವರು ಏನು ಹೇಳಬೇಕೋ ಹೇಳಲಿ.

ಶ್ರೀ ಜಗದೀಶ್ ಶೆಟ್ಟರ್: ಅವರೇನು ರೆವ್ಯೂ ಬಗ್ಗೆ ವಿನಂತಿ ಮಾಡಿಕೊಂಡರು. ತಾವು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದಿರಿ. ಅದಾದ ನಂತರ ವಿಧಾನ ಸಭೆಯ ಮುಂದಿನ ನಡವಳಿಕೆಯ ಬಗ್ಗೆ ಅವರು ಸಹಕಾರ ಕೊಟ್ಟು ಚರ್ಚೆಯಲ್ಲಿ ಭಾಗವಹಿಸಬಹುದಾಗಿತ್ತು. ಅವರು ಅದನ್ನು ಮಾಡಲಿಲ್ಲ. ಆಮೇಲೆ ಒಂದು ಪ್ರಶ್ನೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು, ಮತ್ತು ಇನ್ನಿತರ ಹಿರಿಯ ಸದಸ್ಯರು ಒಂದು ಪ್ರಶ್ನೆ ಎತ್ತಿದರು. . ಏನೆಂದರೆ, ಪ್ರತಿಪಕ್ಷದವರು ವೆಲ್‌ನಲ್ಲಿ ಇದ್ದಂಥ ಸಂದರ್ಭದಲ್ಲಿ ಈ ರೀತಿಯಾದಂಥ ಬಿಲ್‌ಗಳನ್ನು, ಅಪ್ರೋಪ್ರಿಯೇಷನ್ ಬಿಲ್‌ಗಳನ್ನಾಗಲಿ, ವಂದನಾನಿರ್ಣಯವನ್ನಾಗಲಿ ಅದನ್ನು ಪಾಸ್ ಮಾಡಬಾರದಾಗಿತ್ತು. ನಮಗೆ ಚರ್ಚೆಗೆ ಅವಕಾಶ

ಕೊಡಬೇಕಾಗಿತ್ತು ಎನ್ನುವ ಮಾತನ್ನು ಇವತ್ತು ಹಿರಿಯ ಸದಸ್ಯರು ಮಾತನಾಡಿದ್ದಾರೆ. ಇದರ ಬಗ್ಗೆ ಯಾವ ಪರಿಸ್ಥಿತಿ ಇತ್ತು ಎಂಬುದನ್ನು ನೋಡಬೇಕು. ಮಾನ್ಯ ಸಭಾಧ್ಯಕ್ಷರು ಆ ಸಂದರ್ಭದಲ್ಲಿ ಬಿಲ್‌ನ್ನು ಪಾಸ್ ಮಾಡಲಿಕ್ಕೆ ಅವಕಾಶವನ್ನು ಕೊಟ್ಟಿರಿ, ಆ ಒಂದು ಸಂದರ್ಭವನ್ನು ನೋಡಬೇಕು, ಇದೇನೂ ಕರ್ನಾಟಕದ ವಿಧಾನ ಸಭೆಯ ಇತಿಹಾಸದಲ್ಲಿ ಮೊಟ್ಟ ಮೊದಲನೇ ನಡೆದಂಥ ಘಟನೆ ಅಲ್ಲ. ಹಿಂದೆಯೂ 21–1–2002 ರಂದು 28 Motion moved and 30th Motion adopted without discussion. 30–1–2002, ರಂದು ಆ ರೀತಿ ಪ್ರತಿಪಕ್ಷದವರು ವೆಲ್‌ನಲ್ಲಿದ್ದಂಥ ಸಂದರ್ಭದಲ್ಲಿ ಅವತ್ತು ಸಹ ಮೋಷನ್ ಮೂವ್ ಆಗಿ ಪಾಸಾಗಿದೆ. ಆಮೇಲೆ 2004–05, 30–7–04 ಅವತ್ತು ವೋಟ್ ಅನ್ ಅಕೌಂಟ್ ಅವತ್ತೇನು ಬಜಟ್ ಮಂಡನೆ ಮಾಡಿದ್ದರು ಆ ಸಂದರ್ಭದಲ್ಲಿ ಸಹಿತ ಪ್ರತಿಪಕ್ಷದವರು ವೆಲ್‌ನಲ್ಲಿದ್ದರು, ಆ ಸಂದರ್ಭದಲ್ಲಿ ಕೂಡ ವೆಲ್‌ನಲ್ಲಿದ್ದಂಥ ಸಂದರ್ಭದಲ್ಲೂ ಕೂಡ ಬಜೆಟ್‌ನ್ನು ಪಾಸ್ ಮಾಡಲಾಯಿತು. ಹೀಗಾಗಿ ಇದೇನೂ ಹೊಸ ಸಂಪ್ರದಾಯ, ಅಥವಾ ಕಾನೂನು ವಿರೋಧ, ಸಂವಿಧಾನ ವಿರೋಧ ಏನೂ ಅಲ್ಲ. ಹೀಗಾಗಿ ಮಾನ್ಯ ಪ್ರತಿಪಕ್ಷದ ನಾಯಕರಾದಂಥ ಶ್ರೀಮಾನ್ ಧರ್ಮಸಿಂಗ್‌ರವರು, ಹಲವಾರು ವಿಷಯಗಳ ಬಗ್ಗೆ ಹೇಳಿದರು, ಇದೊಂದು ಅನೈತಿಕ ಸರ್ಕಾರ, ಅಪವಿತ್ರ ಸರ್ಕಾರ, ಅದನ್ನು ಜನರು ತೀರ್ಮಾನ ಮಾಡುತ್ತಾರೆ, ಹಿಂದೆ ಯಾವ ಸರ್ಕಾರ ಇತ್ತು, ಜನತೆ ಅದರ ಬಗ್ಗೆ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ, ಇವತ್ತೇನು ಒಳ್ಳೆಯ ರೀತಿಯಿಂದ ನಾವು ಸರ್ಕಾರ ನಡೆಸುತ್ತಿದ್ದೇವೆ; ಬಹುಶಃ ನನಗೆ ಅನ್ನಿಸುತ್ತದೆ ಈ ರೀತಿ ಕೋ–ಆರ್ಡಿನೇಟ್ ಆಗಿ ಬಹಳ ಸೌಹಾರ್ದಯುತವಾಗಿ ಇವತ್ತೇನು ಸರ್ಕಾರ ಇದೆ, ಇವತ್ತು ಜೆಡಿಎಸ್ ಮತ್ತು ಭಾರತೀಯ ಜನತಾ ಪಾರ್ಟಿಯ ಸರ್ಕಾರ ಏನು ಬಂದಿದೆ, ಇವತ್ತೇನು ಸೌಹಾರ್ದಯುತವಾಗಿ ಸರ್ಕಾರ ನಡೆಯುತ್ತಿದೆ, ಬಹುಶಃ ಆಡಳಿತರೂಢದಲ್ಲಿದ್ದಂತವರು ಇವತ್ತು ಪ್ರತಿಪಕ್ಷದ ಸ್ಥಾನಕ್ಕೆ ಹೋಗಿದ್ದಾರೆ ಬಹುಶಃ ಅವರಿಗೆ ಅದನ್ನು ತಡೆದುಕೊಳ್ಳಲಿಕ್ಕೆ ಆಗುತ್ತಿಲ್ಲವೆಂದು ಅನ್ನಿಸುತ್ತದೆ. ಹೀಗಾಗಿ ಕಾಂಗ್ರೆಸ್ ಪಕ್ಷಕ್ಕೆ ತನ್ನದೇ ಆದಂಥ ಇತಿಹಾಸ ಇದೆ, ಮಾನ್ಯ ಧರ್ಮಸಿಂಗ್‌ರವರು ಹಾಗೂ ಮಾನ್ಯ ಖರ್ಗೆಯವರು ಹಿರಿಯ ಸದಸ್ಯರು, ಮಂತ್ರಿಗಳಾಗಿ ಅನುಭವ ಇದ್ದಂಥವರು, ಮುಖ್ಯಮಂತ್ರಿಗಳಾಗಿ ಅನುಭವ ಇದ್ದಂಥವರು, ಎಂಟೆಂಟು ಸಲ ಈ ವಿಧಾನ ಸಭೆಗೆ ಆರಿಸಿ ಬಂದಂಥವರು, ಅಂತಹ ಹಿರಿಯರು ಇವತ್ತು ಇಲ್ಲಿ ಇದ್ದಾರೆ. ಹಿಂದಿನ ಸಂಪ್ರದಾಯಗಳೇನು ಎಂದು ಅವರು ಇಲ್ಲಿ ಹೇಳಬೇಕು, ನಮಗೆ ಮಾರ್ಗದರ್ಶನವನ್ನು ಅವರು ಮಾಡಬೇಕಾಗಿದೆ. ಹೀಗಾಗಿ ಯಾವ ಅಸಂವಿಧಾನವಾದಂಥ ಕೆಲಸ ಇಲ್ಲಿ ಮಾಡಿಲ್ಲ; ಇಲ್ಲಿ ನಡೆಯುತ್ತಿಲ್ಲ, ಹೀಗಾಗಿ ಉತ್ತಮವಾದಂಥ ಸರ್ಕಾರ ನಡೆಯುತ್ತಿದೆ, ಜನತೆ ಕೂಡ ಈ ಒಂದು ಸರ್ಕಾರದ ಮೇಲೆ ನಂಬಿಕೆ ವಿಶ್ವಾಸವನ್ನು ಇಟ್ಟಿದ್ದಾರೆ. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಯಾವ ಒಂದು ಜಿಲ್ಲಾ ಪಂಚಾಯಿತ್‌ನಲ್ಲೂ ನಿಮಗೆ ಮೆಜಾರಿಟಿ ಇಲ್ಲವೆಂದು ಮಾನ್ಯ ಪ್ರತಿಪಕ್ಷದ ನಾಯಕರು ಹೇಳಿದರು, ಇವತ್ತು ಅವರು ಬಳ್ಳಾರಿಯಲ್ಲಿ ಹೋಗಿ ನೋಡಿಕೊಳ್ಳಲಿ; ಮಂಡ್ಯದಲ್ಲಿ ಹೋಗಿ ನೋಡಲಿ. ಅಲ್ಲಿ ಯಾರು ಮೆಜಾರಿಟಿಯಲ್ಲಿ ಇದ್ದಾರೆ? ಇವತ್ತು ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಯ ಎಷ್ಟೋ ಕಡೆ ಭಾರತೀಯ ಜನತಾ ಪಾರ್ಟಿ, ಜೆಡಿಎಸ್ ಮೆಜಾರಿಟಿಯಲ್ಲಿದ್ದಾರೆ, ಮತ್ತು ಈ ಸಮ್ಮಿಶ್ರ ಸರಕಾರದ ಬಗ್ಗೆ ಜನತೆ ನಿರೀಕ್ಷೆಯನ್ನಿಟ್ಟುಕೊಂಡಿದ್ದಾರೆ, ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಉತ್ತಮವಾದ ಸರ್ಕಾರವನ್ನು ಕೊಡುತ್ತಿದ್ದಾರೆ. ಸೌಹಾರ್ದಯುತವಾದ

ಸರ್ಕಾರ ಇವತ್ತು ನಡೆಯುತ್ತಿದೆ ಎನ್ನುವಂಥದ್ದು ಮತ್ತು ಅಭಿವೃದ್ಧಿ ಪರವಾದಂಥ ಕೆಲಸ ಈ ರಾಜ್ಯದಲ್ಲಿ ನಡೆಯುತ್ತಿದೆ ಎನ್ನುವಂಥ ನಿರೀಕ್ಷೆಯಲ್ಲಿ ಇವತ್ತು ಜನರು ಇದ್ದಾರೆ. ಹೀಗಾಗಿ ನಾವು ಪ್ರತಿಪಕ್ಷದವರಿಗೆ ಸಹಕಾರ ಕೊಡಲಿಕ್ಕೆ ತಯಾರು ಇದ್ದೇವೆ, ಇವತ್ತು ಪ್ರತಿಪಕ್ಷದವರನ್ನು ನಾವು ಬಿಟ್ಟು ಹೊರಗೆ ಇಟ್ಟು ನಾವು ಏನು ಸರ್ಕಾರ ಮುಂದುವರಿಸಿಕೊಂಡು ಆಡಳಿತ ಮಾಡಬೇಕೆಂದಿಲ್ಲ, ವಿಧಾನ ಸಭೆಯಲ್ಲಿ ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ಚರ್ಚೆಯಾಗಬೇಕು, ಅದಕ್ಕೆ ಎಲ್ಲಾ ರೀತಿಯ ಅವಕಾಶ ಸಿಗಬೇಕು, ಅದರ ಬಗ್ಗೆ ನಮ್ಮದು ಯಾವುದೇ ರೀತಿಯ ತಕರಾರು ಇಲ್ಲ. ಹೀಗಾಗಿ ಇವತ್ತು ಸಹಕಾರ ಅವರ ಕಡೆಯಿಂದಲೂ ಬೇಕು, ನಮ್ಮ ಕಡೆಯಿಂದಲೂ ಬೇಕು, ನಾವು ಸಹಕಾರವನ್ನು ಕೊಡುವುದಕ್ಕೆ ತಯಾರಿದ್ದೇವೆ. ಹೀಗಾಗಿ ಇದರ ಬಗ್ಗೆ ತಾವುಗಳು ಹಠ ಮಾಡಲಾರದೆ, ಇನ್ನಿತರ ಕಾರ್ಯಚಟುವಟಿಕೆಗಳು ಏನಿವೆ, ಅವುಗಳಲ್ಲಿ ಭಾಗವಹಿಸಬೇಕು. ಇಲ್ಲಿ ಎರಡು ಬಿಲ್‌ಗಳು ಇವೆ, ಇನ್ನೂ ಹಲವಾರು ವಿಷಯಗಳು ಚರ್ಚೆ ಮಾಡುವಂಥದ್ದು ಇವೆ. ಮಾನ್ಯ ವಾಟಾಳ್ ನಾಗರಾಜ್‌ರವರ ಖಾಸಗೀ ಸದಸ್ಯರ ವಿಧೇಯಕ ಬಹಳ ವರ್ಷಗಳಿಂದ ವಿಧಾನ ಸಭೆಯಲ್ಲಿ ಚರ್ಚೆ ಆಗುತ್ತಿದೆ. ಅದರ ಬಗ್ಗೆ ಚರ್ಚೆಯಾಗಲಿ, ಹೀಗಾಗಿ ಎಲ್ಲಾ ರೀತಿಯ ಚರ್ಚೆ ಮಾಡಲಿಕ್ಕೆ ನಾವು ತಯಾರಿದ್ದೇವೆ, ಯಾವುದೇ ರೀತಿಯಾದಂಥ ಅಸಂವಿಧಾನವಾದಂಥ ಸಂವಿಧಾನ ಬಾಹಿರವಾದಂಥ, ಯಾವುದೇ ಒಂದು ಕಾರ್ಯಚಟುವಟಿಕೆ ಇಲ್ಲಿ ಆಗುತ್ತಿಲ್ಲ. ಮತ್ತು ತಾವು ಏನು, ಮಾನ್ಯ ಸಭಾಧ್ಯಕ್ಷರು ಬಹಳಷ್ಟು ವಿಚಾರ ಮಾಡಿ ಸಂವಿಧಾನಬದ್ಧವಾದಂಥ ತೀರ್ಪನ್ನು ಕೊಟ್ಟಿದ್ದೀರೀ, ಆ ಒಂದು ತೀರ್ಪನ್ನು ಎಲ್ಲರೂ ಒಪ್ಪಬೇಕಾಗುತ್ತದೆ, ಈ ಸದನದಲ್ಲಿ ಇದ್ದಂಥ ಪ್ರತಿಯೊಬ್ಬ ಸದಸ್ಯರು ಅದನ್ನು ಒಪ್ಪಲೇಬೇಕಾಗುತ್ತದೆ. ಏಕೆಂದರೆ, ಈ ಪೀಠಕ್ಕೆ ಇರುವಂಥ ಗೌರವ, ಎಲ್ಲಿಯವರೆಗೆ ಎಂದರೆ, ಅದರ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ, ಮಾನ್ಯ ರಮೇಶ್‌ಕುಮಾರ್‌ರವರು, ಮಾನ್ಯ ಶ್ರೀರಾಮರೆಡ್ಡಿಯವರು, ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಮಾಧುಸ್ವಾಮಿಯವರು, ಇದರ ಬಗ್ಗೆ ಸಾಕಷ್ಟು ಚರ್ಚೆ ನ್ಯಾಯಾಂಗದ ಜೊತೆಗೆ ಸಂಘರ್ಷ ಮಾಡುವಂಥ ಪರಿಸ್ಥಿತಿ ನಿರ್ಮಾಣವಾಗಿತ್ತು. ನ್ಯಾಯಾಂಗದವರು ಏನಾದರೂ ಒಂದು ನೋಟೀಸ್ ಕೊಟ್ಟಂಥ ಸಂದರ್ಭದಲ್ಲಿ, ಲೋಕಸಭೆಯ ಸಭಾಧ್ಯಕ್ಷರಾದಂಥ ಮಾನ್ಯ ಸೋಮನಾಥ ಚಟರ್ಜಿಯವರು ಎಲ್ಲಿಯವರೆಗೆ ಅವರು ಹೋದರು ಎಂದರೆ, ಸಭಾಧ್ಯಕ್ಷರು ಪೀಠಕ್ಕೆ ಎಷ್ಟೊಂದು ಪವರ್‌ಫುಲ್ ಇದೆ, ಎಷ್ಟೊಂದು ಗೌರವ ಇದೆ ಎಂದರೆ, ಸುಪ್ರೀಂಕೋರ್ಟಿನವರು ನೋಟೀಸ್ ಕೊಟ್ಟರೂ ಆ ನೋಟೀಸ್‌ನ್ನು ತೆಗೆದುಕೊಳ್ಳುವುದಿಲ್ಲ ಎನ್ನುವ ಮಟ್ಟಿಗೆ ಅವರು ನ್ಯಾಯಾಂಗವನ್ನು ಎದುರು ಹಾಕಿಕೊಂಡಿರುವಂಥದ್ದನ್ನು ನಾವು ನೋಡುತ್ತಿದ್ದೇವೆ. ಇಲ್ಲಿ ಇದೇ ವಿಧಾನ ಸಭೆಯಲ್ಲಿ ಹಿಂದೆ ಮಾನ್ಯ ರಮೇಶ್ ಕುಮಾರ್‌ರವರು ಆ ಪೀಠದಲ್ಲಿ ಕುಳಿತ್ತಿದ್ದಂಥ ಸಂದರ್ಭದಲ್ಲಿ ನ್ಯಾಯಾಂಗದ ಬಗ್ಗೆ ಹಾಗೂ ಈ ಒಂದು ಪೀಠದ ಬಗ್ಗೆ ಸಾಕಷ್ಟು ಚರ್ಚೆಯಾಯಿತು, ಶಾಸಕಾಂಗದ ಬಗ್ಗೆ ಹಾಗೂ ನ್ಯಾಯಾಂಗದ ಬಗ್ಗೆ ಸಂಘರ್ಷ ನಡೆದಿರುವುದನ್ನು ನಾವು ಎಷ್ಟೋ ಸಲ ನೋಡಿದ್ದೇವೆ. ಹೀಗಾಗಿ ಮಾನ್ಯ ಸಭಾಧ್ಯಕ್ಷರು ತಾವು ಏನು ತೀರ್ಪನ್ನು ಕೊಟ್ಟಿದಿರಿ, ಅದಕ್ಕೆ ಅಗೌರವ ತರುವ ಕೆಲಸ ಯಾವಾಗಲೂ ಆಗಿಲ್ಲ. ಅದರಲ್ಲೂ ಬಹುಶಃ ನನಗೆ ಅನ್ನಿಸುತ್ತದೆ ಮಾನ್ಯ ಧರ್ಮಸಿಂಗ್‌ರವರಿಗೆ ಮಾನ್ಯ ಖರ್ಗೆಯವರಿಗೆ, ಬಹುಶಃ ಒಳಗೊಳಗೆ ಖೇದ ಇರಬಹುದು, ಈ ರೀತಿ ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತರುವಂಥ ಕೆಲಸ ಅವರ ಮುಂದೆ ಇವತ್ತು ನಡೆಯುತ್ತಿರುವುದು ಅವರಿಗೆ ಸರಿ ಅನ್ನಿಸುತ್ತಿಲ್ಲ; ಬಹುಶಃ ಅವರು ಮಾನಸಿಕವಾಗಿ ಆತ್ಮಸಾಕ್ಷಿಯಾಗಿ ಅದನ್ನು ಒಪ್ಪಲಿಕ್ಕಿಲ್ಲ;

ಬೇಗಾಗಿ ಇವತ್ತು ಸಭಾಧ್ಯಕ್ಷರು ಏನೊಂದು ತೀರ್ಪು ಕೊಟ್ಟಿದ್ದಾರೆ, ಆ ತೀರ್ಪು ಅಂತಿಮ. ಅದನ್ನು "ಸಭಾಧ್ಯಕ್ಷರಿಗೆ ಧಿಕ್ಕಾರ" ಎನ್ನುವ ರೀತಿಯಲ್ಲಿ, ಸಭಾಧ್ಯಕ್ಷರ ತೀರ್ಪನ್ನೇ ಚಾಲೆಂಜ್ ಮಾಡುವಂಥದ್ದು ಇದು ಬಹುಶಃ ಕರ್ನಾಟಕ ವಿಧಾನ ಸಭೆಯಲ್ಲಿ ಯಾವ ಒಂದು ಸಂದರ್ಭದಲ್ಲಿ ನಡೆದಿಲ್ಲ. ಸಭಾಧ್ಯಕ್ಷರ ತೀರ್ಪನ್ನು ಇವತ್ತು ಧಿಕ್ಕಾರ ಮಾಡುವಂಥ ಪರಿಸ್ಥಿತಿ ನಿರ್ಮಾಣ ಮಾಡಿರುವುದು ನೂರು ವರ್ಷ ಇತಿಹಾಸ ಇರುವಂಥ ಕಾಂಗ್ರೆಸ್ ಪಾರ್ಟಿಗೆ ಈ ಒಂದು ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಹಲವಾರು ವರ್ಷ ಆಡಳಿತ ಮಾಡಿದಂಥ ಕಾಂಗ್ರೆಸ್ ಪಕ್ಷದ ನಾಯಕರಿಗೆ ಶೋಭೆ ತರತಕ್ಕಂಥದ್ದಲ್ಲ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ನಾನು ಏಕೆ ಮಧ್ಯೆ ಪ್ರವೇಶ ಮಾಡಿದೆ ಎಂದರೆ,

ಅಧ್ಯಕ್ಷರು: ಮಧ್ಯೆ ಮಾತನಾಡಬೇಡಿ, ನಿಮಗೆ ಅವಕಾಶ ಕೊಟ್ಟಾಗ ನೀವು ಮಾತನಾಡಿ . . ನೋ ನೋ . . ಈಗಾಗಲೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಆರಗ ಜ್ಞಾನೇಂದ್ರ: ಒಂದು ಘಟನೆಯನ್ನು ಹೇಳುವುದರ ಮೂಲಕ ನಿಮ್ಮ ನೆರವಿಗೆ ನಾನು ಬರುತ್ತಿದ್ದೇನೆ. .

ಅಧ್ಯಕ್ಷರು: ಅಡೆತಡೆಯಿಂದಾಗಿ ಮತ್ತು ಗೊಂದಲ ಉಂಟಾಗಿದ್ದರಿಂದ ಯಾವ ಸದಸ್ಯರು ಏನು ಹೇಳುತ್ತಾರೆಂಬುದು ಗೊತ್ತಾಗುತ್ತಿಲ್ಲ. ಮತ್ತೆ ಸರಾಗವಾಗಿ ಈ ಸದನದ ಕಲಾಪಗಳನ್ನು ನಡೆಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇನ್ನು ಮುಂದೆ ನಾನು ಯಾರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ನಿಮ್ಮಗಳ ಇಚ್ಛೆಗಳು ಏನಾದರೂ ಇದ್ದರೆ ನಿಮಗೆ ಅವಕಾಶ ಕೊಟ್ಟಂಥ ಸಂದರ್ಭದಲ್ಲಿ ಪ್ರಸ್ತಾಪ ಮಾಡಿ. ಅಥವಾ ಪಾಯಿಂಟ್ ಆಫ್ ಆರ್ಡರ್ ಇದ್ದರೆ ರೈಜ್ ಮಾಡಿ. ಸುಮ್ಮನೆ ಈ ರೀತಿಯಾಗಿ ಮಾತನಾಡುವುದಕ್ಕೆ ನಾನು ಇನ್ನು ಮುಂದೆ ಅವಕಾಶಕೊಡುವುದಕ್ಕೆ ಸಾಧ್ಯವಿಲ್ಲ. ಈಗ ಮಾನ್ಯ ಜಗದೀಶ್ ಶೆಟ್ಟರ್‌ರವರೆ, ತಾವು ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಪ್ರತಿಪಕ್ಷದವರಲ್ಲಿ ಮನವಿಮಾಡಿಕೊಳ್ಳುವುದೇನೆಂದರೆ, ಇಂಥ ಸಂದರ್ಭಗಳಲ್ಲಿ ಚರ್ಚೆ ಮಾಡಿ ಅದಕ್ಕೆ ಪರಿಹಾರ ಹುಡುಕುವಂಥ ಕೆಲಸ ಮಾಡೋಣ. ಆದರೆ, ಮಾನ್ಯ ಸಭಾಧ್ಯಕ್ಷರ ಪೀಠಕ್ಕೆ ಅಗೌರವ ಆಗುವಂಥ ರೀತಿಯಲ್ಲಿ ನಡೆದುಕೊಳ್ಳುವುದು ಬೇಡ. ಇವತ್ತು ನೀವು ವಿರೋಧಪಕ್ಷದಲ್ಲಿ ಇದ್ದೀರಿ ಮತ್ತೆ ನೀವು ಇತ್ತ ಕಡೆ ಬರಬಹುದು. ಮತ್ತೊಂದು ಸಲ ನಾವು ಅಲ್ಲಿರುತ್ತೇವೆ ಮತ್ತೆ ಇಲ್ಲಿಗೆ ನಾವೂ ಕೂಡ ಬರಬಹುದು. ಆದ್ದರಿಂದ ಈ ಅಧಿಕಾರ ಯಾವತ್ತೂ ಕೂಡ ಶಾಶ್ವತವಲ್ಲ. ಮತ್ತೆ ನೀವು ಪ್ರತಿಪಕ್ಷದಲ್ಲಿದ್ದೇವೆಂದು ಎಲ್ಲದಕ್ಕೂ ಪ್ರತಿಭಟನೆ ಮಾಡತಕ್ಕಂಥದು ಆಗಬಾರದು. ಹಾಗೆಯೇ ಎಲ್ಲವನ್ನೂ ಹೋರಾಟದ ಮುಖಾಂತರ ಮಾಡುತ್ತೇವೆ ಎನ್ನತಕ್ಕಂಥದ್ದು ಇವತ್ತಿನದಿವಸ ಆಗಬಾರದು. ಸಭಾಧ್ಯಕ್ಷರ ಪೀಠಕ್ಕೆ ಗೌರವಕೊಡತಕ್ಕಂಥದ್ದು ಆಗಬೇಕು. ಮಾನ್ಯ ಸಭಾಧ್ಯಕ್ಷರು ಏನೊಂದು ತೀರ್ಪನ್ನು ಕೊಟ್ಟಿದ್ದಾರೆಯೋ, ಆ ಒಂದು ತೀರ್ಪನ್ನು ಗೌರವದಿಂದ ನೋಡತಕ್ಕಂಥ ಕೆಲಸ ಇವತ್ತು ಪ್ರತಿಪಕ್ಷದ ಕಡೆಯಿಂದ ಆಗಬೇಕೆಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಮತ್ತೆ ಬಹಳ ಮುಖ್ಯವಾದಂಥದು ಏನೆಂದರೆ, ಮಾನ್ಯ ಪ್ರತಿಪಕ್ಷದ ನಾಯಕರಾಗಿರತಕ್ಕಂಥ ಮಾನ್ಯ ಧರ್ಮಸಿಂಗ್‌ರವರು ಒಂದು ಮಾತನ್ನು ಹೇಳಿದರು. ಅದೇನೆಂದರೆ, ತಮ್ಮ ಮುಖಾಂತರ ಹಿಂದಿನ ಬಾಗಿಲಿನಿಂದ ತಮ್ಮ ಮುಖಾಂತರ ತೀರ್ಪುಗಳನ್ನು ಮಾಡಿಸುತ್ತಿದ್ದಾರೆಂದು ಹೇಳಿದರು. ಇದು ನಿಜವಾಗಿಯೂ ಸರಿಯಾದದು ಅಲ್ಲ. ಇದೊಂದು ಗಂಭೀರವಾದಂಥ ಒಂದು ಆಪಾದನೆಯಾಗಿದೆ. ಇದು ಸರಿಯಲ್ಲ ಮತ್ತೆ ಇದನ್ನು ಅವರು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ

ನಾನು ಒತ್ತಾಯ ಮಾಡುತ್ತೇನೆ. ಮತ್ತೆ ಈ ಒಂದು ಸಭಾಧ್ಯಕ್ಷರ ಸ್ಥಾನಕ್ಕೆ ಗೌರವ ಕೊಡತಕ್ಕಂಥ ಕೆಲಸ ಆಗಬೇಕೆಂದು ಹೇಳುತ್ತಾ ಆಡಳಿತ ಪಕ್ಷದವರಾದ ನಾವು ಎಲ್ಲಾ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನೆನ್ನೆದಿವಸ ನಡೆದಂಥ ಘಟನೆ ಅನಿವಾರ್ಯವಾಗಿ ನಡೆದಿದೆ. ವಂದನಾನಿರ್ಣಯದ ಮೇಲೆ ನಾವು ಚರ್ಚೆಗೆ ಪ್ರಾರಂಭ ಮಾಡಿದಾಗ ನೀವು ಸಹಕಾರ ಕೊಟ್ಟಿದ್ದೀರಿ. ಏಕೆಂದರೆ ನೀವು ರಿವ್ಯೂ ಮಾಡಬೇಕೆಂದು ಕೇಳಿದ್ದೀರಿ. ಮಾನ್ಯ ಸಭಾಧ್ಯಕ್ಷರು ಅದನ್ನು ತಿರಸ್ಕಾರ ಮಾಡಿದರು. ಅದು ಆದಮೇಲೆ ನೀವುಗಳು ಚರ್ಚೆಗೆ ತಯಾರಾಗಬೇಕಾಗಿತ್ತು. ವಂದನಾ ನಿರ್ಣಯದ ಮೇಲೆ ಚರ್ಚೆ ಪ್ರಾರಂಭ ಮಾಡಿದ್ದರೆ ಇವತ್ತು ಸಾಯಂಕಾಲದವರೆಗೂ ಚರ್ಚೆ ಮಾಡಬಹುದಾಗಿತ್ತು. ಆದ್ದರಿಂದ, ಇದು ಆಡಳಿತ ಪಕ್ಷದ ತಪ್ಪು ಅಲ್ಲ. ಈ ಒಂದು ಗೊಂದಲದಿಂದ ಅದನ್ನು ಪಾಸ್ ಮಾಡಲಾಯಿತು. ಇನ್ನು ಪೂರಕ ಅಂದಾಜುಗಳ ಬಿಲ್ ಬಗ್ಗೆ ಹೇಳುವುದಾದರೆ, ನೀವು ಮತ್ತೆ ರಿವ್ಯೂ ಮಾಡಿದ ಮೇಲೆ ಇದಕ್ಕೆ ಮಾನ್ಯ ಸಭಾಧ್ಯಕ್ಷರು ಒಂದು ತೀರ್ಮ ಕೊಟ್ಟಮೇಲೆ ನಿಮ್ಮ ಧರಣಿಯನ್ನು ಹಿಂದಕ್ಕೆ ತೆಗೆದುಕೊಂಡಿದ್ದರೆ ಈ ಒಂದು ಪೂರಕ ಅಂದಾಜುಗಳ ಬಿಲ್ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವೂ ಕೂಡ ತಯಾರಿದ್ದೆವು. ಚರ್ಚೆ ಮಾಡದೆ ಬಿಲ್‌ನ್ನು ಪಾಸ್ ಮಾಡಿಕೊಂಡು ಹೋಗಬೇಕೆಂಬ ನೇಚರ್ ನಮ್ಮದೇನೂ ಆಗಿಲ್ಲ. ಆದ್ದರಿಂದ ಸರ್ಕಾರದವರು ಎಲ್ಲದಕ್ಕೂ ಅಂದರೆ ಚರ್ಚೆ ಮಾಡುವುದಕ್ಕೂ ತಯಾರಿದ್ದೇವೆ. ಇವತ್ತಿನ ಬಿಸ್‌ನೆಸ್‌ನಲ್ಲಿ ಎರಡು ಬಿಲ್‌ಗಳಿವೆ ಮತ್ತೆ ಇನ್ನು ಹಲವಾರು ಮಹತ್ವವಾದ ವಿಷಯಗಳನ್ನು ಚರ್ಚೆ ಮಾಡುವಂಥಾದ್ದು ಇದೆ. ಹಾಗೆಯೇ ಮಾನ್ಯ ವಾಟಾಳ್‌ನಾಗರಾಜ್‌ರವರು ತಂದಿರತಕ್ಕಂಥ ಖಾಸಗಿ ಬಿಲ್ ಬಹಳ ವರ್ಷಗಳಿಂದ ಬಾಕಿ ಉಳಿದಿದೆ. ಅದರ ಬಗ್ಗೆ ಇವತ್ತು ಸಾಯಂಕಾಲದವರೆಗೂ ಬೇಕಾದರೆ ಮಾಡೋಣ. ಆದ್ದರಿಂದ ನಾನು ಮಾನ್ಯ ಸಭಾಧ್ಯಕ್ಷರ ಮುಖಾಂತರ ತಮ್ಮಲ್ಲಿ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಪ್ರತಿಪಕ್ಷದವರು ದಯವಿಟ್ಟು ಸಹಕಾರ ಕೊಡಿ, ಆಡಳಿತ ಪಕ್ಷದವರಾದ ನಾವು ಕೂಡ ಸಹಕಾರ ಕೊಡುವುದಕ್ಕೆ ತಯಾರಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗುರುಮಿಠಕಲ್): ಸನ್ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಸುಮಾರು ನಾಲ್ಕು ದಿವಸಗಳಿಂದ ಇದೇ ಚರ್ಚೆ ನಡೆಯುತ್ತಾ ಇದೆ. ಮತ್ತೆ ಪದೇಪದೇ ಆಡಳಿತ ಪಕ್ಷದವರು ಅಂದರೆ ಸರ್ಕಾರ ನಡೆಸತಕ್ಕಂಥವರು ವಿರೋಧ ಪಕ್ಷದವರ ಮೇಲೆ ಆಪಾದನೆ ಮಾಡತಕಂಥದ್ದು ಏನೆಂದರೆ, ನೀವು ಜವಾಬ್ದಾರಿಯಿಂದ ನಡೆದುಕೊಳ್ಳುತ್ತಿಲ್ಲ, ಈ ಸದನವನ್ನು ಯಾವರೀತಿಯಾಗಿ ನಡೆಸಬೇಕು ಎನ್ನತಕ್ಕಂಥದ್ದನ್ನು ಮರೆತು ಕೇವಲ ಧರಣಿ ಮಾಡತಕ್ಕಂಥದ್ದು ಮತ್ತು ಕಾರ್ಯಕಲಾಪಕ್ಕೆ ಅಡ್ಡಿ ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದೀರಿ ಎನ್ನತಕ್ಕಂಥ ಒಂದು ಅಭಿಪ್ರಾಯವನ್ನು ಈ ಸದನದ ಮುಖಾಂತರವೂ ಕೂಡ ಮೂಡಿಸುತ್ತಿದ್ದಾರೆ. ಮತ್ತೆ ಸದನದ ಹೊರಗಡೆ ಕೂಡ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಗಳನ್ನು ಕೊಟ್ಟು ಈ ರೀತಿಯಾದ ಒಂದು ಅಭಿಪ್ರಾಯವನ್ನು ಮೂಡಿಸುತ್ತಿದ್ದಾರೆ. ಎರಡನೆಯದಾಗಿ, ಇವರು ಅಧಿಕಾರಕ್ಕೆ ಬಂದು ಸುಮಾರು ಮೂರ್ನಾಲ್ಕು ವರ್ಷಗಳಾಗಿದ್ದರೆ, ಅನೇಕ ಮಂತ್ರಿಗಳಿಗೆ ದೊಡ್ಡ ದೊಡ್ಡ ಕೆಲಸಗಳಿದ್ದು, ಆದ್ದರಿಂದ ಈ ಕೆಲಸಗಳಿಗೋಸ್ಕರ ಇನ್‌ಎವಿಟೆಬಲ್ ಆಗಿ ಒಬ್ಬರು ದೆಹಲಿಗೆ ಹೋಗಿದ್ದಾರೆಂದು ಮತ್ತೊಬ್ಬರನ್ನು ಬುಷ್‌ರವರು ಮಾತುಕತೆ ಕರೆಸಿಕೊಂಡಿದ್ದಾರೆಂದು ಹೇಳಿದ್ದರೆ ಬಹಳ ವಿಶೇಷವಾದಂಥ ಕಾರ್ಯಕ್ರಮಕ್ಕೆ ಅವರು ಹೋಗಿದ್ದಾರೆಂದು ನಾವು ಭಾವಿಸಬಹುದಾಗಿತ್ತು. ಆದರೆ, ಈ ಸದನ ಸೇರಿ ಕೇವಲ ನಾಲ್ಕು ದಿವಸ ಆಯಿತಷ್ಟೆ. ಈ ನಾಲ್ಕು ದಿವಸಗಳ ಅವಧಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳೂ ಇಲ್ಲಿ ಹಾಜರಿರುವುದಿಲ್ಲ ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳೂ ಹಾಜರಿರುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು: ಮಾನ್ಯ ಉಪ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ಏನು ತೋರಿಸುತ್ತದೆಂದರೆ, ಈ ಸದನವನ್ನು ಅವರು ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಅಥವಾ ಈ ಸದನಕ್ಕೆ ಅಗೌರವ ತೋರಿಸತಕ್ಕಂಥ ಕೃತ್ಯವನ್ನು ಇವತ್ತು ಮಾಡಿದ್ದಾರೆ. ಈ ಸರ್ಕಾರ ಹೊಸದಾಗಿ ಬಂದಿದೆ.

ಶ್ರೀ ಬಸವರಾಜ್ ಎಸ್. ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಬಿಲ್‌ನ್ನು ಮಂಡನೆ ಮಾಡುತ್ತಿದ್ದಾರೆ.

ಅಧ್ಯಕ್ಷರು: ಮಾನ್ಯ ಬಸವರಾಜ್ ಹೊರಟ್ಟಿರವರೆ, ನೀವು ಆಮೇಲೆ ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈ ಸದನಕ್ಕೆ ಅಗೌರವ ತೋರಿಸತಕ್ಕಂಥ ಕೆಲಸ ಇಲ್ಲಿ ನಡೆದಿದೆ. ಮೇಲ್ಮನೆ ಮುಖ್ಯವಲ್ಲವೆಂದು ನಾನು ಹೇಳುವುದಿಲ್ಲ. ಆ ಸದನವೂ ಕೂಡ ಪ್ರಾಮುಖ್ಯತೆಯಿಂದ ಕೂಡಿದೆ. ಆದರೆ, ಪ್ರಾಮುಖ್ಯವಾದಂಥ ಒಂದು ವಿಷಯದ ಬಗ್ಗೆ ಈ ಸದನದಲ್ಲಿ ಚರ್ಚೆ ಪ್ರಾರಂಭವಾದಾಗ ಮತ್ತು ಈ ವಿಷಯ ಎಲ್ಲಿಯವರೆಗೆ ಇತ್ಯರ್ಥವಾಗುವುದಿಲ್ಲ ಅಲ್ಲಿಯವರೆಗೆ ಕೂಡ ಯಾವುದೇ ನಿರ್ಣಯಗಳು ಆಗುವುದಿಲ್ಲವೆಂದು ಎಲ್ಲರಿಗೂ ಗೊತ್ತಿರುವಂಥ ವಿಷಯ. ಆದರೆ, ಇಲ್ಲಿ ಆ ವಿಷಯ ಇನ್ನೂ ಮುಗಿದಿಲ್ಲ. ಆದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಮಂಡ್ಯಕ್ಕೆ ಹೋಗಿದ್ದಾರೆ ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಆ ಸದನದಲ್ಲಿದ್ದಾರೆಂದು ಅವರು ಹೇಳುತ್ತಿದ್ದಾರೆ. ಅದರ ಅರ್ಥ ಅವರು ಇಲ್ಲಿ ಬರಬಾರದೆಂದು ಅಲ್ಲ. ಆ ಸದನದಲ್ಲಿ ನಾಯಕರಾಗಿರತಕ್ಕಂಥ ಶ್ರೀ ಶಂಕರ್‌ಮೂರ್ತಿಯವರು ಮತ್ತು ಇನ್ನು ಬೇರೆಯವರೂ ಕೂಡ ಅಲ್ಲಿರುತ್ತಾರೆ. ನಾನು ಹೇಳತಕ್ಕಂಥ ಮೂರನೇ ವಿಷಯ ಏನೆಂದರೆ, ಪೂರಕ ಅಂದಾಜುಗಳ ಬಿಲ್‌ನ್ನು ಈ ಸದನದಲ್ಲಿ ಅವರು ಮಂಡಿಸಿದರು. ಪೂರಕ ಅಂದಾಜಿನ ಒಟ್ಟು ಮೊತ್ತವಾದ .1,638,82,45,000 ಅಂದರೆ ಇಷ್ಟೊಂದು ಹಣವನ್ನು ಇವತ್ತು ಏನೂ ಚರ್ಚೆಯಿಲ್ಲದೆ ಗಲಾಟೆಯಲ್ಲಿ ಪಾಸ್ ಮಾಡಿ ಆ ಸದನಕ್ಕೆ ಕಳುಹಿಸಿದ್ದಾರೆ. ಮಾನ್ಯ ಕಂದಾಯ ಸಚಿವರ ವಾದ ಏನೆಂದರೆ ನೀವು ಚರ್ಚೆ ಮಾಡುವುದಕ್ಕೆ ತಯಾರು ಇರಲಿಲ್ಲ, ಆದ್ದರಿಂದ ನಾವು ಪಾಸ್ ಮಾಡಿ ಕಳುಹಿಸಿಕೊಟ್ಟೆವೆಂದು ಹೇಳುತ್ತಾರೆ. ಆದರೆ, ಇಲ್ಲಿ ಪ್ರಥಮವಾಗಿ ನಮ್ಮ ವಾದ ಇರತಕ್ಕಂಥದ್ದು ಅಂದರೆ, ನಮ್ಮ ವಿರೋಧಪಕ್ಷದ ನಾಯಕರು ಮತ್ತು ನಮ್ಮ ಎಲ್ಲಾ ಫ್ಲೋರ್ ಲೀಡರ್ಸ್ ಪ್ರಸ್ತಾಪ ಮಾಡಿದಂಥ ವಿಷಯ ಏನೆಂದರೆ, ನಾವು ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆಂದು ಹೇಳಿದ್ದೇವೆ. ಮತ್ತೆ ತಮ್ಮ ಕೊಠಡಿಯಲ್ಲಿಯೂ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿಯೂ ಕೂಡ ಈ ನಿರ್ಣಯವನ್ನು ತೆಗೆದುಕೊಳ್ಳುವಾಗ ನಾವು ಇದರ ಬಗ್ಗೆ ಹೇಳಿದ್ದೇವೆ. ಆರ್ಟಿಕಲ್ 175(1)ರ ಕೆಳಗೆ ನಾವು ಚರ್ಚೆ ಮಾಡೋಣ. ಆದರೆ ಆರ್ಟಿಕಲ್ 176 ಸಬ್‌ಕ್ಲಾಜ್(2)ರ ಕೆಳಗೆ ಮೋಷನ್ ಆಫ್ ಥ್ಯಾಂಕ್ಸ್ ಕೊಡಬಹುದು ಹೊರತಾಗಿ ಆರ್ಟಿಕಲ್ 175ರ ಕೆಳಗಡೆ ಮೋಷನ್ ಆಫ್ ಥ್ಯಾಂಕ್ಸ್ ಬರುವುದಿಲ್ಲ. ಆದರೆ, ಇದರ ಬಗ್ಗೆ ಚರ್ಚೆ ಮಾಡಿ ಬೇಕಾದರೆ ಮಾನ್ಯ ಸಭಾಧ್ಯಕ್ಷರವರು ಮೋಷನ್ ಆಫ್ ಥ್ಯಾಂಕ್ಸ್ ಹೇಳಬಹುದು ಎನ್ನತಕ್ಕಂಥ ಶ್ರೀಮಾನ್ ಎಂ.ಪಿ.ಪ್ರಕಾಶ್‌ರವರ ಸಲಹೆಗೆ ನಾವೆಲ್ಲರೂ ಕೂಡ ಒಪ್ಪಿದ್ದೆವು. ಅದಕ್ಕಾಗಿ ಅವರು ಬಳ್ಳಾರಿಯಿಂದ ಬರುವವರೆಗೂ ಕಾಯೋಣವೆಂದು ತಾವು ಹೇಳಿದ ಮೇಲೆ ಮತ್ತು ಮಾನ್ಯ ಅನೇಕ ಸದಸ್ಯರು ಕೂಡ ಹೇಳಿದ ಮೇಲೆ ನಾವು ಒಂದು ದಿವಸ ಕಾಯ್ದೆವು. ಅವರೂ ಕೂಡ ಸಲಹೆ ಕೊಟ್ಟರು. ಆದರೆ ಆ ಸಲಹೆಯನ್ನು ಸರ್ಕಾರ ಒಪ್ಪಿಕೊಳ್ಳಲಿಲ್ಲ. ಆದರೆ, ಇವರು ನಮಗೆ ತಾಳ್ಮೆ ಇಲ್ಲವೆಂದೂ ಮತ್ತು

ಸರ್ಕಾರಕ್ಕೆ ಸಹಕಾರ ಕೊಡತಕ್ಕಂಥ ಮನೋಭಾವನೆ ವಿರೋಧಪಕ್ಷದವರಿಗೆ ಇಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದಾರೆ. ಅಂದರೆ, ನಾವು ಸಹಕಾರ ಕೊಡುವುದಕ್ಕಿಂತಲೂ ನಮ್ಮ ಸಹಕಾರವನ್ನು ತಾವು ಪಡೆದುಕೊಳ್ಳಬೇಕು, ಅದನ್ನು ಬಿಟ್ಟು ನಮ್ಮ ಸಹಕಾರ ನಿಮಗೆ ಬೇಕಾಗಿದ್ದರೆ ಮಾಡಿ ಎಂದು ನೀವೇ ನಮಗೆ ಕೇಳಿದರೆ ಇದು ವಿಚಿತ್ರವಾದಂಥ ವಾದ ಮಾನ್ಯ ಅಧ್ಯಕ್ಷರೇ. ಸರ್ಕಾರದಲ್ಲಿರತಕ್ಕಂಥವರು ಅಲ್ಪಸ್ವಲ್ಪ ತಪ್ಪಾದರೂ ಕೂಡ ಅದನ್ನು ಸಹಿಸಿಕೊಂಡು ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಸಹಕಾರವನ್ನು ಪಡೆದು ಈ ಸದನವನ್ನು ಸುಲಲಿತವಾಗಿ ನಡೆಸಿಕೊಡುವಂಥ ಜವಾಬ್ದಾರಿ ಈ ಸದನದ ಮತ್ತು ಈ ಹೌಸ್ ಲೀಡರ್ ಕೆಲಸ. ಮಾನ್ಯ ಮುಖ್ಯಮಂತ್ರಿಗಳ ಕೆಲಸ ಸರ್ಕಾರದ ಕೆಲಸ. ಆದರೆ ಅವರು ಯಾರೂ ಸಹಕಾರ ಇಲ್ಲಿ ಕೊಡುವುದಿಲ್ಲವಂತೆ; ನೀವೇ ಸಹಕಾರ ಕೊಡುತ್ತಿಲ್ಲ ಅದಕ್ಕಾಗಿ ಹೀಗೆ ಆಗುತ್ತದೆ ಅಂತೆ. ನಮ್ಮ ಮೂಲಭೂತವಾಗಿರತಕ್ಕಂಥ ಪ್ರಶ್ನೆ ತಮ್ಮನ್ನು ಅಗೌರವಿಸಬೇಕು ಅಥವಾ ತಮಗೆ ಹಿಯ್ಯಾಳಿಸಿ ಮಾತನಾಡಬೇಕು ಎನ್ನತಕ್ಕಂಥದ್ದು ನಮ್ಮದೇನೂ ಇಲ್ಲ. ದಯವಿಟ್ಟು ತಮ್ಮ ಮನಸ್ಸಿಗೆ ನೋವಾಗಿದ್ದರೆ ಕ್ಷಮಿಸಿ; ನಾನು ಕ್ಷಮೆಯನ್ನು ಕೇಳುತ್ತೇನೆ. ಆದರೆ ಇಲ್ಲಿ ಪ್ರಶ್ನೆ ಏನಿದೆ, ರೂಲ್ಸ್ ಆಫ್ ಪ್ರೊಸೀಜರ್ಸ್‌ನಲ್ಲಿ ಕೊಟ್ಟಂಥ ರೂಲಿಂಗ್ ಮೇಲೆ ನಮ್ಮ ಎಜ್ಯುಕೇಶನ್ ಇಲ್ಲ. ಏಕೆಂದರೆ, ಸಂವಿಧಾನದಲ್ಲಿರತಕ್ಕಂಥ ಕಲಂಗಳು ಏನಿವೆ, ಮ್ಯಾಂಡೇಟರಿ ಪ್ರಾವಿಷನ್ಸ್ 175 ಅಂಡ್ 176 ಇದರ ಮೇಲೆ ನಮ್ಮ ವಾದ ನಡೆದಿದೆಯೇ ಹೊರತಾಗಿ ತಾವು ಕೊಟ್ಟಂಥ ನಿರ್ಣಯ ಏನಿದೆ ಅದಕ್ಕೆ ಸಂಬಂಧವಿಲ್ಲ ಎನ್ನತಕ್ಕಂಥ ವಾದ ನಮ್ಮದು. ಮಾನ್ಯ ಅಧ್ಯಕ್ಷರು ಏನೇ ಒಂದು ನಿರ್ಣಯವನ್ನು ಕೊಟ್ಟಿದ್ದಾರೆ ಅದನ್ನು ನೀವು ಒಪ್ಪಿಕೊಳ್ಳಲೇ ಬೇಕು ಎಂದರೆ . . . . .

ಅಧ್ಯಕ್ಷರು: ಈಗ ನಾನು ಒಂದು ನಿರ್ಣಯವನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ಇಲ್ಲಿ ನಡೆಯಿತಲ್ಲಾ, ಅದರ ಬಗ್ಗೆ ಹೇಳಿ. ನಾನು ಒಂದು ನಿರ್ಣಯವನ್ನು ಕೊಟ್ಟೆ. ಅದರ ಬಗ್ಗೆ ನೀವೆಲ್ಲಾ ಹೇಳಿದಿರಿ ಅದಕ್ಕೆ ನಿರ್ಣಯವನ್ನು ಕೊಟ್ಟೆ. ನಿರ್ಣಯ ಕೊಟ್ಟ ಮೇಲೆ ಇಲ್ಲಿ ಬಂದು ಘೋಷಣೆ ಕೂಗುವುದರೊಂದಿಗೆ ನಡೆದುಕೊಂಡಿದ್ದೀರಲ್ಲಾ ಅದರ ಬಗ್ಗೆ ಏನು ಹೇಳುತ್ತೀರಿ ಹೇಳಿ.

(ಗೊಂದಲ)

ತಾವು ಹೇಳಿ ದಯಮಾಡಿ. ಅದರ ಬಗ್ಗೆ ನೀವು ಹೇಳಿ, ನಾವು ಗೌರವಿಸುತ್ತೇವೆ ನೋವು ಮಾಡಿಕೊಳ್ಳಬೇಡಿ ಎಂದು ಹೇಳಿದಿರಲ್ಲಾ, ಅವರು ಉಪಯೋಗಿಸಿರುವ ಪದಗಳ ಬಗ್ಗೆ ಕಡತದಿಂದ ತೆಗೆಸುವ ಬಗ್ಗೆ ಅದರ ಬಗ್ಗೆ ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕೆಲವೊಂದು ಸಲ ಎಮೊಷನ್‌ನಲ್ಲಿ ಆಗುತ್ತದೆ ಇವತ್ತು ನೀವು ಹೇಗೆ ಸಿಟ್ಟಿನ ಭರದಲ್ಲಿ ಎದ್ದು ಹೋದಿರಿ. ಹಾಗೆ ಹಿಂದೆ ಕೂಡ ಶ್ರೀಮಾನ್ ರಮೇಶ್ ಕುಮಾರ್‌ಜಿಯವರು ಇದ್ದಾಗ ಇದೇ ರೀತಿ ಮುನಿಸಿಕೊಂಡು ಊರಿಗೆ ಹೊರಟು ಬಿಟ್ಟಿದ್ದರು. ಇವೆಲ್ಲಾ ಆಗುತ್ತವೆ ಅನೇಕ ಸಾರಿ. ಸದನದಲ್ಲಿ ಉತ್ತರ ಪ್ರತಿ ಉತ್ತರ ಸ್ವಲ್ಪ ಕೆಣಕುವುದು ಇವೆಲ್ಲಾ ನಡೆಯುತ್ತಿರುತ್ತವೆ. ಇಲ್ಲಿಯೇ ಮಾನ್ಯ ಜೆ.ಹೆಚ್. ಪಟೇಲ್‌ರು ಇದ್ದಾಗ ಕುಸ್ತಿಗೇ ಮಾನ್ಯ ಗುಂಡುರಾವ್‌ರವರ ಮೇಲೆ ಬಂದಿದ್ದರು. ನಾವು ಅವೆಲ್ಲವನ್ನೂ ಕೂಡ ನೋಡಿದ್ದೇವೆ. ಮತ್ತೆ ಸಾಯಂಕಾಲ ಅವರು ಅವರು ಸೇರಿಕೊಂಡು ಶಿವಮೊಗ್ಗಕ್ಕೆ ಹೆಲಿಕ್ಯಾಪ್ಟರ್‌ನಲ್ಲಿ ಹೋಗಿಯೇ ಬಿಟ್ಟರು. ನಾವು ಇಲ್ಲಿ ಬೆಂಗಳೂರಿನಲ್ಲಿ ನೋಡಿಕೊಂಡೇ ನಿಂತಿದ್ದೆವು. ಇಂತಹ ಉದಾಹರಣೆಗಳು ಆಗುತ್ತವೆ. ತಾವೂ ಕೂಡ ದೊಡ್ಡ ಮನಸ್ಸು ಮಾಡಬೇಕು. ಆ ಮಾತು ಬೇರೆ. ನಾನು ಹೇಳತಕ್ಕಂಥ ಪ್ರಶ್ನೆ ಇಷ್ಟೆ. ಸಂವಿಧಾನಕ್ಕೆ ಮೀರಿ ಯಾವ

ರೂಲ್ಸ್ ಇಲ್ಲ. ಸಂವಿಧಾನ ಇದು ಅಂತಿಮ. ಸಂವಿಧಾನದಲ್ಲಿ ತಮಗೆ ಏನಾದರೂ ದೋಷ ಕಂಡು ಬಂದರೆ ಇದು ಏನು ಪದ್ಧತಿ, ಇದು ಸರಿಯಿಲ್ಲ ಅಂದರೆ, ಬೇಕಾದರೂ ಅದನ್ನು ಪಾರ್ಲಿಮೆಂಟ್‌ನಲ್ಲಿ ಅಮೆಂಡ್‌ಮೆಂಟ್ ಮಾಡಿ ನಮಗೆ ಮಾರ್ಗದರ್ಶನ ಮಾಡಲಿ. ಆದರೆ ಈಗ ಇರತಕ್ಕಂಥ ಸಂವಿಧಾನದ ಕಲಂನಲ್ಲಿ ಏನು ಇದೆ ಎನ್ನತಕ್ಕಂಥ ಮಹತ್ವ, ಮತ್ತು ಅದರ ಪ್ರಕಾರ ಹೇಗೆ ನಡೆದುಕೊಳ್ಳಬೇಕು ಎನ್ನತಕ್ಕಂಥದ್ದು ಇದು ಮುಖ್ಯ. ಈಗ ಅದರ ತದ್ವಿರುದ್ಧ. ಯಾವುದೋ ಕಾರಣಕ್ಕೆ ತಾವು ಆ ಒಂದು ನಿರ್ಣಯವನ್ನು ಕೊಟ್ಟರೆ, ಸರ್ ಈ ನಿರ್ಣಯ ಸರಿಯಿಲ್ಲ; ಆದ್ದರಿಂದ ದಯವಿಟ್ಟು ಇದನ್ನು ಪುನರ್ ಪರಿಶೀಲನೆ ಮಾಡಿ ಎಂದು ನಾವು ಪದೇ ಪದೇ ಬೇಡಿಕೊಳ್ಳುವುದು ತಪ್ಪಾ? ಅಥವಾ ಈ ರಿವ್ಯೂ ಮಾಡಿ ಈ ಡಿಸಿಷನ್‌ನ್ನು ಕೇಳಿಕೊಳ್ಳುವುದು ತಪ್ಪಾ? ಅಥವಾ ನಿಮ್ಮ ಮನವೊಲಿಸುವುದಕ್ಕೆ ನಾವು ಧರಣಿ ಇದ್ದಾಗಲೂ ಕೂಡ ಆಗಿರುವ ಬಗ್ಗೆ ಕೋಟ್ ಮಾಡಿದರು. ಅನೇಕ ಸಲ ವಾಯಿಸ್ ಓಟ್‌ನಲ್ಲಿ ಪಾಸ್ ಆಗಿರುತ್ತದೆ. ಆದರೆ ನಾನು ಕೇಳತಕ್ಕಂಥದ್ದು ಮೂಲ ಪ್ರಶ್ನೆ. ಎಲ್ಲಿಯವರೆಗೆ ನಾನು ಸಂವಿಧಾನದ ಆ ಪಾಯಿಂಟ್ ಆಫ್ ಆರ್ಡರ್ ಮೇಲೆ ಎತ್ತಿದ್ದು, ಬಗೆಹರಿಯುವುದಿಲ್ಲ, ಅಲ್ಲಿಯವರೆಗೆ ಖಂಡಿತವಾಗಿ ಈ ಕನ್‌ಫ್ಯೂಷನ್ ಇರುವುದೇ ಮತ್ತು ತಾವು ಅದನ್ನೇ ಹೇಳುತ್ತೀರಿ, ನಾನು ಅದನ್ನೇ ಕೇಳುತ್ತೇವೆ. ಅದಕ್ಕೆ ಅವರು ಏನು ಹೇಳುತ್ತಾರೆ. ರೂಲಿಂಗ್ ಕೊಟ್ಟ ಮೇಲೆ ನೀವು ಕ್ವೊಶ್ಚನ್ ಏಕೆ ಮಾಡುತ್ತೀರಿ ಅಂತ. Sir, question of ruling ಅಲ್ಲ ಒಂದು ರೂಲಿಂಗ್ ನಾವು ತಪ್ಪಾಗಿ ಇಂಟರ್‌ಪ್ರಿಟ್ ಮಾಡಿ ಈ ಸದನದಲ್ಲಿ ಒಂದು ಪ್ರಿಸಿಡೆಂಟ್ ಆದರೆ, ಅದು ಕಾಯಂ ಆಗಿ ಉಳಿಯುತ್ತದೆ. ಎಲ್ಲರೂ ಅದನ್ನೇ ಕೋಟ್ ಮಾಡುತ್ತಾರೆ. ಅದು ಆಗಬಾರದು. ಸಂವಿಧಾನದಲ್ಲಿ ಖಂಡಿತವಾಗಿ ರಿಸ್ಟ್ರಿಕ್ಷನ್ ಇದೆ, ಅದನ್ನು ನೋಡಿಕೊಂಡು ಪುನರ್ ಪರಿಶೀಲನೆ ಮಾಡಿ ಎಂದು ನಾವು ಪದೇ ಪದೇ ಹೇಳುತ್ತಿದ್ದೇವೆ. ಆದರೆ ದುರ್ದೈವದಿಂದ ಏನಾಗಿದೆ ತಾವು ಅನ್ಯಥಾ ಭಾವಿಸಬಾರದು. ಅವರು ಈಗ ಹೇಳಿದರು, ವಿರೋಧ ಪಕ್ಷದ ನಾಯಕರು ಹಿಂದಿನ ಬಾಗಿಲಿನಿಂದ ಪ್ರೆಷರ್ ಅಂತ ಹೇಳಿದ್ದಕ್ಕೆ ಕ್ಷಮೆ ಕೇಳಬೇಕು ಅಂತ. ನಾವು ನೋಡಿದ್ದೇವೆ. ನೀವು ಗೆಸ್ಚರ್ ಮಾಡುವುದು, ಈಗ ಏನು ನೀವು ರೂಲಿಂಗ್ ಕೊಟ್ಟಿದ್ದೀರಿ ಅದಕ್ಕೇಕ್ ಆನ್ ಆಗಿ ಎಂದು ಹೇಳುವುದು. ಅದನ್ನು ಬದಲಾವಣೆ ಮಾಡಬೇಡಿ ಎಂದು ಹೇಳಿದ್ದು, ಇವೆಲ್ಲಾ ಇವೆ; ಅವೆಲ್ಲವನ್ನೂ ನಾವು ಏಕೆ ಮುಚ್ಚಿಕೊಂಡು ಇಟ್ಟುಕೊಳ್ಳೋಣ? ತಾವು ಅದನ್ನು ತಪ್ಪು ಎಂದು ಭಾವಿಸಿಲ್ಲ. ನಿಮ್ಮ ದೃಷ್ಟಿಯಿಂದ ಅದು ಕರೆಕ್ಟ್ ಇರಬಹುದು. ಆದರೆ ಸಾರ್ವಜನಿಕ ದೃಷ್ಟಿಯಿಂದ ಕಾನ್‌ಸ್ಟಿಟ್ಯೂಷನಲ್ ಎಕ್ಸ್‌ಪರ್ಟ್ಸ್ ದೃಷ್ಟಿಯಿಂದ ಈ ದೇಶದ ಜನತೆಯ ದೃಷ್ಟಿಯಿಂದ ಆರ್ಟಿಕಲ್–175 ಬೇರೆ, ಆರ್ಟಿಕಲ್ 176 ಬೇರೆ, ಅದಕ್ಕಾಗಿ ಇವೆರಡೂ ಕೂಡ ಭಿನ್ನವಾದ ಆರ್ಟಿಕಲ್ ಕಾರಣ, ಈ Rules of procedure ಪ್ರಕಾರ ನೀವು interpretation ಮಾಡಿ ಏನು ರೂಲಿಂಗ್ ಕೊಟ್ಟಿದ್ದೀರಿ, ಇದು ಸರಿಯಿಲ್ಲ ಇದು ತಪ್ಪಿದೆ, ದಯವಿಟ್ಟು ಇದನ್ನು ರಿವ್ಯೂ ಮಾಡಿ ಎಂದು ನಾವು ಕೇಳಿದ್ದೆವು. ಕೇಳಿ ಇಲ್ಲಿ ಸದನಕ್ಕೆ ಬಂದಿದ್ದೇವೆ ಅದಕ್ಕೆ ನಾನು ಈಗಾಗಲೇ ಹೇಳಿದೆ, ತಮ್ಮ ಮನ ವೊಲಿಸಬೇಕು ಎನ್ನುವ ದೃಷ್ಟಿಯಿಂದ ನಾವು ಧರಣಿ ಮಾಡಿದೆವೆಯೋ ಹೊರತಾಗಿ, ಏಕೆಂದರೆ ಯಾವುದೇ ಒಂದಕ್ಕೆ ಪುಷ್ಟಿ ಸಿಗಬೇಕೆಂದರೆ . . .

ಅಧ್ಯಕ್ಷರು: ಮನ ವೊಲಿಸುವುದು ಎಂದರೆ, ಬಾಯಿಗೆ ಬಂದಂತೆ ಬೈದರೆ ಮನವೊಲಿಸುವುದು ಎಂದು ಅನ್ನುತ್ತಾರಾ? ಹೇಳಿ ಸ್ವಾಮಿ. I, after consulting with the Secretary of Lok Sabha and after consulting with the Legal Experts, ನಾನು ಏನು ತೀರ್ಮ

ಕೊಟ್ಟಿದ್ದೇನೆ. ಅದು ನಿಮಗೆ ಸರಿಯಿಲ್ಲದೆ ಇರಬಹುದು. ತಕ್ಷಣ ಇಲ್ಲಿಗೆ (ವೆಲ್‌ಗೆ) ಬಂದು ಆ ರೀತಿ ಮಾತನಾಡುವುದು ಸರಿ ಇದೆಯೇ ಸ್ವಾಮಿ? ಈ ರೀತಿ ಇಂಟರ್‌ಪ್ರಿಟ್ ಮಾಡಬಹುದಾ ನಿಮ್ಮಂತಹ ಹಿರಿಯ ಸದಸ್ಯರು. ದಯಮಾಡಿ ಹೇಳಿ.

(ಗೊಂದಲ)

ಈ ರೀತಿ ಇಂಟರ್‌ಪ್ರಿಟೇಶನ್ ಕೊಟ್ಟರೆ ಯಂಗ್‌ಸ್ಟರ್ಸ್ ಏನು ಹೇಳುತ್ತಾರೆ. ಅವರು ಬಂದು ಇನ್ನು ಏನೇನೋ ಮಾಡುತ್ತಾರೆ. ದಯಮಾಡಿ ನೀವು ಮಾರ್ಗದರ್ಶನ ಮಾಡಬೇಕು.

ಶ್ರೀ ಹೆಚ್.ಡಿ. ಬಸವರಾಜು: ಮಾನ್ಯ ಅಧ್ಯಕ್ಷರೆ, ಇದು ನಿಮ್ಮ ಮೇಲೆ ಒತ್ತಡ ತರುವ ಪದ್ಧತಿ. ಮನವೊಲಿಸುವ ಪದ್ಧತಿ ಅಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಕೆಲವು ಸಲ ಇಂಥದ್ದು ಆಗುತ್ತದೆ ಎನ್ನುವುದಕ್ಕೆ ನಾನು ಮಾನ್ಯ ಜೆ.ಹೆಚ್. ಪಟೇಲರದ್ದು ಬೇರೆಯವರದ್ದು ಉದಾಹರಣೆ ಕೊಟ್ಟಿದ್ದೇನೆ. ನಿಮಗೆ ಮಾರ್ಗದರ್ಶನ ಮಾಡಿದಂಥ ನಾಯಕರ ಉದಾಹರಣೆಯನ್ನು ಏಕೆ ಕೊಟ್ಟಿದ್ದೇನೆಂದರೆ, ಕೆಲವು ಸಲ ಸದನದಲ್ಲಿ ಇಂಥದ್ದು ಆದರೂ ಕೂಡ ಅದನ್ನು ಹೊಟ್ಟೆಗೆ ಹಾಕಿಕೊಂಡು ತಾವು ಪ್ರಜಾಪ್ರಭುತ್ವದ ಒಂದು ನೀತಿ ನಿಯಮದ ಪ್ರಕಾರ ನುಂಗಿಕೊಂಡು ಹೊರಬರಬೇಕಾಗುತ್ತದೆ. ಅದನ್ನು ಪ್ರೆಜ್ಯುಡಿಸ್ ಆಗಿ ಇಟ್ಟುಕೊಂಡು ನಾನು ಹೇಳಿದ್ದೇ ಸರಿ ಎಂದರೆ . . . . . .

ಅಧ್ಯಕ್ಷರು: ನೋ ನೋ ಖರ್ಗೆ ಸಾಹೇಬರೆ, ಪ್ರೆಜ್ಯುಡಿಸ್ ಅಲ್ಲ. ನಾನು ನಿನ್ನೆ ಏನು ಹೇಳಿದೆ. ಎಲ್ಲರೂ ಸಹಕರಿಸಿ ಮಾಡಿ ಎಂದು ಹೇಳಿದ್ದೇನೆ. ಅದು ನನ್ನ ದೃಷ್ಟಿಯಲ್ಲಿ. ಈಗ ಏನಾಗಿದೆ, ಯಾರದೋ ಮಾರ್ಗದರ್ಶನ ಪಡೆದು ಎನ್ನುವ ತರಹಃ ಏನು ವಾದ ಮಾಡುತ್ತೀರಿ ಅದು ನನಗೆ ನೋವಾಗುತ್ತದೆ. ನಾನೂ ಕೂಡ ಅತ್ಯಂತ ಬಡ ಸಂಸಾರದಿಂದ ಬಂದಿದ್ದೇನೆ, ನಮ್ಮ ಅಪ್ಪ ನನಗೆ ಅಷ್ಟೋ ಇಷ್ಟೋ ವಿದ್ಯೆಯನ್ನು ಕೊಡಿಸಿದ್ದಾರೆ. ನನಗೆ ಈ ಪೀಠದಲ್ಲಿ ಕುಳಿತಿದ್ದೇನೆ ಎನ್ನುವಂಥ ಅರಿವು ಇಟ್ಟುಕೊಂಡು ಎಲ್ಲವನ್ನೂ ಪರಾಂಭರಿಸಿ ನನಗೆ ಭಗವಂತ ಏನು ಜ್ಞಾನ ಕೊಟ್ಟಿದ್ದಾನೆ ಅದನ್ನು ಉಪಯೋಗಿಸುತ್ತೇನೆ. ಯಾರದೋ ಒಂದು ತರಹಃ ಇಂಟರ್‌ಪ್ರಿಟ್ ಮಾಡಿದರೆ ನಿಜವಾಗಿಯೂ ಸಹ ಬಹಳ ನೋವಾಗುತ್ತದೆ.

ಶ್ರೀ ಹೆಚ್.ಡಿ. ಬಸವರಾಜ್: ನಾವು ಯಾವುದೇ ಸಂದರ್ಭದಲ್ಲಿ ಇದೇ ರೀತಿ ಮಾಡಬೇಕೆಂದು ಈ ಭಾಗದಿಂದ ನಾವು ನಿಮ್ಮ ಮೇಲೆ ಒತ್ತಡವನ್ನು ತಂದಿಲ್ಲ.

(ಗೊಂದಲ)

ಅಧ್ಯಕ್ಷರು: ನಾನು ಹೇಳಿದ್ದೇನೆ, ಮಧ್ಯೆ ಮಧ್ಯೆ ಅಡ್ಡ ಮಾತನಾಡಬಾರದು. ಅವರು ಮಾತನಾಡುತ್ತಿದ್ದಾರೆ. ದಯಮಾಡಿ ಯಾರಿಗೂ ಅಡ್ಡ ಮಾತನಾಡುವುದಕ್ಕೆ ಅವಕಾಶವಿಲ್ಲ. ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ತಾವು ಏನು ಭಾವನೆಗಳನ್ನು ವ್ಯಕ್ತ ಮಾಡಿದಿರಿ ನಾನು ಆ ಭಾವನೆಗೆ ಸ್ಪಂದಿಸುತ್ತೇನೆ. ಇಲ್ಲವೆಂದು ಹೇಳುವುದಿಲ್ಲ. ತಾವು ಹೇಳಿದಂಥ ಮಾತಿನ ಅರ್ಥ ಇದೆ. ಆದರೆ ಕೆಲವು ಸಲ ಪ್ರಜಾಪ್ರಭುತ್ವದಲ್ಲಿ ಮನುಷ್ಯ ಒತ್ತಡಕ್ಕೆ ಮಣಿಯುತ್ತಾನೆ ಎನ್ನುವುದಕ್ಕೆ ಅನೇಕ ಉದಾಹರಣೆಗಳು ಇವೆ. ನಾನೂ ಕೂಡ ಕೆಲವು ಸಲ ಭಾವನೆಗಳಿಗೆ ಒಳಗಾಗಬಹುದು ಇದು ಹ್ಯೂಮನ್ ಸೈಕಾಲಜಿ. ಎಲ್ಲರೂ ಕೂಡ ಹ್ಯೂಮನ್ ಸೈಕಾಲಜಿ ಅಬಾ ಇದ್ದೇವೆ ಎನ್ನತಕ್ಕಂಥದ್ದು

ಬಹಳ ಕಷ್ಟ. ಅದು ಏನೇ ಇರಲಿ, ಆದರೆ ನಾನೂ ಕೂಡ ತಮ್ಮ ಭಾವನೆಗೆ ಸ್ಪಂದಿಸುತ್ತೇನೆ. ಆದರೆ ತಾವು ಹೇಳಿದಿರಿ, ಲೋಕಸಭೆಯಲ್ಲಿ ಹೀಗೆ ಹೇಳಿದ್ದರು ಬೇರೆ ಎಕ್ಸಪರ್ಟ್ಸ್ ಎಂದು, ನಾವು ಅದೇ ರೀತಿಯಾಗಿ ಹೇಳುತ್ತಿದ್ದೇವೆ. ರಾಜ್ಯಸಭೆಯಲ್ಲಿ ಸ್ಪಷ್ಟವಾದಂಥ ಪತ್ರವನ್ನು ಕೊಟ್ಟಿದ್ದಾರೆ, ಆ ಪತ್ರ ಕೂಡ ತಮ್ಮ ಮುಂದೆ ಇದೆ. ಒಂದು ಪತ್ರಕ್ಕೆ ನಾವು ಒಂದು ರೀತಿಯ ಇಂಟರ್‌ಪ್ರಿಟೇಶನ್ ಮಾಡುತ್ತೇವೆ, ಇನ್ನೊಂದು ರೀತಿಯಲ್ಲಿ ಮಾಡಿದರೆ ಇದು ಯಾವ ನ್ಯಾಯ? ಆಮೇಲೆ ರಾಜ್ಯಸಭೆಯವರು, ಜಂಟಿ ಸದನ ಇರುವುದರಿಂದ ಅವರೂ ಕೂಡ ಪಾರ್ಲಿಮೆಂಟ್‌ನಲ್ಲಿ ಆದಂಥ 1996 ಘಟನೆಯನ್ನು ಕೋಟ್ ಮಾಡಿ ಹೇಳಿದಂಥ ಉದಾಹರಣೆ, ಅದು ಬಿಟ್ಟು ಉದಾಹರಣೆ ಇಲ್ಲ. ಅದರಲ್ಲಿ ಕೊಟ್ಟಿರುವ ಉದಾಹರಣೆಯನ್ನು ಬಿಡುತ್ತೇವೆ, ಪದೇ ಪದೇ 175ರಲ್ಲಿ ಮಾಡಿದ್ದೇವೆಂದು ಹೇಳಿ ಅವರು ಹೇಳುವುದು. ಇದು ಬರುವುದಿಲ್ಲ ಸಂವಿಧಾನದ ಪ್ರಕಾರ, ದಯವಿಟ್ಟು ನೀವು ಇದನ್ನು ಬಿಟ್ಟು ಮಾಡಿ ಎಂದು ಎಂದರೆ, ಇಲ್ಲವೆಂದು ಹೇಳುವುದು. ಅದಕ್ಕೆ ಅಮೆಂಡ್‌ಮೆಂಟ್ ತರುವುದಕ್ಕೂ ತಯಾರು ಇಲ್ಲ. ನೀವು ಅನೇಕ ಸಾರಿ ಬೇರೆಯವರನ್ನು ಕೂಡ ಕೇಳಿಕೊಂಡಿದ್ದೀರಿ. ಇಲ್ಲಿರುವ ಹಿರಿಯ ನಾಯಕರಾದ ಮಾನ್ಯ ಎಂ.ಪಿ. ಪ್ರಕಾಶ್‌ರವರನ್ನು ಕೇಳಿಕೊಂಡಿದ್ದೀರಿ. ಪಾಪ ಅವರಿಗೂ ಸ್ವಲ್ಪ ಇಕ್ಕಟ್ಟಿನಲ್ಲಿ ಸಿಕ್ಕಿದಂತಾಗಿದೆ. ಭೀಷ್ಮಾಚಾರ್ಯರ ಪಾತ್ರವನ್ನು ವಹಿಸಬೇಕೆಂದು ಒಂದು ಕಡೆ, ಇನ್ನೊಂದು ಕಡೆ ಕರ್ಣನ ಪಾತ್ರ ವಹಿಸಬೇಕು. ಈಗ ಅವರು ಎಲ್ಲಿದ್ದಾರೊ ನನಗೂ ಗೊತ್ತಾಗುತ್ತಿಲ್ಲ. ಏಕೆಂದರೆ 39 ಜನ ಸದಸ್ಯರಿಗೆ ನಾವು ಸಸ್ಪೆಂಡ್ ಮಾಡಿದ್ದೇವೆಂದು ಹೇಳಿ ರಾಷ್ಟ್ರೀಯ ನಾಯಕರಾದ ಶ್ರೀಮಾನ್ ದೇವೇಗೌಡರು ಈಗಾಗಲೇ ಆದೇಶವನ್ನು ಕೊಟ್ಟಿದ್ದಾರೆ. ಮಾನ್ಯ ತಿಪ್ಪಣ್ಣನವರ ಮೇಲೆ ಕೂಡ ಆಕ್ಷನ್ ಎಂದು ಹೇಳಿದ್ದಾರೆ. ಇದು ಇಲ್ಲೀಗಲ್ ಸರ್ಕಾರ ಎಂದಿರುವುದಕ್ಕೆ ಬಹಳ ಸಿಟ್ಟು ಬಂದು ಬಿಟ್ಟಿತು ನಮ್ಮ ಕಂದಾಯ ಸಚಿವರಿಗೆ . ಸರ್ ಇದು ಸಸ್ಪೆಂಡೆಡ್ ಸರ್ಕಾರ. ರಾಷ್ಟ್ರೀಯ ಪಕ್ಷ ನಿರ್ಣಯ ತೆಗೆದುಕೊಂಡು, ನಿಮಗೆ ನೋಟೀಸ್‌ನ್ನು ಸರ್ವ ಮಾಡಬೇಕಾಗಿದ್ದರೆ ನಿಮಗೆ ಸರ್ಕಾರ ನಡೆಸುವುದಕ್ಕೆ ಯಾವ ನೈತಿಕ ಹಕ್ಕು ಇದೆ? Have you got any moral right to continue?

ಶ್ರೀ ಎಂ.ಪಿ. ವೆಂಕಟೇಶ್: ಅದು ಆ ಪಕ್ಷಕ್ಕೆ ಬಿಟ್ಟ ವಿಚಾರವಾಗಿದೆ. ಅದು ನಮ್ಮ ಪಕ್ಷದ ಆಂತರಿಕ ವಿಚಾರವಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸಸ್ಪೆಕ್ಷನ್ ಗೌರ್ಮೆಂಟ್ ಇದು, ರಾಷ್ಟ್ರೀಯ ನಾಯಕರು, ಮುಖ್ಯಮಂತ್ರಿಗಳಿಂದ ಹಿಡಿದು ಸುಮಾರು 38 ಜನರನ್ನು ಸಸ್ಪೆಂಡ್ ಮಾಡಿದ್ದಾರೆ. ಅವರು ನಮಗೆ ನೀತಿ ಪಾಠವನ್ನು ಹೇಳುತ್ತಾರೆ, ಅವರು ರೂಲ್ಸ್‌ನ್ನು ಹೇಳುತ್ತಾರೆ, ಅವರು ಸಂವಿಧಾನದ ಬಗ್ಗೆ ನಮಗೆ ಹೇಳುತ್ತಾರೆ. Anunconstitutional Government, illegal Government which is sitting in this House, they teachus moral rights, moral lessons! ಇದನ್ನು ತಾವು ಒಪ್ಪುತ್ತೀರಾ? ಅದಕ್ಕಾಗಿ ನಾವು ಇಂತಹವರಿಂದ ನಾವು ಪಾಠವನ್ನು ಕಲಿಯಬೇಕಾಗಿಲ್ಲ. ಅದಕ್ಕೆ ಅವರು ಇಲ್ಲಿಗಲ್ಲೋ.....

(ಈ ಹಂತದಲ್ಲಿ ಮಾನ್ಯ ರಮೇಶ್‌ಕುಮಾರ್‌ರವರು ಕುಳಿತುಕೊಂಡು ಮಾತನಾಡುತ್ತಿದ್ದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದರ ಬಗ್ಗೆ ಎಲ್ಲವೂ ಕೂಡ ಹೇಳಿ ಆಯಿತು. ಮಾಡಿ ಕೂಡ ಆಯಿತು, ಮತ್ತೇ ಕೊನೆಗೆ ಏನಪ್ಪಾ ಅಂದರೆ, ill-born Government. ಇಂತಹ ಸರ್ಕಾರವನ್ನು ಇಟ್ಟುಕೊಂಡು ಇವತ್ತು ನಮಗೆ ರೂಲ್ಸ್ ಪ್ರಕಾರ ನಡೆದಿಲ್ಲ, ರೆಗ್ಯುಲೇಷನ್ ಪ್ರಕಾರ ನಡೆದಿಲ್ಲ, ಸಂವಿಧಾನದ ಪ್ರಕಾರ ನಡೆದುಕೊಂಡಿಲ್ಲ ನೀವೆಲ್ಲರೂ ಕೂಡ ಅಬ್‌ಸ್ಟಕ್ಟ್ ಮಾಡುತ್ತಿದ್ದೀರಿ, ಎನ್ನತಕ್ಕಂತಹ

ಮಾತನ್ನು ಹೇಳುತ್ತಿದ್ದೀರಿ, ನಿಜವಾಗಲೂ ಈಗ ತಮ್ಮ ಮೇಲೂ ಕೂಡ ಜವಾಬ್ದಾರಿ ಇದೆ. ಮತ್ತೆ ಅದನ್ನು ಹೇಳಿದರೆ ತಮಗೆ ಸಿಟ್ಟು ಬರಬಹುದು. ಈಗಾಗಲೇ ಹೈಕೋರ್ಟಿನವರು ಡಿಸ್‌ಕ್ವಾಲಿಫಿಕೇಷನ್ ಬಗ್ಗೆ ತಮಗೆ ಆದೇಶವನ್ನು ಕೊಟ್ಟಿದ್ದಾರೆ. ಇಮ್ಮೀಡಿಯೇಟ್ ಆಗಿ ಆ್ಯಕ್ಷನ್ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಇಮ್ಮೀಡಿಯೇಟ್ ಅಂದರೆ ತಮಗೆ ಎಷ್ಟು ದಿವಸಗಳು ಬೇಕು? ಆದರೆ ನಮಗೆ ಕೇಳುತ್ತೀರಿ, ಈಗ ಅದು ಬಂದು ಸುಮಾರು ತಿಂಗಳಾಯಿತು, ಡಿಸ್‌ಕ್ವಾಲಿಫಿಕೇಷನ್ ಬಗ್ಗೆ ನೋಡುವುದಕ್ಕೆ ತಮಗೆ ಎಷ್ಟು ದಿವಸಗಳು ಬೇಕು? ಏತಕ್ಕಾಗಿ ಮಾಡುತ್ತಿಲ್ಲ? ಏನು ಮುಜುಗರ ಇದೆ, ಎಲ್ಲಿ ಪ್ರೆಷರ್ ಇದೆ, ಇದನ್ನು ನಾವು ಕೇಳಬೇಕಾಗುತ್ತದೆ.

ಅಧ್ಯಕ್ಷರು: ಮಾನ್ಯ ಖರ್ಗೆಯವರೆ, the Speaker acts as a Quasi-Judicial Body. He has to follow certain procedures. ಆದ್ದರಿಂದ ಅದನ್ನು ಯಾವ ರೀತಿಯಾಗಿ ಮಾಡಬೇಕು, ಅದನ್ನು ಈ ಪೀಠ ಮಾಡುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸಾರ್ ಇಲ್ಲಿ ಪ್ರಶ್ನೆ . . .

ಶ್ರೀ ಬಸವರಾಜ ಎಸ್. ಹೊರಟ್ಟಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, . . .

ಶ್ರೀ ಕೆ.ಆರ್. ರಮೇಶ್‌ಕುಮಾರ್: ಅವರು ಏನು ಹೇಳುತ್ತಾರೋ ಹೇಳಲಿ.

ಶ್ರೀ ಬಸವರಾಜ್ ಎಸ್. ಹೊರಟ್ಟಿ: ಮಾನ್ಯ ಅಧಕ್ಷರೆ, . . .

ಅಧ್ಯಕ್ಷರು: ನಿಮಗೆ ಮಾತನಾಡುವುದಕ್ಕೆ ನಾನು ಪರ್ಮಿಷನ್ ಕೊಟ್ಟಿಲ್ಲ, ಕುಳಿತುಕೊಳ್ಳಿ. ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ತಕ್ಷಣ ತಾವು ಎದ್ದುನಿಂತು ಕೊಂಡು ಬಿಟ್ರಿ. ನೋ,

(ಗೊಂದಲ)

ಅಧ್ಯಕ್ಷರು: ಮಾನ್ಯ ಖರ್ಗೆಯವರೇ, ತಾವು ದಯಮಾಡಿ ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, . . .

ಅಧ್ಯಕ್ಷರು: ನಾನು ತಮಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ನಾನು ಖರ್ಗೆಯವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಖರ್ಗೆಯವರೆ, ತಾವು ಮಾತನಾಡಿ. ಈ ಸಂಪ್ರದಾಯ ಈ ರೀತಿ ಆದರೆ ಏನಾಗುತ್ತದೆ ಅಂದರೆ ನಾವು ಯಾವುದನ್ನೂ ಕೂಡ ನಡೆಸುವುದಕ್ಕಾಗುವುದಿಲ್ಲ. ಖರ್ಗೆಯವರೆ, ತಾವು ಮಾತನಾಡಿ. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಾಗ ಅವರು ಮಾತನಾಡಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಪಾಯಿಂಟ್ ಆಫ್ ಆರ್ಡರ್‌ನಲ್ಲಿದ್ದೇನೆ.

ಅಧ್ಯಕ್ಷರು: ಇಲ್ಲಾ ಸ್ವಾಮಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸ್ವಾಮಿ ತಾವು ನಾನು ಹೇಳುವುದನ್ನು ಕೇಳಬೇಕು. ನಾನು ಪಾಯಿಂಟ್ ಆಫ್ ಆರ್ಡರ್‌ನಲ್ಲಿದ್ದೇನೆ. ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್‌ರವರಿಗೆ, ತಾವು ಆ ರೀತಿಯಾಗಿ ಹೇಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು: ನೋಡಿ ಸ್ವಾಮಿ,

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಅಷ್ಟೇ ಮಾತ್ರ ಹೇಳುವುದು:

ಅಧ್ಯಕ್ಷರು: ನಾನು ಒಂದೇ ಒಂದು ಮಾತು ಹೇಳುತ್ತೇನೆ. ಅದು ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಆಗಲಿ, ಇನ್ನೊಬ್ಬರು ಮಿನಿಸ್ಟರ್ ಆಗಲಿ, ಏನಾಗಿದೆ ಎಂದರೆ, ಏನು ಈ ಪೀಠದಿಂದ ಆದೇಶ ಕೊಡುತ್ತೇನೆ ಅದನ್ನು ಫಾಲೋ ಮಾಡಬೇಕಾಗುತ್ತದೆ. ಯಾವುದೋ ಕಾರಣಕ್ಕೆ ಎದ್ದು ನಿಂತುಕೊಂಡರೆ ಸಭೆ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ತಾವು ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್‌ಗೆ . . .

ಅಧ್ಯಕ್ಷರು: ಅದು ಆಗಲ್ಲಸ್ವಾಮಿ ತಾವು ಕುಳಿತುಕೊಳ್ಳಿ. ಮಾನ್ಯ ಖರ್ಗೆಯವರೆ, ತಾವು ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಲ್ಲಾ ತಾವು ಓದುತ್ತಿದ್ದೀರಿ, ತಮ್ಮ ಗಮನ ನನ್ನ ಕಡೆ ಇರಲಿ ಎಂದು ಹೇಳುತ್ತೇನೆ.

ಅಧ್ಯಕ್ಷರು: ಇಲ್ಲಾ ಇರಲಿ. ಆಯಿತು ತಾವು ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ತಮಗೆ ಕೋರ್ಟಿನಿಂದ ಡೈರಕ್ಷನ್ ಬಂದು ಸುಮಾರು ದಿವಸಗಳಾಯಿತು.

ಅಧ್ಯಕ್ಷರು: ನೋ, ನೋ, ಡೈರೆಕ್ಷನ್ ಎಂಬ ಪದವನ್ನು ತಾವು ಉಪಯೋಗಿಸಬೇಡಿ. Court cannot give direction to the Speaker.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಓ.ಕೆ.

Mr. Speaker: Under 10th Schedule, ಎಲ್ಲಾ ಇದೆ, ಅದನ್ನು ನಾವು ಮಾಡಬೇಕಾಗುತ್ತದೆ. ಅದನ್ನು ನಾನು ಮಾಡುತ್ತೇನೆ. ಅದನ್ನು ಬಿಟ್ಟು ನೀವು ಡೈರೆಕ್ಷನ್ ಎಂದು ಹೇಳುತ್ತೀರಿ?

Sri M. Mallikarjun Kharge: O.K reference, I amend myself. Reference, Request, Communication. ಏನನ್ನಬೇಕು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಇಂಗ್ಲೀಷ್ . . .

ಅಧ್ಯಕ್ಷರು: ಇಂಗ್ಲೀಷ್ ನಮಗೆ ಅರ್ಥವಾಗುವುದಿಲ್ಲ. ಯಾವುದು ನಿಮ್ಮ ನಾಲ್ಕಾರು ಪದಗಳಲ್ಲಿ ಸೂಕ್ತವಾಗುತ್ತದೆ, ಅದನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸಾರ್ ಈಗ ಅದು ಬಂದ ಮೇಲೆ ತಾವು ಅದರ ಬಗ್ಗೆ ಇಮ್ಮೀಡಿಯೇಟ್ ಆಗಿ ನಿರ್ಣಯವನ್ನು ತೆಗೆದುಕೊಳ್ಳಬೇಕು. ಏಕೆಂದರೆ, ಅವರು ಡಿಸ್‌ಕ್ವಾಲಿಫೈ ಆದರೆ, ಈ ಎಲ್ಲಾ ಪ್ರೊಸೀಡಿಂಗ್ಸ್ ಇಲ್ಲಿಯವರೆಗೆ ತೆಗೆದುಕೊಂಡಿರತಕ್ಕಂತಹ ನಿರ್ಣಯಗಳೂ ಕೂಡ ಇಲ್ಲಿಗಲ್; ಅದಕ್ಕಾಗಿ ತಮ್ಮ ನಿರ್ಣಯದ ಮೇಲೆ ಸರ್ಕಾರ ಇವತ್ತು ಅವಲಂಬಿಸಿದೆ. ಈ ಸರ್ಕಾರದ ಅಸ್ತಿತ್ವ ಅಳಿವು ಮತ್ತು ಉಳಿವು ಅವರು ಇಲ್ಲಿಯವರೆಗೆ ಪಾಸು ಮಾಡಿರುವಂತಹ ಆರ್ಡರ್ಸ್‌ಗಳು, ಗಮನಕ್ಕೆ ತೆಗೆದುಕೊಂಡಂತಹ ಎಲ್ಲಾ ಕೆಲಸಗಳು ಏನು ಡೆವಲಪ್‌ಮೆಂಟ್ ಬಗ್ಗೆ ಮಾತನಾಡಿದ್ದಾರಲ್ಲಾ ಆ ಡೆವಲಪ್‌ಮೆಂಟ್ ಕೂಡ ತಮ್ಮ ನಿರ್ಣಯದ ಮೇಲೆ ಅವಲಂಬಿಸಿದೆ. ಅದಕ್ಕಾಗಿ ಈಗಾಗಲೇ ಅಲಹಾಬಾದ್ ಹೈಕೋರ್ಟ್ ನಿರ್ಣಯ ಕೊಟ್ಟಿದೆ. ಯಾರು ಡಿಫೆಕ್ಟ್ ಆಗಿ ಹೋದರೆ ಈ ರೀತಿಯಾಗಿ ಧಿಕ್ಕರಿಸಿ ಹೋದರೆ ಏನಾಗುತ್ತದೆ ಎಂದು. ಈಗಾಗಲೇ ಶ್ರೀ ದೇವೇಗೌಡರನ್ನು ದಿಕ್ಕರಿಸಿಹೋದವರ ಮೇಲೆ ಏನು ಆ್ಯಕ್ಷನ್ ತೆಗೆದುಕೊಂಡಿದ್ದಾರೆ ಎನ್ನತಕ್ಕಂತಹದ್ದು ಎಲ್ಲರಿಗೂ ಗೊತ್ತಾಗಿದೆ. ಅದು ಗೊತ್ತಾದ ಮೇಲೂ ಕೂಡ ತಾವು ಅವರ ಮೇಲೆ ಅಥವಾ ಕೋರ್ಟಿನಿಂದ ಬಂದಂತಹ ಒಂದು ನಿರ್ಣಯದ ಮೇಲೆ ಆ್ಯಕ್ಷನ್‌ನ್ನು ತೆಗೆದುಕೊಂಡಿಲ್ಲ.

ಅಧ್ಯಕ್ಷರು: ಪದೇ ಪದೇ ತಾವು ಕೋರ್ಟಿನ ನಿರ್ಣಯ, ನಿರ್ಣಯ ಎಂದು ಹೇಳುತ್ತೀರಲ್ಲಾ ಸ್ವಾಮಿ. ಕೋರ್ಟಿಗೆ ಹೋಗಿದೆ, ಅದು ಏನು ಇದ್ದರೂ ಕೂಡ ಅದು ಅವರಿಗೆ ಬಿಟ್ಟಿರುವಂತಹದ್ದು ಈ ಕೋರ್ಟಿಗೆ ಎಂದು ಅದನ್ನು ಇಲ್ಲಿಗೆ ಹಾಕಿಬಿಟ್ಟಿದ್ದಾರೆ. ನಾನು ಏನಪ್ಪಾ ಎಂದರೆ ಸ್ಪೀಕರ್ ಕೋರ್ಟ್‌ನಲ್ಲಿ. . . . .

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸ್ಪೀಕರ್ ಹೌದು.

ಅಧ್ಯಕ್ಷರು: ಅದೇನೆಂದರೆ, it is not the subject for discussion ಅದರ ಪ್ರಕಾರ ಏನು ಸ್ಪೀಕರ್ ಒಂದು ಏನು ಒಂದು Quasi-Judicial Body ಯಲ್ಲಿ ಕೆಲಸ ಮಾಡಿಸಬೇಕೋ ಅದನ್ನು ಮಾಡುತ್ತಾರೆ. ಪದೇ ಪದೇ ನೀವು ಕೋರ್ಟು ನಿರ್ಣಯ, ಇಮ್ಮೀಡಿಯೇಟ್, . . . ತಮ್ಮಂತಹ ಹಿರಿಯ ಸದಸ್ಯರು . . .

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕೋರ್ಟ್ ತಮಗೆ ಎಕ್ಸ್‌ಪಿಡಿಯಸ್‌ಲಿ ಮಾಡಬೇಕೆಂದು ಹೇಳಿದ್ದಾರೆ. ಹೌದಾ,

Mr. Speaker: Expeditiously ಅಂತ ಇಲ್ಲ. ಅದು ಅವರಿಗೆ ಏನು ಹೇಳಿದ್ದಾರೆಂದರೆ, ಏನು ಮಾಡಬೇಕೆಂದು ಅವರಿಗೆ ಗೊತ್ತಿದೆ. ಅದನ್ನು ಅವರು ಮಾಡುತ್ತಾರೆ ಎಂದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾಡಿ.

Mr. Speaker: No. In that way they cannot direct the Speaker. ತಾವು ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರಿಗೆ ಏನು ಮಾಡಬೇಕೆಂದು ಗೊತ್ತಿದೆ ಎಂದು ಹೇಳಿ ತಮ್ಮ ಮೇಲೆ ನಂಬಿಕೆಯನ್ನು ಇಟ್ಟು ಈ ಒಂದು ಸಲಹೆಯನ್ನು ಕೊಟ್ಟ ಮೇಲೆ ಈಗ ತಾವು ಇಡೀ ಕರ್ನಾಟಕದ ಜನತೆ ಅಷ್ಟೇ ಅಲ್ಲ, ಇಡೀ ಭಾರತದ ಜನರು ತಮ್ಮ ಕಡೆ ನೋಡುತ್ತಿದ್ದಾರೆ. ಒಂದು ಕಡೆ ಅವರ ರಾಷ್ಟ್ರೀಯ ನಾಯಕರು ಸಸ್ಪೆಂಡ್ ಮಾಡಿದ್ದಾರೆ, ಇನ್ನೊಂದು ಕಡೆ ಕೋರ್ಟಿನಿಂದ ಈ ರೀತಿಯಾಗಿ ಬಂದಿದೆ. ಸಲಹೆ ಬಂದಿದೆ, ಇಂತಹ ಸಂದರ್ಭದಲ್ಲಿ ಏತಕ್ಕಾಗಿ ನಿರ್ಣಯ ಹೊರಗೆ ಬರುತ್ತಿಲ್ಲ? ಆ ನಿರ್ಣಯದ ಬಗ್ಗೆ ನಾವು ಇವತ್ತು ಇವರಿಗೆ ಇಲ್ಲೀಗಲ್ ಸರ್ಕಾರ ಇದೆ, ಇವರಿಗೆ ಏನೂ ಅಧಿಕಾರವಿಲ್ಲ, ಅಥವಾ ಇದು ಒಂದು constitutionally, legally formed Government ಇಲ್ಲವೆಂದು ನಾವು ಹೇಳಿದರೆ ಅವರಿಗೆ ಏತಕ್ಕಾಗಿ ಸಿಟ್ಟು ಬರಬೇಕು ಸ್ವಾಮಿ? ಇವತ್ತು ಅವರು ಪದೇಪದೇ ಹೇಳುತ್ತಾರೆ, ನಮಗೆಲ್ಲಾ ಇಲ್ಲೀಗಲ್ ಗೌರ್ನಮೆಂಟ್ ಅಂದಿರಿ, ನಮಗೆ ಅಪವಿತ್ರಮೈತ್ರಿ ಅಂದ್ರಿ, ಇದರ ಬಗ್ಗೆ ಜನರಿಗೆ ಗೊತ್ತಿದೆ. ಅಂತ ಜನರಿಗೆ ಗೊತ್ತಿದ್ದೇ ಅಂತ ಹೇಳಿ ನಿಮ್ಮ ವಿರುದ್ಧ ಮತ ಕೊಟ್ಟರು ಎಂದು ತಿಳಿದುಕೊಂಡು ಅವರು ಏನು ಮಾಡಿದರು ನಮ್ಮ ಜೊತೆಯಲ್ಲಿ ಬಂದರು. ಈಗ ನೀವು ಇಬ್ಬರು ಹೇಳುವುದು ಏನೆಂದರೆ, ನಿಮ್ಮ ವಿರುದ್ಧ ನಮಗೆ ಇಬ್ಬರಿಗೂ ಮತವನ್ನು ಕೊಟ್ಟಿದ್ದರು ಅದಕ್ಕಾಗಿ ನಾವಿಬ್ಬರೂ ಒಂದಾಗಿದ್ದೇವೆ, ಎಂದು ಹೇಳುತ್ತಿದ್ದೀರಿ. ಆಗ ಸಂತೋಷ. ನೀವಿಬ್ಬರೂ ಒಂದಾಗಿ, ಆದರೆ ನೀವಿಬ್ಬರೂ ಒಂದಾಗಿರುವುದು ಸರಿ ಇಲ್ಲವೆಂದು ರಾಷ್ಟ್ರೀಯ ನಾಯಕರು ಇವತ್ತು ಸಸ್ಪೆಂಡ್ ಮಾಡಿದ್ದಾರಲ್ಲಾ ಅದಕ್ಕೇನು ಹೇಳುತ್ತೀರಿ?

ಶ್ರೀ ಎಂ.ಪಿ. ವೆಂಕಟೇಶ್: ಮಾನ್ಯ ಅಧ್ಯಕ್ಷರೆ, ಅದು ನಮ್ಮ ಪಕ್ಷಕ್ಕೆ ಬಿಟ್ಟಿರುವಂತಹ ವಿಚಾರ. ನಮ್ಮ ಪಕ್ಷದ ವಿಚಾರ ನಿಮಗೆ ಏತಕ್ಕೆ ಸ್ವಾಮಿ? ಸಸ್ಪೆಂಡ್ ಮಾಡುತ್ತಾರೆ ವಾಪಸ್ಸು ತೆಗೆದು ಕೊಳ್ಳುತ್ತಾರೆ. ನಿಮಗ್ಯಾಕೆ ಆ ಚಿಂತೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳತಕ್ಕಂತದ್ದು ಏನೆಂದರೆ, ವಿರೋಧ ಪಕ್ಷದವರು ಡೆವಲಪ್‌ಮೆಂಟ್ ವರ್ಕ್ಸ್‌ಗೆ ಆಸ್ಪದ ಕೊಡುತ್ತಿಲ್ಲವೆಂದು ಇವರು ಪ್ರಚಾರವನ್ನು ಮಾಡುತ್ತಿದ್ದಾರೆ, ಆ ರೀತಿಯಾಗಿ ಆಬ್ಜೆಕ್ಟ್ ಮಾಡುತ್ತಿದ್ದಾರೆ, ನಾವು ಬಡ್ಜೆಟನ್ನು ಮಾರ್ಚ್‌ವರೆಗೆ ಪಾಸ್ ಮಾಡಿ ಕೊಟ್ಟಿದ್ದೇವೆ. ಈಗ ಉಳಿದಿರುವುದು ಸಪ್ಲಿಮೆಂಟರಿ ಬಿಲ್ ಮತ್ತು ಅಪ್ರಾಪ್ರಿಯೇಷನ್ ಬಿಲ್ಸ್‌ಗಳಷ್ಟೇ ಪಾಸ್ ಆಗಬೇಕಾಗಿದೆಯಷ್ಟೆ. ಯಾವುದೂ ಅಬ್‌ಸ್ಟಾಕ್ಟ್ ಆಗಿಲ್ಲ, ಒಂದು ತಿಂಗಳೊಳಗೆ ಅಬ್‌ಸ್ಟಾಕ್ಟ್ ಆಗುತ್ತದೆಯೇ? ಡೆವಲಪ್ಮೆಂಟ್ ವರ್ಕ್‌ಗೆ illegal government is taking action everyday. ಇವರು ದಿನವೂ ಅನೌನ್ಸ್ ಮಾಡುತ್ತಿದ್ದಾರೆ, ಅದು ಕೊಡುತ್ತೇವೆ, ಇದು ಕೊಡುತ್ತೇವೆಂದು ಹೋದ ಕಡೆಯೆಲ್ಲಾ ಹೇಳುತ್ತಿದ್ದಾರೆ. ಆ ಕೋಳಿದು ಬಂತೆಂದರೆ ಮೂವತ್ತೈದು ಕೋಟಿ ರೂಪಾಯಿ ಕೊಡುತ್ತೇವೆ, ನೀರಿನ ವಿಷಯ ಬಂತೆಂದರೆ ಸಾವಿರ ಕೋಟಿರೂಪಾಯಿಗಳನ್ನು ಹೆಚ್ಚಿಗೆ ಕೊಡುತ್ತೇವೆ, ಇನ್ನೊಂದು ರಸ್ತೆಯ ವಿಷಯ ಬಂದರೆ ಅದನ್ನೂ ಕೂಡ ಕೊಡುತ್ತೇವೆಂದು ಹೇಳುತ್ತಾ ಹೋಗುತ್ತಿದ್ದಾರೆ. ಹೀಗಿದ್ದರೂ ಇವತ್ತು ಸುಮ್ಮನೆ ಆಪಾದನೆ ಮಾಡಿ ಕಾಂಗ್ರೆಸ್ ಮೇಲೆ ಗೂಬೆ ಕೂರಿಸುವುದಕ್ಕೋಸ್ಕರ, ಅಥವಾ ವಿರೋಧಪಕ್ಷದ ಎಲ್ಲಾ ಮುಖಂಡರುಗಳ ಮೇಲೆ ಗೂಬೆ ಕೂರಿಸುವುದಕ್ಕೋಸ್ಕರ, ನೀವು ಅಬ್‌ಸ್ಟಾಕ್ಟ್ ಮಾಡುತ್ತಿದ್ದಿರಿ, ಈ ಪ್ರೊಸೀಡಿಂಗ್ಸ್ ಅನ್ನು ಇವತ್ತು ವಿತ್‌ಹೆಲ್ಡ್ ಮಾಡಿ ಈ ಸದನವನ್ನು ನಡೆಯಲಿಕ್ಕೆ ಬಿಡುತ್ತಿಲ್ಲ ಎನ್ನುವಂತಹ ಏನು ಮೆಸೇಜ್ ಅನ್ನು ನೀವು ಹೊರಗಡೆ ಕೊಡುತ್ತಿದ್ದೀರಿ, ಇದು ನಿಜವಾಗಲೂ ಸರಿಯಲ್ಲ, ಇದನ್ನು ನಾನು ಖಂಡನೆ ಮಾಡುತ್ತೇನೆ. ಈ ರೀತಿಯ ಪ್ರಚಾರ ಮಾಡುವ ತಂತ್ರವನ್ನು ತಾವೇನು ರೂಪಿಸಿದಿರಿ, ಇದು ಸರಿಯಲ್ಲವೆನ್ನುವಂತಹ ಮಾತನ್ನು ನಾನು ಸರ್ಕಾರಕ್ಕೆ ಹೇಳಬೇಕಾಗುತ್ತದೆ. ಅದಕ್ಕೆ ಅಧ್ಯಕ್ಷರೆ, ದಯವಿಟ್ಟು ಇವತ್ತು ಏನೊಂದು ಈ ಅಪ್ರಾಪ್ರಿಯೇಷನ್ ಬಿಲ್ಸ್ ಪಾಸ್ ಮಾಡಿಸಿದಿರಿ ಇದು ಸರಿಯಲ್ಲ. ಏನೋ ಮೋಷನ್ ಆಫ್ ಥ್ಯಾಂಕ್ಸ್ ಮಾಡುವುದು ನಾವು ಸರಿಯಲ್ಲ, ಅಂದೆವು. ನೀವು ಸರಿಯಿದೆಯೆಂದು ಗಲಾಟೆಯಲ್ಲಿ ಮಾಡಿಸಿದಿರಿ, ಅಪ್ರಾಪ್ರಿಯೇಷನ್ ಬಿಲ್ಸ್ ಮಾಡಿಸುವುದು, ಆಕ್ಟ್ ಮಾಡಿಸುವುದು ಅನೇಕ ರೂಲ್ಸ್‌ಗಳನ್ನು ಟೇಬಲ್‌ಗಳ ಮೇಲಿಟ್ಟು ಅವರು ಅಪ್ರೂವ್ಡ್ ಎಂದು ಹೇಳುವುದು ಇದು ಯಾವ ನ್ಯಾಯ? ಹೀಗಾದರೆ ನಾವು ಏತಕ್ಕೆ ಸದನಕ್ಕೆ ಬರಬೇಕು? ನಾವು ಏಕೆ ಈ ಸಮಯವನ್ನು ಇಷ್ಟು ಹಾಳು ಮಾಡಬೇಕು? ಮತ್ತೆ ಸದನ ಏಕೆ ಬೇಕು? ಇನ್ನೊಮ್ಮೆ ತಮ್ಮಲ್ಲಿ ನಾವು ಕಳಕಳಿಯಿಂದ ಕೇಳಿಕೊಳ್ಳುತ್ತೇವೆ, ತಾವು ತಮ್ಮ ಅರ್ಲಿಯರ್ ಡಿಸಿಷನ್ ಅನ್ನು ರೆವ್ಯೂ ಮಾಡಿ, ಮತ್ತೆ ತಾವು ಎಲ್ಲಿಯವರೆಗೆ ಹೈಕೋರ್ಟ್‌ನ ಒಂದು ಸೂಚನೆ ನನಗೆ ಇದೆ, ಅದರ ಪ್ರಕಾರ ನಾನು ಕ್ರಮ ತೆಗೆದುಕೊಳ್ಳುವುದಿಲ್ಲ, ಅಲ್ಲಿಯವರೆಗೆ financially involved in major actions ಏನು ಇರುತ್ತವೆಯೋ ಅವ್ಯಾವುದನ್ನು ತಾವು ತೆಗೆದುಕೊಳ್ಳಬೇಡಿ ಎನ್ನತಕ್ಕಂತಹ ಡೈರೆಕ್ಷನ್ ಅನ್ನು ಅವರಿಗೆ ಕೊಡಿ; ಏಕೆಂದರೆ ಆ ದಿವಸ ತಾವು ಎಮೋಷನಲ್ ಆಗಿ ಏನು ಹೇಳಿದಿರಿ, ಒಂದು ಯಾವುದೋ ಲ್ಯಾಂಡ್ ಡಿಸ್ಪ್ಯೂಟ್ಸ್ ಬಂದಾಗ, ಆ ಎಲ್ಲಾ ಹಗರಣಗಳ ತನಿಖೆಯಾಗಲಿ ಎಂದು ಹೇಳಿದ ತಕ್ಷಣ ಮಾನ್ಯ ಮುಖ್ಯಮಂತ್ರಿಗಳು land grabbing, land mafia, ಆ ರೀತಿಯ ಎಲ್ಲಾ ಅಕ್ರಮ ಭೂಹಗರಣದ ಬಗ್ಗೆ ಎನ್‌ಕ್ವೈರಿ ಮಾಡಿಸುವುದಾಗಿ ಎದ್ದು ಹೇಳಿಬಿಟ್ಟರು. ಸರ್ ಈ ಒಂದು ಸಬ್ಜೆಕ್ಟ್ ಮೇಲೆ ತಾವು ಅಷ್ಟೊಂದು ಆತುರವಾಗಿ ಮತ್ತು ಎಮೋಷನಲ್ ಆಗಿ ಬಹಳ ಕಳಕಳಿಯಿಂದ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದಿರಿ.

ಅಧ್ಯಕ್ಷರು: ಯಾವುದು ಸ್ವಾಮಿ? ಯಾವುದು?

ಶ್ರೀ ಮಲ್ಲಿಕಾರ್ಜುನ್ ಖರ್ಗೆ: ಲಾಸ್ಟ್ ಟೈಮ್ ಆ ಲ್ಯಾಂಡ್ ಮೇಲೆ . .

ಅಧ್ಯಕ್ಷರು: ನೋ. ನೋ.

ಶ್ರೀ ಹೆಚ್.ಡಿ. ಬಸವರಾಜು: ಅದು ಆತುರ ಅಲ್ಲ, ಅದನ್ನು ತಿಳಿದುಕೊಂಡೇ ಆ ರೀತಿಯಾಗಿ ಮಾತನಾಡಿದ್ದಾರೆ. ಅದಕ್ಕೆ "ಆತುರ" ಎನ್ನುವ ಪದವನ್ನು ಬಳಕೆ ಮಾಡಬಾರದೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಖರ್ಗೆ ಸಾಹೇಬರೆ, ಈಗ ಅನೇಕ ಸಾರಿ ಈ ಸದನದಲ್ಲಿ ಈ ಭೂ ಕಳ್ಳತನದ ಬಗ್ಗೆ ಚರ್ಚೆ ನಡೆದಿತ್ತು, ಅದರ ಹಿನ್ನೆಲೆಯಲ್ಲಿ ಅದರಲ್ಲಿ ಕೆಲವರು ರೋಷನ್‌ಬೇಗ್, ಸೋಮಣ್ಣ ಅವರೆಲ್ಲಾ ಈ ಬೆಂಗಳೂರು ಅಭಿವೃದ್ಧಿಯ ಸಚಿವರಾಗಿದ್ದವರು. ಅಂಥ ಸಂದರ್ಭದಲ್ಲಿ ನಾನು ಕೇಳಿದ್ದೆ, ನೋಡಿ ನಿಮ್ಮ ಅನುಭವದಲ್ಲಿ ಯಾವ ರೀತಿಯಾಗಿ ಮೋಸವಾಗುತ್ತಿದೆ, ಯಾವ ರೀತಿಯಾಗಿ ಲೂಟಿಯಾಗುತ್ತಿದೆ ಅದಕ್ಕೆ ಯಾರ್ಯಾರು ಕಾರಣರು ಅದನ್ನು ಹೇಳಿ ಸ್ವಾಮಿ ಎಂದು ಕೂಡ ನಾನು ಅವರಲ್ಲಿ ವಿನಂತಿ ಮಾಡಿದ್ದೆನು. ಆ ಕಾರಣದಿಂದ ನನಗೆ ಆ ರೀತಿ ಅನಿಸಿತ್ತು, ಯಾವುದೋ ಒಂದು ಇಲ್ಲೀಗಲ್ ವಿಚಾರ ಬಂದಾಗ ನಿಜವಾಗಿ,.... ಇದೊಂದೇ ವಿಚಾರವೆಂದಲ್ಲ, ಎಲ್ಲಾ ವಿಚಾರಗಳಲ್ಲಿ ಏನು ಗಂಭೀರವಾದ ಆಪಾದನೆ ಇದೆ, ಆ ಗಂಭೀರವಾದ ಆಪಾದನೆಗಳ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ಅದಿಲ್ಲದಿದ್ದರೆ ಏನು ಸ್ವಾಮಿ, ದಿನವೂ ಅದು ಏನೋ ಒಂದು ತರಹ ಹೀಗೆಲ್ಲಾ ಆಡುವುದು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಹೌದು, ಅಧ್ಯಕ್ಷರೆ, ನೀವು ಹೇಳತಕ್ಕಂಥದ್ದು ನೂರಕ್ಕೆ ನೂರು ಸತ್ಯ, ಈ ಸದನದೊಳಗೆ ಸೀಟಿಂಗ್ ವ್ಯವಸ್ಥೆ ಮಾಡುವಾಗ ಭ್ರಷ್ಟರಿಗೆ, ಪ್ರಾಮಾಣಿಕರಿಗೆ ಎಂದು ಬೇರೆ ಬೇರೆ ಮಾಡಿಲ್ಲ, ಸಾರ್ವಜನಿಕರು ನಮ್ಮನ್ನು ಜಡ್ಜ್ ಮಾಡುವಾಗ ಬೇರೆ ಯಾರ್ಡ್‌ಸ್ಟಿಕ್ ಇಟ್ಟುಕೊಂಡು ನೋಡುವುದಿಲ್ಲ, ಪ್ರಾಮಾಣಿಕರಿಗೂ ಒಂದೇ ಹೊಡೆತ ಬೀಳುತ್ತದೆ, ಗಂಟೆಲ್ಲಾ ನುಂಗಿದವರಿಗೂ ಸಹ ಒಂದೇ ಹೊಡೆತ ಬೀಳುತ್ತದೆ, ಜಾಸ್ತಿ ನುಂಗಿದವರೇ ಜಾಸ್ತಿ ಉಪದೇಶಗಳನ್ನು ಕೊಡತಕ್ಕಂತದ್ದು, ಆದ್ದರಿಂದ ತಾವೇ ಅಲ್ಲಿಂದ ಒಂದು ಎನ್‌ಕ್ವೈರಿಗೆ ಆರ್ಡರ್ ಮಾಡಿ, ಈಗ ನಾವೆಲ್ಲರೂ ಅಂದರೆ ಕಳೆದ 20, 25 ವರ್ಷಗಳಿಂದ ಸಾರ್ವಜನಿಕರ ಜೀವನವನ್ನು, ಪ್ರಾರಂಭ ಮಾಡಿದಾಗ ನಮ್ಮ ಬಂಡವಾಳ ಏನಿತ್ತು? ಇವತ್ತು ಏನೇನಿದೆ? ಯಾರಿಗೆ ಈ ವಿಚಾರದಲ್ಲಿ ಮಾತನಾಡಲಿಕ್ಕೆ ಹಕ್ಕಿದೆ? ಯಾರಿಗಿಲ್ಲ ಎಂದು ಹೇಳಿ ಒಂದು 6 ತಿಂಗಳಲ್ಲಿ ಕಂಪ್ಲೀಟ್ ಆಗುವ ಹಾಗೆ ಸಿ.ಬಿ.ಐ. ತನಿಖೆ ಹಾಕಬೇಕೆಂದು ಒಂದು ಪ್ರಪೋಸ್ ಮಾಡಿ.

ಶ್ರೀ ಹೆಚ್.ಡಿ. ಬಸವರಾಜು: ಇದನ್ನು ನಾನೂ ಕೂಡ ಅನುಮೋದನೆ ಮಾಡುತ್ತೇನೆ, ದಯವಿಟ್ಟು ಮಾಡಿ ಸರ್, ಏಕೆಂದರೆ ಈ ಒಂದು ವಿಚಾರದಲ್ಲಿ ಇವತ್ತು ಯಾರ್ಯಾರು ಎಷ್ಟೆಷ್ಟು ಗಳಿಸಿದ್ದಾರೆ ಎನ್ನುವ ಬಗ್ಗೆ ಜನತೆ ನಿರೀಕ್ಷೆ ಮಾಡುತ್ತಿದ್ದಾರೆ, ಅದರ ಬಗ್ಗೆ ಸಂಪೂರ್ಣ ತನಿಖೆಯಾಗಲಿ. ನಾವು ಆಡಳಿತ ಪಕ್ಷದಲ್ಲಿದ್ದರೂ ಕೂಡ ಇದಕ್ಕೆ ನಾವು ಸಹಕಾರ ಕೊಡುತ್ತೇವೆ, ದಯವಿಟ್ಟು ಇದರ ಬಗ್ಗೆ ತನಿಖೆಯಾಗಲಿ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಗಲಾಟೆ ಮಾಡಬೇಡಿ. ಖರ್ಗೆಯವರು ಇನ್ನು ಮಾತನಾಡುತ್ತಿದ್ದರೆ. ದಯಮಾಡಿ ಕುಳಿತುಕೊಳ್ಳಿ.

(ಈ ಹಂತದಲ್ಲಿ ಆಡಳಿತ ಪಕ್ಷದ ಹಲವು ಮಾನ್ಯ ಸದಸ್ಯರುಗಳು ಎದ್ದು ನಿಂತು ಮಾತನಾಡುತ್ತಿದ್ದರು)

ಶ್ರೀ ಕೆ.ಆರ್. ರಮೇಶ್‌ಕುಮಾರ್: ಆಡಳಿತ ಪಕ್ಷಕ್ಕೆ ಬಂದು ಆಡಳಿತ ನಡೆಸಿ ಆಸ್ತಿಯನ್ನು ಮಾಡಿದವರನ್ನು ನೋಡಿದ್ದೇವೆ, ಆದರೆ ಆಡಳಿತಕ್ಕೆ ಬಾರದೇನೇ ಆಡಳಿತಕ್ಕೆ ಬಂದಿರುವವರ ಮೂರು ಮೂರು ಪಟ್ಟು ಆಸ್ತಿ ಮಾಡಿರುವವರನ್ನು ಜಗತ್ತಿನಲ್ಲಿ ನಾವೆಲ್ಲೂ ನೋಡಿಲ್ಲ. ಆಡಳಿತ ಪಕ್ಷಕ್ಕೆ ಬಂದು ಅಧಿಕಾರದಲ್ಲಿದ್ದು, ಅಧಿಕಾರವನ್ನು ಉಪಯೋಗ ಅಥವಾ ದುರುಪಯೋಗ ಮಾಡಿ, ಆಸ್ತಿಯನ್ನು ಮಾಡಿರುವುದನ್ನು ನಾವು ನೋಡಿದ್ದೇವೆ, ಅಧಿಕಾರಕ್ಕೆ ಬಾರದೇನೇ ಅಧಿಕಾರಕ್ಕೆ ಬಂದವರಿಗಿಂತ ಮೂರು ಮೂರು ಪಟ್ಟು ಆಸ್ತಿಯನ್ನು ಮಾಡಿರುವವರನ್ನು ನಾವೆಲ್ಲೂ ನೋಡಿಲ್ಲ. Let that also be referred.

ಅಧ್ಯಕ್ಷರು: ಅದೇನೇ ಸ್ವಾಮಿ.

ಶ್ರೀ ಎಂ.ಪಿ. ವೆಂಕಟೇಶ್: ವಿರೋಧ ಪಕ್ಷದವರೂ ಈ ವಿಚಾರವನ್ನು ಮಂಡನೆ ಮಾಡಲಿ,

ಶ್ರೀ ಹೆಚ್.ಡಿ. ಬಸವರಾಜು: ನಾವೂ ಸಹ ಈ ವಿಚಾರಕ್ಕೆ ಬೆಂಬಲವನ್ನು ಕೊಡುತ್ತೇವೆ. ಯಾರ್ಯಾರು ಈ ರಾಜ್ಯದಲ್ಲಿ ಲೂಟಿ ಮಾಡಿದ್ದಾರೆನ್ನುವ ವಿಷಯ ಜನರಿಗೂ ಗೊತ್ತಾಗಬೇಕಾಗಿದೆ.

ಅಧ್ಯಕ್ಷರು: ನೀವು ದಯಮಾಡಿ ಕುಳಿತುಕೊಳ್ಳಿ ಏಕೆ ಹೀಗೆ ಮಾಡುತ್ತೀರಿ? ನೀವೇನಾದರೂ ಮಾಡಿದ್ದೀರಾ? ನಿಮಗೇಕೆ ಇಷ್ಟೊಂದು . .

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್: ವಿರೋಧ ಪಕ್ಷದವರು ಈ ವಿಚಾರವನ್ನು ಮಂಡನೆ ಮಾಡಲಿ,

ಶ್ರೀ ಸಿ.ಟಿ. ರವಿ: ಇದು ಒಳ್ಳೆಯ ಸಮಯ, ಸನ್ಮಾನ್ಯ ರಮೇಶ್‌ಕುಮಾರ್‌ರವರು ಆಸ್ತಿ ತನಿಖೆ ಮಾಡಲಿಕ್ಕೆ ಹೇಳಿದ್ದಾರೆ, ಕೊಟ್ಟುಬಿಡಿ, ತನಿಖೆಯಾಗಲಿ. ಬಂಡವಾಳ ಹೊರಗೆ ಬರಲಿ, ಕೊಟ್ಟುಬಿಡಿ. ಹೇಳಿಬಿಡಿ,

ಅಧ್ಯಕ್ಷರು: ಆಯಿತು, ದಯಮಾಡಿ ಕುಳಿತುಕೊಳ್ಳಿ,

ಶ್ರೀ ಎಸ್.ಎಲ್. ಧರ್ಮೇಗೌಡ: ಅಧಿಕಾರ ಇಲ್ಲದಿದ್ದರೂ ಎಂದು ಹೇಳಿದರೆ ಅದು ಯಾವ ತರಹ ಎಂದು ಅರ್ಥ ಹೇಳಿದರೆ ಅರ್ಥವಾಗುತ್ತದೆ.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ ಎಂದರೂ ಏಕೆ ಹೀಗೆ ಮಾತಾಡುತ್ತಿದ್ದೀರಿ?

ಶ್ರೀ ಬಸವರಾಜ ಹೊರಟ್ಟಿ(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ರಮೇಶ್‌ಕುಮಾರ್ ಅವರು ಬಹಳ ಗಂಭೀರವಾದಂತಹ ಮಾತನ್ನು ಹೇಳಿದರು, ಯಾರ್ಯಾರು ಅಪೋಸಿಷನ್‌ನಲ್ಲಿ ಇದ್ದವರು ಏನೇನು ಮಾಡಿದ್ದಾರೆ ಅವರ ಹೆಸರುಗಳನ್ನು ಇಲ್ಲಿ ಹೇಳಲಿ.

ಶ್ರೀ ಹೆಚ್.ಡಿ. ಬಸವರಾಜು: ಹೌದೌದು, ಈ ಸದನಕ್ಕೆ ಸತ್ಯಾಂಶವನ್ನು ಹೇಳಲಿ. ಈಗ ಬರೇ ಆರೋಪ ಮಾಡುವುದು ಹೆಚ್ಚಲ್ಲ.

(ಗೊಂದಲ)

ಅಧ್ಯಕ್ಷರು: ಪಾರ್ಲಿಮೆಂಟರಿ ಮಿನಿಸ್ಟರ್ ಅವರನ್ನು ಕೇಳುತ್ತಿದ್ದಾರೆ, ನೀವು ಮಾತನಾಡಬೇಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನೀವು ಎನ್‌ಕ್ವೈರಿ ಕಾನ್‌ಸ್ಟಿಟ್ಯೂಟ್ ಮಾಡಿ, ನಾನು ಲೀಗಲೀ ಅದರ ಮುಂದೆ ಅಪಿಯರ್ ಆಗಿ ನನ್ನ ಎಲ್ಲಾ ಸ್ಟೇಟ್‌ಮೆಂಟ್ ಸಹಿತ ಸಬ್ಮಿಟ್ ಮಾಡುತ್ತೇನೆ. ನಾನು ನೇಮ್ ಇಟ್ಟುಕೊಂಡಿರುವುದು ಇವರಿಗೆ ಕೊಡಲಿಕ್ಕಲ್ಲ. Let there be an enquiry, a proper enquiry, a legally constituted enquiry, I have the moral courage to appear. I will substantiate.

ಅಧ್ಯಕ್ಷರು: ಹೇಳಿ.

ಶ್ರೀ ಬಸವರಾಜ ಹೊರಟ್ಟಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು): ಈಗ ಅವರು ಏನು ಹೇಳುತ್ತಿದ್ದಾರೆ, ಅಧಿಕಾರದಲ್ಲಿದ್ದು ದುಡ್ಡು ಗಳಿಸಿದ್ದು ಬೇರೆ, ಅಧಿಕಾರ ಇಲ್ಲದಿದ್ದವರು ದುಡ್ಡು ಮಾಡಿರುವವರು ಈ ಸದನದಲ್ಲಿ ಇರಬೇಕು, ಹಾಗಿದ್ದರೆ ಅವರ ಹೆಸರುಗಳನ್ನು ಹೇಳಲಿ.

ಅಧ್ಯಕ್ಷರು: ಅಧಿಕಾರದಲ್ಲಿಲ್ಲದವರು ಎಂದು ಹೇಳುತ್ತಿದ್ದಾರೆ, ಅವರು ಇಲ್ಲೆಲ್ಲಿ ಬರುತ್ತಾರೆ?

ಶ್ರೀ ಬಸವರಾಜ ಹೊರಟ್ಟಿ: ಅಧಿಕಾರದಲ್ಲಿ ಇದ್ದವರು ಗಳಿಸುತ್ತಾರೆ, ದುಡ್ಡುಗಳಿಸಿದ್ದು ಬೇರೆ; ಅಧಿಕಾರ ಇಲ್ಲದೇ ದುಡ್ಡು ಗಳಿಸಿದವರು ಎಂದು ಹೇಳಿದರಲ್ಲಾ ಅವರು ಈ ಸದನದಲ್ಲಿ ಇರಬೇಕಲ್ಲಾ. ಅದಕ್ಕೆ ಅವರುಗಳ ಹೆಸರುಗಳನ್ನು ಹೇಳಲಿ.

ಅಧ್ಯಕ್ಷರು: ಅಧಿಕಾರದಲ್ಲಿ ಇಲ್ಲ ಅಂತ ಹೇಳಿದರಲ್ಲಾ; ಅಧಿಕಾರ ಇಲ್ಲದೆ ಇಲ್ಲಿಗೆ ಹೇಗೆ ಬರುತ್ತಾರೆ?

ಶ್ರೀ ಹೆಚ್.ಡಿ. ಬಸವರಾಜು: ಸರ್ ಅವರು ಹೇಳುವಂತಹ ಸಂದರ್ಭದಲ್ಲಿ ಎರಡನ್ನೂ ಹೇಳಿದ್ದಾರೆ. ಅಧಿಕಾರದಲ್ಲಿದ್ದವರು ಗಳಿಸಿದ್ದಾರೆ, ಅಧಿಕಾರದಲ್ಲಿಲ್ಲದವರೂ ಗಳಿಸಿದ್ದಾರೆ. ಹಾಗಾಗಿ ಅಧಿಕಾರದಲ್ಲಿದ್ದವರ ಹೆಸರನ್ನೂ ಹೇಳಲಿ, ಅಧಿಕಾರದಲ್ಲಿದ್ದವರ ಹೆಸರುಗಳನ್ನು ಹೇಳಲಿ.

ಅಧ್ಯಕ್ಷರು: ಸಾಕು ಸುಮ್ಮನಿರಿ, ಏಕೆ ಮಾತಾನಾಡುತ್ತೀರಿ? ಗಾಳಿ ಜೊತೆ ಗುದ್ದಾಡಿ ಸುಮ್ಮನೆ ಮೈ ಕೈ ನೋಯಿಸಿಕೊಂಡ ರೀತಿ ಇದು, ಇದು ಬೇಡ.

ಶ್ರೀ ಬಸವರಾಜ ಎಸ್. ಹೊರಟ್ಟಿ: ಮಂತ್ರಿಗಳು, ಶಾಸಕರು ಅಲ್ಲದವರು, ಅಥವಾ ಮಂತ್ರಿಗಳು, ಶಾಸಕರು ಈ ಸದನದಲ್ಲಿದ್ದವರು ಯಾರು ಎಂದು ಬೇಕಲ್ಲಾ? ಹಾಗೆ ಹೇಳಿದರೆ ನಾಳೆ ಇದು ಎಲ್ಲರಿಗೂ ಬರುತ್ತದೆ.

ಅಧ್ಯಕ್ಷರು: ಈಗ ರಮೇಶ್‌ಕುಮಾರ್‌ರವರೇ, ಈಗ ಏಕೆ ವಾದ?

ಶ್ರೀ ಕೆ.ಆರ್. ರಮೇಶ್‌ಕುಮಾರ್: ನನ್ನ ಕಡೆ ನೀವೇ ಕೊಟ್ಟಿರುವ ಹೆಸರುಗಳನ್ನು ನಿಮಗೆ ವಾಪಸ್ಸು ಕೊಡಬೇಕು. ಇಲ್ಲಿ ಹೇಳಲಿಕ್ಕೆ ಬರುವುದಿಲ್ಲ, ಎನ್‌ಕ್ವೈರಿ ಕಾನ್‌ಸ್ಟಿಟ್ಯೂಟ್ ಮಾಡಿ ಆಗ ಹೇಳುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು: ಇದಕ್ಕೆ ಎನ್‌ಕ್ವೈರಿ ಕಾನ್‌ಸ್ಟಿಟ್ಯೂಟ್ ಬೇಕಾಗಿಲ್ಲ. ಸತ್ಯಾಂಶ ಹೇಳಬೇಕಾದರೆ ಏಕೆ ಇದೆಲ್ಲಾ?

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್: ಯಾವ ಕಾಲದ ಮುಖ್ಯಮಂತ್ರಿಗಳಿಂದ ಈ ತನಿಖೆ ಆಗಬೇಕೆಂದು ಅವರು ಹೇಳಲಿ.

ಅಧ್ಯಕ್ಷರು: ಏಕೆ ಸುಮ್ಮನೆ ಗಲಾಟೆ ಮಾಡುತ್ತೀರಿ, ನೀವೇನಾದರೂ ಹಣ ಮಾಡಿದ್ದೀರಾ?

ಶ್ರೀ ಆರಗ ಜ್ಞಾನೇಂದ್ರ: ಅವರು ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ಎರಡೂ ಕಡೆಗಿದ್ದು ಅವರಿಗೆ ತುಂಬಾ ಅನುಭವವಿದೆ, ಅವರ ಹತ್ತಿರ ಸಾಕಷ್ಟು ಮಾಹಿತಿಗಳಿರಬಹುದು, ಕಂಪ್ಲೇಂಟ್‌ಗಳನ್ನು ನಿರ್ದಿಷ್ಟವಾಗಿ ಕೊಟ್ಟರೆ ಖಂಡಿತವಾಗಿಯೂ ಒಳ್ಳೆಯದಾಗುತ್ತದೆ, ಬಹಳ ಒಳ್ಳೆಯ ಮಾತನ್ನು ಅವರು ಹೇಳಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಇರತಕ್ಕಂತಹ ವ್ಯಕ್ತಿಗಳು ಪರಿಹಾರವನ್ನು ಸೂಚಿಸುವಂತಹದ್ದಕ್ಕೆ ನಮ್ಮೆಲ್ಲರ ಬೆಂಬಲ ಇದೆಯೆಂದು ನಾನು ಹೇಳಬಯಸುತ್ತೇನೆ.

(ಗೊಂದಲ)

ಅಧ್ಯಕ್ಷರು: ಈಗ ಜ್ಞಾನೇಂದ್ರ ಅವರೇ ಕುಳಿತುಕೊಳ್ಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಪ್ರಾಸಿಕ್ಯೂಟರ್ ಹಾಗೂ ಜಡ್ಜ್ ಒಂದೇ ಆಗುವ ಕಡೆಗೆ ನಾನು ಕಂಪ್ಲನೆಂಟ್ ಆಗುವುದಿಲ್ಲ, ಪ್ರಾಸಿಕ್ಯೂಟರ್ ಬೇರೆ ಆಗಬೇಕು, ಜಡ್ಜ್ ಬೇರೆ ಆಗಬೇಕು, ಆಗ ಮಾತ್ರ ನಾನು ಕಂಪ್ಲೆಂಟ್ ಮಾಡುತ್ತೇನೆ.

ಅಧ್ಯಕ್ಷರು: ಆಯಿತು, ಕುಳಿತುಕೊಳ್ಳಿ, ಈಗ ಮಲೀನವಾಗಿದೆಯೆಂದು ಎಲ್ಲರಿಗೂ ಗೊತ್ತಾಗಿದೆ, ಅದನ್ನು ಅವರವರ ರೀತಿಯಲ್ಲಿ ಎಕ್ಸ್‌ಪ್ರೆಸ್ ಮಾಡಿದ್ದಾರೆ, ನೋಡಿ ಎಲ್ಲಾ ಒಪ್ಪತಕ್ಕಂತಹ ಸಂಗತಿ ಏನೆಂದರೆ ಭ್ರಷ್ಟಾಚಾರ ಈ ದೇಶದಲ್ಲಿ ವಿಷ ಏರಿದ ಹಾಗೆ ಏರುತ್ತಿದೆ, ಇಲ್ಲೀಗಲ್ ಆಗಿ ಬಹಳ ಜನ ಆಯಾ ಕಟ್ಟಿನ ಸ್ಥಾನದಲ್ಲಿ, ರಾಜಕಾರಣಿಗಳಾಗಬಹುದು, ಎಲ್ಲರಿಗೂ ಗೊತ್ತಿರುವಂತಹದು, ಆದರೆ ದುರ್ದೈವ ಏನೆಂದರೆ ಅದನ್ನು ಕಡಿಮೆ ಮಾಡಲಿಕ್ಕೆ ಅಥವಾ ನಿರ್ಮೂಲನ ಮಾಡಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನ ಅಂದಿನಿಂದ ಇಂದಿನವರೆಗೂ ಆಗಿಲ್ಲವೆಂಬುದೂ ಸಹ ಸತ್ಯ. ಅದನ್ನು ಹೇಳಿದ್ದಾರೆ, ಅದರ ಬಗ್ಗೆ ಬೇರೆ ಸಮಯದಲ್ಲಿ ಒಂದು ವಿಶೇಷ ಚರ್ಚೆಗೆ ಅವಕಾಶವನ್ನು ಕೊಡುತ್ತೇನೆ. ಆಯಿತು ಅದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆ ದಿವಸ ತಾವು ಭಾವನಾತ್ಮಕವಾಗಿ ಸಜೆಸ್ಟ್ ಮಾಡಿದಿರಿ, ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಹೊರಗಡೆ ಹೋಗಿ ತಕ್ಷಣ ಅನೌನ್ಸ್ ಮಾಡಿದರು. ಅದಕ್ಕೆ ನನ್ನ ಬೇಡಿಕೆ ಏನೆಂದರೆ ಎಲ್ಲಿಯವರೆಗೆ ತಾವು ಈ ಹೈಕೋರ್ಟಿನ ಸೂಚನೆಯ ಪ್ರಕಾರ ಮತ್ತು ಈಗಾಗಲೇ 39 ಜನರನ್ನು ಸಸ್ಪೆನ್ಷನ್ ಮಾಡಿದ್ದಾರೆ, ಆ ಎರಡೂ ದೃಷ್ಟಿಯಿಂದ ಇರತಕ್ಕಂಥ ಸರ್ಕಾರದ ಮೇಲೆ ತಾವು ಒಂದು ನಿರ್ಬಂಧವನ್ನು ಹಾಕಬೇಕು. ಏನೆಂದರೆ ಡೇ ಟು ಡೆ ವರ್ಕ್ಸ್ ನಡೆಯಲಿ, ಬೇರೆ . .

ಅಧ್ಯಕ್ಷರು: ಅಂದರೆ ಅವರಿಗೆ ಎನ್‌ಕ್ವೊರಿ ಮಾಡುವ ಅಧಿಕಾರವಿಲ್ಲವೆಂತಲೇ ನಿಮ್ಮ ಅಭಿಪ್ರಾಯ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಡೈರೆಕ್ಷನ್ಸ್ ಕೊಡಿ ಸರ್, ಏಕೆಂದರೆ ಈಗ ಬೇರೆ ಸಣ್ಣ ಪುಟ್ಟ ವಿಚಾರಗಳ ಮೇಲೆ ಎನ್‌ಕ್ವೊರಿ ಮಾಡುತ್ತೇವೆಂದು ಹೇಳಿ ಇದರ ಬಗ್ಗೆ ಮಾಡಲಿಲ್ಲ ಅಂದರೆ ಹೇಗೆ? ಅದಕ್ಕೆ ಆ ಫೀಸ್ ಮಿಸ್‌ಯೂಸ್ ಆಗಬಾರದು, ನಾಳೆ ಇದು ಇಲ್ಲೀಗಲ್ ಸರ್ಕಾರವೆನೆ, ಅನ್‌ಕಾನ್‌ಸ್ಟಿಟ್ಯೂಷನಲ್ ಸರ್ಕಾರವಿದೆಯೆಂದು ಅಂದಾಗ ಎಂಟೈರ್ ಪ್ರೊಸೀಡಿಂಗ್ಸ್ ಕೂಡ ವಿಷಿಯೇಟ್ ಆಗಬಾರದು, ಹಾಗಾಗಿ ದಯವಿಟ್ಟು ಆ ಒಂದು ಸೂಚನೆಯನ್ನು ತಾವು ಕೊಡಿ, ಅದರ ಪ್ರಕಾರ ಅವರು ನಡೆದುಕೊಳ್ಳಲಿ. ಎರಡನೆಯದಾಗಿ ರಿವ್ಯೂ ಮಾಡಬೇಕೆಂದು ಕೇಳಿಕೊಂಡಿರೂ ಸಹ ತರಾತುರಿಯಲ್ಲಿ ಅಪ್ರಾಪ್ರಿಯೇಷನ್ ಬಿಲ್ ಅನ್ನು ಕೂಡ ಪಾಸ್ ಮಾಡಿದಿರಿ. ಅದೂ ಕೂಡ

ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎನ್ನತಕ್ಕಂಥ ಮಾತನ್ನೂ ಕೂಡ ನಾನು ಕೇಳಿಕೊಳ್ಳುತ್ತೇನೆ. ಮತ್ತು ಆರ್ಟಿಕಲ್ 175(1)ರ ಕೆಳಗೆ ಬರೇ ಚರ್ಚೆಗೆ ಮಾತ್ರ ತೆಗೆದುಕೊಳ್ಳಬೇಕು ಮೋಷನ್ ಆಫ್ ಥ್ಯಾಂಕ್ಸ್ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ತಾವು ಅದನ್ನೇ ಮೂವ್ ಮಾಡಿಕೊಳ್ಳಬೇಕೆನ್ನುವ ಸಲಹೆ ಏನು ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಕೊಟ್ಟಿತ್ತು ಅದನ್ನು ತಾವು ಮುಂದುವರಿಸಬೇಕು ಅಂತ ಕೇಳಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಸಮಯ ಒಂದೂವರೆ ಗಂಟೆ ಆಯಿತು, ಮಾಧುಸ್ವಾಮಿಯವರೇ, ತಾವು ಬೇಗ ಮುಗಿಸುತ್ತೀರಾ?

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ನಾನು ಬೇಗ ಮುಗಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಈ ಕಡೆಯವರಿಗೂ ಒಬೊಬ್ಬರಿಗೆ ಅವಕಾಶ ಕೊಡಿ.

ಅಧ್ಯಕ್ಷರು: ಆಯಿತು. ಇವರದ್ದು ಆದ ಮೇಲೆ ನಿಮಗೆ ಕೊಡುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜ್: ಮಾನ್ಯ ಅಧ್ಯಕ್ಷರೇ, ಈ ಕಡೆ ಬರುವ ಲಕ್ಷಣವೇ ಕಾಣುತ್ತಿಲ್ಲ. ಈ ಕಡೆಗೂ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಕೊಡೋಣ ಕುಳಿತುಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೇ, ಎರಡು ವಿಷಯಗಳ ಬಗ್ಗೆ ಇಲ್ಲಿ ಪ್ರಸ್ತಾಪವಾಗಿದೆ. ಬಹುಶಃ ನಾನು ಬೆಳಿಗ್ಗೆ ಎತ್ತಿದ್ದು ಮೊದಲನೇ ವಿಷಯದ ಪ್ರಸ್ತಾಪವನ್ನು ನಿರೀಕ್ಷೆ ಮಾಡಿರಲಿಲ್ಲ. ರಾಜ್ಯಪಾಲರ ಭಾಷಣ, ಅದಾದ ನಂತರ ತಾವು ಕೊಟ್ಟ ರೂಲಿಂಗ್ ಅದಾದ ನಂತರ ತಾವು ರಿವ್ಯೂ ಮಾಡಿ ಕೊಟ್ಟ ರೂಲಿಂಗ್, ಒಂದು ಹಂತದಲ್ಲಿ ಆಯಿತು, ನಾನು ಅದಕ್ಕೆ ಮಾನ್ಯ ಜಗದೀಶ್ ಶೆಟ್ಟರ್‌ರವರಿಗೆ ರಿಕ್ವೆಸ್ಟ್ ಮಾಡಿದೆ, ತಾವು ಕೊನೆಗೆ ಮಾತನಾಡಿ ಅಂತ. ಮಂತ್ರಿಗಳೇ ಎದ್ದು ಅಜೆಂಡಾ ಕೊಟ್ಟಂತೆ ಆಗುತ್ತದೆ ನಮಗೆ ಇಲ್ಲಿ ಮಾತನಾಡುವುದಕ್ಕೆ, ದಯಮಾಡಿ ಇದು ತಪ್ಪಲ್ಲ. ನೀವು ಯಾವಾಗ ಎದ್ದು ಮಾತನಾಡುತ್ತೀರಿ ಅದರ ಮೇಲೆ ಫರ್‌ದರ್ ಡಿಸ್ಕಷನ್ ಸ್ಟಾರ್ ಆಗುತ್ತದೆ.

ಶ್ರೀ ಜಗದೀಶ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಾತನಾಡಲೇ ಬಾರದು ಅಂತ ಏನಾದರೂ ಇದೆಯೇ?

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಮಾತನಾಡಲೇ ಬಾರದು ಅಂತ ಹೇಳಲಿಲ್ಲ.

ಶ್ರೀ ಜಗದೀಶ ಶೆಟ್ಟರ್: ಈ ಸದನದಲ್ಲಿ ಆ ರೀತಿ ಸಾಕಷ್ಟು ರೆಕಾರ್ಡ್ ಆಗಿವೆ. ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಇಲ್ಲಿ ಆಡಳಿತರೂಢ ಪಕ್ಷದವರು ಮಾತನಾಡಿದ್ದಾರೆ. ಆದ್ದರಿಂದ ತಾವು ಹೇಳಿದ ಹಾಗೆ ಎಲ್ಲರೂ ಮಾತನಾಡಿದ ಮೇಲೆ ಮಾತನಾಡುವುದು ಅಂತ ಹೇಳಿದರೆ ಅದು ಆಗುವುದಿಲ್ಲ. ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅನುಮತಿ ಕೊಟ್ಟಿದ್ದರು.

ಅಧ್ಯಕ್ಷರು: ಈಗ ಅವರು ಮಾತನಾಡಲಿ, ಆಮೇಲೆ ನೀವು ಮಾತನಾಡುವಿರಂತೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ನಾನು ಅವರು ಮಾತನಾಡುವುದಕ್ಕೆ ಅಧಿಕಾರ ಇಲ್ಲ ಅಂತ ಹೇಳಲಿಲ್ಲ. ದಯಮಾಡಿ ತಾವು ಮಾತನಾಡುವುದು ನಮಗೆ ಆಹಾರವಾಗಬಾರದು ಕೊನೆಗೆ ಮಾತನಾಡಿ ಅಂತ ಕೇಳಿಕೊಂಡೆ ಆದರೆ ಅದು ತಪ್ಪು ಅಂತ ತಿಳಿದುಕೊಂಡರೆ ನನಗೇನೂ

ಚಿಂತೆ ಇಲ್ಲ. ಎರಡನೆಯದು ಯಾರು ಚಿಂತೆ ಮಾಡುತ್ತಾರೋ ಇಲ್ಲವೋ ಅಂತ ನಾವು ಇಲ್ಲಿ ಚಿಂತೆ ಮಾಡುತ್ತಿಲ್ಲ. ಈ ರಾಜ್ಯ ಸಂವಿಧಾನಾತ್ಮಕವಾಗಿ ಹೋಗುತ್ತಿದೆಯೋ ಇಲ್ಲವೋ ಎಂದು ಚಿಂತೆ ಮಾಡುತ್ತಿದ್ದೇವೆ. ಚಿಂತೆ ಮಾಡುವವರಾಗಿದ್ದರೆ ಏನೇನೋ ಆಗಿ ಹೋಗಿರುವುದು. ಮಾನ್ಯ ಅಧ್ಯಕ್ಷರೇ, ತಮ್ಮ ರೂಲಿಂಗ್‌ನ್ನು ನಾವು ಪ್ರಶ್ನೆ ಮಾಡಿದಿವಿ ಬಿಟ್ಟಿವಿ ಎನ್ನುವುದಕ್ಕಿಂತ ಹೊರತಾಗಿ ರೂಲಿಂಗ್‌ನ್ನು ಕೊಟ್ಟ ಮೇಲೆ ನಾವು ಏತಕ್ಕೆ ನಿಮ್ಮ ಜೊತೆಗೆ ಚರ್ಚೆಗೆ ಬಂದು, ಮತ್ತೊಂದಕ್ಕೆ ಬಂದು, ಸರ್ಕಾರ ನಡೆಸುವವರು ಏನಾದರೂ ಒಂದು ಬಿಡಬೇಕಾಗುತ್ತದೆ, ರಾಜಿಯಾಗಬೇಕಾಗುತ್ತದೆ ಸ್ವಲ್ಪ ಮಟ್ಟಿಗೆ ಈ ಸದನ ನಡೆಸಿಕೊಂಡು ಹೋಗಬೇಕಾಗುತ್ತದೆ. ಆ ತರಹದ ಒಂದು ದೊಡ್ಡತನವನ್ನು ತೋರಿಸಬೇಕಾಗುತ್ತದೆ. ಸರ್ಕಾರ ನಡೆಸುವವರೂ ಹಠ ಮಾಡುವುದು, ವಿರೋಧ ಪಕ್ಷದವರೂ ಹಠ ಮಾಡುವುದು ಮಾಡಿದರೆ ಇಂತಹ ಪರಿಸ್ಥಿತಿಗಳು ನಿರ್ಮಾಣವಾಗುತ್ತವೆ. ನಾವು ಒಂದು ಹಂತಕ್ಕೆ ರಾಜಿ ಆದೆವು, ಮಾನ್ಯ ಪ್ರಕಾಶ್‌ರವರು ಏನು ಸಲಹೆಯನ್ನು ಕೊಡುತ್ತಿದ್ದಾರೆ ಆಗಬಹುದು ನಾವೆಲ್ಲಾ ಅದಕ್ಕೆ ಒಪ್ಪಿಕೊಳ್ಳುತ್ತೇವೆಂದು ಹೇಳಿದೆವು ನಾವು, ಆ ಹಂತದಲ್ಲಿ ಏನಾದರೂ ರಾಜಿಯಾಗಿದ್ದರೆ ಇಲ್ಲಿ ಒಂದು ಆರೋಗ್ಯಕರವಾದ ಚರ್ಚೆ ರಾಜ್ಯಪಾಲರಿಗೆ ಗೌರವಯುತವಾದ ಒಂದು ಚರ್ಚೆಯನ್ನು ಮಾಡಿ ನಾವೆಲ್ಲರೂ ರಾಜ್ಯಪಾಲರಿಗೆ ಗೌರವವನ್ನು ಅರ್ಪಿಸಬಹುದಿತ್ತು. ಈಗ ರಾಜ್ಯಪಾಲರಿಗೆ ಈ ಸಭೆಯಿಂದ ಏನು ಗೌರವ ಅರ್ಪಣೆಯಾಗಿದೆ ಅಂತ ನಾನು ಪ್ರಶ್ನೆ ಮಾಡುತ್ತೇನೆ. Is he happy with all this? ರಾಜ್ಯಪಾಲರಿಗೆ ಗೌರವ ಕೊಡುತ್ತೇವೆಂದು ಹೇಳಿ ಒಂದು ಗೌರವಾರ್ಪಣೆಯನ್ನು ನಾವು ಮಾಡುತ್ತೇವೆಂದು ಹಠ ಮಾಡಿ ರಾಜ್ಯಪಾಲರ ಗೌರವ ಉಳಿಸುವಂತಹ ಸ್ಥಿತಿಯನ್ನು ಅಥವಾ ಅವರಿಗೆ ಗೌರವವನ್ನು ಅರ್ಪಿಸುವಂತಹ ಸ್ಥಿತಿಯನ್ನು ನಾವು ಇಲ್ಲಿ ಸೃಷ್ಟಿ ಮಾಡಿದ್ದೇವೆಯೇ? ಈಗ ನಮ್ಮ ಜಿಜ್ಞಾಸೆ ಏನೆಂದರೆ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ ಸರ್ಕಾರಕ್ಕೆ ಮತ್ತು ನಮಗೆ ಉಂಟಾದ ಜಿಜ್ಞಾಸೆ ಅಲ್ಲ ಇದು. ಇದು ಕಾನೂನಿಗೆ, ಸಂವಿಧಾನಕ್ಕೆ ಆಗುತ್ತಿರುವಂತಹ ಜಿಜ್ಞಾಸೆ, ತಮ್ಮ ಕಛೇರಿಯಿಂದ ನಮಗೇನು ನೋಟೀಸ್ ಬಂತು, ಆ ನೋಟೀಸ್ ಮೇಲೆ ಮಾನ್ಯ ಶ್ರೀ ರಾಮರೆಡ್ಡಿಯವರು ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡಿದರು. ಅದಕ್ಕಾದ ಜಿಜ್ಞಾಸೆ; ಸರ್ಕಾರ ಇದನ್ನು ಏಕೆ ಮೇಲೆ ಎಳೆದುಕೊಂಡಿತೋ ನನಗೆ ಅರ್ಥವಾಗಲಿಲ್ಲ. ನನಗೆ ಇದುವರೆಗೂ ಅರ್ಥವಾಗಲಿಲ್ಲ. ಅವರು ಏಕೆ ಇದನ್ನು ಪ್ರಿಸ್ಟೀಜ್ ಮಾಡಿಕೊಂಡರು, ಏಕೆ ಮೇಲೆ ಎಳೆದುಕೊಂಡರು, ವಂದನಾ ನಿರ್ಣಯ ಎನ್ನುವುದನ್ನು ಬಿಟ್ಟು ಏಕೆ ಚರ್ಚೆಗೆ ರಾಜಿ ಮಾಡಿಕೊಳ್ಳಲಿಲ್ಲ ಎನ್ನುವ ಬಗ್ಗೆ ಅವರು ಯಾರಾದರೂ ಇದರ ಬಗ್ಗೆ ಬೆಳಕು ಚೆಲ್ಲುತ್ತಾರೆ ಅಂತ ನಾನು ತಿಳಿದುಕೊಂಡಿದ್ದೇನೆ. ನಾವ್ಯಾರೂ ಕೇಳಲಿಲ್ಲ. ಸರ್ಕಾರದವರು 175(1)ರ ಕೆಳಗಡೆ ಭಾಷಣ ಮಾಡಿಸಲಿಕ್ಕೆ ಅಧಿಕಾರ ಇರಲಿಲ್ಲ. ಆದರೂ ಗೌರ್ನರ್ ಕೈಯಲ್ಲಿ ನೀವು ಏಕೆ ನೋಟೀಸ್ ಕೊಟ್ಟಿದ್ದೀರಿ ಅಂತ ಕೇಳಲಿಲ್ಲ. ಏಕೆ; ನಮಗೆ ಅರ್ಥವಾಗುತ್ತದೆ. ಹೊಸದಾಗಿ ಒಂದು ಸರ್ಕಾರ ಬಂದಿದೆ ಹೇಗಾದರೂ ಅವರು ತಮ್ಮ ಕಾರ್ಯಕ್ರಮಗಳನ್ನು ಶಾಸನ ಸಭೆಗೆ ರಾಜ್ಯಪಾಲರ ಮೂಲಕ ಹೇಳುವುದಕ್ಕೆ ಒಂದು ಪ್ರಯತ್ನ ಮಾಡುತ್ತಿದ್ದಾರೆ ಅಂತ. ಸ್ಪೆಸಿಫಿಕ್ ಪರ್‌ಪಸ್‌ಗೆ ಇದ್ದಂತಹ ಒಂದು ಆರ್ಟಿಕಲ್‌ನ್ನು ನೀವು ಬಳಸಿದಾಗ ಕೂಡ ನಾವು ಏಕೆ ಚರ್ಚೆ ಮಾಡಲಿಲ್ಲ ಅಂದರೆ Yes. We wanted to co-operate. ಏನೋ ಮಾಡಿ, ಚರ್ಚೆ ಆಗಲಿ ಅಂತ ನಾವು ಹೇಳಿದ್ದೆವು. ಆದರೆ ಯಾರ ಹಠದಿಂದ ಈ ಸಭೆ ಮೂರು ದಿವಸಗಳಿಂದ ಈ ಸಭೆ ಕಾಲ ಹರಣವಾಗಿ ಹೋಯಿತು ಅಂತ ಹೇಳಬೇಕು. ಎರಡನೆಯದು ಮಾನ್ಯ ಅಧ್ಯಕ್ಷರೇ ಅಭಿವೃದ್ಧಿ

ಕಾರ್ಯಗಳು ಕುಂಠಿತವಾಯಿತು, ಅಭಿವೃದ್ಧಿ ಕಾರ್ಯಗಳು ಕುಂಠಿತವಾಯಿತು ಅಂತ ಮಾತನಾಡುವುದರಲ್ಲಿ ಅರ್ಥ ಇಲ್ಲ. ಇದೊಂದು ಶಾಸನ ಸಭೆ, ಇಲ್ಲಿ ಆಗಬೇಕಾಗಿರುವ ಡಿಬೇಟ್ ಶಾಸನಗಳ ರಚನೆಯಾಗುವುದಕ್ಕೆ ಶಾಸನಗಳು ರಚನೆಯಾದವುಗಳನ್ನು ಮೈನ್‌ಟೇನ್ ಮಾಡಲಿಕ್ಕೆ, ಕಾಪಾಡಲಿಕ್ಕೆ ಅದಕ್ಕೆ ತಾಯಿ ಮೂಲ ಇರುವಂತಹ ಸಂವಿಧಾನವನ್ನು ಎಲ್ಲರೂ ಗೌರವಿಸುವುದಕೋಸ್ಕರ ಆಗಿರತಕ್ಕ ಚರ್ಚೆ. ಹೌದು ನಾವು ದಡ್ಡರಿರಬಹುದು, ನಾವು ಅರ್ಥೈಸಿಕೊಂಡಿರುವುದು ತಪ್ಪು ಇರಬಹುದು. ನಾವು ಸಂವಿಧಾನ ಓದಿ ಇಲ್ಲಿ ವ್ಯಾಖ್ಯಾನ, ಮಾಡಿರುವ ಇಂಟರ್‌ಪ್ರಿಟೇಶನ್ ಮಾಡಿರುವುದು ರಾಂಗ್ ಇರಬಹುದು, ನಮಗೆ ಕನ್‌ವಿನ್ಸ್ ಮಾಡಬೇಕಾ ಅಥವಾ ದಿಢೀರ್ ಅಂತ ಒಂದು ರೂಲಿಂಗ್ ಕೊಡಬೇಕಾ ಅಂತ ಒಂದೇ ಒಂದು, ನಮಗೆ ಬಹಳ ಮುಖಿದ ಮೇಲೆ ಹೊಡೆದಂತಹ ಸ್ಥಿತಿ ನಿರ್ಮಾಣವಾಗಿದ್ದು. ತಾವು ಅವತ್ತು ಸ್ವಲ್ಪ ಸಮಾಧಾನವಾಗಿ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ನೀವು ದಿವಸ ಸಮಾಧಾನವಾಗಿ ಇರುವವರು ಅವತ್ತು ಏಕೆ ಸಮಾಧಾನವನ್ನು ಕಳೆದುಕೊಂಡಿರೋ ನನಗೆ ಗೊತ್ತಾಗಲಿಲ್ಲ. ಪಟ್ ಅಂತ ಇಲ್ಲಿ ರೂಲಿಂಗ್ ಕೊಟ್ಟುಬಿಟ್ಟಿರಿ. ನಮಗೇನೂ ಮುಂದೆ ಮಾರ್ಗ ಇರಲಿಲ್ಲ. ಅದೇ ರೂಲಿಂಗ್‌ನ್ನು ಕೊಡುವುದಕ್ಕಿಂತ ಮುಂಚೆ ನಮ್ಮನ್ನು ಯಾರಾದರೂ ನಾಲ್ಕು ಜನರನ್ನು ಒಳಗೆ ಕರೆದು, ಅವರನ್ನೂ ಕರೆಸಿ ಕೂರಿಸಿ ಒಂದು ಮಾತುಕತೆ ಮಾಡಿ ಮಾರನೇ ದಿವಸ ಕೊಡಬಹುದಿತ್ತು, ಅಥವಾ ಇನ್ನೊಂದು ದಿವಸ ಕೊಡಬಹುದಿತ್ತು, ಅದನ್ನು ಮಾಡದೇ ಹೋದಾಗ ಈ ಸ್ಥಿತಿ ಅನಿವಾರ್ಯವಾಗಿ ಬಂತು. ನಾವು ನಮ್ಮ ದೃಷ್ಟಿಯಲ್ಲಿ ರಾಜ್ಯಾಂಗದ ಸೇವೆ ಮಾಡಿದ್ದೇವೆಂದು ತಿಳಿದುಕೊಂಡಿದ್ದೇವೆ. ರಾಜ್ಯಾಂಗದ ಪ್ರಾವಿಜನ್ಸ್‌ನ್ನು ಮೇನ್‌ಟೇನ್ ಮಾಡಲಿಕ್ಕೆ ಕನಿಷ್ಠ ಪಕ್ಷ ನಾವು ಒಂದು ಹೋರಾಟವನ್ನು ಇಲ್ಲಿ ಮಾಡಿದ್ದೇವೆಂದು ತಿಳಿದುಕೊಂಡಿದ್ದೇವೆ. ಅದರ ಬಗ್ಗೆ ನಮಗೆ ನೋವು ಇಲ್ಲ. We are happy with all what we have done to the Assembly. ರಾಜ್ಯದ ಅಭಿವೃದ್ಧಿ ಮಾಡಬೇಕಾಗಿರುವುದು ಈ ಶಾಸನ ಸಭೆಯ ಕೆಲಸ ಅಲ್ಲ. ನಾವು ತಲೆಗೆ ತೆಗೆದುಕೊಳ್ಳಬೇಕು. ಅಸೆಂಬ್ಲಿ 2 ದಿವಸ 3 ದಿವಸ ಯಾವುದೋ ಒಂದು ಸಂವಿಧಾನಾತ್ಮಕ ವಾದ ಬಿಕ್ಕಟ್ಟನ್ನು ಚರ್ಚೆ ಮಾಡಿತು ಅಂದರೆ ನಿಜವಾಗಿಯೂ ಒಂದು ಒಳ್ಳೆಯ ಚರ್ಚೆ ಶಾಸನ ಸಭೆಯಲ್ಲಿ ಆಯಿತು ಅಂತ ಎಲ್ಲರೂ ಅರ್ಥಮಾಡಿಕೊಳ್ಳಬೇಕಾಗಿತ್ತು. ನಮ್ಮ ದುರ್ದೈವ, ಮಾಧ್ಯಮದವರೂ ಕೂಡ ನಮ್ಮನ್ನು ವೇಸ್ಟ್ ಆಫ್ ಟೈಮ್ ಎನ್ನುವ ಸ್ಥಿತಿಗೆ ಚಿತ್ರೀಕರಿಸಿಬಿಟ್ಟರು. ಇದು ವೇಸ್ಟ್ ಆಫ್ ಟೈಮ್ ಅಲ್ಲ. ಯಾವತ್ತಾದರೂ ಒಂದು ಪರ್ವ ಕಾಲದಲ್ಲಿ ಕ್ರೈಸಿಸ್ ಬಂದಾಗಲೇ ತಮ್ಮ ಅಧಿಕಾರ ವ್ಯಾಪ್ತಿ, ಶಾಸನ ಸಭೆಗಳ ಅಧಿಕಾರ ವ್ಯಾಪ್ತಿ, ನಮ್ಮ ಮೇಲೆ ಇರಬೇಕಾದ ಸಂವಿಧಾನದ ವ್ಯಾಪ್ತಿ ಜನರಿಗೆ ಅರ್ಥವಾಗುವುದು. ಆ ಚರ್ಚೆಯನ್ನು ಇಲ್ಲಿ ಬಯಸಿದೆವು. ಅದು ಬಿಟ್ಟರೆ ನಾವೇನೂ ಸ್ಟಾಲ್ ಮಾಡಬೇಕು ನೀವು ಕೆಲಸ ಮಾಡಬಾರದು ಅಂತ ಅಲ್ಲ. ಅದು ಏನೂ ಆಗುತ್ತಿರಲಿಲ್ಲ. ಈ ಶಾಸನ ಸಭೆಯನ್ನು ಪೂರ್ಣ ನಡೆಸದೇ ಹೋಗಿದ್ದರೂ ಮಾರ್ಚ್ 31ನೇ ತಾರೀಖಿನವರೆಗೂ ಸಹ ಎಲ್ಲಾ ಕಾರ್ಯಕ್ರಮಗಳು ಆಗಲಿಕ್ಕೆ ಅವಕಾಶ ಇತ್ತು. ಇನ್ನು ಎರಡನೆಯದು ಮಾನ್ಯ ಅಧ್ಯಕ್ಷರೇ, ನಾನು ನೀವು ಅಪ್ರಾಪ್ರಿಯೇಷನ್ ಬಿಲ್ ಪಾಸ್ ಮಾಡಿದ ವಿಷಯಕ್ಕೆ ನಾನು ಬರುತ್ತೇನೆ. ಇದು ನಿಜವಾಗಿಯೂ ಮಾಡಬಾರದಾಗಿದ್ದಂತಹ ಕೆಲಸ, ನಾನು ಸ್ಪಷ್ಟವಾಗಿ ಹೇಳುತ್ತೇನೆ. ಏಕೆ ಇಲ್ಲ, ತಾವು ಒಪ್ಪಿಕೊಳ್ಳಬೇಕು. ಹೌಸ್ ಆರ್ಡರ್‌ನಲ್ಲಿ ಇರಲಿಲ್ಲ ಅಂತ. ಇಲ್ಲ ಆರ್ಡರ್‌ನಲ್ಲಿ ಇತ್ತು ಅಂದರೆ ಒಬ್ಬನೇ ಒಬ್ಬನಿಗಾದರೂ ಕನಿಷ್ಠಪಕ್ಷ ಅದರ ಮೇಲೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕಾಗಿತ್ತು.

ಗಲಾಟೆ ಆಗುತ್ತಿತ್ತು. ನಾನು ಕೇಳಿದೆ, ಗಲಾಟೆ ಆಗಬೇಕಾದರೆ ಮಾನ್ಯ ಮಹದೇವಪ್ರಸಾದ್‌ರವರ ಕೈಯಲ್ಲಿ ರಾಜ್ಯಪಾಲರ ಭಾಷಣ ಮಾಡಿಸುತ್ತೀರಿ, ಗಲಾಟೆಯಾಗಬೇಕಾದರೆ ಮಾನ್ಯ ವಿಶ್ವೇಶ್ವರ ಹೆಗಡೆಯವರು ಮೋಷನ್ ಮೇಲೆ ಭಾಷಣ ಮಾಡುತ್ತಾರೆ, ನನ್ನ ಮಾತು ರೆಕಾರ್ಡ್‌ಗೆ ಹೋಗುವುದಕ್ಕೆ ಕೊಡಿ ಅಂತ ಕೇಳಿದರೂ ಸಹ ನೀವು ಯಾರ ಕಡೆಗೂ ನೋಡದೇ ಪಾಠ ಒಪ್ಪಿಸುವವರಂತೆ ಈ ಶಾಸನ ಸಭೆಗೆ ಪಾಠ ಒಪ್ಪಿಸಿಬಿಟ್ಟು ನನ್ನನ್ನು ಟೀಕೆ ಮಾಡುತ್ತೀರಿ ಅಂದರೆ ನಾವು ಯಾರನ್ನು ಟೀಕೆ ಮಾಡಬೇಕು ಹೇಳಿ. ಯಸ್, ನಾನು ಏನು ಹೇಳಿದೆ ನೀವು ಬೇರೆ ಬಿಲ್‌ಗೂ ಅಪ್ರೋಪ್ರಿಯೇಶನ್ ಬಿಲ್‌ಗೂ ದಯಮಾಡಿ ಒಂದೇ ಅಂತ ಹೇಳಿ ತಿಳಿದುಕೊಂಡಿರುವುದನ್ನು ಮೊದಲು ತಮ್ಮ ಮನಸ್ಸಿನಿಂದ ತೆಗೆದು ಹಾಕಬೇಕು. ಅದಕ್ಕೆ There are special provisions to move an appropriation Bill. 1638 ಕೋಟಿ ರೂ. ಕಂಟಿನ್‌ಜನ್ಸಿ ಫಂಡ್‌ನಿಂದ ಖರ್ಚು ಮಾಡಿದ್ದೇವೆಂದು ಹೇಳಲಿಕ್ಕೆ ಶಾಸನಸಭೆಯೇ ಪಾಸ್ ಮಾಡಬೇಕು ಅಂತ ಹೇಳಿ ಸಂವಿಧಾನದಲ್ಲಿ ಹೇಳಿದೆ.

ಕಂಟಿಜೆನ್ಸಿ ಫಂಡ್‌ನಿಂದ ಖರ್ಚು ಮಾಡಿದ್ದೇವೆಂದು ಹೇಳುವುದಕ್ಕೆ, ಶಾಸನಸಭೆಯ ಪಾಸ್ ಮಾಡಬೇಕೆಂದು ಸಂವಿಧಾನ ಹೇಳಿದೆ; ಕಂಟಿಜೆನ್ಸಿ ಫಂಡ್‌ನಿಂದ ಯಾವುದಾದರೂ ಅಮೌಂಟ್ ಖರ್ಚಾದರೆ, it has to be passsed by the Legislature. ಅಂದರೆ ಡಿಬೇಟ್ ಆಗಲೇಬೇಕು. ಏಕೆಂದರೆ ನೀವು ಬಜೆಟ್ ಪ್ರಾವಿಷನ್‌ನಿಂದ ಆಚೆ ಮಾಡಿರುವ ವೆಚ್ಚಗಳು ಇವು; ನೀವು ಈ ಸಭೆಯಿಂದ ಅನುಮೋದನೆ ತೆಗೆದುಕೊಳ್ಳದೆ ಮಾಡಿರುವ ವೆಚ್ಚಗಳು. ಸನ್ಮಾನ್ಯ ಕೆಂಗಲ್ ಹನುಮಂತಯ್ಯನವರು 10–11 ಲಕ್ಷ ರೂಪಾಯಿಗಳ ಯಾವುದೋ ಒಂದು ಗ್ರಾಂಟ್ ಡಿಕ್ಲೇರ್ ಮಾಡಿದ್ದಕ್ಕೆ ಇಲ್ಲಿ ಬಂದು ಅಪಾಲೈಜ್ ಕೇಳಿರುವ ನಿದರ್ಶನವಿದೆ, ಔಟ್ ಸೈಡ್ ದಿ ಬಜೆಟ್ ಔಟ್ ಸೈಟ್ ದಿ ಅಸೆಂಬ್ಲಿ ಪ್ರಾವಿಷನ್ ನಾನು ಮಾತನಾಡಿರುವುದು ತಪ್ಪಾಗಿದೆ ಎಂದು ಹೇಳಿದ್ದಾರೆ. ನಾನು ನೀವು ಮಾಡಿದ್ದೆಂದು ಹೇಳುವುದಿಲ್ಲ; ಸರ್ಕಾರದವರು 1638 ಕೋಟಿ ರೂಪಾಯಿಗಳಷ್ಟು ಮಾಡಿರುವ ವೆಚ್ಚವನ್ನು ಶಾಸನಸಭೆಯಲ್ಲಿ ಎರಡೇ ನಿಮಿಷದಲ್ಲಿ ನಾವು ಪಾಸ್ ಮಾಡುತ್ತೇವೆಂದರೆ, ನಾಳೆ ಯಾರಾದರೂ ಒಂದು ಪ್ರಶ್ನೆ ಕೇಳಿದರೆ ಉತ್ತರ ಕೊಡುವುದಕ್ಕೆ ಲಾಯಕ್ಕಾದ ಶಾಸಕರಾಗಿರುತ್ತೇವೆಯೇ? ಯಾವುದೋ ಎಂಎಲ್‌ಎ ಬಿಲ್ ಪಾಸಾದರೆ ದೊಡ್ಡದಾಗಿ ಹೆಡ್ ಲೈನ್ಸ್‌ನಲ್ಲಿ ಬರೆಯುವ ಪತ್ರಿಕೆಗಳು, ಎಂಎಲ್‌ಎಗಳು ಕುಳಿತುಕೊಂಡುಬಿಟ್ಟು ಅವರಿಗೆ ಬೇಕಾದ್ದನ್ನೆಲ್ಲಾ ಪಾಸ್ ಮಾಡಿಕೊಂಡರು ಎನ್ನುವುದು, 1638 ಕೋಟಿ ರೂಪಾಯಿಗಳು ವಿತ್ ಔಟ್ ಡಿಬೇಟ್, ಅಸೆಂಬ್ಲಿನಲ್ಲಿ ಚರ್ಚೆ ಇಲ್ಲದೆ ಪಾಸ್ ಆಗಿದ್ದನ್ನು ಇವರು ಏತಕ್ಕೆ ಇದನ್ನು ಪ್ರೊಜೆಕ್ಟ್ ಮಾಡಲಿಲ್ಲ ಎಂಬುದು ನನಗೆ ಅರ್ಥವಾಗಲಿಲ್ಲ? ಇಲ್ಲಿ ಯಾವ ಇಂಟರೆಸ್ಟ್‌ನಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ? ಈ ರಾಜ್ಯದ ಇಂಟರೆಸ್ಟ್‌ನಲ್ಲಿ ಕೆಲಸ ಮಾಡುವವರಾಗಿದ್ದರೆ 1638 ಕೋಟಿ ರೂಪಾಯಿಗಳಿಗೆ ಒಂದು ಲೆಕ್ಕವಿದೆ, ನಿಮ್ಮ ರೂಲ್ಸ್ ಏನು ಹೇಳುತ್ತದೆ ಸ್ವಾಮಿ?

> "A Bill involving expenditure from the Consolidated Fund of India . . . . . or State ಅಂತ ಇಟ್ಟುಕೊಳ್ಳಿ
>
> " . . . . . require to be accompanied by the Financial Memorandum which outlines the objects on which the expenditure is likely to be involved. The Memorandum has to invite particular attention to the clauses involving expenditure and also to give an

estimate of the recurring and non-recurring expenditure involved in the case the Bill is passed . . . . . .

Such clauses or provisions in the Bill are printed in thick paper or in italics. Where, however, a clause in a Bill involving expenditure has not been printed in thick paper or in italics, the Member in charge of the Bill shall . . . . ."

Shall

" . . . with the permission of the Speaker, bring such clauses to the notice of the House." Did he explain to the Assembly, why so much of amount is required to be passed in the Assembly?

ಅಸೆಂಬ್ಲಿಯಲ್ಲಿ ಬಿಲ್ ಮೂವ್ ಮಾಡಿದ್ದಾರೆ, ಎಷ್ಟು ವೆಚ್ಚ ಮಾಡಿದ್ದಾರೆಂದು ತಾವು ಹೇಳುತ್ತೀರಾ? Then, how can he go against the Constitutional obligation? ಈ ಸಭೆಯಲ್ಲಿ ಆ ಬಿಲ್ ಅನ್ನು ಮೂವ್ ಮಾಡಿದವರು ನಿಂತುಕೊಂಡು ವಿವರಿಸಿದ್ದರೆ, ದಯಮಾಡಿ ಯಾರಾದರೊಬ್ಬರು ನನಗೆ ಸಭೆಯಲ್ಲಿ ಹೇಳಬೇಕು, ಇಂತಿಂಥದ್ದಕ್ಕೆ ನಾನು ಕೇಳುತ್ತಿದ್ದೇನೆ ಎಂದು, ಬಿಲ್ ಮೂವರ್ ಮಾಡಿದ್ದೇನೆಂದು ಹೇಳಬೇಕು. Then,

" If the Financial Memorandum relating to a Government Bill is found to be incomplete, the Minister concerned is asked furnish all the details and copies of the revised Memorandum are circulated separtely to Members for their information. In case where recurring expenditure is involved, but no recurring expenditure or vice versa and this fact is not mentioned in the Financial Memorandum appended to the Bill, the Minister is asked to furnish a letter to that effect and the letter and receipt is published in the Bulletin."

ಸರ್ ನಿನ್ನೆ ಏನಾದರೂ ಆಯಿತಾ? ತಾವು ಕನ್ವಿನ್ಸ್ ಆಗಿದ್ದರೆ ಹೇಳಿಬಿಡಿ, 'yes, I am convinced.' 1638 ಕೋಟಿ ರೂಪಾಯಿಗಳನ್ನೇನು ಖರ್ಚು ಮಾಡಿದ್ದಾರೆ, ಇದಕ್ಕೆ ನಾನು ಈ ಶಾಸನಸಭೆಯ ಸದಸ್ಯನಾಗಿ, ಕನ್ವಿನ್ಸ್ ಆಗಿ ಈ ಬಿಲ್ ಅನ್ನು ಪಾಸ್ ಮಾಡುವುದಕ್ಕೆ ಬಿಟ್ಟಿದ್ದೇನೆಂದು ತಾವು ಕನ್ವಿನ್ಸ್ ಆಗಿದ್ದರೆ ನಮಗೆ ಹೇಳಿ. ಯಾವ್ಯಾವುದಕ್ಕಾಯಿತು, ಏಕೆ ಮೀರಿ ಹೋದರು, ಬಜೆಟ್‌ನಲ್ಲಿ ಅದಕ್ಕೆ ಏಕೆ ಪ್ರಾವಿಷನ್ ಆಗಿರಲಿಲ್ಲ. What was the necessity and emergency arised out of all this? ಈ ವರ್ಷದ್ದಕ್ಕೆ ಏಕಾಯಿತೆಂಬುದು ನಮಗೆ ಬೇಕು ಸರ್, as a Member of this august House, I want to know, why this Government has spent Rs. 1,638 crore in excess outside the budget provision. ಇದನ್ನು ನಾವು ಚರ್ಚೆ ಮಾಡುತ್ತೇವೆಂದರೆ, ತಾವು ಒಂದು ಮನಿ ಬಿಲ್ ಮೇಲೆ ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶ

ಕೊಡುವುದಿಲ್ಲವೆಂದರೆ ಹೇಗೆ ಸರ್? ಈ ಸಭೆನಲ್ಲಿ ಬಂದು ನಮ್ಮ ಗತಿಯೇನು ಸರ್? ಹೌದು ಹೌಸ್ ಆರ್ಡರ್‌ನಲ್ಲಿ ಇರಲಿಲ್ಲ, ನೀವೇನೂ ಮಾಡುವುದಕ್ಕಾಗುತ್ತಿರಲಿಲ್ಲ; You are the Speaker of this House. ನಿನ್ನೆ ದಿವಸ ಯಾವುದೋ ಒಂದು ಕಾರಣಕ್ಕೆ ನಾನು ರೂಲಿಂಗ್ ಕೊಟ್ಟಿದ್ದೇನೆ ಎಂದು ಎಲ್ಲರನ್ನೂ ಆಚೆಗೆ ಹಾಕಿ ತಾವು ಈ ಸಭೆಯನ್ನು ನಡೆಸಬೇಕಾಗಿತ್ತು You should have named us before bringing that Bill. ಇದೊಂದು ಶಾಸನಸಭೆ, ಕಳುಹಿಸಿ ಸರ್, ಆಚೆಗೆ ಹೋಗುತ್ತೇವೆ, ನಮಗೆ ಇಷ್ಟವಿಲ್ಲ ಧರಣಿ ಮಾಡಿರುತ್ತೇವೆ, ಧರಣಿ ಮಾಡುವವರನ್ನು ನಿಲ್ಲಿಸಿಕೊಂಡು ಬಿಲ್‌ಗಳನ್ನು ಪಾಸ್ ಮಾಡುವುದು ಎಂಥ ಸಂಪ್ರದಾಯ? ಹೇಳಬಹುದು, ಯಾವುದೋ ಬಿಲ್ ಇಟ್ಟುಬಿಟ್ಟಿದ್ದೇವೆ, ಅವತ್ತು ಮಾಡಿದ್ದೇವೆ, ಇವತ್ತು ಮಾಡಿದ್ದೇವೆ ಎಂದು ಹೇಳಬಹುದು, ಅದನ್ನೇ ನೀವು ಮುಂದುವರೆಸಿಕೊಂಡು ಹೋಗುತ್ತೀರಾ? ಹಿಂದೆ ಇಲ್ಲಿ ನಾವು ಸಿದ್ದರಾಮಯ್ಯನವರಿಗೆ ಒಂದು ಅಪ್ರೋಪ್ರಿಯೇಷನ್ ಬಿಲ್ ಪಾಸ್ ಮಾಡುವಾಗ, ಒಂದು ಸಪ್ಲಿಮೆಂಟರಿ ಎಸ್ಟಿಮೇಟ್ ಇಲ್ಲಿ ಇಡಬೇಕಾದರೆ ಗಂಟೆಗಟ್ಟಲೆ ನಿಂತುಕೊಂಡಿದ್ದೇವೆ ಸರ್, ಏತಕ್ಕೆ ಸರ್ಕಾರವಿದೆ, ಏತಕ್ಕೆ ಇದನ್ನು ಬಜೆಟ್‌ನಲ್ಲಿ ತರಲಿಲ್ಲ, ಏಕೆ ಇದಮ್ಮ ಫೋರ್‌ಕಾಸ್ಟ್ ಮಾಡಿರಲಿಲ್ಲ ನಿಮ್ಮ ಇಲಾಖೆಗಳು ಏನಾಗಿವೆ, ಅಲ್ಲಿರುವ ಅಧಿಕಾರಿಗಳು ಏನಾಗಿದ್ದಾರೆಂದು ಚರ್ಚೆ ಮಾಡಿದ್ದೇವೆ. ಇದ್ಯಾವುದೂ ಇಲ್ಲದೆ, ಅದರ ಜೊತೆಗೆ ಇದೂ ಪಾಸ್; ನಾಳೆ ನೀವು ಏನು ಬೇಕಾದರೂ ಪಾಸ್ ಮಾಡಬಹುದಲ್ಲಾ ಸರ್. ನಮ್ಮನ್ನು ಡಿಸ್‌ಕ್ಯಾಲಿಫೈ ಮಾಡಿದ್ದೇವೆಂದು ಬಿಲ್ ಪಾಸ್ ಮಾಡಿಕೊಂಡು ಈ ಗಲಾಟೆಯಲ್ಲಿ ಹೋದರೆ What is our fate?

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಖರ್ಗೆಯವರು ಕೋರ್ಟ್ ವಿಚಾರವನ್ನು ಪ್ರಸ್ತಾಪ ಮಾಡಿದಾಗ ತಾವು ಒಂದು ಅಸರ್ಶನ್ ಮಾಡಿದಿರಿ, ನನಗೆ ಕ್ವಾಸಿಜ್ಯುಡಿಷಿಯಲ್ ಅಥಾರಿಟಿ ಇದೆ ಎಂದು, ಅದನ್ನು ನಾವು ಒಪ್ಪುತ್ತೇವೆ. ಮಾನ್ಯ ಗೆಳೆಯರಾದ ಮಾಧುಸ್ವಾಮಿಯವರು ಹೇಳುತ್ತಿರತಕ್ಕಂಥ ವಿಚಾರದಲ್ಲಿ, ನಾನು ತಮಗೆ ಒಂದನ್ನು ಅಪೀಲ್ ಮಾಡುತ್ತೇನೆ, not as Presiding Officer, as the custodian of this House, we make you submit to your judicial conscience, your judicial conscience. If it convinces you, ನಿನ್ನೆ ಆದದ್ದು ಸರಿಯಾಗಿದೆ, ಕ್ಲಾಸ್ ಬೈ ಕ್ಲಾಸ್ ವಿವರಿಸಿದ್ದಾರೆ, ಏಕೆ ಈ ಅಗತ್ಯ ಬಿತ್ತು, ಏಕೆ ಈ ಹಣ ಖರ್ಚು ಮಾಡಿದ್ದೇವೆನ್ನುವುದನ್ನು ವಿವರಿಸಿದ್ದಾರೆಂಬುದು ನಿಮಗೆ ಸಮಾಧಾನವಾಗಿದ್ದರೆ ನಮಗೆ ಸಮಾಧಾನವಾದಂತೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸರ್, ಸೋಮನಾಥ ಚಟರ್ಜಿಯವರು ಡಿಸಿಶನ್ ಅನ್ನು ಸುಪ್ರೀಂ ಕೋರ್ಟ್ ಪ್ರಶ್ನೆ ಮಾಡಿದ್ದು ಕೂಡ, ಇವತ್ತು ನೋಟೀಸ್ ತೆಗೆದುಕೊಳ್ಳುವುದಕ್ಕೆ ನಮ್ಮ ಅಧ್ಯಕ್ಷರು ಅಲ್ಲಿ ಒಪ್ಪಿಲ್ಲವೆಂದು ಅವರೇ ಹೇಳಿದರಲ್ಲಾ. ಹಾಗಾದರೆ ಈ ಎಕ್ಸ್‌ಪೆಂಡೀಚರ್ ಇಲ್ಲಿ ಪಾಸಾದರೆ, ಬೇರೆ ಎಲ್ಲೂ ನಾವು ಪ್ರಶ್ನೆ ಮಾಡುವಂತಿಲ್ಲ. ಯಾರಾದರೂ ಒಬ್ಬರು ನಿಂತುಕೊಂಡು 1638 ಕೋಟಿ ರೂಪಾಯಿಗಳ ಬಿಲ್ ಅನ್ನು ನಿನ್ನೆ ಪಾಸ್ ಮಾಡಿದರಲ್ಲಾ ಏತಕ್ಕಾಗಿ ಎಂದು ಕೇಳಿದರೆ ಆಚೆ ಹೋಗಿ ನಾವು ಹೇಳಬೇಕು? ಇಂತಹ ಬಿಲ್‌ಗಳನ್ನು ತಾವು ವಿವೇಚನೆಯಲ್ಲಿ ಇಟ್ಟುಕೊಳ್ಳಬೇಕು. ಎರಡನೆಯದು, ಬಿಲ್ ಪಾಸಾಗಿದೆ, ನಾನು ಬಿಲ್ ತರಿಸಿ ಓದಿದೆ, ಅದೇನು ಬಹುಮತದಲ್ಲಿ ಆಯಿತಾ? ಸರ್ವಾನುಮತದಲ್ಲಾಯಿತಾ? ಧ್ವನಿಮತದಲ್ಲಾಯಿತಾ? ಇಲ್ಲಿ ಏನಾದರೂ ರೆಕಾರ್ಡ್ ಆಗಿದೆಯಾ

ಸರ್? ತಮ್ಮ ಪ್ರೊಸೀಡಿಂಗ್ಸ್ ಅನ್ನು ತೆಗೆಸಿ, ಇದು ಶಾಸನ ಸಭೆ, ನಾಳೆ ನಾವಿರುವುದಿಲ್ಲ, ನೀವಿರುವುದಿಲ್ಲ, ಚರಿತ್ರೆ ಇರುತ್ತದೆ, ಇತಿಹಾಸವಿರುತ್ತದೆ, ನೋಡಿ ಯಾರೋ ಮಾಡಿ ಹೋಗಿದ್ದನ್ನು ನಿಂತು ಓದುತ್ತಿದ್ದೇವೆ. ನಾಳೆ ಯಾರೋ ನಿಂತುಕೊಂಡು ಓದುತ್ತಾರೆ, How was it passed? ಈ ಶಾಸನ ಸಭೆಯಲ್ಲಿ ಯಾವ ಆಧಾರದ ಮೇಲೆ ನಿನ್ನೆ ಆ ಬಿಲ್ ಪಾಸಾಯಿತು? ಧ್ವನಿಮತದ ಮೇಲೆ ಆಯಿತೆಂಬುದು ತಮ್ಮ ಕಿವಿಗೆ ಬಿತ್ತೆಂದರೆ, ಇಷ್ಟೊಂದು ಗಲಾಟೆ ಮಾಡಬೇಕಾದರೆ, ಅವರ ಧ್ವನಿ ಮಾತ್ರ ನಿಮ್ಮ ಕಿವಿಯ ಮೇಲೆ ಬಿತ್ತೇ, ಹಾಗಾದರೆ ನನ್ನ ಧ್ವನಿ ಏತಕ್ಕೆ ಬೀಳಲಿಲ್ಲ? ನಾನು ಎದ್ದುನಿಂತುಕೊಂಡು ಇಲ್ಲಿ ಅರಿಚಿಕೊಂಡೇ? ನಾನು ಕೂಗಿಕೊಂಡೆ, ನನಗೊಬ್ಬನಿಗಾದರೂ ಮಾತನಾಡುವುದಕ್ಕೆ ಬಿಡಿ ಎಂದು, ನನ್ನ ಧ್ವನಿ ತಮಗೆ ಏತಕ್ಕೆ ಕೇಳಲಿಲ್ಲವೆಂಬುದು ಬೇಕು. ಅದೊಂದು ಹಂತ, ತಾವು ರೂಲಿಂಗ್ ಕೊಟ್ಟಿರಿ, ತಮಗೆ ಅಧಿಕಾರವಿದೆ ಕೊಟ್ಟೆ ಎಂದು ನೀವು ಅಂದುಕೊಂಡಿದ್ದೀರಿ, ಸಂವಿಧಾನ ವಿರೋಧವೆಂದು ನಾವು ಅಂದುಕೊಂಡಿದ್ದೇವೆ, ನಮ್ಮ ಜಿಜ್ಞಾಸೆ ಇಷ್ಟೇ ಸರ್, ಅದು ಬ್ಲಾಕ್ ಏರಿಯಾ, ಸನ್ಮಾನ್ಯ ಪ್ರಕಾಶ್‌ರವರು ನೀವು ಗ್ರೇ ಏರಿಯಾವಲ್ಲವೇ ಎಂದು ನನಗೆ ಕೇಳಿದರು, ಇಲ್ಲ ಸರ್, ನನ್ನ ದೃಷ್ಟಿಯಲ್ಲಿ ಅದು ಬ್ಲಾಕ್ ಏರಿಯಾ, Constitution is clear, as to what is 176 and what is 175. ನಮ್ಮ ತಿಳುವಳಿಕೆ ಅಷ್ಟು, ತಾವು ರೂಲಿಂಗ್ ಕೊಟ್ಟಿಬಿಟ್ಟಿದ್ದೀರಿ, ಅದನ್ನು ಬಿಡಿ, ಬೇರೆ ಕಡೆ ಪ್ರಶ್ನೆ ಮಾಡುವುದಕ್ಕಾಗುತ್ತದೆ, ಇದೇನು ತಾವು ನಿನ್ನೆ ಬಿಲ್ ಪಾಸ್ ಮಾಡುವುದಕ್ಕೆ ಏಕಾಏಕಿ ಅವರ ಜೊತೆ ಸಹಕರಿಸಿದ್ದೀರಿ, ದಯಮಾಡಿ, ಇದು ರಾಜ್ಯಕ್ಕೆ ಮಾಡಿದ ದೊಡ್ಡ ಅನ್ಯಾಯವೆಂದು ನಾನು ಭಾವಿಸಿಕೊಂಡಿದ್ದೇನೆ. ಏಕೆ ನೀವಾದರೂ ಕನ್ವಿನ್ಸ್ ಆಗಬೇಕಾಗಿತ್ತು, 1638 ಕೋಟಿ ರೂಪಾಯಿಗಳ ಬಿಲ್ ಒಂದನ್ನು ಇಲ್ಲಿ ಇಟ್ಟಿದ್ದೇವೆಂದಾಗ, ಅದನ್ನು ಮುಂದಕ್ಕೆ ಹಾಕಬಹುದಿತ್ತು. ಸರ್, ಏನೂ ಎಮರ್ಜೆನ್ಸಿ ಇರಲಿಲ್ಲ, ಈ ಅಪ್ರೋಪ್ರಿಯೇಷನ್ ಬಿಲ್ ಅನ್ನು ಮುಂದಿನ ಅಧಿವೇಶನದಲ್ಲಿ ಪಾಸ್ ಮಾಡಬಹುದಾಗಿತ್ತು, ಏನು ಎಮರ್ಜೆನ್ಸಿ ಇರಲಿಲ್ಲ, ನಾಳೆ ಬೆಳಿಗ್ಗೆ ಯಾವುದೋ ಪೇಮೆಂಟ್ ಪೆಂಡಿಂಗ್ ಇರುತ್ತಿರಲಿಲ್ಲ, ಮಾರ್ಚ್ 30ರವರೆಗೆ ಎಲ್ಲಾ ಹಾಗೆ ಇರುತ್ತಿತ್ತು, ಆಕಸ್ಮಾತ್ ಆಗಿದ್ದರೂ ಬಂದು ಅಪ್ರೋಪ್ರಿಯೇಟ್ ಮಾಡಿಕೊಳ್ಳಬಹುದಿತ್ತು. ಯಾವ ಶಾಸನಸಭೆಯೂ ಸಪ್ಲಿಮೆಂಟರಿ ಡಿಮಾಂಡ್ಸ್ ಅನ್ನು ಅಪ್ರೋಪ್ರಿಯೇಷನ್ ಬಿಲ್ಸ್ ಅನ್ನು ರಿಜೆಕ್ಟ್ ಮಾಡಿರಲಿಲ್ಲ, ಇವತ್ತು ಏನಾಯಿತು ಏನು ಬೇಕಾದರೂ ಮಾಡಬಹುದು, ಇದೊಂದು ತರಹ ವರವಾಗಿ ಹೋಯಿತು, ಇವರೆಲ್ಲಾ ಧರಣಿ ಮಾಡಿದ್ದು, ಬಿಲ್‌ಗಳನ್ನು ಪಾಸ್ ಮಾಡಿಕೊಳ್ಳುವುದಕ್ಕೆ ವರಕೊಟ್ಟಂತಾಯಿತು, ಚರ್ಚೆ ಇಲ್ಲ ಪಾಸ್ ಆಯಿತು, ಯಾರೂ ಟೀಕೆ ಮಾಡುವುದಿಲ್ಲ, ವಿರೋಧ ಮಾಡಿದವರು ಗೊತ್ತಿಲ್ಲ ಪರವಾಗಿ ಮಾತನಾಡಿದವರು ಗೊತ್ತಿಲ್ಲ, ಬಹುಮತ ಗೊತ್ತಿಲ್ಲ, ಸರ್ವಾನುಮತ ಗೊತ್ತಿಲ್ಲ, ಡಿವಿಷನ್ ಆಯಿತಾ ಅಥವಾ ವಾಯಿಸ್‌ನಲ್ಲಾಯಿತಾ ಏನೂ ಗೊತ್ತಿಲ್ಲ, ನಾಳೆ ನಾನೇನಾದರೂ ಅಧಿಕಾರಕ್ಕೆ ಬಂದರೆ, ನಮ್ಮ ಕಡೆಯಲ್ಲಿರುವ ನಾಲ್ಕು ಜನರಿಗೆ ಹೇಳಿಕೊಡುತ್ತೇನೆ, ಕೂಗಾಡುತ್ತಿರಿ ಮಧ್ಯೆ ಬಿಲ್ ಪಾಸ್ ಮಾಡಿಸಿಕೊಂಡುಬಿಡೋಣ, ಸ್ಪೀಕರ್‌ಗೆ ಹೇಳಿಬಿಡುತ್ತೇನೆಂದು ಹೇಳಿಬಿಡುತ್ತೇನೆ. ಇದು ಬಿಲ್ ಪಾಸ್ ಮಾಡಿಕೊಳ್ಳುವ ಬೆಸ್ಟ್ ವೇ. ದಯಮಾಡಿ ಅದರಲ್ಲೂ ಮನಿ ಬಿಲ್‌ಗಳು, ಅದರಲ್ಲೂ ಅಪ್ರೋಪ್ರಿಯೇಷನ್ ಬಿಲ್ ..... ಸರ್ ಒಂದು ಬಜೆಟ್ ಪಾಸ್ ಆಗದೇ ಹೋದರೆ, ಯಾರದೋ ಒಬ್ಬರದ್ದು ಗಮನಹರಿಸದೆ ಹೋದರೆ ಪ್ರಿಟೆಂಡ್ ಮ್ಯಾಟರ್ ಇಡೀ ರಾಜ್ಯಕ್ಕೆ ಗೊತ್ತಿರುತ್ತದೆ, ಅಪ್ರೋಪ್ರಿಯೇಷನ್ ಬಿಲ್‌ಗಳನ್ನು ಇಷ್ಟು ಉದಾಸಿನ ಮಾಡಿ ಶಾಸನಸಭೆಗಳಲ್ಲಿ ಇಂಟ್ರಡ್ಯೂಸ್

ಮಾಡುವುದು ಬಿಲ್‌ಗಳನ್ನು ಪಾಸ್ ಮಾಡುವುದು ಒಳ್ಳೆಯದಲ್ಲ. ನಾನು ತಮಗೆ ಕೇಳುವುದಿಷ್ಟೆ, ಚರ್ಚೆ ಮಾಡಿ ಎಂದು ತಾವು ಹೇಳಿರುವುದು ರೆಕಾರ್ಡ್‌ನಲ್ಲಿದೆ, ಚರ್ಚೆ ಮಾಡುವುದಕ್ಕೆ ತಮ್ಮಲ್ಲಿ ಅವಕಾಶ ಕೇಳಿದವನು ನಿನ್ನೆ ನಾನೊಬ್ಬನೇ ಆ ಬಿಲ್ ಮೇಲೆ ಎದ್ದುನಿಂತುಕೊಂಡು ಕೈ ಎತ್ತುಕೊಂಡು, ಅಧ್ಯಕ್ಷರೆ, ಅಧ್ಯಕ್ಷರೆ ಎಂದು ಕೂಗಿದವನು ನಾನೊಬ್ಬನೇ. ತಮಗೆ ನನ್ನೊಬ್ಬನಾದರೂ ಕರೆಯಲಾರದಂತಹ ಪರಿಸ್ಥಿತಿ ನಿನ್ನೆ ಏನಿತ್ತಾ ಅದು ನನಗೆ ಅರ್ಥವಾಗಬೇಕು? ಅಂಥ ಪರಿಸ್ಥಿತಿ ಸಭೆಯಲ್ಲಿ ಇದ್ದರೆ, ಬಿಲ್ ಇಂಟ್ರಡ್ಯೂಸ್ ಮಾಡಿ ಪಾಸ್ ಮಾಡುವಂತಹದ್ದು ಕಾನೂನಿಗೆ ಬದ್ಧವಾಗಿದೆಯಾ, ನ್ಯಾಯಯುತವಾಗಿದೆಯಾ, ತಾವೇ ಅದಕ್ಕೊಂದು ತೀರ್ಮಾನ ಕೊಡಬೇಕೆಂದು ನಾನು ಕೇಳುತ್ತೇನೆ. If you feel that the House is not in order, how could you ask the Minister to move a bill and have a debate on that, when the speaker himself is convinced. ಅಸೆಂಬ್ಲಿ ಆರ್ಡರ್‌ನಲ್ಲಿ ಇಲ್ಲವೆಂದಾಗ ಇಂತಹ ಒಂದು ಬಿಲ್ ಅನ್ನು ಇಂಟ್ರಡ್ಯೂಸ್ ಮಾಡುವುದಕ್ಕೆ ತಾವು ಹೇಗೆ ಕರೆದಿರಿ, ಅದನ್ನು ಪರ್ಯಾಲೋಚನೆಗೆ ಹೇಗೆ ಕರೆದಿರಿ, ಇದನ್ನು ಪಾಸ್ ಮಾಡುವುದಕ್ಕೆ ಹೇಗೆ ಹೇಳಿದಿರಿ ಎಂಬ ಬಗ್ಗೆ ಶಾಸನಸಭೆಗೆ ಬೆಳಕನ್ನು ಚೆಲ್ಲಬೇಕು, ಏಕೆಂದರೆ ನಾವು ಪಾಯಿಂಟ್ ಆಫ್ ಆರ್ಡರ್‌ಗಳನ್ನು ರೈಸ್ ಮಾಡಬೇಕು. The whole House was not in order. ಮಾತನಾಡುವುದಕ್ಕೆ ಕರೆಯಿರಿ ಎನ್ನಲಿಲ್ಲ, ಅದಕ್ಕೆ ಮೊದಲೇ ತಾವು ಹೇಳಿದಿರಿ, ಬಿಲ್ ಇಡುತಿದ್ದಾರೆ ಮಾತನಾಡಿ ಎಂದು ಹೇಳಿದಿರಿ, ನಾವು ಇಲ್ಲಿ ಕಿವಿಯಲ್ಲಿ ಇಟ್ಟುಕೊಂಡು ಕೇಳಿದ್ದಕ್ಕೆ ಎದ್ದು ನಿಂತುಕೊಂಡೆವು. ಆದ್ದರಿಂದ ನಿನ್ನೆ ಏನು ಪಾಸ್ ಮಾಡಿದ್ದಿರಿ ಬಿಲ್ ಅನ್ನು ದಯಮಾಡಿ ಅಪ್ಪರ್‌ಹೌಸ್‌ನಿಂದ ವಾಪಸ್ ತರಿಸಿಕೊಳ್ಳಬೇಕು. ಇಲ್ಲಿ ಚರ್ಚೆಗಿಡಬೇಕು. ಚರ್ಚೆಯಾದ ನಂತರ ತಾವು ಅಪ್ರೋಪ್ರಿಯೇಶನ್ ಬಿಲ್ಲನ್ನು ಪಾಸ್ ಮಾಡಬೇಕು ಅಂತ ಕೇಳಿಕೊಂಡು ಅದಾಗದಿದ್ದರೆ ಅಸೆಂಬ್ಲಿನೇ ಮಿಸ್‌ಅಪ್ರೋಪ್ರಿಯೇಶನ್ ಬಿಲ್ ಪಾಸ್ ಮಾಡಿದಂತಾಗುತ್ತದೆ. We have regularised the misappropriation in the Assembly ಅನ್ನತಕ್ಕಾ ಸ್ಥಿತಿಯನ್ನು ದಯಮಾಡಿ ತರಬಾರದು ಅಂತ ವಿನಂತಿ ಮಾಡಿಕೊಂಡು ಮಾತನಾಡಲಿಕ್ಕೆ ಕರೆದಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ(ತೀರ್ಥಹಳ್ಳಿ): ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರೆಲ್ಲಾ ಬಹಳ ಒಳ್ಳೆಯ ರೀತಿಯಿಂದ ಚರ್ಚೆ ಮಾಡುತ್ತಿದ್ದಾರೆ. ನಾವು ಬಹಳ ವರ್ಷ ಅಲ್ಲೇ ಕುಳಿತಿದ್ದೆವು ಸ್ವಾಮಿ. ನಾವು ಏನೇನು ತಪ್ಪು ಮಾಡಿದ್ದೇವೆ ಅಂತ ಹೇಳಿ ನಮಗೆ ಅರ್ಥವಾಗುವಂತೆ ಬಹುಶಃ ಅವರು ಸರಿ ಮಾಡುತ್ತಾರೆ ಅಂತ ತಿಳಿದುಕೊಂಡಿದ್ದೆವು. ಆದರೆ ಮೊನ್ನೆಯಿಂದ ಅವರು ನಡೆದುಕೊಂಡಂಥ ರೀತಿಯನ್ನು ನೋಡಿ ನಮಗೆ ಪಶ್ಚಾತ್ತಾಪವಾಯಿತು. ನಾವು ವಿರೋಧ ಪಕ್ಷದಲ್ಲಿದ್ದು ಈ ತರಹ ಮಾಡಲಿಲ್ಲ. ನಾವು ಅಲ್ಲಿ ಬಹಳ ವರ್ಷದಿಂದ ಕೂತಿದ್ದವರು. ನೀವು ಹೇಳಿದಿರಲ್ಲಾ, ನಿಮಗೆ ಆಡಳಿತ ಮಾಡಿಯೇ ಅಭ್ಯಾಸ ಇರಲಿಲ್ಲ ಅಂತ, ಒಂದು ಮೂಡ್ ಆಗಿದೆ. ಈಗ ಯಾರೋ ಲಾಂಜ್‌ನಲ್ಲಿ ಮಾತನಾಡುತ್ತಿದ್ದಾಗ ಹೇಳುತ್ತಿದ್ದರು: ನಾವು ಇನ್ನೂ ಆಡಳಿತ ಪಕ್ಷದ ಮೂಡಿಗೆ ಬರಲಿಲ್ಲ, ಹರಿಬರಿಯಲ್ಲಿ ನಾವೂ ಅಧಿಕಾರಕ್ಕೆ ಬಂದುಬಿಟ್ಟಿದ್ದೇವೆ. ಅವರಿದ್ದಾರಲ್ಲ, ಆ ಅವರು ಇನ್ನೂ ವಿರೋಧ ಪಕ್ಷದ ಮೂಡಿಗೆ ಬರಲಿಲ್ಲ. ಅವರು ಹೇಳಿದಂತೆ ಕೇಳಬೇಕು ಅಂತ, ಸರ್ಕಾರದಲ್ಲಿದ್ದು ಇದ್ದೂ ಇದ್ದೂ ಅಭ್ಯಾಸವಾಗಿ ಬಿಟ್ಟಿದೆ. ನಾವು ಹೇಳಿದ್ದೇ ಆಗಬೇಕು ಅಂತ ರೂಲಿಂಗ್ ಪಾರ್ಟಿ ಮೂಡಿನಲ್ಲೇ ಅಲ್ಲಿ ಕೂತರೂ

ಇದ್ದಾರೆ. ಇದು ಬಹುಶಃ ಇಲ್ಲಿ ಆಗತಕ್ಕ ಘರ್ಷಣೆಗೆ ಕಾರಣ ಅಂತ ನನಗನ್ನಿಸುತ್ತದೆ. ಏಕೆಂದರೆ ನಾನು ಹೇಳಿದಂತೆ ಆಗಬೇಕು. ಉದಾಹರಣೆಗೆ ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು: ಇಲ್ಲಿ ಅನೇಕ ಸಂಗತಿಗಳು ನಡೆದಿವೆ ಆ ಪೀಠದ ಬಗ್ಗೆ ಹಿಂದೆ ಏನೇನೋ ನಡೆದಿದೆ ಅಂತ: ಮಾನ್ಯ ಖರ್ಗೆ, ಧರ್ಮಸಿಂಗ್‌ರವರ ಒಟ್ಟಾರೆ ರಾಜಕೀಯ ಅನುಭವದಷ್ಟು ನನ್ನ ವಯಸಿಲ್ಲ. ಹಾಗಾಗಿ ಅವರು ಹೇಳಬೇಕು: ಏನೇನು ನಡೆದಿದೆ, ನಾವೂ ಕೂಡ ಹೊರಗಡೆಯಿಂದ ನೋಡಿದ್ದೇವೆ. ಡಿ.ಬಿ. ಚಂದ್ರೇಗೌಡರು ಆ ಪೀಠದಲ್ಲಿದ್ದಾಗ ಏನು ನಡೆಯಿತು ಅಂತ ಪ್ರಕಾಶ್‌ರವರೇ ತಾವು ಹೇಳಬೇಕು. ಆಗ ಪತ್ರಿಕೆಯಲ್ಲಿ ತುಂಬ ದೊಡ್ಡದಾಗಿ ಹೆಲ್ಪೈಟಾಗಿತ್ತು. ನಾನು ಬಂದು ಇಲ್ಲಿ ಗ್ಯಾಲರಿಯಲ್ಲಿ ಕುಳಿತಿರಲಿಲ್ಲ. ನಾವು ಹೊರಗಡೆಯಿಂದ ನೋಡಿದ್ದೇವೆ, ಹೊರಗಡೆ, ಮೈಕ್ ಕಿತ್ತು ಹೊಡೆಯಲಿಕ್ಕೆ ಹೋಗಿದ್ದಾರೆ. ದೈಹಿಕವಾಗಿ ಅಸಾಲ್ಟ್ ಮಾಡಲು ಹೋಗಿದ್ದಾರೆ, ಯಾರಿದ್ದರು ಆವಾಗ ವಿರೋಧ ಪಕ್ಷದ ಸಾಲಿನಲ್ಲಿ? ನೀವೇ ಇದ್ದಿರಲ್ಲಾ, ಕಾಂಗ್ರೆಸ್ಸೇ ಇತ್ತಲ್ಲಾ. ಅಂದರೆ ಅಧ್ಯಕ್ಷರೇ ಇದಕ್ಕೆ ಇತಿಹಾಸ ಇದೆ, ಕಾಂಗ್ರೆಸ್ ಯಾವಾಗ ಯಾವಾಗ ವಿರೋಧ ಪಕ್ಷದ ಸಾಲಿನಲ್ಲಿ ಕೂತಿದೆ ಆವಾಗಲೆಲ್ಲಾ ನಿಮ್ಮ ಪೀಠಕ್ಕೆ ಅಶ್ರದ್ಧೆಯನ್ನು ತೋರಿದ್ದಾರೆ ಅವರು. ಮರೆಯಬಾರದು. ದಯವಿಟ್ಟು ಇನ್ನಾದರೂ ಕೂಡ ತಿದ್ದುಕೊಳ್ಳಬೇಕಾಗುತ್ತದೆ. ಏನು ಹೇಳಿದಿರಿ ಮೊನ್ನೆಯಿಂದ. ನಾನು ಹೇಳುತ್ತೇನೆ ಸ್ವಾಮಿ, ನಿನ್ನೆ ಮೊನ್ನೆ ಯಾರಾದರೂ ಹೇಳಿದರೋ ಇಲ್ಲವೋ ಗೊತ್ತಿಲ್ಲ. ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದರು ಮಾನ್ಯ ರಮೇಶ್‌ಕುಮಾರ್‌ರವರು ತಮ್ಮ ಪೀಠದಲ್ಲಿದ್ದರು, ಅವರು ಹೇಳದೇ ಇರುವ ಒಂದು ಶಬ್ದ ಪ್ರಕಟವಾಯಿತು ಮಾಧ್ಯಮದಲ್ಲಿ ಎಲ್ಲೋ ಒಂದು ಕಡೆ. ತುಂಬಾ ದೊಡ್ಡ ಗುಲ್ಲೆದ್ದಿತು ನಾವು ಹೇಳಿದೆವು ಯಡಿಯೂರಪ್ಪನವರಿಗೆ ನೀವು ಹೇಳಲಿಲ್ಲ ಅಂತ ಹೇಳ್ರಿ ಅಂದರೂ ಅವರು ಕೇಳಲಿಲ್ಲ, ಮಾನ್ಯ ಸ್ಪೀಕರ್‌ರ ಮನೆಗೆ ಹೋಗಿ ಕ್ಷಮೆ ಕೇಳಿ ಬಂದರು. ಸದನದಲ್ಲಿ ಕೂಡ ಎದ್ದುನಿಂತು ಕ್ಷಮೆ ಕೇಳಿದರು. ಏಕೆಂದರೆ ಆ ಪೀಠಕ್ಕೆ ಶ್ರದ್ಧೆ ಇರಬೇಕು. ನೀವು ಯಾವ ಪಕ್ಷ ಅಲ್ಲದ್ದವರು ಯಾರು ಅನ್ನುವುದನ್ನು ನೋಡಬಾರದು. ಆ ಪೀಠದ ಮಹತ್ವ ಬಹಳ ಮುಖ್ಯ ಇದನ್ನು ತುಂಬಾ ಜನ ನಮಗೆಲ್ಲಾ ಪಾಠ ಹೇಳಲು ಬಂದಿದ್ದರು. ಮನೆಗೆ ಹೋಗಿ ಕ್ಷಮೆ ಕೇಳಿದ್ದರು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ರೆಕಾರ್ಡ್ಸ್ ಸರಿ ಇರಲಿ ಅಂತ. ಅಧಿವೇಶನ ನಡೆಯುತ್ತಾ ಇತ್ತು. ಆಗಿನ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು, ಒಬ್ಬ ಸಚಿವರನ್ನು ಕುರಿತು. ಆಮೇಲೆ ಆ ಅಧಿವೇಶನ ನಾಲ್ಕೈದು ದಿವಸ ಮುಂದಕ್ಕೆ ಹೋಯಿತು. ಅಧಿವೇಶನ ಇಲ್ಲದೇ ಇರುವ ವೇಳೆಯಲ್ಲಿ ಪತ್ರಿಕೆಯಲ್ಲಿ ಆ ವಿಚಾರ ಕುರಿತು ಮಾನ್ಯ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ಕೆಲವು ಹೇಳಿಕೆ ಹೇಳಿದ್ದುದ್ದು: ಅದು ಪ್ರತ್ಯೇಕವಾದ ಹೇಳಿಕೆ ಆಗಿದ್ದಿದ್ದರೆ ಪರವಾಗಿರಲಿಲ್ಲ. ಹಿಂದಿನ ದಿವಸ ಅವರು ಮಾತನಾಡಿದ್ದಕ್ಕೆ ಹೊಂದಿಸಿಕೊಂಡು ಕೆಲವು ಸ್ಪಷ್ಟ ಆಪಾದನೆಗಳನ್ನು ಚೇರ್ ಮೇಲೆ ರಿಫ್ಲೆಕ್ಟ್ ಆಗುವ ರೀತಿಯಲ್ಲಿ ಮಾತನಾಡಿದ್ದರು. ಸದನ ಇರಲಿಲ್ಲ. ನನಗೆ ಬೇರೆ ಗತ್ಯಂತರವಿರಲಿಲ್ಲ. ಆ ತಕ್ಷಣ ನಾನು ಅಧಿಕೃತ ನಿವಾಸ ಯಾವುದಿತ್ತು ಅದನ್ನು ಬಿಟ್ಟು ನನ್ನ ಎಲ್ಲಾ ಜವಾಬ್ದಾರಿ ಬಿಟ್ಟು ಇದೊಂದು ಸ್ಪಷ್ಟೀಕರಣ ಆಗುವವರೆಗೂ ನಾನು ಅದರ ಹತ್ತಿರ ಹೋಗುವುದು ಸರಿಯಲ್ಲ ಅಂತ ಒಂದು ರೀತಿಯ ಅಜ್ಞಾತವಾಸಕ್ಕೆ ಹೋದೆ. ಪುನಃ ಸದನ ಸಮಾವೇಶಗೊಂಡಿತು. ಸದನ ಸಮಾವೇಶಗೊಂಡಾಗ ನಾನು ಆ ಪೀಠದಲ್ಲಿ ಕೂಡ ಕೂತುಕೊಳ್ಳಲಿಲ್ಲ, ಉಪಸಭಾಪತಿಗಳಿಗೆ ಕೂತುಕೊಳ್ಳಿ ಅಂತ ಹೇಳಿ

ನನ್ನಷ್ಟಕ್ಕೆ ನಾನು ಹೊರಗಡೆ ಇದ್ದೆ. ಸ್ಪಷ್ಟೀಕರಣವನ್ನು ಸದನದಲ್ಲಿ ಕೊಟ್ಟಾದ ಮೇಲೆ ಈ ಸದನ ಆ ತರಹದ ಅಭಿಪ್ರಾಯ ಇಲ್ಲ ಅಂತ ಬಂದು ಹೇಳಿ ನನಗೆ ಮನವರಿಕೆ ಕೊಟ್ಟಮೇಲೆ ನನ್ನ ಮೇಲೆ ಯಾವುದೇ ರೀತಿಯ ರಿಫೆಕ್ಷನ್ ಇಲ್ಲ ಅಂತಾದ ಮೇಲೆ ನಾನು ವಾಪಸ್ ಚೇರಿಗೆ ಬಂದೆ.

ಶ್ರೀ ಆರಗ ಜ್ಞಾನೇಂದ್ರ: ಇಷ್ಟೊಂದು ಸೂಕ್ಷ್ಮವಾಗಿ ನಾವು ನಡೆದುಕೊಂಡಿದ್ದೇವೆ ಅಲ್ಲಿ. ಆ ಸ್ಥಾನದಲ್ಲಿದ್ದು ಆ ಚೇರ್‌ಗೆ ಏನು ಗೌರವ ಕೊಡಬೇಕೋ ಏನು ಶ್ರದ್ಧೆ ಕೊಡಬೇಕೋ ಜನತಂತ್ರ ವ್ಯವಸ್ಥೆಯಲ್ಲಿ ಆ ಚೇರ್‌ನ ಮಹತ್ವ ಏನು ಅಂತ ಹೇಳುವಂತಹದು ನಾವು ಎತ್ತಿ ಹಿಡಿದಿದ್ದೇವೆ. ಹೆಮ್ಮೆ ವಿಚಾರ ನಮಗೆ. ಆದರೆ ಮೊನ್ನೆಯಿಂದ ಏನು ನಡೆಯಿತು ಸಾರ್? 35–38 ವರ್ಷ ಶಾಸನಸಭೆಗೆ ಬಂದು ಸಚಿವರಾಗಿ ಬೇರೆಬೇರೆ ಸ್ಥಾನ ಅಲಂಕರಿಸಿ ಇವತ್ತು ನಮಗೆ ಬುದ್ಧಿ ಹೇಳುವಂತಹ ಸ್ಥಾನದಲ್ಲಿದ್ದಂತಹವರು ನಡೆದುಕೊಂಡಿರತಕ್ಕ ರೀತಿ ಕರ್ನಾಟಕ ರಾಜ್ಯದ ಜನ ನೋಡಿಬಿಟ್ಟಿರಲ್ಲಾ ಸಾರ್. ತಾವು ಬಹಳ ಮನನೊಂದು ಹೇಳಿದಿರಿ: ನಮ್ಮ ತಂದೆಯವರು ಎಷ್ಟೋ ಬಡತನದಲ್ಲಿ ಕಷ್ಟದಲ್ಲಿದ್ದು ನನಗೇನೋ ವಿದ್ಯೆ ಕೊಟ್ಟಿದ್ದಾರೆ, ನನಗಿದ್ದ ಬುದ್ಧಿಯಿಂದ ನಾನೊಂದು ತೀರ್ಮ ಕೊಟ್ಟಿದ್ದೇನೆ ಅಂತ. ನೀವು ಹಾಗೆ ಹೇಳುವ ಅವಶ್ಯಕತೇನೂ ಇರಲಿಲ್ಲ. ಆ ಪೀಠ ಕೊಟ್ಟಂತಹ ತೀರ್ಪನ್ನು ಮಾನ್ಯ ಮಾಡಬೇಕು ಇಲ್ಲದೇ ಇದ್ದರೆ ರಿವಿಜನ್‌ಗೆ ಕೇಳುವ ಅಧಿಕಾರ ಆ ಸ್ಥಾನದಲ್ಲಿರುವವರಿಗೆ ಇದೆ. ಆದರೆ ಆಗಲಿಲ್ಲ. ಅಂದರೆ ಸಭೆಯನ್ನು ನಾವು ಹೇಳಿದಂತೇನೇ ನಡೆಯಬೇಕು ಅಂದರೆ ಹೇಗಾಗುತ್ತದೆ? ನಾನೇನು ಸಂವಿಧಾನತಜ್ಞನೇನಲ್ಲ, ಕಾನೂನು ಪದವೀಧರನಲ್ಲ, ನಾನೂ ಓದಿದ್ದೇನೆ. 176ರಲ್ಲಿ ಏನಿದೆ, 175(1)ರಲ್ಲೇನಿದೆ? ಅವೆರಡರಲ್ಲೂ ಥ್ಯಾಂಕ್ಸ್ ಹೇಳಬೇಕು ಅಂತ ಇಲ್ಲ. ಅದನ್ನು ರೂಲ್ಸ್ ಆಫ್ ಪ್ರೊಸೀಜರಿನ 20ನೇ ಪಾಯಿಂಟನಡಿ ಮಾಡಿಕೊಂಡಿದ್ದೇವೆ. 176ಕ್ಕೆ. 175ಗೆ ಬರುತ್ತದೆ ಅಂತ ಅನ್ನುವುದು ನಮಗೆ ಗೊತ್ತಿರಲಿಲ್ಲ ಅಂತ ಕಾಣುತ್ತದೆ ಅದಕ್ಕೆ ಮಾಡಿಕೊಂಡಿರಲಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಅವನ್ನು ಓದಿ.

ಅಧ್ಯಕ್ಷರು: ರೂಲಿಂಗ್ ಪಾರ್ಟಿನವರು ಹೀಗೆ ಎದ್ದುನಿಂತರೆ ನಿಮ್ಮನ್ನು ಮೊದಲು ನಾನು ಹೊರಗೆ ಕಳುಹಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ: ನಾನು ಹೇಳುತ್ತೇನೆ. ಅರ್ಧ ಕಪ್ ಚಹಾ ಯಾರಾದರೂ ಕೊಡಿಸಿದರೆ ವಂದನೆ ಹೇಳಿ ಬರುತ್ತೇವೆ. ಮಾನ್ಯ ಖರ್ಗೆಯವರು ನನ್ನ ಬಗ್ಗೆ ಒಂದು ಒಳ್ಳೆಯ ಮಾತು ಆಡಿದರೆ ವಂದನೆ ಅಂತ ಹೇಳಿ ಬರುತ್ತೇವೆ ಹಿರಿಯರು ಅಂತ. ಇದು ಸೌಜನ್ಯ ಸಾರ್. ಸಂವಿಧಾನಕರ್ತರಿಗೆ ಆ ಸೌಜನ್ಯ ಈ ಸಂಸ್ಕೃತಿಯಲ್ಲಿ ಅಡಕವಾಗಿದೆ, ಆ ಕಾರಣಕ್ಕಾಗಿ ಬಹುಶಃ ಅಲ್ಲಿ ಮೆನ್‌ಶನ್ ಮಾಡದೇ ಇರಬಹುದು. ಮಾನ್ಯ ರಾಜ್ಯಪಾಲರು ಸೂಮೋಟೊ ಬಂದು . . . . .

ಶ್ರೀ ಕೆ.ಆರ್. ರಮೇಶ್‌ಕುಮಾರ್: ನನ್ನದು ಕ್ರಿಯಾಲೋಪವಿದೆ.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಮ್ಮ ಗೆಳೆಯರು ಏನು ವಿಚಾರ ಪ್ರಸ್ತಾಪ ಮಾಡುತ್ತಿದ್ದಾರೆ. ಬಹಳ ಸೊಗಸಾಗಿ ಹೇಳುತ್ತಿದ್ದಾರೆ. ಆದರೆ ಈ ಥ್ಯಾಂಕ್ಸ್ ವಿಚಾರಕ್ಕೆ ಸೌಜನ್ಯದ್ದು ಹೇಳಿದಿರಲ್ಲಾ, 176(1)ರ ಕೆಳಗೆ It is mandatory, ಶೆಲ್, ಈ ಸಭೆಯ ಕರ್ತವ್ಯ ಅದು. ನಾವು ವಂದನೆ ಹೇಳಿ ತೀರಬೇಕು. ಇದು ಕಾಫಿ ಕುಡಿದಿದ್ದಕ್ಕೆ ಚಾಕ್ಲೇಟ್ ಕೊಟ್ಟಿದ್ದಕ್ಕೆ ವಂದನೆ ಹೇಳುವುದಲ್ಲ. ದಯಮಾಡಿ ಸೌಜನ್ಯವನ್ನು ಕರ್ತವ್ಯವನ್ನು ಕನ್‌ಫ್ಯೂಸ್ ಮಾಡಿಕೊಳ್ಳಬೇಡಿ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ: ನಿಮ್ಮ

ಮಾತಿನ ಏನು chain of thoughts ಇದೆ ಅದಕ್ಕೆ ಅಡ್ಡ ಬರಲು ನಾನು ಎದ್ದು ನಿಂತಿಲ್ಲ. ಈ ಸದನದ ಮೂಲಕ ನಾವೇನು ವಂದನಾ ನಿರ್ಣಯ ಅಡಾಪ್ಟ್ ಮಾಡುತ್ತೇವೆ, ಅದು ನಮ್ಮ ಕರ್ತವ್ಯ. ಅದನ್ನು ಮಾಡದೇ ಹೋದರೆ ತಪ್ಪಾಗುತ್ತದೆ. ಶಾಸನವನ್ನು ಈ ಸಭೆ ರಚನೆ ಮಾಡುತ್ತದೆ. ಅದನ್ನು ಅನುಷ್ಠಾನ ಮಾಡಲು ಅಗತ್ಯವಿರುವ ರೂಲ್ಸ್‌ಗಳನ್ನು ನಾವು ಮಾಡಿಕೊಳ್ಳುತ್ತೇವೆ. ರೂಲ್ಸ್ ಶಾಸನವನ್ನು ಸೂಪರ್‌ಸೀಡ್ ಮಾಡಲು ಆಗುವುದಿಲ್ಲ. ಶಾಶನ ಅನುಷ್ಠಾನ ಆಗುವುದಕ್ಕೆ ರೂಲ್ಸ್ ಫ್ರೇಮ್ ಮಾಡುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ: ನಾನೂ ಅದನ್ನೇ ಹೇಳಿದ್ದು. ಈಗ 175(1) ರ ಕೆಳಗಡೆ ಒಂದು ಧನ್ಯವಾದಗಳನ್ನು ಹೇಳುವಂಥದ್ದು ಸಂವಿಧಾನಕ್ಕೆ ಅಪಚಾರ ಮಾಡುವಂಥದ್ದೇನೂ ಆಗುವುದಿಲ್ಲ. ಅಂತಹ ಅಪರಾಧವೂ ಕೂಡ ಆಗುವುದಿಲ್ಲ. ಅದಕ್ಕಿಂತ ನಾವು ಮುಂದೆ ಬಂದಿದ್ದೇವೆ. ಮಾನ್ಯ ಸ್ಪೀಕರ್‌ರವರು ಒಂದು ತೀರ್ಮಾನವನ್ನು ಕೊಟ್ಟಿದ್ದಾರೆ. ಆ ತೀರ್ಮಾನವನ್ನು ಒಪ್ಪಿಕೊಳ್ಳುವಂಥ ಸೌಜನ್ಯ ಬೇಕು. ಅಥವಾ ಇಲ್ಲದಿದ್ದರೆ ಅದನ್ನು ಕೇಳುವ ರೀತಿಯಲ್ಲಿ ಅದನ್ನು ಪುನರ್ ಪರಿಶೀಲನೆ ಮಾಡಿ ಎಂದು ಹೇಳಿ ಕೇಳಬಹುದಾಗಿತ್ತು. ನೋಡಿ ಸಾರ್, ನೀವು ಮೊನ್ನೆಯಿಂದ ನಡೆದಿರುವ ಘಟನೆ ಎಲ್ಲವನ್ನೂ ಹೇಳುತ್ತಾ ಬಂದಿದ್ದೀರಿ. ನಿನ್ನೆ ಅಪ್ರೋಪ್ರಿಯೇಷನ್ ಬಿಲ್‌ಗೆ ಮಾತ್ರ ಸಂಬಂಧಪಟ್ಟ ಹಾಗೆ ನೀವು ಮಾತನಾಡಿದ್ದೀರಿ. ಎಲ್ಲರೂ ಹೇಳಿದ್ದಾರೆ. ಈಗ ಒಂದು ತೀರ್ಮಾನವನ್ನು ಕೊಟ್ಟ ನಂತರ ಕೇಳಬಹುದಾಗಿತ್ತು. ಪುನರ್ ಪರಿಶೀಲನೆ ಮಾಡಿ ಎಂದು ಕೇಳುವುದಕ್ಕೂ ಕೂಡ ಒಂದು ವಿಧಾನ ಇದೆ. ಏಕಾಏಕಿಯಾಗಿ ನೀವು ವೆಲ್‌ನೊಳಗಡೆ ಬಂದಿರಿ. ಆಗುವುದಿಲ್ಲವೆಂದು ಹೇಳಿ. ಎಷ್ಟು ದಿನ ಸ್ಟಾಲ್ ಮಾಡಿದಿರಿ ಈ ಹೌಸನ್ನು ? ಯಾವ ರೀತಿ ಮಾಡಿದಿರಿ? ಈಗ ಹೇಳುತ್ತಿದ್ದೀರಿ, ಸಾರ್, ನಾನು ಹೇಳುತ್ತೇನೆ, ಈ ಹೊಸ ಸರ್ಕಾರದ ಚೊಚ್ಚಲ ಭಾಷಣವಿದು. ನಾವು ನೀತಿ ನಿರೂಪಣೆಗಳನ್ನು ಮಾಡಿದ್ದೇವೆ. ನೀವು ಹೇಳಬಹುದಾಗಿತ್ತು ಕುಮಾರಸ್ವಾಮಿಯವರೇ, ನೀವು ಅನುಭವಸ್ಥರಲ್ಲ, ಯಡಿಯೂರಪ್ಪನವರೇ, ನೀವು ವಿರೋಧ ಪಕ್ಷದಲ್ಲಿ ಮಾತ್ರ ಕೂತು ಆಡಳಿತ ಪಕ್ಷದ ಬಗ್ಗೆ ಗೊತ್ತಿಲ್ಲದಿದ್ದವರು ನೀವು, ಅದರಿಂದ ನೀವು ಈ ಭಾಷಣವನ್ನು ಹೀಗೆ ತಿದ್ದಿಕೊಳ್ಳಬಹುದಾಗಿತ್ತು. ಈ ರೀತಿ ನೀತಿ ನಿರೂಪಣೆಯನ್ನು ಮಾಡಬಹುದಾಗಿತ್ತು. ನಿಮಗೆ ಟೀಕೆ ಮಾಡುವ ಎಲ್ಲಾ ಹಕ್ಕುಗಳು ಇತ್ತು. ಕಳೆದುಕೊಂಡಿರಿ. ನೀವು ವೆಲ್‌ನೊಳಗೆ ಕುಳಿತುಕೊಂಡಿರಿ. ನಮಗೆ ಹೆಮ್ಮೆ ಇದೆ. ತಮ್ಮಂಥವರೆಲ್ಲಾ ಅಲ್ಲಿ ಎದುರುಗಡೆಯಲ್ಲಿ ಕೂತಾಗ ಒಂದು ಒಳ್ಳೆಯ ಡಿಬೇಟ್ ತುಂಬಾ ಚೆನ್ನಾಗಿ ಮೂಡಿ ಬರುತ್ತದೆಂದು ಹೇಳಿ. ನಾವು ಹಿಂದೆ ನೋಡಿದ್ದೇವೆ, ನಂಜೇಗೌಡರು, ರಮೇಶ್‌ಕುಮಾರ್‌ರವರು ಅಲ್ಲಿ ಇದ್ದಾಗ ಆ ವೈಭವವನ್ನು ನಾವು ನೋಡಿದ್ದೇವೆ. ಅದೆಲ್ಲೋ ಒಂದು ಕಡೆ ಈಗ ಪುನರಪಿ ಆಗುತ್ತದೆ, ನೀವೆಲ್ಲಾ ಎದುರುಗಡೆ ಕೂತಿದ್ದೀರಿ, ಬಹಳ ಘಟಾನುಘಟಿಗಳು. ಆಮೇಲೆ ಅನುಭವ ಇದ್ದಂಥವರು. ಆಡಳಿತದ ಅನುಭವ ಇದ್ದಂಥವರು. ನಮ್ಮನ್ನು ಇಲ್ಲಿ ಸರ್ಕಾರವನ್ನು ಎಚ್ಚರಿಸುತ್ತೀರಿ ಎಂದು ನಾವು ಭಾವಿಸಿದ್ದೆವು. ಆದರೆ ನೀವು ನಡೆದುಕೊಳ್ಳುವಂಥ ರೀತಿ ಛೇ ಛೇ. ಬಹಳ ಬೇಜಾರಾಯಿತು. ಬಹುಶಃ ಇದು ನಿಮಗೆ ಮೆಚ್ಚುಗೆ ಆಗುತ್ತದೆಯೇ? ನಿಮಗೆ ಆತ್ಮತೃಪ್ತಿ ಇದ್ದರೆ ಹೇಳಿ. ಇದಲ್ಲದೆ ಅಪ್ರೋಪ್ರಿಯೇಷನ್ ಬಿಲ್ ಬಗ್ಗೆ ಹೇಳಿದಿರಿ. 1638 ಕೋಟಿ, ರೂ. ಅಂತೆ ಆದರೆ ಇಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದು ನೀವೇನೇ ಅಪ್ರೋಪ್ರಿಯೇಷನ್ ಬಿಲ್‌ನ್ನು

ಇಟ್ಟಿದ್ದೆವು. ಯಾರು ತೊಂದರೆ ಮಾಡಿದರು ನಿಮಗೆ. ಇವತ್ತು ಹೇಳಿಬಿಟ್ಟರಲ್ಲಾ, ಬಾರಿ ದೊಡ್ಡ ಅಪರಾಧವನ್ನು ಈ ಸರ್ಕಾರ ಮಾಡಿದ ಹಾಗೆ ನೀವು ಅಲ್ಲಿ ಹೇಳುವುದು ಸರಿಯೇ? ಯಾರು ತೊಂದರೆ ಮಾಡಿದರು? ಯಾರು ಅಡಚಣೆ ಮಾಡಿದರು? ಸಾರ್, ನಾವು ಬಿಲ್ಲನ್ನು ಮಂಡನೆ ಮಾಡಿದ್ದೇವೆ. ಇಲ್ಲಿಂದ ಸರ್ಕಾರ ಮಂಡನೆ ಮಾಡಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ನಾನು ತಮಗೆ ಕೇಳಿದ್ದೇವೆ, ಅಂಥ ವಾತಾವರಣ ನಿರ್ಮಾಣವಾಗಲಿಲ್ಲ, ತಾವು ಸಭೆಯನ್ನು ನಿಗ್ರಹಿಸಬೇಕಾಗಿತ್ತು. ಧರಣಿ ಮಾಡುವವರನ್ನು ಆಚೆಗಾದರೂ ಕಳುಹಿಸಿ ಚರ್ಚೆಗೆ ಅವಕಾಶವನ್ನು ಮಾಡಕೊಡಬೇಕಾಗಿತ್ತು. ನಾನು ಗೌರ್ನಮೆಂಟನ್ನು ಟೀಕೆ ಮಾಡಿಲ್ಲ. Please try to understand, ವಾತಾವರಣ ಶಾಸನಸಭೆಯಲ್ಲಿ ಚರ್ಚೆ ಆಗುವುದಕ್ಕೆ ಸರಿಯಾಗಿ ಆಗಿರಲಿಲ್ಲ. ಆರ್ಡರ್‌ನಲ್ಲಿ ಇರಲಿಲ್ಲ. ನಾನು ಮಾತನಾಡುತ್ತೇನೆಂದರೂ ತಾವು ಗಮನಕ್ಕೇ ತೆಗೆದುಕೊಳ್ಳಲಿಲ್ಲ. ಅಷ್ಟೇ ನಮ್ಮ ಪ್ರಶ್ನೆ. ನಿಮ್ಮನ್ನು ಏನೂ ಕ್ವೊಶ್ಚನ್ ಮಾಡಲಿಲ್ಲ. ಅದರ ಡಿಟೈಲ್ಸ್‌ನ್ನು ಹೇಳಲಿಲ್ಲ. I am asking the Chair, you have not created such a situation in the House.

ಶ್ರೀ ಆರಗ ಜ್ಞಾನೇಂದ್ರ: ಇಲ್ಲ, ನೀವು ಕೂತು ಕೇಳುತ್ತಿದ್ದಿರಿ. ನಾನೂ ನೋಡಿದ್ದೇನೆ. ಆದರೆ ಈ ಸಭೆ ಅದನ್ನು ಚರ್ಚೆ ಮಾಡುವ ಪರಿಸ್ಥಿತಿಯಲ್ಲಿತ್ತಾ ಸ್ವಾಮಿ? ಬಹುಶಃ ಮೊದಲೇ ಈ ಸರ್ಕಾರ ನೇಮ್ ಮಾಡಿದ್ದರೆ, ಈ ಸರ್ಕಾರ ನಿರ್ಣಯವನ್ನು ಮಾಡಿದ್ದರೆ, ಹೊರಗಡೆ ಹಾಕಬಹುದಾಗಿತ್ತು. ಅಥವಾ ಇನ್ನೇನೋ ಮಾಡಬಹುದಾಗಿತ್ತು. ಅದು ಮಾಡುವಂಥದ್ದು ಸರಿಯಲ್ಲ, ಬಹುಶಃ ಅವಕಾಶಗಳಿದ್ದಾವೆ. ಅದು ಸರಿಯಾಗಬಹುದು. ಈ ರೀತಿ ಯೋಚನೆ ಮಾಡಿದೆವು. ನಮಗೂ ಕೂಡ ಅತ್ಯಂತ ನೋವಾಗಿದೆ ಸಾರ್. ನಾವು ಇಲ್ಲಿ ಕೂತಿರತಕ್ಕಂಥವರು ಸಮಾಧಾನದಿಂದ ಕೂತುಕೊಳ್ಳಲಿಲ್ಲ. 1638 ಕೋಟಿ ರೂಪಾಯಿಗಳ ಬಿಲ್ ಏಕಾಏಕಿಯಾಗಿ ಇಲ್ಲಿ ಪಾಸಾಯಿತು ಎಂದು ಹೇಳಿದರೆ ನಾವೆಲ್ಲಾ ಇಲ್ಲೇನು ಬಾಯಿ ಹೊಲಿದುಕೊಂಡು ಕೂತುಕೊಳ್ಳಲಿಕ್ಕೆ ಬರಲಿಲ್ಲ. ನಾವೆಲ್ಲಾ ಅಧ್ಯಯನ ಮಾಡಿದ್ದೇವೆ. ಸ್ವಲ್ಪ ಮಾತನಾಡಬಹುದಾಗಿತ್ತು. ನಾವು ಇಲ್ಲಿ ಕೂತು ನಿಮ್ಮನ್ನು ಟೀಕೆ ಮಾಡಬಹುದಾಗಿತ್ತು. ಈ ಅವಕಾಶಗಳು ನಮಗೆ ಇತ್ತು. ನಮಗೂ ಕೂಡ ತಪ್ಪಿಸಿದರಲ್ಲಾ ಎಂದು ಹೇಳಿ ಅತ್ಯಂತ ಬೇಸರವಾಯಿತು. ಇದು ಸ್ವಯಂಕೃತ ಅಪರಾಧ ಸಾರ್. ಬೇರೆ ಯಾರೂ ಮಾಡಿದ್ದಲ್ಲ. ನೀವು ಸರ್ಕಾರದ ಮೇಲೆ ಅದನ್ನು ಹೊರಿಸಬೇಡಿ. ಅಥವಾ ಸ್ಪೀಕರ್ ಮೇಲೆ ಹೊರಿಸಬೇಡಿ. ನೀವು ಮಾಡಿಕೊಂಡಿರತಕ್ಕದ್ದು. ನನಗನ್ನಿಸುತ್ತದೆ. ತಾವು ಅನೇಕ ವಿಚಾರಗಳನ್ನು ಹೇಳಿದ್ದೀರಿ. ದಯವಿಟ್ಟು ನಾನು ಹೇಳುತ್ತೇನೆ, ಸಾರ್, ಇನ್ನಾದರೂ ಕೂಡ ಈ ಸಭೆ ಸುಗಮವಾಗಿ ನಡೆಯುವ ಹಾಗೆ, ಈ ಸಭೆಯಲ್ಲಿ ಸಾಕಷ್ಟು ಬೆಳಕನ್ನು ಚೆಲ್ಲುವಂಥ ಪರಿಸ್ಥಿತಿಗೆ ನಿಮ್ಮ ಅವಕಾಶಗಳನ್ನು ಕಳೆದುಕೊಳ್ಳದಿದ್ದಹಾಗೆ ಇಲ್ಲಿ ಕೂತಿರತಕ್ಕ ಸರ್ಕಾರದ ಅನೇಕ ಅನುಭವ ಇಲ್ಲದೇ ಇರತಕ್ಕ ಹೊಸದಾಗಿ ಮಂತ್ರಿಯಾಗಿರತಕ್ಕವರನ್ನು ತಿದ್ದತಕ್ಕಂಥ ಒಂದು ಹಿರಿಯಣ್ಣನ ರೀತಿಯಲ್ಲಿ ನೀವು ಕೆಲಸಮಾಡುವಂಥ ಒಂದು ಅವಕಾಶ ಇದೆ ಇಡೀ ಕರ್ನಾಟಕ ರಾಜ್ಯದಲ್ಲಿ ಇದನ್ನು ನೀವು ಕಳೆದುಕೊಳ್ಳಬೇಡಿ. ನಾನು ಹೇಳುವುದು ತಮ್ಮೂಲಕ ಮಾನ್ಯ ಅಧ್ಯಕ್ಷರೇ. ಇನ್ನೊಂದು ಏನಾಗಿದೆ ಎಂದರೆ ನನಗನ್ನಿಸುತ್ತದೆ, ಅವರು ಹೇಳಿದರು, ಏನು ಬೇಕಾದರೂ ಹೇಳಬಹುದು, ಸಸ್ಪೆಂಡೆಡ್ ಸರ್ಕಾರ ಹಾಗೆ ಹೀಗೆ ಎಂದು ಹೇಳಿ ನೀವು ಹತ್ತು ಸಾರಿ ಯೋಚನೆಯನ್ನು ಮಾಡಿ. ಇದು ಕಾಂಗ್ರೆಸ್ ಪಕ್ಷದ ಆಂತರಿಕ ಒಂದು ಭಿನ್ನಾಭಿಪ್ರಾಯದ ಪ್ರಕಟೀಕರಣ

ಮೊನ್ನೆಯಿಂದ ಆಗತಕ್ಕಂಥದ್ದು. ಹೇಗೆಂದರೆ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆಯುವುದು. ಸಾರ್, ಒಂದನೆಯದಾಗಿ ಇಲ್ಲಿರುವಂಥವರನ್ನು ಇರಿಸುಮುರಿಸುವಿಕೆಗೆ ಒಳಗು ಮಾಡುವುದು ಒಂದಾದರೆ ಇನ್ನೊಂದು ಮಾನ್ಯ ನಮ್ಮ ವಿರೋಧ ನಾಯಕರು ಇದ್ದಾರಲ್ಲಾ ಪಾಪ, ಅವರದು ಬಹಳ ಒಳ್ಳೆಯ ವ್ಯಕ್ತಿತ್ವ, ಅವರ ಬಗ್ಗೆ ನಮಗೆಲ್ಲಾ ಗೌರವ ಇದೆ. ಅವರು ವಿರೋಧ ಪಕ್ಷದ ನಾಯಕರಾಗಿ ಸರಿಯಾದ ರೀತಿಯಲ್ಲಿ ಕೆಲಸವನ್ನು ಮಾಡುತ್ತಿಲ್ಲವೆಂದು ಹೇಳಿ ಇವರೆಲ್ಲಾ ಹೈಕಮಾಂಡ್‌ವರೆಗೆ ಅದನ್ನು ತಿಳಿಸಬೇಕು, ಅದನ್ನು ಪ್ರಚಾರ ಮಾಡಬೇಕು. ಇಲ್ಲಿ ಸದನದಲ್ಲಿ ಸರಿಯಾಗಿ ಡಿಬೇಟ್ ಮಾಡುವುದಕ್ಕೆ ಅವಕಾಶ ಇಲ್ಲ. ಪದೇ ಪದೇ ಇಲ್ಲಿ ಧರಣಿ ಮಾಡುತ್ತಿದ್ದಾರೆ, ಹಿರಿಯರಾಗಿ ಹೀಗೆ ಮಾಡಬಾರದಾಗಿತ್ತು, ಕಾಂಗ್ರೆಸ್‌ನವರೇ ಹೀಗೆ ಟೀಕೆ ಮಾಡುತ್ತಿದ್ದಾರೆ. ನಮಗೆಷ್ಟೋ ಜನರು ಹೊರಗಡೆ ಸಿಕ್ಕುತ್ತಾರೆ. ಈ ಆಂತರಿಕ ಭಿನ್ನಾಭಿಪ್ರಾಯ. ಹಿಂದೆ ಮಂತ್ರಿಯಾಗಲಿಕ್ಕೆ ಆಗದೇ ಇದ್ದಂಥವರು.

ಶ್ರೀ ಸಿ.ಎಸ್. ನಾಡಗೌಡ: ನಿಮ್ಮ ಬುದ್ಧಿಮಟ್ಟ ಹೇಗೆ ಎಂದು ಪ್ರದರ್ಶನವನ್ನು ಮಾಡುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು: ಜ್ಞಾನೇಂದ್ರರವರೆ, ಬೇಗ ಮುಗಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಜ್ಞಾನೇಂದ್ರರವರೆ, ಇದು ನಮ್ಮ ಪಕ್ಷ, ಯಡಿಯೂರಪ್ಪನವರ ಅಭಿಪ್ರಾಯ ಒಂದು ಇರಬಹುದು. ಅನಂತಕುಮಾರ್‌ರವರ ಅಭಿಪ್ರಾಯ ಒಂದು ಇರಬಹುದು. ಒಬ್ಬರು ಸರ್ಕಾರವನ್ನು ಘಾರಂ ಮಾಡಿ ಎನ್ನುವವರು. ಇನ್ನೊಬ್ಬರು ಬೇಡ ಎನ್ನುವವರು. ಅದಕ್ಕೆ ನಾವು ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದ್ದು ಏಕೆಂದರೆ ಇವರಿಬ್ಬರ ಭಿನ್ನಾಭಿಪ್ರಾಯದಲ್ಲೇ ಈ ಸರ್ಕಾರವನ್ನು ಘಾರಂ ಮಾಡುವುದಕ್ಕೆ ಇಪ್ಪತ್ತು ತಿಂಗಳು ಹಿಡಿಯಿತು. ಇಲ್ಲದಿದ್ದರೆ ತಕ್ಷಣವೇ ಆಗಲೇ ಆಗುತ್ತಿತ್ತು. ಇಪ್ಪತ್ತು ತಿಂಗಳ ಹಿಂದೆಯೇ ಆಗುತ್ತಿತ್ತು. ಅದಕ್ಕಾಗಿ ನಿಮ್ಮ ಭಿನ್ನಾಭಿಪ್ರಾಯಗಳಿಂದಲೇ ತೊಂದರೆಯಾಯಿತು ಎನ್ನತಕ್ಕಂಥದ್ದು ಈಗಲಾದರೂ ನೆನಪಿಗೆ ತಂದುಕೊಂಡು ನಡೆದುಕೊಳ್ಳಿ. ಅದಕ್ಕಾಗಿ ನಮಗೆ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೇ, ಭಿನ್ನಾಭಿಪ್ರಾಯದ ಬಗ್ಗೆ ಈಗಾಗಲೇ ಮಾನ್ಯ ಡಿ.ಕೆ. ಶಿವಕುಮಾರ್‌ರವರು ಕಳೆದ ಸದನದಲ್ಲೇ ಹೇಳಿದ್ದಾರೆ. ಯಾವ ರೀತಿ ಭಿನ್ನಾಭಿಪ್ರಾಯ ಇತ್ತು, ಯಾರ ಅಭಿಪ್ರಾಯ ಏನು ಇತ್ತು ಎಂದು. ಅದನ್ನು ಅವರು ದಯವಾಡಿ ಅರ್ಥಮಾಡಿಕೊಳ್ಳಬೇಕು. ಈಗಲೂ ಅದೇ ರೀತಿ ಮುಂದುವರಿಯುತ್ತಾ ಇದೆ.

ಅಧ್ಯಕ್ಷರು: ಜ್ಞಾನೇಂದ್ರರವರೆ, ಬೇಗ ಮುಗಿಸಿ.

ಶ್ರೀ ಆರಗ ಜ್ಞಾನೇಂದ್ರ: ನಾನು ಮುಗಿಸಿಬಿಡುತ್ತೇನೆ. ಈಗ ದಯವಿಟ್ಟು ನಿಮ್ಮ ಭಿನ್ನಾಭಿಪ್ರಾಯ ಯಾವುದೇ ಇರಲಿ. ಆದರೆ ಈ ಸದನ ಸರಾಗವಾಗಿ ನಡೆಯುವುದಕ್ಕೆ ಅವಕಾಶವನ್ನು ಮಾಡಿಕೊಡಿ. ನೀವು ನಮ್ಮ ಸರ್ಕಾರವನ್ನು ತಿದ್ದುವಂಥ, ಟೀಕೆ ಮಾಡುವಂಥ ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಿಕೊಂಡು ಆ ಒಂದು ಆಯುಧ ಏನು ಇದೆ, ಅದನ್ನು ಸರಿಯಾದ ರೀತಿ ನೀವು ಪ್ರಯೋಗ ಮಾಡಬೇಕು. ಜನತಂತ್ರ ವ್ಯವಸ್ಥೆಯಲ್ಲಿ ಚೆನ್ನಾಗಿ ಪ್ರಯೋಗ ಮಾಡಿದರೆ ಮಾತ್ರ ನಮ್ಮ ಸರ್ಕಾರವೂ ಒಳ್ಳೆಯ ದಿಕ್ಕಿನಲ್ಲಿ ನಡೆಯುತ್ತದೆ. ಆ ವಿಶ್ವಾಸ ನಮಗೆ ಇದೆ. ನಮ್ಮವರೂ ಕೂಡ ಬಹಳ ಎಚ್ಚರಿಕೆಯಿಂದ ಹೆಜ್ಜೆಯನ್ನು ಇಡುವುದಕ್ಕೆ ಬಹಳ ದೊಡ್ಡ ಸಹಾಯವನ್ನು ತಾವು ಮಾಡಿದಂತಾಗುತ್ತದೆ. ಆ ಅವಕಾಶವನ್ನು ನೀವು ಬಹಳ ಹಿರಿಯಣ್ಣನಾಗಿ ಕಳೆದುಕೊಳ್ಳಬಾರದು. ಈ ರಾಜ್ಯದ ಜನ ನಿಮಗೆ ಎಲ್ಲೋ ಒಂದು

ಕಡೆ ನಿಮ್ಮ ಬಗ್ಗೆ ಬಹಳ ಲಘುವಾಗಿ ಹೇಳುತ್ತಾರೆ. ಏಕೆಂದರೆ ನಾನು ಹೇಳುತ್ತೇನೆ, 110 ವರ್ಷ ಇತಿಹಾಸ ಇರುವ ಒಂದು ಪಕ್ಷ ಎಂದು ಹೇಳಿ ಯಾವಾಗಲೂ ಕೂಡ ಅವರು ಹೇಳಿಕೊಳ್ಳುತ್ತಾರೆ. ಅಂಥ ಒಂದು ಪಕ್ಷ ಈ ರೀತಿ ನಡವಳಿಕೆಯಿಂದ ನಡೆದುಕೊಳ್ಳುವಂಥದ್ದು ಒಳ್ಳೆಯದಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಧ್ಯಾಹ್ನ ಮಾಡೋಣವೇ? ಆಯಿತು. ಈಗ ಸದನವನ್ನು ಸಂಜೆ 4 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು 2–18 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ ಸಂಜೆ 4 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು ಮತ್ತೆ 4 ಗಂಟೆ 35 ನಿಮಿಷಕ್ಕೆ ಸಮಾವೇಶಗೊಂಡಿತು, ಅಧ್ಯಕ್ಷರು (ಶ್ರೀಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು: ಬೆಳಿಗ್ಗೆ ವರದಿಗಳನ್ನು ಒಪ್ಪಿಸಲಿಲ್ಲ. ಮಾನ್ಯ ರಮೇಶ್‌ಕುಮಾರ್‌ರವರೆ, ನಿಮ್ಮ ಹೆಸರಿನಲ್ಲಿ ಒಂದು ವರದಿ ಇದೆ. ಈ ವರದಿಯನ್ನು ಮೊದಲು ತೆಗೆದುಕೊಂಡುಬಿಡೋಣ. ಎರಡು ನಿಮಿಷದಲ್ಲಾಗುತ್ತದೆ.

2. ವರದಿಗಳನ್ನೊಪ್ಪಿಸುವುದು

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) (ಸದಸ್ಯರು, ಅಧೀನ ಶಾಸನ ರಚನಾ ಸಮಿತಿ): ಮಾನ್ಯ ಅಧ್ಯಕ್ಷರೆ, ನಾನು 2004–05ನೇ ಸಾಲಿನ ಅಧೀನ ಶಾಸನ ರಚನಾ ಸಮಿತಿಯ ಮೂವತ್ತೊಂದನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ವರದಿಯನ್ನೊಪ್ಪಿಸಲಾಯಿತು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) (ಅಧ್ಯಕ್ಷರು, ಸಾರ್ವಜನಿಕ ಉದ್ಯಮಗಳ ಸಮಿತಿ): ಮಾನ್ಯ ಅಧ್ಯಕ್ಷರೆ, 2004–05ನೇ ಇಸವಿಯ ಸಾರ್ವಜನಿಕ ಉದ್ಯಮಗಳ ಸಮಿತಿಯ ನೂರಒಂಬತ್ತು, ನೂರಹತ್ತು ಹಾಗೂ ನೂರಹನ್ನೊಂದನೇ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ವರದಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರು: ಶ್ರೀ ಮೋಹನ್ ಕೆ. ಶೆಟ್ಟಿ, ಅಧ್ಯಕ್ಷರು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ, ಇವರ ಹೆಸರಿನ ಮುಂದಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಎರಡನೇ ಹಾಗೂ ಮೂರನೇ ವರದಿಗಳನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್‌ರವರ ಹೆಸರಿನ ಮುಂದಿರುವ ಅಂದಾಜುಗಳ ಸಮಿತಿಯ ಮೊದಲನೇ ಹಾಗೂ ಎರಡನೇ ವರದಿಗಳನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ): ಮಾನ್ಯ ಅಧ್ಯಕ್ಷರೆ, ಶ್ರೀ ಹೆಚ್.ಕೆ. ಕುಮಾರಸ್ವಾಮಿ, ಅಧ್ಯಕ್ಷರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿ, ಇವರ ಪರವಾಗಿ 2004–05ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿಯ ಎರಡನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು: ವರದಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರು: ಶ್ರೀ ಎಸ್. ಬಾಲರಾಜ್, ಸದಸ್ಯರು ಸರ್ಕಾರಿ ಭರವಸೆಗಳ ಸಮಿತಿ ಇವರ ಹೆಸರಿನ ಮುಂದಿರುವ ಸರ್ಕಾರಿ ಸಮಾರಂಭ: ಗಣರಾಜ್ಯೋತ್ಸವ : ಸ್ವಾತಂತ್ರ್ಯ ದಿನಾಚರಣೆಗಳಂದು ಏರ್ಪಡಿಸುವ ಸಮಾರಂಭಗಳಿಗೆ ಮಾನ್ಯ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡುವುದರ ಮೇಲಿನ ಸರ್ಕಾರಿ ಭರವಸೆಗಳ ಸಮಿತಿಯ ವಿಶೇಷ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ. ಈಗ ಮಾನ್ಯ ವಾಟಾಳ್ ನಾಗರಾಜ್‌ರವರೇ ಮಾತನಾಡಿ, ಐದುನಿಮಿಷದಲ್ಲಿ ಮುಗಿಸಬೇಕು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ:

ವಿಷಯ:– ಧರಣಿ ನಡೆದಾಗ 2005–06ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಿ ಚರ್ಚೆಗೆ ಅವಕಾಶ ಕೊಡದೆ ಮಂಜೂರಾತಿ ಪಡೆದಿದ್ದರ ಬಗ್ಗೆ ಆಕ್ಷೇಪಣೆ. (ಮುಂದುವರೆದ ಚರ್ಚೆ)

ಶ್ರೀ ವಾಟಾಳ್‌ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಬಗ್ಗೆ ವಂದನಾ ನಿರ್ಣಯವನ್ನು ಮಾಡಬೇಕೋ ಬಿಡಬೇಕೋ ಎನ್ನುವ ಬಗ್ಗೆ ಸುಧೀರ್ಘವಾದಂಥ ಚರ್ಚೆ ಮತ್ತು ಈ ಸದನದಲ್ಲಿ ಧರಣಿ, ತಮ್ಮ ಕಾರ್ಯಾಲಯದಲ್ಲಿ ಅನೇಕ ಬಾರಿ ಕುಳಿತು ಮಾತುಕತೆ ನಡೆದು ಯಾವುದೇ ಒಂದು ಇತ್ಯರ್ಥಕ್ಕೆ ಬರಲಾಗದೆ ನಿನ್ನೆ ದಿನ ಧರಣಿ, ನಡೆಯುವಾಗ ಮಾನ್ಯ ಹಣಕಾಸಿನ ಸಚಿವರು, ಹಾಗೂ ಉಪ ಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರು ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಮಂಡಿಸಿ ಆ ಗದ್ದಲದಲ್ಲೇ ಅದಕ್ಕೆ ಒಪ್ಪಿಗೆ ಪಡೆದಿದ್ದೇವೆಂದು ಹೇಳಿದರು. ನನಗನ್ನಿಸುತ್ತದೆ ಅವರನ್ನೇ ನೇರವಾಗಿ ನಾನು ಕೇಳುತ್ತೇನೆ.

ಇಂತಹ ಸಂದರ್ಭದಲ್ಲಿ ತಾವು ಅಂದರೆ ಯಡಿಯೂರಪ್ಪನವರು ಈ ಕಡೆ ಕುಳಿತು, ವಿರೋಧ ಪಕ್ಷದ ನಾಯಕರಾಗಿ ಹತ್ತಾರು ವರ್ಷಗಳ ಕಾಲ ಕೆಲಸ ಮಾಡಿರತಕ್ಕಂತಹವರು. ಇಂತಹ ಧನ ವಿನಿಯೋಗ ಮಸೂದೆ ಅನಾಥವಾಗಿ ಮಂಡನೆ ಆಗುವುದಾದರೆ ತಾವು ನಿಮ್ಮ ನಿಲುವು ಯಾವ ದೃಷ್ಟಿಯಲ್ಲಿ ಇರುತ್ತಿತ್ತು, ಯಾವ ದಿಕ್ಕಿನಲ್ಲಿ ಇರುತ್ತಿತ್ತು ಎಂದು ನಾನು ನೇರವಾಗಿ ತಮಗೆ ಪ್ರಶ್ನೆ ಮಾಡುತ್ತೇನೆ. ಸುಮಾರು 1,700 ಕೋಟಿ ರೂಪಾಯಿಗಳ ಅಂದಾಜಿನ ಈ ಒಂದು ವಿಧೇಯಕ 29 ಬೇಡಿಕೆಗಳ ಬಗ್ಗೆ ತಾವು ಏನು ಮಂಡನೆ ಮಾಡಿದ್ದೀರಿ, ಅದರ ಬಗ್ಗೆ ಕನಿಷ್ಠ ಚರ್ಚೆ ಆಗಬೇಕಾಗಿತ್ತು. ಚರ್ಚೆ ಹೇಗೆ ಆಗುವುದು ಇಲ್ಲಿ ಧರಣಿ ಇದೆ ಎಂದು ತಾವು ಹೇಳಬಹುದು. ಚರ್ಚೆ ಆಗುವುದಕ್ಕೆ ಅವಕಾಶ ಮಾಡಿಕೊಡತಕ್ಕಂಥದ್ದು ಕಾನೂನಿನಲ್ಲಿ ಅಧ್ಯಕ್ಷರಿಗೆ ಅವಕಾಶ ಇದೆ. ಅಧ್ಯಕ್ಷರು ಅದನ್ನು ಮಾಡುತ್ತಾರೆಂದು ಹೇಳಿ, ನಮ್ಮೆಲ್ಲರ ಅಭಿಪ್ರಾಯ, ಆಸೆ ಮತ್ತು ಆಶೋತ್ತರಗಳು. ಇವೆಲ್ಲಕ್ಕಿಂತ ಮುಂಚೆ ನಾವು ಅನೇಕ ವಿಚಾರಗಳ ಬಗ್ಗೆ ಚರ್ಚೆ ಮಾಡಬೇಕಾಗಿತ್ತು. ಇದು ತಮಗೆ ಗೊತ್ತಿದೆ. ಆದರೂ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ರಾಜ್ಯಪಾಲರ ಭಾಷಣದ ಬಗ್ಗೆ ಈ ದೇಶದ ಅನೇಕ ರಾಜ್ಯಪಾಲರನ್ನೇ ಶಾಸನಸಭೆಗೆ ಬರದಂತೆ ತಡೆದಿರತಕ್ಕಂತಹ ನಿದರ್ಶನಗಳು ಇವೆ. 1967ರಲ್ಲಿ ಪಶ್ಚಿಮ ಬಂಗಾಳದಲ್ಲಿ ಮಾನ್ಯ ಧರ್ಮವೀರರವರು ರಾಜ್ಯಪಾಲರಾಗಿದ್ದರು ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆಗ ಜ್ಯೋತಿಬಸುರವರು ಉಪ ಮುಖ್ಯಮಂತ್ರಿಗಳಾಗಿದ್ದರು ಜೊತೆಯಲ್ಲಿ ಗೃಹ ಇಲಾಖೆ ಇತ್ತು. ಮುಖ್ಯಮಂತ್ರಿಗಳು ಬೇರೆ ಪಕ್ಷದವರು, ಉಪ ಮುಖ್ಯಮಂತ್ರಿಗಳು ಬೇರೆ ಪಕ್ಷದವರು. ಆದರೆ, ರಾಜ್ಯಪಾಲರ ಭಾಷಣವನ್ನು ತಡೆಯುತ್ತೇವೆಂದು ಹೇಳಿ, ರಾಜ್ಯಪಾಲರು ಬರುವ ದಾರಿಯಲ್ಲೇ

ಜ್ಯೋತಿಬಸುರವರು ಉಪ ಮುಖ್ಯಮಂತ್ರಿಗಳಾಗಿ, ಗೃಹ ಮಂತ್ರಿಗಳಾಗಿ ಅಡ್ಡಡ ಮಲಗಿದರು. ನೀವು ಒಳಗೆ ಬರ ಕೂಡದು ಎಂದು ಹೇಳಿ. ಅಂತಹ ಪ್ರಸಂಗ ಇಲ್ಲಿ ನಡೆದಿಲ್ಲ. ಕೆಲವು ಕಡೆ ಅಧ್ಯಕ್ಷರ ಪೀಠವನ್ನೇ ಸುತ್ತುವರಿದು ನಿಂತಿರತಕ್ಕಂಥದ್ದು ಉಂಟು. ತಮಿಳುನಾಡಿನಲ್ಲಿ ನಡೆದಿದೆ, ಉತ್ತರ ಪ್ರದೇಶದಲ್ಲಿ ನಡೆದಿದೆ, ಮತ್ತು ಬಿಹಾರದಲ್ಲಿ ನಡೆದಿದೆ. ಆ ಪರಿಸ್ಥಿತಿ ಇಲ್ಲಿ ಉದ್ಭವವಾಗಿಲ್ಲ. ನಾವು ಎಲ್ಲೋ ಒಂದು ಕಡೆ ನಿಮ್ಮ ಜೊತೆಯಲ್ಲಿ ತೀವ್ರವಾದಂಥ ವಾದ ವಿವಾದಕ್ಕೆ ಬಂದಂಥದ್ದು ಇತ್ತೀಚಿನ ದಿನಗಳಲ್ಲಿ; ಆ ರೀತಿಯಾದ ವಾದ ವಿವಾದಗಳು ಎಲ್ಲೋ ಒಂದು ಕಡೆ ಮಾತಿನ ಸಮರ ಅಸಂಬದ್ಧವಾಗಿರಬಹುದು, ನಿಮ್ಮ ಮನಸ್ಸಿಗೂ ನೋವಾಗಿರಬಹುದು, ನಾವು ಮಾತನಾಡಿರತಕ್ಕಂಥದ್ದು, ನಮ್ಮದೇ ಆದ ವಿಚಾರಗಳು ಇರಬಹುದು, ಮತ್ತೊಂದು ಕಡೆ ನಿಮ್ಮ ಮೇಲೆ ವ್ಯಾಮೋಹ ಇದೆ. ಅದನ್ನು ನಾವು ತಳ್ಳಿ ಹಾಕುವ ಹಾಗೆ ಇಲ್ಲ. ಎಲ್ಲೋ ಒಂದು ಕಡೆ ತಕ್ಷಣ ನಾವು ನಿಮ್ಮ ಜೊತೆ ಜಗಳ ಆಡಿರಬಹುದು. ಇನ್ನೊಂದು ಕಡೆ ಚಿಂತನೆ ಮಾಡುವಾಗ ವ್ಯಾಮೋಹ ಇದೆ. ಅದು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ನಾನು ಆರಂಭದಲ್ಲಿಯೇ ತಮಗೆ ಹೇಳಿದೆ. ತಮ್ಮ ಹೆಸರು 'ಕೃಷ್ಣ' ಎಂದು; ಆ ಕೃಷ್ಣ ಎನ್ನತಕ್ಕಂಥವರು ಇನ್ನೂ ಅನೇಕ ಮಟ್ಟಗಳಲ್ಲಿ ಮೇಲೆ ಹೋಗತಕ್ಕಂತಹ ಅವಕಾಶಗಳು ಇವೆ ಎಂದು ತಾವು ಇಲ್ಲಿ ಅಧ್ಯಕ್ಷ ಪೀಠವನ್ನು ಅಲಂಕರಿಸುವಾಗ ಆ ಮಾತನ್ನು ತಮಗೆ ಹೇಳಿದ್ದೆ. ನನಗನ್ನಿಸುತ್ತದೆ, ಎಲ್ಲೋ ಒಂದು ಕಡೆ ಸಾಮರಸ್ಯದ ಕೊರತೆ ಇದೆ. ತಾವು ನಮ್ಮ ಎಲ್ಲಾ ವಿರೋಧ ಪಕ್ಷದ ಮುಖಂಡರನ್ನು ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ಬಗ್ಗೆ ಕರೆದಾಗ ನಾನಾ ರೀತಿಯ ಸಲಹೆಗಳು ಹಿಂದಿನ ಅಧ್ಯಕ್ಷರಾದ ರಮೇಶ್‌ಕುಮಾರ್‌ರವರ ಸಲಹೆ, ನಮ್ಮೆಲ್ಲರ ಹಿರಿಯರಾದ ಮಾನ್ಯ ಎಂ.ಪಿ. ಪ್ರಕಾಶ್‌ರವರು ಅವರದೇ ಆದ ಸಲಹೆಗಳನ್ನು ಅವರು ನೀಡಿದರು. ತಾವು ಪೀಠದಲ್ಲಿ ತಮ್ಮ ಕೊಠಡಿಯಲ್ಲಿ ಕೂತಿದ್ದಿರಿ, ಮುಖ್ಯಮಂತ್ರಿಗಳು ಅವರು ಪ್ರಾಮಾಣಿಕವಾಗಿ ಅವರು ಈ ಬಗ್ಗೆ ತಲೆ ಹಾಕದೆ ಏನಾದರೂ ಒಂದು ತೀರ್ಮಾನವಾಗಲಿ ಎಂಬ ಭಾವನೆಯಲ್ಲಿ ಅವರು ಕೂತಿದ್ದರು. ನಾನು ಅವರನ್ನು ಬಹಳ ಎಚ್ಚರದಿಂದ ನಾನು ಗಮನಿಸುತ್ತಿದ್ದೇನೆ. ಅವರು ಇಲ್ಲಿಯೂ ಸದನದಲ್ಲಿ ಈ ಬಗ್ಗೆ ಸಮಗ್ರವಾಗಿ ಚರ್ಚೆ ನಡೆಯುವಾಗ ಅವರು ಎಲ್ಲೋ ಒಂದು ಕಡೆ ಐದು ನಿಮಿಷ ಎದ್ದು ಮಾತನಾಡಿದ್ದು ಬಿಟ್ಟರೆ ಅದರ ಬಗ್ಗೆ ಏನೂ ಇಲ್ಲ. ಇಡೀ ಪ್ರದರ್ಶನ ಶ್ರೀಮಾನ್ ಯಡಿಯೂರಪ್ಪನವರದ್ದು. ಅದರಲ್ಲಿ ಬೇರೆ ಮಾತು ಇಲ್ಲವೇ ಇಲ್ಲ. ಸಂಪೂರ್ಣ ಇದರ ಪ್ರದರ್ಶನ, ಷೋ ಯಡಿಯೂರಪ್ಪನವರದ್ದು. ಯಡಿಯೂರಪ್ಪನವರ ಮೇಲೆ ಇಲ್ಲಿ 10 ವರ್ಷ ಹಾಗೆ ಹೀಗೆ ವ್ಯಾಮೋಹ ಇತ್ತು ಎಂದು ತಿಳಿದುಕೊಳ್ಳಬೇಡಿ. ಪ್ರತಿ ಸಾರಿಯೂ ಅವರ ಜೊತೆ ಪ್ರೀತಿ ವಿಶ್ವಾಸ ಸಲುಗೆ ಇತ್ತು. ಅವರು ಎದ್ದು ನಿಂತಾಗಲೆಲ್ಲಾ ಎಷ್ಟು ಸಾರಿ ಅವರು ನಮ್ಮ ಜೊತೆ ಬೆಂಬಲ ಮತ್ತು ಸಹಕಾರವನ್ನು ಪಡೆದಿದ್ದಾರೆ, ವಿಚಾರಗಳನ್ನು ನಮ್ಮ ಜೊತೆ ಚರ್ಚೆ ಮಾಡಿದ್ದಾರೆ, ಅವರ ಕಾರ್ಯಾಲಯಕ್ಕೆ ಕರೆಸಿದ್ದಾರೆ, ಎಂತೆಂಥ ಸಂದರ್ಭಗಳಲ್ಲಿ ಅವರು ಜಾರುವ ಸಂದರ್ಭದಲ್ಲೂ ಅವರನ್ನು ಜಾರ ಬೇಡಿ ಎಂದು ಅನೇಕ ಸಂದರ್ಭಗಳಲ್ಲಿ ಅವರಿಗೆ ಎಚ್ಚರಿಕೆ ಕೊಟ್ಟಿರುವುದು, ನಿಂತಿರುವುದು ಎಲ್ಲಾ ಮಾಡಿದ್ದೇವೆ. ಇಷ್ಟೆಲ್ಲವನ್ನೂ ನಾವು ಸಮಗ್ರವಾಗಿ ಹೇಳಿದ್ದೇವೆ. ಯಡಿಯೂರಪ್ಪನವರಿಗೆ ಎಲ್ಲಾದರೂ ಒಂದು ಕಡೆ ಕಿಂಚಿತ್ತು ಭಾವನೆ ವಾಟಾಳ್ ನಾಗರಾಜ್‌ರವರು ಹೇಳುತ್ತಿದ್ದಾರೆ, ರಮೇಶ್‌ಕುಮಾರ್‌ರವರು ಹೇಳುತ್ತಿದ್ದಾರೆ, ಹಿಂದಿನ ಅಧ್ಯಕ್ಷರಾದವರು ಹೇಳುತ್ತಿದ್ದಾರೆ, ಮಾಧುಸ್ವಾಮಿಯವರು, ಶ್ರೀರಾಮರೆಡ್ಡಿಯವರು ಮತ್ತು ರಾಜೇಂದ್ರನ್‌ರವರು ಇವರೆಲ್ಲಾ ನಮ್ಮ ಜೊತೆಯಲ್ಲಿ ಇದ್ದ ಸ್ನೇಹಿತರು ಇದ್ದಿದ್ದರೆ ಈ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ. ಇದರಲ್ಲಿ ಪ್ರಜಾತಂತ್ರ

ವ್ಯವಸ್ಥೆ ಎಂದರೆ, ಕೊಡುವುದು ಮತ್ತು ತೆಗೆದುಕೊಳ್ಳುವುದು ಎರಡೂ ಇರಬೇಕು. ಇದು ಪ್ರಜಾತಂತ್ರ. ತಮ್ಮ ಅಸಹಾಯಕ ಪರಿಸ್ಥಿತಿಯನ್ನು ನಾನು ನೋಡುತ್ತಿದ್ದೆ. ಗಡಿಯಾರದಲ್ಲಿ ಗಂಟೆ ನಡೆಯುತ್ತಿದೆ. ಆ ಗಡಿಯಾರದ ಅಡಿಯಲ್ಲಿ ಆಡುತ್ತಿದ್ದಿರಿ. ಆ ಪರಿಸ್ಥಿತಿ, ಈ ಕಡೆ ಮುಖ್ಯಮಂತ್ರಿಗಳನ್ನು ನೋಡುತ್ತಿದ್ದಿರಿ, ಈ ಕಡೆ ಯಡಿಯೂರಪ್ಪನವರಿಗೆ ನೋಡುತ್ತಿದ್ದಿರಿ. ಎದುರಿಗೆ ನಮ್ಮನ್ನು ನೋಡುತ್ತಿದ್ದಿರಿ. ನಿಮ್ಮ ಪರಿಸ್ಥಿತಿ ಅನುಕಂಪ, ಕರುಣೆ, ಆ ಪರಿಸ್ಥಿತಿಯಲ್ಲಿ ಎಲ್ಲೋ ಒಂದು ಕಡೆ ನಾವು ನಿಮಗೆ ಸಲಹೆ ಮಾಡಿದೆವು. ಎಲ್ಲರನ್ನೂ ಸೇರಿಸಿ ಒಂದು ನಿರ್ಣಯ ತಾವು ಮಂಡಿಸಿ ಎಂದು ಹೇಳಿದೆ. ಅದನ್ನೂ ತಾವು ಮಂಡಿಸುವುದಕ್ಕಾಗಲಿಲ್ಲ. ಈ ಸಾಮರಸ್ಯದ ಕೊರತೆ ಬಹಳ ಇದೆ. ಇದು ಒಂದು ರೀತಿ ಹಟಮಾರಿತನ. ಎಲ್ಲೋ ಒಂದು ಕಡೆ ಹಟಮಾರಿ ಧೋರಣೆ ಇದೆ. ಹಟಮಾರಿ ಎನ್ನುವ ಪದದ ಹಿಂದೆ ಬಹಳ ದೊಡ್ಡ ಅರ್ಥ ಇದೆ. ಮಾನ್ಯ ಮುಖ್ಯಮಂತ್ರಿಗಳು ಹಟ ಮಾಡಲಿಲ್ಲ. ನಾನು ಅದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಇದರ ಬಗ್ಗೆ ಅವರು ಮಾತುಕತೆಗೆ ಬರಲೇ ಇಲ್ಲ. ಯಡಿಯೂರಪ್ಪನವರು ಅವರ ಪ್ರತಿನಿಧಿಯಾಗಿ, ನಮ್ಮ ಜಗದೀಶ್ ಶೆಟ್ಟರ್‌ರವರು ಬರುವುದಕ್ಕೆ ಮುಂಚೆ ಯಡಿಯೂರಪ್ಪನವರಿಗಿಂತ ಒಂದು ಕೈ ಜೋರಾಗಿ ಪ್ರತಿಪಾದನೆ ಮಾಡುವುದಕ್ಕೆ ಹೋದರು. ತಕ್ಷಣ ಯಡಿಯೂರಪ್ಪನವರು ಇಲ್ಲ, ಸಮಸ್ಯೆ ಬಗೆಹರಿಯಬಹುದು ಎಂದು ನಾವು ಗಮನ ಹರಿಸುತ್ತಿದ್ದ ಹಾಗೆ ಯಡಿಯೂರಪ್ಪನವರ ಆಗಮನ. ಇದು ನನಗನ್ನಿಸುತ್ತದೆ, ಇದು ಎಲ್ಲೋ ಒಂದು ಕಡೆ ಹಟಮಾರಿತನ. . . . . ಹಟಮಾರಿತನ ಎಂದರೆ ಕೆಟ್ಟದು ಎಂದು ನಾನು ಹೇಳುವುದಿಲ್ಲ. ಹಟಮಾರಿ ಹೆಂಗಸನ್ನು ಮದುವೆಯಾಗಿದ್ದೀಯಾ ಎಂದು ಜನ ಹೇಳುತ್ತಾರೆ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ: ಇದು ಮಹಿಳೆಯರಿಗೆ ಮಾಡುವ ಅವಮಾನ. ಈಗತಾನೆ ಹಟಮಾರಿ ಹೆಂಗಸು ಎಂದು ಹೇಳುತ್ತಿದ್ದೀರಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಹೆಣ್ಣು ಮಕ್ಕಳ ಕುರಿತು ಹೇಳುವುದು ಬೇಡ, ನಿಮ್ಮನ್ನೇ ನೀವು ಸಂಭೋದಿಸಿಕೊಂಡು ಹೇಳಿ.

ಶ್ರೀ ವಾಟಾಳ್ ನಾಗರಾಜ್: ಹಟಮಾರಿ ಹೆಂಗಸು ಎಂದು ಮದುವೆ ಆಗುವುದಕ್ಕೆ ಮುಂಚೆ ಗೊತ್ತಿರುವುದಿಲ್ಲ. ಹಟಮಾರಿ ಎಂದು. ಹೆಂಗಸಿಗೆ ಸ್ಫುರದ್ರೂಪಿ ಆಗಿ, ನೋಡುವುದಕ್ಕೆ ಸೌಂದರ್ಯವತಿಯಾಗಿ ಮದುವೆ ಆಗಲೇಬೇಕಲ್ಲಪ್ಪ ಎನ್ನುವ ಹುಚ್ಚು ಆಕಾಂಕ್ಷೆ, ಅಭಿಮಾನ ಎಲ್ಲವೂ ಎದ್ದಿರುತ್ತದೆ. ಅದರ ಜೊತೆಗೆ ಸ್ನೇಹಿತರುಗಳು ಬಹಳ ಒಳ್ಳೆಯ ಹೆಣ್ಣು ನೋಡುವುದಕ್ಕೆ ಚೆನ್ನಾಗಿದ್ದಾರೆ, ನೀವು ಮದುವೆ ಆಗಲೇಬೇಕೆಂದು ಹೇಳುತ್ತಾರೆ. ಹಠಮಾರಿತನ ಯಾವಾಗ ಗೊತ್ತಾಗುವುದು ಮದುವೆ ಆದ ಮೇಲೆ. ಮದುವೆ ಆಗುವುದಕ್ಕೆ ಮುಂಚೆ ಗೊತ್ತಾಗುವುದಿಲ್ಲ. ನನಗೆ ಮುಖ್ಯಮಂತ್ರಿಗಳು ಎಲ್ಲೋ ಒಂದು ಕಡೆ ಹಟಮಾರಿ ಹೆಣ್ಣನ್ನು ಮದುವೆ ಆಗಿದ್ದಾರೆ ಎನ್ನುವ ಭಾವನೆ ಎಲ್ಲೋ ಒಂದು ಕಡೆ ನನಗೆ ಭಾಸವಾಗುತ್ತಿದೆ. ಮದುವೆ ಆಗಿ ಎನ್ನುವ ಒತ್ತಾಸೆ ಯಾರಿಂದ, ಚಲುವರಾಯಸ್ವಾಮಿ, ಹೆಚ್.ಸಿ. ಬಾಲಕೃಷ್ಣ, ವೆಂಕಟೇಶ ಮತ್ತು ಗೌಡರು ಎಲ್ಲರೂ ಸೇರಿ ಬಹಳ ಚೆನ್ನಾಗಿ ಇದ್ದಾರೆ, ನೀವು ಮದುವೆ ಆಗಲೇ ಬೇಕೆಂದು ಹೇಳಿದರು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಕುಮಾರಸ್ವಾಮಿಯವರನ್ನು ನೀವು ಅಷ್ಟು ಸುಲಭವಾಗಿ ತಿಳಿದುಕೊಳ್ಳಬೇಡಿ. ಅವರು ಇಟ್ಟುಕೊಳ್ಳುವವರೇ ಹೊರತು ಕಟ್ಟಿಕೊಳ್ಳುವವರಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ: ಮದುವೆ ಆಗಬೇಕಾದರೆ ಈಗ ಅಷ್ಟು ಸುಲಭ ಅಲ್ಲ. ಹಿಂದೆ ಗಂಡು ಹೆಣ್ಣು ನೋಡದೆ, ಹೆಣ್ಣು ಗಂಡು ನೋಡದೆ, ಮದುವೆ ಆಗುತ್ತಿದ್ದ ಕಾಲ ಒಂದು ಇತ್ತು. ನಿಮ್ಮ ಕಾಲದಲ್ಲಿ ಆ ತರಹ ಇತ್ತೇನೋ; ಈಗ ನಮ್ಮ ಕಾಲದಲ್ಲಿ ಆ ತರಹ ಇಲ್ಲ. ಎಲ್ಲಾ ತರಹದ ವಿಚಾರಗಳನ್ನು ತಿಳಿದುಕೊಂಡು ಎದುರುಗಡೆ ನೋಡಿ ಮದುವೆಯಾಗುತ್ತಾರೆ.

ಪ್ರಥಮವಾಗಿ ನಮ್ಮ ವಾಟಾಳ್ ನಾಗರಾಜ್‌ರವರು ಹಿರಿಯ ಸದಸ್ಯರಾಗಿದ್ದಾರೆ. ಅವರು ಬಹಳ ಚೆನ್ನಾಗಿ ಹಾಗೂ ಶಾಂತಿಯುತವಾಗಿ ಮಾತನಾಡುತ್ತಿದ್ದಾರೆ. ಅವರಿಗೆ ನನ್ನ ಧನ್ಯವಾದಗಳನ್ನು ಹೇಳುತ್ತೇನೆ. ಏಕೆಂದರೆ ಕಳೆದ ನಾಲ್ಕು ದಿವಸಗಳ ಸನ್ನಿವೇಶಗಳನ್ನು ನೋಡಿದಾಗ ಇವೊತ್ತು ಈ ರೀತಿ ನಾಲ್ಕು ದಿವಸಗಳಲ್ಲೂ ಮಾತನಾಡಿದ್ದರೆ ಬಹುಶಃ ಬಿಲ್ ಬಗ್ಗೆಯೂ ಚರ್ಚೆ ಆಗುತ್ತಿತ್ತು, ಎಲ್ಲಾ ರೀತಿಯಲ್ಲೂ ಸದನದಲ್ಲಿ ಚರ್ಚೆ ಸುಗಮವಾಗಿ ನಡೆಯುತ್ತಿತ್ತು. ಒಳ್ಳೆಯ ವಾತಾವರಣ ಸೃಷ್ಟಿಯಾಗುತ್ತಿತ್ತು. ನಾನೂ ಕೂಡ ಕಳೆದ ಬಾರಿ ನಾಲ್ಕೂವರೆ ವರ್ಷ ಶಾಸಕನಾಗಿದ್ದೆ. ಆಗ ಅಧ್ಯಕ್ಷರು ಯಾವ ರೀತಿಯಲ್ಲಿ ಸದನ ನಡೆಸಿದರು, ಆಗ ಮಹಾನ್ ನಾಯಕರೆಲ್ಲಾ ಇಲ್ಲಿ ಕುಳಿತಿದ್ದರು, ನಾವು ಅಲ್ಲಿ ಕುಳಿತಿದ್ದೆವು. ಅವೊತ್ತು ಯಾವ ರೀತಿ ಸದನ ನಡೆಯುತ್ತಿತ್ತು, ಅಧ್ಯಕ್ಷರು ಕೊಠಡಿಯಲ್ಲಿ ಎಷ್ಟು ಸಾರಿ ಕರೆದು ಮಾತನಾಡುತ್ತಿದ್ದರು, ಇಲ್ಲಿ ವಿರೋಧ ಪಕ್ಷಗಳಿಗೆ ಆಡಳಿತ ಪಕ್ಷ ಎಷ್ಟೊಂದು ಅವಕಾಶವನ್ನು ಕೊಟ್ಟು ಅವರ ಟೀಕೆಯನ್ನು ರಿಸೀವ್ ಮಾಡಿ ಆಡಳಿತವನ್ನು ಮಾಡುತ್ತಿದ್ದರು ಎಂಬುದನ್ನೆಲ್ಲಾ ನಾವು ನೋಡಿದ್ದೆವು. ಆದರೆ ಈಗ ಅವರು ನಮ್ಮ ಅಧ್ಯಕ್ಷರ ಹಾಗೂ ಸರ್ಕಾರದ ತಾಳ್ಮೆಯನ್ನು ಮಿತಿಮೀರಿ ಮಾಡಿ ಈಗ ಮತ್ತೆ ಪುನಃ ನಮ್ಮ ಉಪ ಮುಖ್ಯಮಂತ್ರಿಯವರು ತಂದಿರುವ ಬಿಲ್ ಬಗ್ಗೆ ಇಷ್ಟೊಂದು ನಿಮ್ಮ ವಾದವನ್ನು ಮಂಡಿಸತಕ್ಕಂಥದ್ದು ಸೂಕ್ತವಲ್ಲ; ಉಪ ಮುಖ್ಯಮಂತ್ರಿಯವರು ತಮ್ಮಲ್ಲಿ ಮನವಿಯನ್ನು ಮಾಡಿಕೊಂಡಿದ್ದಾರೆ. ರಾಜ್ಯಪಾಲರ ಭಾಷಣ ಆದಮೇಲೆ ಎಲ್ಲರೂ ತಮ್ಮ ತಮ್ಮ ಆಸನಗಳಿಗೆ ಹೋಗಿ ನಮಗೆ ಬಿಲ್ ಒಂದನ್ನು ಮಂಡಿಸುವುದಕ್ಕೆ ಅವಕಾಶ ಮಾಡಿಕೊಟ್ಟು ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿಕೊಂಡಿದ್ದಾರೆ. ನೀವೇ ಆಗ ಬೇಡ ಎಂದು ಈಗ ಈ ರೀತಿ ವಾದ ಮಾಡುವುದು ಸರಿಯಲ್ಲ.

ಶ್ರೀ ಜಿ.ಟಿ. ದೇವೇಗೌಡ: ಮಾನ್ಯ ಅಧ್ಯಕ್ಷರೆ, ಒಂದ್ನಿಮಿಷ, ಈಗಾಗಲೇ ನಮ್ಮ ಹಿರಿಯ ನಾಯಕರಾದ ವಾಟಾಳ್‌ರವರು ಮಾತನಾಡುತ್ತಾ ಸುಂದರವಾದಂಥ ಹುಡುಗಿ, ಹಠಮಾರಿತನದ ಹುಡುಗಿಯನ್ನು ಮದುವೆ ಮಾಡಿಕೊಂಡುಬಿಟ್ಟಿದ್ದಾರೆ ಎಂದರು. ನಮ್ಮ ಗಂಡು ಮದುವೆ ಆಗದೇ ಇರತಕ್ಕಂಥ ಹುಡುಗಿ, ಅಂತರ್ಜಾತಿಯ ವಿವಾಹವನ್ನು ಮಾಡಿಕೊಂಡಿದ್ದಾರೆ. ಅಂತರ್ಜಾತಿಯ ವಿವಾಹವನ್ನು ಮಾಡಿಕೊಂಡು ಆ ಹೆಣ್ಣಿನ ಮನವೊಲಿಸಿ ಉತ್ತಮವಾದಂಥ ಸಂಸಾರವನ್ನು ಅವರು ನಡೆಸುತ್ತಾರೆ. ನೀವು ಅದಕ್ಕಾಕೆ ವಿರೋಧ ಮಾಡುತ್ತೀರಿ? ಅಂತರ್ಜಾತಿಯ ವಿವಾಹಕ್ಕೆ ಸಹಕಾರ ಕೊಡಬೇಕು. ಅದನ್ನು ಬಿಟ್ಟು ದೂರ ಇಟ್ಟುಬಿಟ್ಟರೆ ಹುಡುಗ, ಹುಡುಗಿ ಮದುವೆಯಾಗುವುದು ಹೇಗೆ? ಮದುವೆಯಾಗಿರತಕ್ಕಂಥ ನೀವೆಲ್ಲಾ ಸಹಕಾರ ಕೊಡುವುದಕ್ಕೆ ಬಿಟ್ಟು ನೀವ್ಯಾಕೆ ಇದಕ್ಕೆ ವಿರೋಧ ಮಾಡುತ್ತೀರಿ? ಅಂತರ್ಜಾತಿ ವಿವಾಹಕ್ಕೆ ವಿರೋಧ ಮಾಡಬಾರದು. ಹಠಮಾರಿತನ ಯಾವಾಗ ಅಂದರೆ ಮದುವೆಯಾಗದಿದ್ದರೆ ಮಾತ್ರ. ಮದುವೆಯಾದ ಮೇಲೆ ಸಂಸಾರ ನಡೆಸಿಕೊಂಡು ಹೋಗುತ್ತಾರೆ. ನೀವು ಅದಕ್ಕೆ ಸಹಕಾರ ಕೊಡಿ.

(ಗೊಂದಲ)

ಅಧ್ಯಕ್ಷರು: ವಾಟಾಳ್‌ರವರೆ, ನೀವು ಬೇಗ ಮಾತನಾಡಿ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಈಗ ತಮಗೆ ನಾನು ಹೇಳುತ್ತಿದ್ದೇನೆ, ಚಲುವರಾಯಸ್ವಾಮಿಯವರು ಹೇಳಿದರು, ಮೊದಲಾದರೆ ಮದುವೆಗಿದುವೆ ಎಂದರೆ ತಂದೆ ತಾಯಿ ಹೇಳಿದ ತಕ್ಷಣ ಮದುವೆಯಾಗಿಬಿಡಬಹುದಾಗಿತ್ತು, ಆದರೆ ಈಗ ಹಾಗೆಲ್ಲಾ ಇಲ್ಲ, ಎಲ್ಲವನ್ನೂ ನಾವು ನೋಡಿ ವ್ಯವಸ್ಥಿತವಾಗಿ ಮದುವೆಯಾಗಿದ್ದೇವೆ ಎನ್ನುವ ಧಾಟಿಯಲ್ಲಿ ಅವರು ಹೇಳಿದರು. ನನಗನ್ನಿಸುತ್ತದೆ ಅವರ ವಾದ ಸಮರ್ಥನೀಯವಲ್ಲ. ಹಠಮಾರಿತನ ಗೊತ್ತಾಗುವುದು ಯಾವಾಗ ಎಂದರೆ ಮೊದಲಲ್ಲ, ಮದುವೆಗೆ ಮುಂಚೆ ಗೊತ್ತೇ ಆಗುವುದಿಲ್ಲ, ಮೊದಲು ನೋಡುವುದಷ್ಟೆ. ಬಹಳ ಸೌಂದರ್ಯವಾಗಿರತಕ್ಕಂಥ ಹೆಣ್ಣು ಮಗಳು. ಮದುವೆಯಾಗಬಹುದಪ್ಪಾ ಇವಳನ್ನು, ಅಂದರೇನು ಅವಳ ನಡೆ, ನುಡಿ, ನಡಿಗೆ, ಅವಳ ಕಾಲು, ಅವಳ ಕೈ, ಹೀಗೆ . . .

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರ ಕಾಲದಲ್ಲಿ ಮದುವೆಯಾದ ಮೇಲೆ ಒಂದು, ತಿಂಗಳು, ಎರಡು ತಿಂಗಳಾದ ಮೇಲೆ ಗಂಡ ಹೆಂಡತಿಯನ್ನು ಒಬ್ಬರಿಗೊಬ್ಬರು ಸೇರುವುದಕ್ಕೆ ಬಿಡುತ್ತಿದ್ದರು. ಆದರೆ ಈಗ ಹಾಗಲ್ಲ, ಆರು ತಿಂಗಳು ಮುಂಚೆಯೇ ತೀರ್ಮಾನವಾಗಿ ವೀಳ್ಯಶಾಸ್ತ್ರ ಮಾಡಿಕೊಂಡು ಆಮೇಲೆ ಮದುವೆ ಮಾಡುತ್ತಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಬಾಲಕೃಷ್ಣರವರು ಅವರ ಅನುಭವದಿಂದ ಈ ರೀತಿ ಹೇಳುತ್ತಿರಬಹುದು.

ಅಧ್ಯಕ್ಷರು: ನಾಗರಾಜ್‌ರವರೇ, ಇನ್ನೂ ಅನೇಕ ಸದಸ್ಯರು ಮಾತನಾಡುವವರಿದ್ದಾರೆ. ಬೇರೆ ಮುಗಿಸಿಬಿಡಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಹೆಣ್ಣಿನ ಹಠಮಾರಿತನ ಯಾವಾಗ ಗೊತ್ತಾಗುತ್ತದೆ, ನಾನು ಹಾಸ್ಯವಾಗಿ ಹೇಳಿರಬಹುದು. ಆದರೆ ಬಹಳ ಅರ್ಥಗರ್ಭಿತವಾದಂಥ ವಿಚಾರ ಇದರಲ್ಲಿ ಒಳಗೊಂಡಿದೆ. ಹಠಮಾರಿತನ ಯಾವಾಗ ಗೊತ್ತಾಗಬಹುದು, ಸಂಸಾರ ನಡೆಸಲು ಪ್ರಾರಂಭವಾದಾಗ, ಮೊದಲೇ ಆರಂಭ ಶುರುವಾಗುತ್ತದೆ, ಮೊದಲ ರಾತ್ರಿ, ಅದು ಆದಮೇಲೆ ಶುರುವಾಗುತ್ತದೆ, ಗಂಡನಿಗೆ ಹೆಂಡತಿ ಹೊಡೆಯತಕ್ಕಂಥಾದ್ದು, ಗಂಡನಿಗೆ ಕದ್ದು ಹೆಂಡತಿ ಹೊಡೆಯತಕ್ಕಂಥದ್ದು, ಗಂಡನಿಗೆ ಪೊರಕೆಯಲ್ಲಿ ಹೊಡೆಯತಕ್ಕಂಥದ್ದು, ಗಂಡನಿಗೆ ಕತ್ತು ಹಿಡಿದು ನೂಕತಕ್ಕಂಥದ್ದು.

ಶ್ರೀ ಆರಗ ಜ್ಞಾನೇಂದ್ರ: ಆ ರೀತಿ ಆಗುವುದು ಒಂದು ವೇಳೆ ಜಾತಕ ಕೂಡಿಸದೇ ಮದುವೆಯಾಗಿದ್ದರೆ ಆಗುವಂಥದ್ದು.

ಶ್ರೀ ವಾಟಾಳ್ ನಾಗರಾಜ್: ಈ ವ್ಯವಸ್ಥೆಯಲ್ಲಿ ಹಠಮಾರಿತನ ಯಾವಾಗ ಗೊತ್ತಾಗುತ್ತದೆ ಎಂದರೆ ಇದರ ಮೊದಲನೆಯ ರಾತ್ರಿ; ಅದು ಇನ್ನೂ ಆಗಿಲ್ಲ. ಅದು ಆದಾಗ ಅಲ್ಲಿಂದ ಶುರುವಾಗುತ್ತದೆ ಅಧ್ಯಕ್ಷರೆ. ಹಠಮಾರಿ ಅನ್ನುವುದು ಏನು ಎನ್ನುವ ಪ್ರಶ್ನೆ ಗೊತ್ತಾಗುತ್ತದೆ. ಅದರ ಮೇಲೆ ವಿವಾಹ ವಿಚ್ಛೇದನ, ವಿಚ್ಛೇದನ ಆಗಬೇಕೇ ಅಥವಾ ಬಿಡಬೇಕೇ? ತೀರಾ ಮದುವೆ ಆಗಿಬಿಟ್ಟಿದ್ದರೆ ವಿಚ್ಛೇದನ ಆಗಿಬಿಟ್ಟಿದ್ದರೆ ಎಷ್ಟು ವರ್ಷ ಹಿಡಿಯುತ್ತದೆ, ನ್ಯಾಯಾಲಯಕ್ಕೆ ಹೋಗಬೇಕು, ಇವೆಲ್ಲಾ ಬರುತ್ತದೆ. ಮುಂದೆ ಅದು ಏನಾಗುತ್ತದೆ ಎನ್ನುವ ವಿಚಾರದ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ.

ಒಟ್ಟಿನಲ್ಲಿ ಹಠಮಾರಿ ಎನ್ನುವ ಒಂದು ಪದದಲ್ಲಿ ಆ ವ್ಯಕ್ತಿ ಆ ಒಂದು ಹಠಮಾರಿಯ ಹೆಂಗಸನ್ನು ಮದುವೆಯಾಗಿರತಕ್ಕಂಥದ್ದು ಇದೆಯಲ್ಲಾ, ನಮಗೆ ಕರುಣೆ ಇದೆ, ಅನುಕಂಪ ಇದೆ, ಮತ್ತು ಎಲ್ಲಿ ದಾರಿ ತಪ್ಪಿ ಎಲ್ಲಿ ಬೀದಿಗೆ ಬರುತ್ತಾರೋ ಎನ್ನುವ ಭಾವನೆ, ನೋವು ಇದೆ. ನಾನು ಇಷ್ಟು ಹೇಳಿ ಬಿಡುತ್ತೇನೆ.

ಶ್ರೀ ಜಿ.ಟಿ. ದೇವೇಗೌಡ: ಲವ್ ಮ್ಯಾರೇಜ್ ಆಗಿಹೋಯಿತಲ್ಲಾ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಕಳಕಳಿಯ ಮನವಿ. ನಾಲ್ಕು ದಿವಸಗಳಿಂದ ಪ್ರಾಮಾಣಿಕವಾಗಿ 175(1) ರ ಪ್ರಕಾರ ನಿರ್ಣಯ ಬೇಡಿ ಚರ್ಚೆ ಆಗಬೇಕು ಎನ್ನತಕ್ಕಂಥದ್ದು ನಮ್ಮ ವಾದ. ಚರ್ಚೆಯಾಗಬೇಕು. ಕೊನೆಗೆ ವಂದನೆಯನ್ನು ಸಲ್ಲಿಸಿರುವುದರ ಬಗ್ಗೆ ನಾವು ಪ್ರಾಮಾಣಿಕವಾಗಿ ಚಿಂತನೆಯನ್ನು ಮಾಡೋಣ. ಆದರೆ ರಾಜ್ಯಪಾಲರಿಗೆ ವಂದನೆಯನ್ನು ಇಡೀ ಸದನ, ಎಲ್ಲಾ ಸದಸ್ಯರು ಹೇಳಿದ್ದಾರೆಂದು ಹೇಳಿ ತಮ್ಮ ಮೂಲಕ ಪತ್ರವನ್ನು ಬರೆಯಿರಿ ಎನ್ನತಕ್ಕಂಥ ವ್ಯವಸ್ಥೆ ಬಗ್ಗೆಯೂ ನಾವು ಯೋಚನೆ ಮಾಡಿದೆವು. ಎಲ್ಲೋ ಒಂದು ಕಡೆ ಈ ಸದನ ಆ ನಾಲ್ಕು ದಿವಸಗಳ ಕಾಲ ತಮ್ಮ ವಿವೇಚನೆಯಿಂದ ಅಂದರೆ ತಮ್ಮ ವಿವೇಚನೆ, ತಮಗೆ ಬಿಟ್ಟದ್ದು, ಎಲ್ಲಾ ರೀತಿಯ ವಿವೇಚನೆ, ಎರಡೂ ಕಡೆಯವರಿಗೆ ನೀವು ಹೇಳಬಹುದಿತ್ತು. ನೋಡಿ ಇದು ಸರಿಯಿಲ್ಲ, ಈ ನಿರ್ಣಯವನ್ನು ನಾವು ಬೇರೆ ರೂಪದಲ್ಲಿ ತರೋಣ, ಇದಕ್ಕೆ ನೀವು ಒಪ್ಪಲೇಬೇಕು, ಸದನ ನಡೆಸಬೇಕಾದ ಜವಾಬ್ದಾರಿ ನನಗೆ ಇದೆ ಎನ್ನತಕ್ಕಂಥ ವಾದವನ್ನು ತಾವು ಹೇಳಿದ್ದರೆ ಎಲ್ಲೋ ಒಂದು ಕಡೆ ಅದು ಸರಿಹೋಗುತ್ತಿತ್ತೇನೋ ಎಂದು ನನಗೆ ಅನ್ನಿಸುತ್ತದೆ. ನನಗೆ ಈಗ ಮಹಾಭಾರತ ಜ್ಞಾಪಕಕ್ಕೆ ಬರುತ್ತದೆ. ತಾವೂ ಕೂಡ ಮಹಾಭಾರತದ ಬಗ್ಗೆ ಅಪಾರವಾದ ಅಭ್ಯಾಸ ಮಾಡಿದ್ದೀರಿ. ಮಹಾಭಾರತದ ಕೃಷ್ಣ, ಮಹಾಭಾರತದ ಕೃಷ್ಣ ಪಾಂಡವರ ಪಕ್ಷಪಾತಿ. ಮಹಾಭಾರತದ ಕೃಷ್ಣ ಪಾಂಡವರ ಪಕ್ಷಪಾತಿ, ಇಲ್ಲಿ ಸಂವಿಧಾನ ದ್ರೌಪದಿ, ಸಂವಿಧಾನದ ದ್ರೌಪದಿ, ಮಹಾಭಾರತದ ಕೃಷ್ಣ ಅಂದು ದ್ರೌಪದಿಯ ಮಾನಭಂಗ ಆಗುವಾಗ ದುಶ್ಶಾಸನಿಂದ, ದುಶ್ಶಾಸನ ಸೀರೆಯನ್ನು ಎಳೆಯುವಾಗ ಕೃಷ್ಣಾ, ಕೃಷ್ಣಾ ಎಂದು ಹೇಳಿ ಪಾಂಡವರು ಕೂಗಿದಾಗ ಎಲ್ಲೋ ಒಂದು ಕಡೆ ಕೃಷ್ಣ ಪರಮಾತ್ಮ ಆ ದ್ರೌಪದಿಯನ್ನು ಮಾನಭಂಗದಿಂದ ಪಾರು ಮಾಡಲು ಸಮಗ್ರವಾದ ವಸ್ತ್ರವನ್ನು ಕೊಡುತ್ತಿರುತ್ತಾನೆ. ಆ ಕೃಷ್ಣ. ಇದು ಮಹಾಭಾರತದಲ್ಲಿ ನಡೆದಿರುವುದು. ಮಹಾಭಾರತದಲ್ಲಿ ಕೃಷ್ಣ ಪಾಂಡವರ ಪರ. ಆದರೆ ನಮ್ಮ ಕೃಷ್ಣ ಕೌರವರ ಪರ ಆಗಿಬಿಟ್ಟರೇನೋ ಎನ್ನುವ ನೋವು ನಮಗೆ ಬಂದಿದೆ. ನಮ್ಮ ಕೃಷ್ಣ ಕೌರವರ ಪರ ಆಗಿಬಿಟ್ಟರೇನೋ ಎನ್ನತಕ್ಕಂಥ ನೋವು. ನಾನು ಇಲ್ಲಿ ಸಂವಿಧಾನವನ್ನು ದ್ರೌಪದಿಯೆಂದು ಕರೆಯುತ್ತೇವೆ. ಸಂವಿಧಾನ ಎನ್ನತಕ್ಕಂತ ದ್ರೌಪದಿಗೆ, ಆ ದ್ರೌಪದಿಯ ಮಾನಭಂಗ ಆಗುತ್ತಿರುವಾಗ ಇಲ್ಲಿ ನಮ್ಮ ಕೃಷ್ಣ ಸಂರಕ್ಷಣೆ ಕೊಡಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ವಾಟಾಳ್‌ರವರೇ, ಮಹಾಭಾರತದಲ್ಲಿ ಕೃಷ್ಣ ಪಾಂಡವರ ಪಕ್ಷಪಾತಿ ಎಂದು ತಾವು ಹೇಳಿದಿರಿ. ಆದರೆ ವ್ಯಾಸರ ಮಹಾಭಾರತದಲ್ಲಿ ಅಭಿಮನ್ಯು ತನ್ನ ಹೆಂಡತಿ ಉತ್ತರೆಗೆ ಒಂದು ಪೆಟ್ಟಿಗೆಯನ್ನು ಕೊಡುತ್ತಾನೆ. ಬಹುಮಾನವಾದಂಥ ಪೆಟ್ಟಿಗೆ. ಅದನ್ನು ನೀವು ತೆಗೆದುನೋಡಿದರೆ ನಿಮಗೆ ಪ್ರಿಯವಾದವರ ದರ್ಶನವಾಗುತ್ತದೆ ಎಂದು ಹೇಳುತ್ತಾನೆ. ಅವಳು ಅದನ್ನು ತೆಗೆದುನೋಡಿದಾಗ ಅವಳಿಗೆ ಕಂಡದ್ದು ಅಭಿಮನ್ಯುವೇ, ಪ್ರಾಯಶಃ ಪಕ್ಕದಲ್ಲಿದ್ದಂಥ ಬಲರಾಮ ಅದನ್ನು ನೋಡುತ್ತಾನೆ. ಅವನಿಗೆ ಕಂಡದ್ದು ದುರ್ಯೋಧನ. ಕೃಷ್ಣನಿಗೆ ತೋರಿಸಿ ಏನು ಕಾಣುತ್ತದೆ

ಎಂದಾಗ ಆಗ ಅವನು ನೋಡಿದ್ದು ಅಶ್ವತ್ಥಾಮ ಅಲ್ಲ ಅಥವಾ ಅರ್ಜುನನೂ ಅಲ್ಲ, ಆತ ನೋಡಿದ್ದು ಅವರ ಸೋದರಮಾವ ಶಕುನಿಯನ್ನು, ಶಕುನಿಯ ಮೂರ್ತಿಯವನ್ನು ಆ ಪೆಟ್ಟಿಗೆಯಲ್ಲಿ ನೋಡುತ್ತಾನೆ. ಆದ್ದರಿಂದ ಅಲ್ಲಿ ಇಬ್ಬರೇ ಬಹಳ ಮುಖ್ಯವಾಗಿರತಕ್ಕಂಥ ಪಾತ್ರಗಳು. ಒಂದು ಕಡೆಗೆ ಕೃಷ್ಣ, ಇನ್ನೊಂದು ಕಡೆಗೆ ಶಕುನಿ. ಆ ಕಡೆಯಿಂದ ಕೃಷ್ಣ ಕಂಡದ್ದು ಶಕುನಿಯನ್ನು, ಅರ್ಜುನ ಅಥವಾ ಮತ್ತೊಬ್ಬರನ್ನಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಕೃಷ್ಣ ಮಹಾಭಾರತದಲ್ಲಿ ಪಾಂಡವರ ಪಕ್ಷಪಾತಿಯೂ ಅಲ್ಲ, ಕೌರವರ ಪಕ್ಷಪಾತಿಯೂ ಅಲ್ಲ. Sri Krishna had his own hidden agenda to finish both of them.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಅವರು ಹೇಳುವುದು ಸರಿ ಇಲ್ಲ. ಹಿಡನ್ ಅಜೆಂಡಾ ಇದ್ದದ್ದು ಶಕುನಿಯವರಿಗೆ. ಕೌರವರನ್ನು ಮುಗಿಸಬೇಕು ಎಂದು ಶಕುನಿಯವರಿಗೆ ಹಿಡನ್ ಅಜೆಂಡಾ ಇದ್ದದ್ದು. ಇಲ್ಲಿ ಶಕುನಿ ಯಾರು ಎಂಬುದು ಗೊತ್ತಾಗುತ್ತಿಲ್ಲ. ಇಲ್ಲಿ ವಿಧುರಾ ಮಾತ್ರ ಯಾರೂ ಕಾಣುತ್ತಾ ಇಲ್ಲ. ವಿಧುರ ವಿವೇಕ ಹೇಳುವುದಕ್ಕಾದರೂ ಇದ್ದ. ಇಲ್ಲಿ ಅವರು ಇಲ್ಲವೇ ಇಲ್ಲ . . . . . ನಾವು ಆ ಕಡೆ ಇದ್ದೇವಲ್ಲಾ. ನಾವು ಪಾಂಡವರ ಪರ ಇದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ರವಿಯವರೆ, ನೀವು ಇನ್ನೊಂದು ಬಾರಿ ಓದಿಕೊಳ್ಳಿ. ಶಕುನಿಗೆ ಇದ್ದಂತಹ ಅಜೆಂಡಾ ಏನೆಂದರೆ ನನಗೆ ಅವಮಾನ ಮಾಡಿದ, ನನ್ನ ಕುಟುಂಬಕ್ಕೆ ಅವಮಾನ ಮಾಡಿದ ಕೌರವರು ನಾಶವಾಗಬೇಕು ಎಂದು ಹೇಳಿ. ಆದರೆ ಶ್ರೀ ಕೃಷ್ಣನಿಗೆ ಇದ್ದದ್ದು ಕೌರವರನ್ನೂ ನಾಶ ಮಾಡಬೇಕು, ಪಾಂಡವರನ್ನೂ ನಾಶ ಮಾಡಬೇಕು, ನೀವಿಬ್ಬರೂ ನಿಮಿತ್ತ ಮಾತ್ರರು, ನಾನೇ ಎಲ್ಲವನ್ನೂ ಮಾಡಿಸುತ್ತಿರತಕ್ಕಂಥಾದ್ದು ಎಂದು ಹೇಳತಕ್ಕಂಥ ಹಿಡನ್ ಅಜೆಂಡಾವನ್ನು ಬಿಜೆಪಿಯವರಂತೆ ಇಟ್ಟುಕೊಂಡಿದ್ದರು.

ಒಬ್ಬರು ಮಾನ್ಯ ಸದಸ್ಯರು: ಕಥೆನೇ ತಪ್ಪು ಹೇಳುತ್ತಿದ್ದಾರೆ.

ಶ್ರೀ ಆರ್. ಅಶೋಕ್: ಅದು ನಿಮ್ಮ ಅಜೆಂಡಾ, ಎಲ್ಲರೂ ಸರ್ವನಾಶ . . . . . .

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಅದು ಬಿಜೆಪಿ ಅಜೆಂಡಾ ಅಲ್ಲ, ಕಮ್ಯುನಿಸ್ಟ್ ಅಜೆಂಡಾ ಕಾಂಗ್ರೆಸ್ ಅನ್ನು ಮುಗಿಸುವಂತಹ ಅಜೆಂಡಾ ಇವತ್ತು ಪ್ರಾರಂಭವಾಗಿದೆ. ಸ್ವಲ್ಪ ದಿವಸದಲ್ಲಿ ಅದು ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್: ಯುಪಿಎ ಸರ್ಕಾರದಲ್ಲಿ ಕಮ್ಯುನಿಸ್ಟ್‌ರವರ ಹಿಡನ್ ಅಜೆಂಡಾ ಇದೇನಾ? ಏಕೆಂದರೆ ಅವರು ಹೇಳುತ್ತಿದ್ದಾರೆ ಎಂದರೆ ಬಹುಶಃ ಇದೇ ಅವರ ಹಿಡನ್ ಅಜೆಂಡಾ ಕಾಂಗ್ರೆಸ್ ಅನ್ನು ಫಿನಿಶ್ ಮಾಡಬೇಕು ಎನ್ನುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾವು ಕಾಂಗ್ರೆಸ್‌ನವರನ್ನೂ ಫಿನಿಶ್ ಮಾಡುತ್ತೇವೆ ನಿಮ್ಮನ್ನೂ ಮಾಡುತ್ತೇವೆ, ಇಬ್ಬರನ್ನೂ ಬಿಡುವುದಿಲ್ಲ.

ಶ್ರೀ ಹೆಚ್.ಡಿ. ಬಸವರಾಜ್: ಅಷ್ಟು ಸುಲಭವಾಗಿ ನಿಮ್ಮನ್ನು ಯಾರೂ ಬಿಟ್ಟುಕೊಡುವುದಿಲ್ಲ.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ಮಹಾಭಾರತದ ಉದಾಹರಣೆಯನ್ನು ಎಲ್ಲಾ ಸಂದರ್ಭದಲ್ಲೂ ಉಪಯೋಗ ಮಾಡಬಾರದು ಎಂದು ಅನುಭವಸ್ಥರು ಹೇಳಿದ್ದಾರೆ ಎಂದು ಒಂದು ವಿಚಾರವನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಒಬ್ಬ ಜೂಜು ಆಡುತ್ತಿದ್ದಂತಹ ಒಬ್ಬ ವ್ಯಕ್ತಿ

ಪ್ರತಿದಿವಸ ಮನೆಗೆ ವಿಳಂಬವಾಗಿ ಹೋಗುತ್ತಿದ್ದಂತಹ ಸಂದರ್ಭದಲ್ಲಿ ಅವನ ಶ್ರೀಮತಿ ಅವನನ್ನು ಏಕೆ ವಿಳಂಬವಾಗಿ ಬರುತ್ತಿದ್ದೀರಿ ಎಂದು ಕೇಳುತ್ತಿದ್ದಳಂತೆ ಒಂದು ದಿವಸ ಅವನ ಶ್ರೀಮತಿಯವರು ಪುರಾಣವನ್ನು ಕೇಳುವುದಕ್ಕೆ ಹೋದಾಗ ಅಲ್ಲಿ ಅವತ್ತಿನ ಸಂದರ್ಭದಲ್ಲಿ ಪುರಾಣದಲ್ಲಿ ಮಹಾಭಾರತದಲ್ಲಿ ಜೂಜಾಡುವಂತಹ ಪ್ರಸಂಗವನ್ನು ಅವರು ಪತಿಯ ಎದುರುಗಡೆ ಪ್ರಸ್ತಾಪ ಮಾಡಬೇಕಾದ ಸಂದರ್ಭ ಬಂತು. ಆಗ ಅವನು ಹೇಳಿದನಂತೆ, ನೀನು ನೋಡಿದೆಯಲ್ಲಾ ಮಹಾಭಾರತದಲ್ಲಿ ಧರ್ಮರಾಯ ಜೂಜಾಡಬೇಕಾದರೆ ಹೆಂಡತಿಯನ್ನೇ ಮುಂದಿಟ್ಟು ಜೂಜಾಡುವಂತಹ ಪರಿಸ್ಥಿತಿ ಇದ್ದಾಗ ನಾನು ಎಲ್ಲಿಯಾದರೂ ಒಂದು ದಿವಸ ಇಸ್ಪೀಟ್ ಆಡಿ ಬರುವುದು ವಿಳಂಬವಾದಾಗ ನೀನು ಬಯ್ಯುತ್ತೀಯಾ ಎಂದು ಹೆಂಡತಿಗೆ ಗಂಡ ಪ್ರಶ್ನೆ ಮಾಡಿದನಂತೆ. ಆಗ ಹೆಂಡತಿ ಗಂಡನಿಗೆ ಏನು ಪ್ರಶ್ನೆ ಮಾಡಿದಳು ಎಂದರೆ, ಮಹಾಭಾರತದಲ್ಲಿ ದ್ರೌಪದಿಗೆ ಐದು ಮಂದಿ ಗಂಡಂದಿರು ಇದ್ದರು: ಎಂದಳಂತೆ. ಅದಕ್ಕೆ ಎಲ್ಲಾ ಸಂದರ್ಭದಲ್ಲಿ ಆ ರೀತಿ ಮಹಾಭಾರತವನ್ನು ಉದಾಹರಣೆ ಕೊಡುವುದಕ್ಕೆ ಬರುವುದಿಲ್ಲ ಎನ್ನುವುದನ್ನು ಹೇಳಿದ್ದಾರೆ ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಈ ಪ್ರಸಂಗವನ್ನು ಆ ಸಂದರ್ಭಕ್ಕೆ ಮಾತ್ರ ಹೇಳುತ್ತಿದ್ದೇನೆ. ಒಟ್ಟಾರೆ ಮಹಾಭಾರತಕ್ಕೆ ಬರುವುದಿಲ್ಲ ನಾನು. ದುಶ್ಯಾಸನ ದ್ರೌಪದಿಯ ಸೀರೆಯನ್ನು ಸೆಳೆಯುವಂತಹ ದೃಶ್ಯದ ಬಗ್ಗೆ ನಾನು ಹೇಳುತ್ತಿದ್ದೇನೆ. ದ್ರೌಪದಿ ಯಾರು? ಇಲ್ಲಿ. ಸಂವಿಧಾನ, ಕಾನೂನು ಸೀರೆ ಎಳೆಯುವಾಗ ಅಲ್ಲಿ ಮಹಾಭಾರತದ ಕೃಷ್ಣ ರಕ್ಷಣೆ, ಇಲ್ಲಿ ಕೆ.ಆರ್. ಪೇಟೆಯ ಅಧ್ಯಕ್ಷರಾದಂತಹ ಮಾನ್ಯ ಕೃಷ್ಣ ರವರು; ತಮ್ಮನ್ನು ನಾನು ಬಹಳ ಅತ್ಯಂತ ವಿನಯದಿಂದ ಗಂಭೀರವಾಗಿ ಪ್ರಾಮಾಣಿಕವಾಗಿ ತಾವು ರಕ್ಷಣೆಯನ್ನು ಕೊಡಬೇಕಾಗಿತ್ತು. ಎನ್ನುವುದನ್ನು ನಾನು ಒತ್ತಿ ಒತ್ತಿ ಹೇಳುತ್ತಿದ್ದೇನೆ.

ಅಧ್ಯಕ್ಷರು: ಎಲ್ಲಾ ಮುಗಿದು ಹೋದ ಮೇಲೆ ಏಕೆ ಹೇಳುತ್ತಿದ್ದೀರಿ?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಮನವಿ ಮಾಡುತ್ತೇನೆ, ತಾವು ಇತ್ತೀಚೆಗೆ ನೀವು ಕೈಗಳನ್ನು ಮೇಲಕ್ಕೆ ಎತ್ತುತ್ತೀರಿ, ನಮಗೆ ನೀವು ಕೈಗಳನ್ನು ಎತ್ತಿದ್ದು ನೋಡಿದ ತಕ್ಷಣ ರಕ್ತದೊತ್ತಡ ಇಲ್ಲದೆ ಇದ್ದರೂ ಬಂದು ಬಿಡುತ್ತದೆ. ನೀವು ಕೈಗಳನ್ನು ಎತ್ತಿ ಹೇ ಶ್ರೀರಾಮರೆಡ್ಡಿ, ಹೇ ವಾಟಾಳ್ ನಾಗರಾಜ್ ಎಂದತಕ್ಷಣ ನಮಗೆ ಎಲ್ಲೋ ಒಂದು ಕಡೆ ಏನಪ್ಪಾ ಅಧ್ಯಕ್ಷರು ನಮ್ಮ ಮೇಲೆ ಬೀಳುತ್ತಿದ್ದಾರಲ್ಲಾ, ಏನು ಪರಿಸ್ಥಿತಿ? ನಮ್ಮ ಗತಿ ಏನು? ನಾವೇನು ಮಾಡಿದ್ದೇವೆ? ಏನೋ ನಾವು ಇಲ್ಲಿ ಬಂದಿದ್ದೇವೆ, ಕೆಲವು ಮಾತುಗಳನ್ನು ಏರು ಧ್ವನಿಯಲ್ಲಿ ಆಡಬಹುದು, ಆದರೆ ನೀವು ಎದ್ದು ಆ ಕೈಗಳನ್ನು ತೋರಿಸಿದ ತಕ್ಷಣ ನಮ್ಮ ಪರಿಸ್ಥಿತಿಗಳು ಏನಾಗಬಹುದು ತಾವು ಹೇಳಿ. ಶರೀರ ಹಾಗೂ ಶಾರೀರಿಕವಾಗಿ ನಮ್ಮ ಪರಿಸ್ಥಿತಿಗಳು ಏನಾಗಬಹುದು ಎಂಬುದನ್ನು ತಾವೇ ಅರ್ಥ ಮಾಡಿಕೊಳ್ಳಿ. ಆದ್ದರಿಂದ ದಯಮಾಡಿ ತಾವು ಇನ್ನು ಮುಂದೆ ಈ ರೀತಿಯಾದಂತಹ ಸಿಟ್ಟನ್ನು ಬಿಟ್ಟು ಮುಂದೆ ಹೋಗಬೇಕು ಎನ್ನುವಂತಹ ಮಾತನ್ನು ತಮಗೆ ಹೇಳಿ, ಕೊನೆಯದಾಗಿ, ತಮಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ, ಈ ಸದನ ಯಾರೋ ಒಬ್ಬರ ಕಡೆ ನಡೆಯತಕ್ಕಂಥ ಸದನವಲ್ಲ. ತಾವು ಅಧ್ಯಕ್ಷರಾಗಿರುವಾಗ, ಅಧ್ಯಕ್ಷರಾಗತಕ್ಕಂಥವರು ಯಾವುದೇ ಪಕ್ಷದ ವ್ಯಕ್ತಿಯಾಗಬಾರದು. ಅಧ್ಯಕ್ಷರಾಗುವವರನ್ನು ಚುನಾವಣೆ ನಡೆಯುವಾಗ ಅವರ ಮೇಲೆ ಯಾವ ಅಭ್ಯರ್ಥಿಯನ್ನೂ ಸಹ ಹಾಕದೆ ಅಧ್ಯಕ್ಷರಿಗೆ ಮಾತ್ರ ಎಂದು ಹೇಳಿ ಎಲ್ಲಾ ಪಕ್ಷದವರು ಅವರನ್ನು

ಚುನಾಯಿಸತಕ್ಕಂಥಾದ್ದು ಒಳ್ಳೆಯದು. ಇದರ ಬಗ್ಗೆ ಸಂವಿಧಾನ ತಿದ್ದುಪಡಿಯಾಗಬೇಕು. ಚುನಾವಣಾ ವ್ಯವಸ್ಥೆ ಕೂಡ ಬದಲಾವಣೆಯಾಗಬೇಕು. ಅದು ಸರಿ. ಈಗ ಇಲ್ಲವೆಂದರೆ ಅತ್ಯಂತ ಕಡಿಮೆ ಪಕ್ಷದವರು ಯಾರಾದರೂ ಇದ್ದರೆ ಅವರು ಅಧ್ಯಕ್ಷರಾಗಬೇಕು. ಅವತ್ತು ಮಾನ್ಯ ವೈಕುಂಠ ಬಾಳಿಗರವರು ಅದೇ ಸ್ಥಳದಲ್ಲಿ ಕುಳಿತಿದ್ದಾಗ ನಾನಿದ್ದೆ. ಮಾನ್ಯ ಕೊರಾವಳೆಯವರು ಇದ್ದಾಗಲೂ ನಾನಿದ್ದೆ. ಇಲ್ಲಿ ವಿರೋಧ ಪಕ್ಷದ ನಾಯಕರಾಗಿ ಮಾನ್ಯ ಎಸ್. ಶಿವಪ್ಪನವರು, ಮಾನ್ಯ ಹೆಚ್.ಡಿ. ದೇವೇಗೌಡರು ಅವರೆಲ್ಲರೂ ಇದ್ದಾಗ ನಾನು ಇದ್ದೆ. ಮಾನ್ಯ 'ಗೋಪಾಲ ಗೌಡರು' ಇದ್ದಾಗ ನಾನು ಇದ್ದೆ. ಮಾನ್ಯ ಎಸ್.ಎಂ. ಕೃಷ್ಣರವರು ಇದ್ದಾಗ ನಾನು ಇದ್ದೆ. ಅವರು ಆ ಕಡೆ ಮುಖ್ಯಮಂತ್ರಿಗಳು ಆಗಿದ್ದಾಗ ಕೂಡ ನೋಡಿದ್ದೇನೆ. ಇದು ಪರಿಸ್ಥಿತಿ ಆದರೆ ಇಂತಹ ಪರಿಸ್ಥಿತಿಯ ಉದ್ಭವ ಯಾವತ್ತೂ ಆಗಿರಲಿಲ್ಲ. ನಾನು ತಮ್ಮನ್ನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ, ತಮ್ಮ ಪೀಠ ಬಹಳ ಮಹತ್ತರವಾದಂತಹ ಪೀಠ. ತಾವು ಮೂರು ವರ್ಷ, ನಾಲ್ಕು ವರ್ಷ, ಐದು ವರ್ಷ ಇರಬಹುದು, ಅಥವಾ ಹತ್ತು ವರ್ಷ ಇರಬಹುದು. ಆದರೆ ಆ ಪೀಠದಲ್ಲಿ ಯಾರಿದ್ದರು ಎಂದು ಹೇಳಿ ಕಡತದಲ್ಲಿ ಹೋಗುತ್ತದೆ. ಇತಿಹಾಸದಲ್ಲಿ ಹೋಗುತ್ತದೆ. ಅದಕ್ಕೆ ಮಾನ್ಯ ಕೆಂಗಲ್ ಹನುಮಂತಯ್ಯನವರು ದೇಶ ವಿದೇಶಕ್ಕೆ ಹೋಗಿ ನೋಡಿಕೊಂಡು ಬಂದು ಈ ಸ್ಥಳ ಹೇಗಿರಬೇಕೆಂದು ಮಾಡಿದ್ದಾರೆ. ಮೇಲೆ ತಕ್ಕಡಿ, ಕೆಳಗಡೆ ಅಶೋಕ ಸ್ಥಂಭ ಈ ರೀತಿಯಾಗಿ ಕಟ್ಟಿಸಿರುವಂತಹ ಮಹನೀಯರು. ಇದಕ್ಕೆ ಸಮಗ್ರವಾದಂತಹ ಬೆಂಬಲ ಕೊಡುವಂತಹ ರಾಷ್ಟ್ರದ ನಾಯಕರು. ಇದಕ್ಕೆ ಇನ್ನೂ ಬೆಂಬಲ ಕೊಡುವಂತಹ ಸಮಗ್ರ ಸಂವಿಧಾನ ಶಿಲ್ಪಿ ಅಂಬೇಡ್ಕರ್ ರವರು. ಇದೆಲ್ಲಾವನ್ನೂ ನಾವು ಗಾಳಿಗೆ ತೂರಿ ಮುಂದೆ ಹೋದರೆ ಈ ಸದನ ಸದನವಾಗುವುದಿಲ್ಲ. ಆಗ ಪ್ರಜಾ ಅಪಾಯ ಒದಗುತ್ತದೆ. ಪ್ರಜಾಂತ್ರಕ್ಕೆ ಅಪಾಯ ಒದಗಿತು ಎಂದರೆ ಅರಾಜಕತೆಯಾಗುತ್ತದೆ. ಅರಾಜಕತೆ ಆಯಿತು ಅಂದರೆ ನಾವು ನೀವು ಯಾರೂ ಉಳಿಯುವುದಿಲ್ಲವೆನ್ನುವಂತಹ ಮಾತನ್ನು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈ ಕಡೆ ಯಾರೂ ಈ ಮಾತನಾಡುವುದಕ್ಕೆ ಅವಕಾಶ ಕೇಳಿದಿರಲ್ಲ. ಮಹಿಮಾ ಪಟೇಲ್ ಬೆಳಿಗ್ಗೆಯಿಂದ ಕೇಳುತ್ತಿದ್ದಾರೆ. ಅವರು ಆದಷ್ಟಕ್ಷಣ ರೆಡ್ಡಿಯವರೇ ನಿಮಗೆ ಅವಕಾಶ ಕೊಡುತ್ತೇನೆ. ಆ ಕಡೆ ಈ ಕಡೆ ಎರಡೂ ಕಡೆ ಮಾತನಾಡಿ.

ಶ್ರೀ ಮಹಿಮಾ ಜೆ. ಪಟೇಲ್(ಚೆನ್ನಗಿರಿ): ಮಾನ್ಯ ಸಭಾಧ್ಯಕ್ಷರೆ, ತಮ್ಮ ಕಣ್ಣು ಇಷ್ಟು ದೂರ ಬಂದಿದ್ದಕ್ಕೆ ತುಂಬಾ ವಂದನೆಗಳು. ನಾವು ಕಳೆದ ಮೂರು ದಿವಸಗಳಿಂದ ಹೊಸದಾಗಿ ಸದಸ್ಯರಾಗಿ ಬಂದಿರುವವರು, ಈ ಆರ್ಟಿಕಲ್ 175, 176(1) ಇದರ ಬಗ್ಗೆ ನಾವು ಬಹಳ ಕೂಲಂಕಷವಾಗಿ ತಿಳಿದುಕೊಂಡಿದ್ದೇವೆ. ಮಾನ್ಯ ಹಿರಿಯ ಸದಸ್ಯರೆಲ್ಲರೂ ನಮಗೆ ಇದನ್ನು ತಿಳಿಸಿಕೊಟ್ಟಿದ್ದಕ್ಕೆ ಮೊದಲಿಗೆ ಅವರಿಗೆ ವಂದನೆಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಿಂದ ನಾವು ಏನು ಸಾಧಿಸಿದೆವು ಎಂದು ನೋಡಿದರೆ, ಮೂರು ದಿವಸದಲ್ಲಿ ಅದು ಸೊನ್ನೆ ಎಂದು ನನಗೂ ಅನಿಸುತ್ತದೆ. ನಮ್ಮ ಹಿರಿಯ ಸದಸ್ಯರು ಒಬ್ಬರು ಮಾತನಾಡುತ್ತಾ ಹೇಳಿದರು, ಈ ಸಂವಿಧಾನ, ಶಾಸನಗಳು, ಆರ್ಟಿಕಲ್ 175, 176 ಇವೆಲ್ಲವೂ ಕೂಡ ಇದರ ಪ್ರಕಾರನೇ ನಡೆಯಬೇಕು ಎಂದು. ಮೊನ್ನೆ ನಮ್ಮ ಹಿರಿಯ ಸದಸ್ಯರಾದ ಎಂ.ಪಿ. ಪ್ರಕಾಶ್‌ರವರು, ಇವೆಲ್ಲಕ್ಕೂ ಹಿಂದಿರುವ ಸ್ಪಿಟ್ ಅನ್ನು ನೋಡಬೇಕು ಎನ್ನುವಂತಹ ಒಳ್ಳೆಯ ಮಾತನ್ನು ಹೇಳಿದರು. ನಾವೆಲ್ಲರೂ ಇಲ್ಲಿ ಕಲಿಯುವುದಕ್ಕೆ ಬಂದಿರುವುದು ಏನೆಂದರೆ, ಈ

ಸಂವಿಧಾನ ಶಾಸನ ಹಿಂದಿರುವ ಸ್ಪಿರಿಟ್ ಏನೆಂದು ಕಲಿಯುವುದಕ್ಕೆ. ನಮ್ಮ ಕಡೆ ಒಂದು ಮಾತಿದೆ," ದೊಡ್ಡವರು ನಿಂತು ಉಚ್ಚೆ ಹುಯ್ದರೆ, ಸಣ್ಣ ಹುಡುಗರು ಅಡ್ಡಾಡಿಕೊಂಡು ಉಚ್ಚೆ ಹುಯ್ಯುತ್ತಾರೆ," ಎಂದು. ಹಿರಿಯರಾದಂತಹವರು ಅವರೇ ಹೀಗೆ ಕೂಗಾಡಿದರೆ ಹೇಗೆ; ನಾನು ಎರಡು ವರ್ಷದಿಂದ ಎಂದೂ ಎದ್ದು ಕೂಗಿಲ್ಲ. ಕೈ ಮೇಲೆತ್ತುತ್ತೇನೆ, ಇಲ್ಲ ಚೀಟಿ ಬರೆದು ಕಳುಹಿಸುತ್ತೇನೆ. ಇಲ್ಲಿ ಹಲವಾರು ಬಾರಿ ಈ ಸದಸ್ಯರಾಗಿ ಆಯ್ಕೆಯಾಗಿ ಬಂದಿರುವಂತಹವರು ಕೂಗಾಡುವುದನ್ನು ನೋಡಿದರೆ, ನಮಗೇನೂ ಕೂಗುವುದಕ್ಕೆ ಬರುವುದಿಲ್ಲವೆ? ನಾವೆಲ್ಲಾ ಎಂಎಲ್‌ಎಗಳಾಗಿ ಬಂದಿದ್ದೇವೆ ಎಂದರೆ, ಮೊದಲು ಕೂಗುವುದನ್ನು ಕಲಿತೇ ಬಂದಿರುವುದು. ನಮಗೂ ಕೂಗುವುದಕ್ಕೆ ಬರುತ್ತದೆ. ಆದರೆ ಹಿರಿಯ ಸದಸ್ಯರೆಲ್ಲಾ ಕಿರಿಯರಿಗೆ ಮಾದರಿಯಾಗಿ ನಡೆದುಕೊಳ್ಳುವುದನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಎಲ್ಲರಿಗೂ ವಿನಂತಿಯನ್ನು ಮಾಡುತ್ತಾ, ನಮ್ಮ ಈ ಶಾಸನಗಳು ಹಾಗೂ ಸಭಾ ನಡವಳಿಕೆಗಳು ಇವೆಲ್ಲವೂ ಏನಿವೆ, ಇವೆಲ್ಲಾ ಹ್ಯಾಂಡಿಕ್ ಪೋಸ್ಟ್ ಇದ್ದಹಾಗೆ. ಒಂದು ಹ್ಯಾಂಡ್ ಪೋಸ್ಟ್ ದಾವಣಗೆರೆ ಕಡೆ ಹೋಗುತ್ತದೆ ಎಂದು ತೋರಿಸಿದರೆ ನಾವು ಅದನ್ನು ಓದಿಕೊಂಡು ದಾವಣಗೆರೆ ಕಡೆ ಹೋಗಬೇಕು. ಅದುಬಿಟ್ಟು ಅದನ್ನೇ ಹಿಡಿದು ಕುಳಿತುಕೊಂಡು ನನ್ನನ್ನು ದಾವಣಗೆರೆಗೆ ಕರೆದುಕೊಂಡು ಹೋಗುತ್ತದೆ ಎಂದರೆ ಅದು ದಾವಣಗೆರೆಗೆ ನಮ್ಮನ್ನು ಕರೆದುಕೊಂಡು ಹೋಗುವುದಿಲ್ಲ. ಆ ರೀತಿಯಾಗಿ ಇಲ್ಲಿ ಮೂರು ದಿನ ಏನು ಆರ್ಟಿಕಲ್ 175 ಹಾಗೂ 176 ಎಂದು ಏನು ಮಾತನಾಡಿದೆವು, ನಮ್ಮ ಮಾನ್ಯ ಆರಗ ಜ್ಞಾನೇಂದ್ರರವರು ಹೇಳಿದ ಹಾಗೆ ಯಾರಾದರೂ ನಮಗೆ ಟೀ ಕೊಟ್ಟರೆ ಥ್ಯಾಂಕ್ಸ್ ಹೇಳುತ್ತೇವೆ, ಅಂಥಾದ್ದರಲ್ಲಿ ಮಾನ್ಯ ರಾಜ್ಯಪಾಲರು ಬಂದು ಭಾಷಣ ಮಾಡಿದಾಗ ಅವರಿಗೆ ಥ್ಯಾಂಕ್ಸ್ ಹೇಳುವುದರಿಂದ ಏನು ಅಪಚಾರವಾಗುತ್ತದೆ ಎನ್ನುವುದು ನನಗೂ ಕೂಡ ಅರ್ಥವಾಗುತ್ತಿಲ್ಲ. ನಾನು ಕೇವಲ ವಿರೋಧ ಪಕ್ಷದವರನ್ನೇ ದೂಷಿಸುತ್ತೇನೆ ಎಂದು ಹೇಳುವುದಿಲ್ಲ. ನಮ್ಮ ಈ ಕಡೆ ಇರುವಂತಹ ಹಿರಿಯ ಸದಸ್ಯರೂ ಕೂಡ ಚರ್ಚೆಗೆ ಅವಕಾಶ ಮಾಡಿಕೊಟ್ಟು ಆಮೇಲೆ ಥ್ಯಾಂಕ್ಸ್ ಅಂತಾನೂ ಹೇಳಬಹುದು. ಆದರೆ ಇದನ್ನು ಒಂದು ವೈಯುಕ್ತಿಕ ಪ್ರತಿಷ್ಠೆ ಎಂದು ಇಟ್ಟುಕೊಂಡು ಇದರ ಬಗ್ಗೆ ಜಗಳ ಮಾಡುತ್ತಾ ಮಾತನಾಡುತ್ತಾ, ನಮ್ಮೆಲ್ಲರ ಬದ್ಧತೆ ಏನಿದೆ ಅದು ಜನರಿಗಾಗಿ ಇರುವುದು. ಜನರಿಗೆ ನಮ್ಮ ಬದ್ಧತೆ ಏನಿದೆ ಅದನ್ನು ಮರೆತು ನಾವು ಬರೀ ಕಾನೂನು ಪ್ರಕಾರನೇ ಮಾಡಿಕೊಂಡು ಹೋಗುವುದರಿಂದ ನಮ್ಮೆಲ್ಲರ ಸಮಯ ವ್ಯರ್ಥವಾಗುತ್ತದೆ ಎಂದು ಹೇಳಲಿಚ್ಛಿಸುತ್ತೇನೆ. ಇನ್ನು ಅಪ್ರೋಪ್ರಿಯೇಷನ್ ಬಿಲ್ ಅನ್ನು ಗಲಾಟೆಯೊಳಗೆ ಎಲ್ಲವನ್ನೂ ಪಾಸ್ ಮಾಡಿದರೆಂದು ನಮ್ಮ ವಿರೋಧಪಕ್ಷದ ಸದಸ್ಯರೆಲ್ಲರೂ ಹೇಳಿದರು. ನಾನು ಮೊನ್ನೆ ದಿವಸ ಒಂದು ದೊಡ್ಡ ಜೀಪ್‌ನಲ್ಲಿ ಹೋಗುತ್ತಾ ಇದ್ದೆ. ಆಗ ಒಬ್ಬ ಯಾರೋ ಮಾರುತಿ ಕಾರಿನವನು ನಮ್ಮ ಜೀಪಿನ ಡ್ರೈವರ್ ಎಷ್ಟು ಹಾರ್ನ್ ಹೊಡೆದರೂ ಆ ಮಾರುತಿ ಕಾರಿನವನು ಕಾರನ್ನು ಸೈಡಿಗೆ ತೆಗೆದುಕೊಳ್ಳಲಿಲ್ಲ, ಈ ರೀತಿ ಸುಮಾರು ಅರ್ಧ ಗಂಟೆ ಕಾಲ ಕಾಡಿಸಿದ. ಅದು ಏನದಮೇಲೆ ಇವನು ಜೋರಾಗಿ ಪಕ್ಕಕ್ಕೆ ಹೋಗಿ, ಮಾರುತಿ ಕಾರಿನವನು ಕೈಯನ್ನು ಸನ್ನೆ ಮಾಡಿದನು. ಆಗ ನಮ್ಮ ಡ್ರೈವರ್ ಏನು ಮಾಡಿದನೆಂದರೆ ಆ ಕಾರಿನ ಮೇಲೆ ನುಗ್ಗಿಸಿ, ಕೈ ಸನ್ನೆ ಮಾಡಿದ. ನಾವು ಎಲ್ಲವನ್ನೂ ಬಾಯಿಯಲ್ಲಿ ಹೇಳಬೇಕಾಗಿಲ್ಲ, ಪದಗಳಲ್ಲಿ ಹೇಳಬೇಕಾಗಿಲ್ಲ. ನಮ್ಮ ವರ್ತನೆಯಲ್ಲೂ ಕೂಡ ನಾವು ಏನನ್ನು ಹೇಳುವುದಕ್ಕೆ ಇಷ್ಟ ಪಡುತ್ತೇವೆ, ಅದನ್ನು ಹೇಳಬಹುದು. ಮೊನ್ನೆ, ನೆನ್ನೆ ಎಲ್ಲಾ ಮಾನ್ಯ ಸದಸ್ಯರು ಇಲ್ಲಿ ನೀರಿಲ್ಲದ ಬಾವಿಗೆ ಬಂದು ಬಿದ್ದರು. ಅದಕ್ಕೆ ನಾನು ಏನು ಯೋಚನೆ ಮಾಡಿದೆನೆಂದರೆ, ಅಲ್ಲಿ ನೀರನ್ನು

ತುಂಬಿಸಿದರೆ ಎಷ್ಟು ಜನರು ಬಾವಿಗೆ ಬೀಳುತ್ತಾರೆಂದು ಯೋಚನೆ ಮಾಡಿದೆ. ಇವರು ನಿಜವಾಗಿ ಬಾವಿಗೆ ಬೀಳುತ್ತಾರಾ? ಆ ರೀತಿ ಎಲ್ಲರಿಗೂ ಒಂದು ವೈಯಕ್ತಿಕ ರೆಸ್ಪಾನ್ಸಿಬಿಲಿಟಿ ಬೇಕಾಗುತ್ತದೆ. ನಾವು ಇಲ್ಲಿ ಈ ರೀತಿ ಅಪ್ರೋಪ್ರಿಯೇಷನ್ ಬಿಲ್ ಬರುತ್ತಾ ಇದೆ. ನಾವು ಅದನ್ನು ಪಾಸ್ ಮಾಡಬೇಕೋ, ಬೇಡವೊ ಎಂಬುದು ಪ್ರತಿಯೊಬ್ಬರಿಗೂ ಗೊತ್ತಿರಬೇಕು. ಅಂತಹ ಅಪ್ರೋಪ್ರಿಯೇಷನ್ ಬಿಲ್ ಬಂದಾಗ, ಎಲ್ಲಾ ಸದಸ್ಯರು ವಿರೋಧ ಮಾಡುವುದಾಗಲಿ, ಚರ್ಚೆಯನ್ನು ಮಾಡುವುದಾಗಲಿ ಮಾಡಬಹುದಾಗಿತ್ತು. ಇಲ್ಲಿ ಎಲ್ಲರೂ ಕೂಗುತ್ತಲೇ ಇದ್ದರು. ಹಾಗಾಗಿ ಇಲ್ಲಿ ಹೋ ಎಂದು ಎಲ್ಲಾ ಪಾಸ್ ಮಾಡಿದ್ದು ಆಯಿತು. ಈ ರೀತಿ ನಾನು ಬರೀ ಆ ಕಡೆಯ ಸದಸ್ಯರಿಗೆ ಎಂದು ಹೇಳುವುದಿಲ್ಲ. ಇಲ್ಲಿ ನಾವೆಲ್ಲರೂ ಒಂದು ಜವಾಬ್ದಾರಿಯುತವಾಗಿ ವರ್ತಿಸಿದರೆ, ಈ ಸದನಕ್ಕೆ ಒಂದು ಘನತೆ ಬರುತ್ತದೆ. ನಾನು ಅದಕ್ಕೆ ಬದ್ಧನಾಗಿದ್ದೇನೆಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟದ್ದಕ್ಕೆ ತಮಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ(ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೇ, ನಮ್ಮ ವಿರೋಧ ಪಕ್ಷದ ಮುಖಂಡರು ಮತ್ತು ನಮ್ಮ ಎಲ್ಲಾ ಗೆಳೆಯರು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಅದೇ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈ ಸದನದಲ್ಲಿ ಕಳೆದ ನಾಲ್ಕು ದಿವಸಗಳಿಂದಲೂ ಆಗುತ್ತಿರುವಂತಹ ಚರ್ಚೆಗಳನ್ನು ಸಾರ್ವಜನಿಕವಾಗಿ ಯಾವ ರೀತಿಯಲ್ಲಿ ಪ್ರತಿಬಿಂಬಿಸುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಅದು ಯಾವ ರೀತಿಯಲ್ಲಿ ಜನರಿಗೆ ಸಂದೇಶ ಹೋಗುತ್ತಿದೆ, ಅದರ ಸತ್ಯಾಂಶಗಳೇನು ಎಂಬ ವಿಷಯವನ್ನಷ್ಟೇ ನಾನು ಮಾತನಾಡಲು ಇಚ್ಛಿಸುತ್ತೇನೆ. ಇಲ್ಲಿ ಎರಡು ರೀತಿಯಾದಂತಹ ಸಂದೇಶಗಳು ಜನರಿಗೆ ಹೋಗುತ್ತಾ ಇದೆ. ಮೊದಲನೆಯದಾಗಿ ವಿರೋಧಪಕ್ಷದವರು ಬೇಜವಾಬ್ದಾರಿತನದಿಂದ ವರ್ತಿಸುತ್ತಿದ್ದಾರೆ. ಸಮಯವನ್ನು ಹಾಳು ಮಾಡುತ್ತಿದ್ದಾರೆ, ಮತ್ತೆ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡ ಮಾಡುತ್ತಿದ್ದಾರೆಂಬ ಸಂದೇಶವನ್ನು ಕೊಡುತ್ತಿದ್ದಾರೆ. ಇನ್ನೊಂದು ಕಡೆಗೆ ಹದ್ದು ಮೀರಿದ ಪ್ರವರ್ತನೆಗಳು, ವಿರೋಧಪಕ್ಷದ ನಾಯಕರಿಗೆ ಸದಸ್ಯರಿಗೆ ತರವಾದಂಥ ರೀತಿಯಲ್ಲಿ ವರ್ತನೆಯನ್ನು ಮಾಡುತ್ತಿದ್ದಾರೆನ್ನುವಂತಹ ರೀತಿಯಲ್ಲಿ ಸಂದೇಶವನ್ನು ಕೊಡುವಂತಹ ಪ್ರಯತ್ನವನ್ನು ಮಾಡುತ್ತಿದ್ದಾರೆ. ರಾಜ್ಯಪಾಲರ ಭಾಷಣ ಮುಗಿದ ಮೇಲೆ, ಮಾನ್ಯ ಮುಖ್ಯಮಂತ್ರಿಯವರು ಒಂದು ಪತ್ರಿಕಾ ಸಂದರ್ಶನದಲ್ಲಿ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಗಮನಹರಿಸಬೇಕು, ಏನು ಹೇಳಿದ್ದಾರೆಂದರೆ, ರಾಜ್ಯಪಾಲರ ಬಗ್ಗೆ ಪದಗಳನ್ನು ಉಪಯೋಗಿಸುವಾಗ ಭಾರೀ ಎಚ್ಚರಿಕೆಯಿಂದ ಇರಬೇಕೆಂಬ ವಿಚಾರವನ್ನು ಹೇಳಿದರು. ಮಾನ್ಯ ಸಭಾಧ್ಯಕ್ಷರು ಪ್ರತಿ ದಿವಸವೂ ಹೇಳುತ್ತಿದ್ದಾರೆ. ನಿಮ್ಮ ವರ್ತನೆಗಳು ನಿಮ್ಮ ಮಾತುಗಳು ಹದ್ದುಮೀರುತ್ತಾ ಇವೆ. ಇದಕ್ಕೆ ಕಡಿವಾಣವನ್ನು ಹಾಕಬೇಕಾಗುತ್ತದೆ. ನಿಮ್ಮನ್ನು ಜನರು ನೋಡಿ ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಇದನ್ನು ಜನರು ನೋಡಿ, ಇದು ಸದನನಾ ಎಂದು ನಾಚಿಕೆ ಪಟ್ಟುಕೊಳ್ಳುತ್ತಿದ್ದಾರೆಂದು ಹೇಳಿ ಸಭಾಧ್ಯಕ್ಷರು ಹೇಳಿದರು. ನಾನು ಈಗ ಸತ್ಯಾ–ಸತ್ಯಾಂಶಗಳ ಮಾತುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರಿಗೂ ಮತ್ತು ಇಲ್ಲಿ ಇರುವಂತಹ ಎಲ್ಲಾ ಸ್ನೇಹಿತರಿಗೂ ಒಂದು ವಿಚಾರವನ್ನು ಹೇಳುತ್ತೇನೆ. ಅದು ಏನೆಂದರೆ ಉಮರ್ ಖಯ್ಯಾಮ್ ಎಂಬ ಒಬ್ಬ ಪ್ರಸಿದ್ಧ ಕವಿ ಹೇಳುತ್ತಾನೆ. ಅದು "An ugly bride cannot expect

a beautiful bridegroom." "ಕುರೂಪಿಯಾದಂತಹ ಒಬ್ಬ ಮದುವೆ ಗಂಡು, ನನ್ನ ಹೆಂಡತಿ ಸುಂದರವಾಗಿರಬೇಕು." ಎಂದು ಬಯಸುವಂಥಾದ್ದು ಸರಿಯಲ್ಲ. (ಗೊಂದಲ) ಈಗ ನಾನು ಹೇಳಬೇಕಾದ್ದನ್ನು ಹೇಳುತ್ತೇನೆ, ನೀವು ಹೇಳುವಾಗ ಹೇಳಬೇಕಾದ್ದನ್ನು ಹೇಳಿ. ನಾನು ಬೇಡವೆಂದು ಹೇಳುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಶ್ರೀರಾಮರೆಡ್ಡಿಯವರೆ, ನೀವು ಒಂದು ಗಂಡಿನ ಬಗ್ಗೆ ಕುರೂಪಿಯಾದ ಎಂದು ಹೇಳಿದ್ದೀರಿ, ನಾನು ಅದನ್ನೇ ಹೇಳಿದ್ದು. ನೀವು ಅದನ್ನು ಸರಿ ಮಾಡಿಕೊಳ್ಳಲು ತಯಾರಿಲ್ಲ, ಏಕೆ ಹೀಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಹೇಳಿರುವಂಥಾದ್ದು ಉಲ್ಟ ಆಗಿದೆಯಾ, ಆಯಿತು, ಅದನ್ನು ಟ್ರಾನ್ಸ್‌ಲೇಷನ್ ಮಾಡಿ. ತಾವು ಯಾರಾದರೂ ಒಂದು ಪುಸ್ತಕವನ್ನು ಓದಿರಬಹುದು. ನಾನ್‌ಕೆಮಸ್ಕಿಯವರು 'Military Humanism' ಎಂದು ಒಂದು ಪುಸ್ತಕವನ್ನು ಬರೆದಿದ್ದಾರೆ. ಅದರಲ್ಲಿ ಒಂದು ಕಡೆ ಹೇಳುತ್ತಾರೆ, ಅದು 'A cruel conqueror cannot get a peaceful demonstration and protest.' 'A cruel conqueror cannot have a peaceful demonstration.' ಎಂದು ಹೇಳುತ್ತಾರೆ. ಇದರ ಅರ್ಥ ಏನೆಂಬುದನ್ನು ತಾವು ತಿಳಿದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ನಾನು ನಿಮಗೆ ಬಿಡುತ್ತೇನೆ, ನೀವೇ ಅರ್ಥ ಮಾಡಿಕೊಳ್ಳಿ. ನನಗೆ ಗೊತ್ತಿಲ್ಲ, ನೀವೆ ಅರ್ಥ ಮಾಡಿಕೊಳ್ಳಲು ಬಿಟ್ಟಿದ್ದೇನೆ.

ಶ್ರೀ ಹೆಚ್.ಡಿ. ಬಸವರಾಜು: ತಾವು ಗೊತ್ತಿಲ್ಲದ ಇಂಗ್ಲೀಷ್ ಭಾಷೆಯಲ್ಲಿ ಇಲ್ಲಿ ಹೇಳಿದ್ದೀರಿ. ತಾವು ಏನು ಹೇಳಿದ್ದೀರಿ, ಅದನ್ನು ತರ್ಜುಮೆ ಮಾಡಿ. ತಾವು ಅದನ್ನು ತರ್ಜುಮೆ ಮಾಡಿ ಹೇಳಿದರೆ ತಾನೇ ನಮಗೆ ಅರ್ಥವಾಗುವುದು. ನನಗೆ ಆಶ್ಚರ್ಯ ಆಗುವುದೇನೆಂದರೆ ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರು ಕನ್ನಡದ ಬಗ್ಗೆ ಉಲ್ಲೇಖವನ್ನು ಮಾಡುತ್ತಿರುತ್ತಾರೆ. ಅಂಥವರು ಇಲ್ಲಿ ಈ ರೀತಿ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಆಯಿತು, ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಇವರು ಈ ರೀತಿ ನಮಗೆ ಡಿಸ್ಟರ್ಬ್ ಮಾಡಿದರೆ ಹೇಗೆ? ನಾವು ಮಾತನಾಡಿದರೆ, ನೀವು ಗಲಾಟೆ ಮಾಡಬೇಡಿ ಎಂದು ಹೇಳುತ್ತೀರಿ. ಅವರು ಮಾಡಿದರೆ ಏಕೆ ಹೇಳುವುದಿಲ್ಲ?

ಅಧ್ಯಕ್ಷರು: ಈಗ ಏನಾಗಿದೆಯೆಂದರೆ ಗಲಾಟೆ ಮಾಡುವುದೇ ಒಂದು ಧರ್ಮ ಎನ್ನುವ ಹಾಗೆ ಆಗಿದೆಯಲ್ಲಾ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ಬೆಳಗಿನಿಂದಲೂ ಒಂದೇ ಸಮನೆ ಮಧ್ಯ ಮಧ್ಯದಲ್ಲಿ ಎದ್ದು ನಿಲ್ಲಬೇಡಿಯೆಂದು ಹೇಳುತ್ತಿದ್ದೇನೆ. ಆದರೂ ಮಧ್ಯ ಮಧ್ಯದಲ್ಲಿ ಏಳುತ್ತೀರಿ, ಮಾತನಾಡುವುದಕ್ಕೆ ಬಿಡುವುದಿಲ್ಲ. ಏನು ಇದು? ಆಯಿತು, ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಮ್ಮ ಸ್ನೇಹಿತರಿಗೆ ಕನ್ನಡದ ಬಗ್ಗೆ ಅಷ್ಟು ಪ್ರೀತಿ ಇದ್ದರೆ, ನಾನು ಅದನ್ನು ಕನ್ನಡದಲ್ಲೇ ಹೇಳುತ್ತೇನೆ. "ಅಮಾನವೀಯ ಅಕ್ರಮಣಕಾರನೊಬ್ಬನಗೆ, ಶಾಂತಿಯುತವಾದಂತಹ ಪ್ರತಿಭಟನೆಯ ಮುಖಾಂತರ, ತಮ್ಮ ಭಾವನೆಯನ್ನು ಹೇಳುವುದಕ್ಕೆ ಬರುವುದಿಲ್ಲ" ಎಂದು ಅರ್ಥ. ಹಾಗಾಗಿ, ನಮ್ಮ ಬಾಯಿ ಹದ್ದುಬಸ್ತುನಲ್ಲಿ ಇರಬೇಕಾದರೆ, ನಮ್ಮ

ಪದಗಳು ಬಾರಿ ಸುಂದರವಾಗಿ ಇರಬೇಕಾದರೆ, ಈ ಕಡೆ ಮುಖ ಹೇಗಿರಬೇಕೆಂದು ಆಲೋಚನೆಯನ್ನು ಮಾಡಬೇಕು. ಈ ಕಡೆ ಮುಖ ಹೇಗಿರಬೇಕೆಂದರೆ ನಮ್ಮಿಂದ ಸೌಜನ್ಯ, ಸಭ್ಯತೆ, ನಾಗರೀಕ ಭಾಷೆಯನ್ನು ನಿರೀಕ್ಷೆ ಮಾಡುವುದರಲ್ಲಿ ತಪ್ಪು ಏನೂ ಇಲ್ಲ. ಆದರೆ ಈ ಕಡೆಯವರ ಅನಾಗರೀಕ ವರ್ತನೆ, ಸಹಿಸಿಕೊಳ್ಳದೇ ನಾಗರೀಕ ವರ್ತನೆ ಮಾಡುವುದಕ್ಕೆ ಬರುವುದಿಲ್ಲ. ಇದು ಪ್ರಜಾತಂತ್ರ ವ್ಯವಸ್ಥೆ, ಇದು ಈ ಸಂವಿಧಾನವನ್ನು ಸದನದಲ್ಲಿ ಹೇಳಿದರೆ, ಅಭಿವೃದ್ಧಿ ಕಾರ್ಯಗಳಿಗೆ ವಿರೋಧಪಕ್ಷದವರು ಅಡ್ಡಿ ತರುತ್ತಾರೆಂದು ಹೇಳುತ್ತಾರೆ. ತಾವು ಅಭಿವೃದ್ಧಿ ಕಾರ್ಯಗಳನ್ನು ಜಾರಿ ಮಾಡುವುದಕ್ಕೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ತಂದಿದ್ದೀರಿ, ವಿಕೇಂದ್ರೀಕರಣವನ್ನು ತಂದಿದ್ದೀರಿ. ಕುಡಿಯುವ ನೀರಿನ ಸಮಸ್ಯೆಯನ್ನು ಚರ್ಚೆ ಮಾಡುವುದಕ್ಕೆ ಗ್ರಾಮ ಪಂಚಾಯತ್‌ಗಳು ಇವೆ, ತಾಲ್ಲೂಕು ಪಂಚಾಯತ್‌ಗಳು ಇವೆ, ಜಿಲ್ಲಾ ಪಂಚಾಯತ್‌ಗಳು ಇವೆ. ನಮ್ಮ ಕೆಲವು ಅಧಿಕಾರಿಗಳು ಇಲ್ಲಿ ಕುಳಿತಿದ್ದಾರೆ. ಇಡೀ ಅಭಿವೃದ್ಧಿ ಕಾರ್ಯ ಗ್ರಾಮ ಪಂಚಾಯತ್ ವ್ಯವಸ್ಥೆ ಒದಗಿಸಬೇಕು. ಇದರಲ್ಲಿ ಶಾಸಕರಿಗೆ ಏನೂ ಸಂಬಂಧವಿಲ್ಲ; ಶಾಸನ ಮಾಡುವುದೊಂದೇ ಎಂದು ವಾದವನ್ನು ಮಾಡಿದಂತಹ ಜನರು ಇದ್ದಾರೆ. ನಾನು ಅದನ್ನು ಒಪ್ಪುತ್ತೇನೆ, ಒಂದು ಕಡೆ ಅಭಿವೃದ್ಧಿಯ ಪ್ರಶ್ನೆ ಬಂದಾಗ, ಗ್ರಾಮ ಪಂಚಾಯತ್ ಇದೆಯೆಂದು ಹೇಳುತ್ತೀರಿ, ಸಂವಿಧಾನದ ಪ್ರಶ್ನೆ ಚರ್ಚೆಗೆ ಬಂದಾಗ ಕಾಲಹರಣವನ್ನು ಮಾಡುತ್ತಿದ್ದಿರೆಂದು ಹೇಳುತ್ತೀರಿ, ಹಾಗಾದರೆ ನಮ್ಮ ಕೆಲಸ ಏನೆಂಬುದನ್ನು ನಿಗದಿ ಮಾಡಬೇಕು. ನಮ್ಮ ಕರ್ತವ್ಯ ಏನೆಂಬುದನ್ನು ನೀವು ನಿಗದಿ ಮಾಡಬೇಕು. ಶಾಸನಸಭೆಯಲ್ಲಿ ಶಾಸನ ಸಭಾ ಸದಸ್ಯರು ಸಂವಿಧಾನದ ಬಗ್ಗೆ ಚರ್ಚೆ ಮಾಡಬೇಕೋ ಕಾನೂನು ಬಗ್ಗೆ ಚರ್ಚೆ ಮಾಡಬೇಕೋ, ಬಿಲ್‌ಗಳ ಮೇಲೆ ಚರ್ಚೆ ಮಾಡಬೇಕೋ, ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಚರ್ಚೆ ಮಾಡಬೇಕೋ ಎಂಬ ಬಗ್ಗೆ ಇಲ್ಲಿ ತೀರ್ಮಾನವಾಗಬೇಕು. ಆಗ ಯಾರ್ಯಾರ ವರ್ತನೆ, ಯಾವ ಯಾವ ಅಭಿವೃದ್ಧಿಗೆ ಅಡ್ಡ ಬರುತ್ತದೆಂಬುದು ಅರ್ಥ ಆಗುತ್ತದೆ. ಈ ಶಾಸನಸಭೆಯ ಪ್ರತಿಯೊಬ್ಬ ಸದಸ್ಯರ ಮೊಟ್ಟಮೊದಲನೆಯ ಕರ್ತವ್ಯವೇನೆಂದರೆ ಸಂವಿಧಾನವನ್ನು ರಕ್ಷಣೆ ಮಾಡುವಂಥಾದ್ದು.

ಅಧ್ಯಕ್ಷರು: ತಾವು ಬೇಗ ಭಾಷಣವನ್ನು ಮುಗಿಸಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಅವರು ಮಾತನಾಡುವಾಗ ಬೆಲ್ ಹೊಡೆಯಲಿಲ್ಲ. ನಾವು ಮಾತನಾಡುವಾಗ ಮಾತ್ರ ನೀವು ಬೆಲ್ ಅನ್ನು ಹೊಡೆಯುತ್ತೀರಿ. ನಾನು ಇದನ್ನು ಒಪ್ಪುವುದಿಲ್ಲ. ಅದು ಏಕೆ?

ಅಧ್ಯಕ್ಷರು: ಈಗ ಏನೆಂದರೆ . . .

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: xxxx ನಾವು ಮಾತನಾಡುವಾಗ ಮಾತ್ರ ಬೆಲ್ ಹೊಡೆಯುತ್ತಿರಾ..

ಅಧ್ಯಕ್ಷರು: ಬೇರೆಯವರು ಮಾತನಾಡಿದರೂ ಅಷ್ಟೆ, ನೀವು ಮಾತನಾಡಿದರೂ ಅಷ್ಟೆ. ಬೇರೆಯವರು ಮಾತನಾಡುವಾಗ ಬೇಗ ಮುಗಿಸಿ ಎಂದು ಹೇಳುತ್ತೇನೆ. ನಿಮಗೆ ಬೆಲ್ ಹೊಡೆದಿದ್ದೇನೆ, ಎಲ್ಲಾ ಒಂದೇ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನಾವು ಮಾತನಾಡುವಾಗ ಬೆಲ್ ಹೊಡೆಯುತ್ತೀರಿ.

---

xx ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ

ಅಧ್ಯಕ್ಷರು: ಹಾಗಾದರೆ ನಾನು ಬೆಲ್ ಹೊಡೆಯಬೇಕು, ಹೊಡೆಯಬಾರದೆಂದು ನಿಯಂತ್ರಣ ಮಾಡುವುದಕ್ಕೆ, ಹೇಳುವುದಕ್ಕೆ ನೀವಲ್ಲ. ನೀವು ಬೇಗ ಭಾಷಣವನ್ನು ಮುಗಿಸಿಯೆಂದು ಬೆಲ್ ಹೊಡೆದಿದ್ದೇನೆ. ನೀವು ದಯಮಾಡಿ ಮಾತನಾಡಿ, ಬೇಗ ಭಾಷಣವನ್ನು ಮುಗಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಆದ್ದರಿಂದ, ನಮ್ಮ ಕರ್ತವ್ಯ ಏನು ಎಂದು ನೀವು ತೀರ್ಮಾನ ಮಾಡಿ.

ಶ್ರೀ ಹೆಚ್.ಡಿ. ಬಸವರಾಜು: ಇದು ಒಳ್ಳೆಯ ಪ್ರಿಸಿಡೆಂಟ್ ಅಲ್ಲ ಅಧ್ಯಕ್ಷರೆ. ಈ ಸದನದಲ್ಲಿ ಹಿರಿಯರು ಈ ರೀತಿಯ ಒಂದು ಪ್ರಿಸಿಡೆಂಟ್ ಮಾಡುವುದು ಒಳ್ಳೆಯದಲ್ಲ. ಈ ರೀತಿಯ ವರ್ತನೆ ಒಳ್ಳೆಯದಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು: ಇವರು ನಮಗೆ ಮಾರ್ಗದರ್ಶನ ಮಾಡಬೇಕು. ಈ ರೀತಿಯೇ ಇವರು ನಮಗೆ ಮಾರ್ಗದರ್ಶನ ಮಾಡುವುದು? ಈ ಸದನಕ್ಕೆ ಇದು ಶೋಭೆ ತರುತ್ತದೆಯೇ?

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು: ಹಿರಿಯ ಸದಸ್ಯರಾಗಿ ಇವರು ಈ ರೀತಿಯ ವರ್ತನೆ ಮಾಡುತ್ತಾ ಹೋದರೆ ಇಲ್ಲಿ ನಾವೇನು ಕಲಿತುಕೊಳ್ಳುವುದು? ಇವರು ನಮಗೆ ಮಾರ್ಗದರ್ಶನ ಮಾಡಬೇಕು. ಈ ತರಹದ ವರ್ತನೆ ಯಾವುದಕ್ಕೂ ಶೋಭೆ ತರುವಂಥಾದ್ದಲ್ಲ.

ಶ್ರೀ ಎಸ್. ರಾಜೇಂದ್ರನ್: ಅಧ್ಯಕ್ಷರೆ, ದಯವಿಟ್ಟು ಅವರನ್ನು ಕೂರಿಸಿ, ಇವರು ಮಾತನಾಡಲಿ.

ಶ್ರೀ ವೀರಣ್ಣ ಚಂದ್ರಶೇಖರಯ್ಯ ಚರಂತಿಮಠ್: ದಿನದಿಂದ ದಿನಕ್ಕೆ ಅವರ ವರ್ತನೆ ಹದ್ದು ಮೀರುತ್ತಿದೆ.

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಬಸವರಾಜ ಎಸ್. ಹೊರಟ್ಟಿ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ನೋಡುತ್ತಿದ್ದೇನೆ, ಪ್ರತಿಯೊಂದು ವಿಷಯಕ್ಕೂ ಅಧ್ಯಕ್ಷರು ಕೊಟ್ಟಂಥ ತೀರ್ಪಿಗಾಗಲೀ ಅಥವಾ ಪ್ರತಿಯೊಂದು ವಿಷಯಕ್ಕೂ ಪ್ರಶ್ನೆ ಮಾಡುವುದಾದರೆ ನಾವು ಈ ಸದನವನ್ನು ಯಾವ ರೀತಿ ಒಯ್ಯುತ್ತೇವೆ? ರೆಡ್ಡಿಯವರು ಟೈಂ ಹಚ್ಚಿದ್ದಾರೆಯೇ? ಅವರಿಗೆ ಅಷ್ಟು ಟೈಂ ಕೊಟ್ಟಿರಿ, ನನಗೆ ಏಕೆ ಟೈಂ ಕೊಡುವುದಿಲ್ಲ ನೀವು ಎಂದರೆ, ನೀವು ಪಕ್ಷಪಾತ ಮಾಡುತ್ತೀರಿ ಎಂದು ಇನ್‌ಡೈರೆಕ್ಟಾಗಿ ಹೇಳಿದ ಹಾಗೆ ಆಗಿದೆ. ಪ್ರತಿ ಹಂತದಲ್ಲಿ ಈ ರೀತಿ ಮಾತನಾಡಿದರೆ ಸ್ಪೀಕರ್ ಸ್ಥಾನಕ್ಕೆ ಏನು ಗೌರವ ಬರುತ್ತದೆ ಎಂಬುದು ನನಗೆ ಅರ್ಥವಾಗುವುದಿಲ್ಲ. ಪ್ರತಿಯೊಂದಕ್ಕೂ ಅವರು ಟೈಂ ಹಚ್ಚಿದ್ದಾರೇನು? ಇವರಿಗೆ ಇಷ್ಟು ಟೈಂ ಕೊಟ್ಟಿರಿ, ನನಗೆ ಕಡಿಮೆ ಟೈಂ ಕೊಟ್ಟಿರಿ, ನನಗೆ ಏಕೆ ಕೊಡುವುದಿಲ್ಲ, ನಾನೂ ಮಾತನಾಡುವವನಿದ್ದೇನೆ ಎಂದರೆ ಅದಕ್ಕೆ ಅರ್ಥವೇನು?

ಶ್ರೀ ವೀರಣ್ಣ ಚಂದ್ರಶೇಖರಯ್ಯ ಚರಂತಿಮಠ್: ಅವರಿಗೆ ಒಬ್ಬೊಬ್ಬರಿಗೂ ಟೈಂ ನಿಗದಿ ಮಾಡಿ.

(ಗೊಂದಲ)

ಶ್ರೀ ಬಸವರಾಜ ಎಸ್. ಹೊರಟ್ಟಿ: ಪ್ರತಿಯೊಂದಕ್ಕೂ ಈ ರೀತಿ ಮಾಡಿದರೆ ಹೇಗೆ ಸರ್? ಒಂದೊಂದು ಸಾರಿ ಏನಾಗುತ್ತದೆ ಎಂದರೆ, ಇಲ್ಲಿ ನಡೆಯುವಂಥ ಚರ್ಚೆಗಳು ನೇರವಾಗಿ ಅಧ್ಯಕ್ಷರನ್ನು ಟಾರ್ಗೆಟ್ ಮಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಹೊರಗಡೆ ಏನು ಮೆಸೇಜ್ ಹೋಗುತ್ತಿದೆ? ಅಧ್ಯಕ್ಷರು ಹೇಳುವಂಥಾದ್ದನ್ನು ಯಾವುದನ್ನೂ ಕೇಳಬಾರದೆಂದರೆ ಬಿಟ್ಟುಬಿಡಲಿ. ಪ್ರತಿಯೊಂದಕ್ಕೂ ನಿಮಗೆ ಪ್ರಶ್ನೆ ಮಾಡಿದರೆ ಈ ಸದನವನ್ನು ಯಾವ ರೀತಿ ನಡೆಸಬೇಕು? ತಮಗೆ ಅಧಿಕಾರವಿದೆ. ಸರಿಯೋ, ತಪ್ಪೋ ಎಂದು ತಾವು ತೀರ್ಮಾನ ಕೊಡುತ್ತೀರಿ; ಆ ತೀರ್ಮಾನಕ್ಕೆ ನಾವು ಒಪ್ಪಬೇಕು. ಅವರು ಹೇಳುತ್ತಾರೆ, ಅವರು ಮಾತನಾಡುವಾಗ ನಾವು ಸುಮ್ಮನೆ ಕುಳಿತಿರಲಿಲ್ಲವೇ, ಎಂದು ಆಯಿತು. ಅಧ್ಯಕ್ಷರು ಸರಿಯೋ, ತಪ್ಪೋ ಎಂದು ಏನು ತೀರ್ಮಾನ ಕೊಡುತ್ತಾರೆ, ಅದು ಅವರಿಗೆ ಬಿಟ್ಟದ್ದು. ಆದರೆ ಒಂದು ಸಲ ತೀರ್ಮಾನ ಕೊಟ್ಟಾದ ಮೇಲೆ ಅದಕ್ಕೆ ಬದ್ಧರಾಗಬೇಕಾಗುದುದು ಈ ಮನೆಯ ಪ್ರತಿಯೊಬ್ಬ ಸದಸ್ಯರ ಕರ್ತವ್ಯವಲ್ಲವೇ? ಅದಕ್ಕಾಗಿ, ದಯಮಾಡಿ ನಾನು ಎಲ್ಲರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಈ ರೀತಿಯಾಗಿ ನಾವು ಅಧ್ಯಕ್ಷರ ಸ್ಥಾನಕ್ಕೆ ಅಗೌರವವನ್ನು ಸಲ್ಲಿಸುವುದು ಸರಿಯಲ್ಲ; ಆ ರೀತಿ ವರ್ತಿಸುವುದು ಸರಿಯಲ್ಲ. ಅಧ್ಯಕ್ಷರು ಯಾವ ರೀತಿಯ ತೀರ್ಮಾನ ಕೊಡುತ್ತಾರೆ, ಆ ತೀರ್ಮಾನಕ್ಕೆ ನಾವು ಬದ್ಧರಾಗಿರಬೇಕು ಎನ್ನುವಂಥ ವಿನಂತಿಯನ್ನು ನಾನು ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ರೆಡ್ಡಿಯವರೆ, ಮಾತನಾಡಿ, ಬೇಗ ಮುಗಿಸಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಇನ್ನೊಂದು ವಿಚಾರ ಇಲ್ಲಿ ಪದೇ ಪದೇ ಪ್ರಸ್ತಾಪವಾಗುತ್ತಿರುವುದು ಎಂದರೆ, ನಾವು ಅಧ್ಯಕ್ಷರ ತೀರ್ಪನ್ನು ಪ್ರಶ್ನೆ ಮಾಡುತ್ತೀರಿ ಎನ್ನುವುದು. ರೂಲಿಂಗ್ ಅನ್ನು ಪ್ರಶ್ನೆ ಮಾಡಬಾರದು ಎಂದು ಪ್ರಸ್ತಾಪವಾಗುತ್ತಿದೆ. ನಿಜ, ಖಂಡಿತಾ ನಾವು ಅಧ್ಯಕ್ಷರು ಕೊಟ್ಟಂಥ ರೂಲಿಂಗ್ ಅನ್ನು ಎಂದೂ ಪ್ರಶ್ನೆ ಮಾಡುವುದಿಲ್ಲ.

(ಗೊಂದಲ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಏನು ಪ್ರಶ್ನೆ ಮಾಡುತ್ತಿದ್ದೇವೆ ಎಂದು ಹೇಳುತ್ತೇನೆ. ನಾವು ಪ್ರಶ್ನೆ ಮಾಡುತ್ತಿರತಕ್ಕಂಥಾದ್ದು ಏನೆಂದರೆ, ನಾನು ಇವತ್ತೂ ಹೇಳುತ್ತಿದ್ದೇನೆ, ನಾನು ಎತ್ತಿರುವ ಕ್ರಿಯಾಲೋಪಕ್ಕೆ ನೀವು ಇನ್ನೂ ರೂಲಿಂಗ್ ಕೊಟ್ಟಿಲ್ಲ.

ಅಧ್ಯಕ್ಷರು: ರೆಡ್ಡಿಯವರೆ, ನಾನು ನಿನ್ನೆ ಸ್ಪಷ್ಟೀಕರಣ ನೀಡಿದ್ದೇನೆ. ನೀವು ಒತ್ತಿಒತ್ತಿ ಹತ್ತು ಸುಳ್ಳನ್ನು ವಾದಿಸಿದರೆ, ನಿಜವಾಗುವುದಿಲ್ಲ. ಗೋಬಲ್ ಥಿಯರಿಯನ್ನು ಏಕೆ ಹೇಳುತ್ತೀರಿ? ನಾನು ಸ್ಪಷ್ಟೀಕರಣ ಕೊಟ್ಟಿದ್ದೇನೆ, ನೀವು ಏನು ಕ್ರಿಯಾಲೋಪ ಎತ್ತಿದಿರಿ, ಮಾನ್ಯ ವಿರೋಧ ಪಕ್ಷದ ನಾಯಕರೂ ಅದನ್ನೇ ಎತ್ತಿದರು. ಅದರ ಮೇಲೆ ಚರ್ಚೆಯಾದಾಗ, ಎಲ್ಲರಿಗೂ ಅವಕಾಶ ಕೊಡಿ ಎಂದು ಮಾನ್ಯ ಪ್ರಕಾಶ್‌ರವರು ಹೇಳಿದರು. ನಾನು ಈಗಾಗಲೇ ಹೇಳಿದ್ದೇನೆ, ಮತ್ತೆಮತ್ತೆ ಏಕೆ ನೀವು ರೂಲಿಂಗ್ ಕೊಟ್ಟಿಲ್ಲ ಎಂದು ಹೇಳುತ್ತಿದ್ದೀರಿ, ಗೋಬಲ್ ಥಿಯರಿಯನ್ನು ಏಕೆ ಅಪ್ಲೈ ಮಾಡುತ್ತೀರಿ?

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಯಾರದ್ದು ಗೋಬಲ್ ಥಿಯರಿ ಎಂದು ಹೇಳುತ್ತೇನೆ.

ಅಧ್ಯಕ್ಷರು: ನೀವು ಹಿರಿಯ ಸದಸ್ಯರು, ಈ ರೀತಿಯಾದರೆ ಆಗುವುದಿಲ್ಲ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಯಾರದ್ದು ಗೋಬಲ್ ಥಿಯರಿ ಎಂದು ನಾನು ಹೇಳುತ್ತೇನೆ. ನನ್ನ ಹತ್ತಿರ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಇದೆ.

ಅಧ್ಯಕ್ಷರು: ಇದಕ್ಕೆಲ್ಲಾ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬೇಕಿಲ್ಲರೀ? ಸಾಮಾನ್ಯ ನಡವಳಿಕೆಗೆ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಯಾಕ್ರೀ? ಸುಮ್ಮನೆ ಏನೋ ವಿಷಯವನ್ನು ಹಿಡಿದುಕೊಂಡರೆ ಆಗುವುದಿಲ್ಲ. ನೀವು ಸರಿಯಾಗಿ ವರ್ತನೆ ಮಾಡಿ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ: ಅದನ್ನೇ ನಾನು ಹೇಳುತ್ತಿರುವುದು. ಈಗತಾನೇ ಕಾನೂನು ಮಂತ್ರಿಗಳೂ ಕೂಡ ಹೇಳಿದರು. ಸ್ಪೀಕರ್ ಹೇಳುವಂಥ ಪ್ರತಿಯೊಂದು ಮಾತಿಗೂ ಅಬ್ಜಕ್ಷನ್ ತೆಗೆದರೆ ಸದನ ಹೇಗೆ ನಡೆಸುವುದು ಎಂದು ಹೇಳಿದರು. ಸ್ಪೀಕರ್‌ರವರ ಪ್ರತಿಯೊಂದು ಮಾತಿಗೂ ನಾವು ಅಬ್ಜಕ್ಷನ್ ತೆಗೆಯುತ್ತಿಲ್ಲ. ನಾನು ಹೇಳುತ್ತಿರತಕ್ಕಂಥಾದ್ದು ಏನೆಂದರೆ, ನಾನು ಎತ್ತಿದಂಥ ಮೂಲಭೂತ ಪ್ರಶ್ನೆ ಏನೆಂದರೆ, ನೀವು Motion of Thanks ಅನ್ನು ಮೂವ್ ಮಾಡತಕ್ಕಂಥಾದ್ದು 175ರಡಿಯಲ್ಲಿ ಬರುವುದಿಲ್ಲ. ರಾಜ್ಯಪಾಲರ ಭಾಷಣವನ್ನು ಚರ್ಚೆ ಮಾಡಬಹುದು ಎಂದಷ್ಟೇ ನಾವು ಹೇಳಿದ್ದೇವೆ.

(ಗೊಂದಲ)

ಶ್ರೀ ಬಸವರಾಜ ಎಸ್. ಹೊರಟ್ಟಿ: ಅಧ್ಯಕ್ಷರೆ, ತಪ್ಪು ಮೆಸೇಜ್ ಹೋಗಬಾರದು?

ಶ್ರೀ ಜಿ.ಎ. ಶ್ರೀರಾಮರೆಡ್ಡಿ: ಹಿರಿಯರಾದ ನೀವು ಈ ರೀತಿ ಮಾತನಾಡಬಾರದು. ನಾನು ಹೇಳುವುದನ್ನಾದರೂ ಪೂರ್ತಿ ಹೇಳಿ.

(ಗೊಂದಲ)

ಶ್ರೀ ವೀರಣ್ಣ ಚಂದ್ರಶೇಖರಯ್ಯ ಚರಂತಿಮಠ್: ಅಧ್ಯಕ್ಷರೆ, ನಾಲ್ಕು ದಿವಸದಿಂದ 175, 176 ಇದೇ ಆಯಿತು. ಬರೀ ಇದೇ ಆಯಿತು ಇವರದ್ದು 175, 176.

ಅಧ್ಯಕ್ಷರು: ಇದರ ಬಗ್ಗೆ ನಿನ್ನೆ, ಮೊನ್ನೆ, ಆಚೆಮೊನ್ನೆ ಚರ್ಚೆಯಾಯಿತು. ಅದನ್ನೇ ಮತ್ತೆಮತ್ತೆ ಹೇಳತಕ್ಕಂಥ ಅಗತ್ಯವಿಲ್ಲ. ಅದು ಮುಗಿದುಹೋದ ವಿಚಾರ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು: ನಮಗೆ ಬಹಳ ನೋವಾಗುತ್ತಿದೆ. ಪ್ರತಿಸಾರಿಯೂ ಪ್ರಶ್ನೆ ಮಾಡುವುದಿಲ್ಲ, ಮಾಡುವುದಿಲ್ಲ ಎಂದು ಹೇಳಿಕೊಂಡೇ ಪ್ರಶ್ನೆ ಮಾಡುತ್ತಿದ್ದಾರೆ.

ಅಧ್ಯಕ್ಷರು: ಅದು ಮುಗಿದು ಹೋದ ವಿಚಾರ. ಮತ್ತೆಮತ್ತೆ ಅದನ್ನೇ ತರುವುದಕ್ಕೆ ಮಾಡುತ್ತಿದ್ದೀರಿ. We are not questioning ಅನ್ನುತ್ತೀರಿ, ಇಲ್ಲಿ ಬಂದು ಬಹಳ ಕೆಟ್ಟದಾಗಿ ನಡೆದುಕೊಳ್ಳುತ್ತೀರಿ. ಇದು ಏನ್ರೀ? ಇದೆಲ್ಲಾ ಜನರಿಗೆ ಅರ್ಥವಾಗುವುದಿಲ್ಲವೇ? ಹಿರಿಯ ಸದಸ್ಯರಾದ ನೀವು ಈ ರೀತಿ ನಡೆದುಕೊಳ್ಳುವುದೇ? ಹೇಳಿದ್ದನ್ನೇ ಹೇಳುತ್ತಿದ್ದೀರಿ. ಹೇಳಬೇಕಾದ್ದನ್ನು ನೇರವಾಗಿ ಹೇಳಿ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ: ನಾನು ನೇರವಾಗಿ ಹೇಳುತ್ತಿದ್ದೇನೆ. ವಿನಯವಾಗಿ ಹೇಳುತ್ತಿದ್ದೇನೆ,...

ಶ್ರೀ ಬಸವರಾಜ ಎಸ್. ಹೊರಟ್ಟಿ: ನಾನು ಏನು ಹೇಳಿದೆ ಎಂದರೆ, ರೆಡ್ಡಿಯವರು ಅವರಿಗೆ ಹೆಚ್ಚು ಟೈಂ ಕೊಡುತ್ತೀರಿ, ನಮಗೆ ಕಡಿಮೆ ಕೊಡುತ್ತೀರಿ ಎಂದು ಹೇಳಿದರು, ಟೈಂ ಹೆಚ್ಚು ಕಡಿಮೆಯಾಯಿತು ಎಂದು ಹೇಳಲು ನೀವು ಟೈಂ ಹಚ್ಚಿದ್ದೀರೇನು, ಅದನ್ನು ನೀವು ಪ್ರಶ್ನೆ ಮಾಡಬೇಡಿ ಎಂದು ನಾನು ಹೇಳಿದೆ.

ಅಧ್ಯಕ್ಷರು: ನಾನು ಇವರೆಲ್ಲರಿಗೂ ಜಾಸ್ತಿ ಟೈಂ ಕೊಡುತ್ತಿದ್ದೇನೆ ಸ್ವಾಮಿ. ಲೋಕಸಭೆಯಲ್ಲಿ ಒಬ್ಬರು, ಇಬ್ಬರು ಸದಸ್ಯರಿದ್ದರೆ 5 ನಿಮಿಷ, 3 ನಿಮಿಷ ಸಮಯ ಕೊಡುತ್ತಾರೆ. ಆದರೆ ಹಿರಿಯ ಸದಸ್ಯರು ಎಂದು ನಾನು ಇವರಿಗೆಲ್ಲಾ ಜಾಸ್ತಿ ಸಮಯ ಕೊಡುತ್ತಾ ಬಂದಿದ್ದೇನೆ, ನಾನು ಇವರಿಗೆ ಗೌರವ ಕೊಡುತ್ತಾ ಬಂದಿದ್ದೇನೆ. ಅದನ್ನೂ ಸಹ ಈ ಸಭೆ ತಿಳಿದುಕೊಳ್ಳಬೇಕು.

ಶ್ರೀ ಬಸವರಾಜ ಎಸ್. ಹೊರಟ್ಟಿ: ಮಾನ್ಯ ಸಭಾಧ್ಯಕ್ಷರು ಒಬ್ಬರಿಗೆ ಟೈಂ ಹೆಚ್ಚು ಕಡಿಮೆ ಮಾಡಬಹುದು. ತಾವು ಅದನ್ನೇ ಪ್ರಶ್ನೆ ಮಾಡುವುದಕ್ಕೆ ಹತ್ತಿದ್ದೀರಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹಾಗಾದರೆ ನಾವು ಮಾತನಾಡುವುದೇ ಬೇಡವೇ?

ಶ್ರೀ ಬಸವರಾಜ ಎಸ್. ಹೊರಟ್ಟಿ: ರೆಡ್ಡಿಯವರೇ, ಮಾತನಾಡಿ. ನಾನು ಹೇಳಿದ್ದು ತಾವು ಮಾತನಾಡುವುದನ್ನು ಬಿಡಬೇಕು ಎಂದು ಅಲ್ಲ. ತಾವು ಏನು ಹೇಳಿದಿರಿ, ಅವರಿಗೆ ಹೆಚ್ಚು ಟೈಂ ಕೊಡುತ್ತೀರಿ, ನಮಗೆ ಟೈಂ ಕಡಿಮೆ ಕೊಡುತ್ತೀರಿ ಎಂದರೆ ಅದರ ಅರ್ಥವೇನು? ಅಂದರೆ, ನೀವು ಪಕ್ಷಪಾತ ಮಾಡುತ್ತಿದ್ದೀರಿ ಎನ್ನುವ ಭಾವನೆ ಬರುತ್ತದೋ, ಇಲ್ಲವೋ ನೀವೇ ಹೇಳಿ. ಅದರ ಬಗ್ಗೆ ನಾನು ಹೇಳಿದೆ. ಅದನ್ನು ಬಿಟ್ಟು, ನಿಮ್ಮ ರೂಲಿಂಗ್‌ಗಾಗಲೀ, ನಿಮ್ಮ ನಿರ್ಣಯಕ್ಕಾಗಲೀ ನಾವು ಅಡ್ಡಬರುವುದಿಲ್ಲ. ಅದು ತಮಗೆ ಬಿಟ್ಟಂಥಾದ್ದು. ಅವರಿಗೆ, ನಮಗೆ ಎನ್ನುವ ಬೇದಭಾವವನ್ನು ತೋರಿಸಬಾರದು ಎನ್ನುವುದನ್ನು ಬಿಟ್ಟರೆ, ಬೇರೆ ಏನನ್ನೂ ಹೇಳುವುದಕ್ಕೆ ನಾನು ಇಚ್ಛೆಪಡುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅಧ್ಯಕ್ಷರೆ, ನೀವು ಪದೇಪದೇ ನಾನು ಹೇಳಿದ್ದನ್ನು ಹೇಳುತ್ತಿಲ್ಲ. ನಾವು ಎತ್ತಿದಂಥ ಪ್ರಶ್ನೆಗೆ ನಮಗೆ ಉತ್ತರ ಸಿಕ್ಕಿಲ್ಲ ಎನ್ನುವುದಷ್ಟೇ ನಾನು ಹೇಳುತ್ತಿರತಕ್ಕಂಥಾದ್ದು.

ಅಧ್ಯಕ್ಷರು: ಆಯಿತು, ಮುಂದೆ ಹೋಗಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನನ್ನ ಕ್ರಿಯಾಲೋಪಕ್ಕೆ ಉತ್ತರ ಸಿಕ್ಕಿಲ್ಲ, ಅಷ್ಟೇ ನಾನು ಹೇಳುತ್ತಿರುವುದು. ಅದನ್ನು ಎಲ್ಲಿ ಪಡೆಯಬೇಕು ಎಂಬುದು ನನಗೆ ಗೊತ್ತಿದೆ, ನಾನು ಪಡೆಯುತ್ತೇನೆ. ಅದಕ್ಕಾಗಿ, ನಾನು ನಿಮ್ಮ ಹತ್ತಿರ ಆ ಪ್ರಶ್ನೆಯನ್ನು ಕೇಳುತ್ತಲೂ ಇಲ್ಲ. ನಾನು ಏನು ಕೇಳುತ್ತಿದ್ದೇನೆ ಅಂದರೆ, ನಾನು ಎತ್ತಿದ ಪ್ರಶ್ನೆಗೆ ಉತ್ತರ ಬರಲಿಲ್ಲ ಎಂದಷ್ಟೇ ಹೇಳಿದೆನೇ ಹೊರತು ನಿಮ್ಮ ತೀರ್ಪನ್ನು ನಾವು ವಿರೋಧ ಮಾಡುತ್ತಿದ್ದೇವೆ ಎಂದು ನಾನು ಹೇಳಲಿಲ್ಲ. ಹಾಗಾಗಿ, ಕಾನೂನುಬದ್ಧವಾಗಿ ಏನನ್ನು ಮಾಡಬೇಕೋ, ಕಾನೂನನ್ನು ಪಾಲಿಸಬೇಕಾಗಿರತಕ್ಕಂಥವರು ಕಾನೂನನ್ನು ಪಾಲಿಸದೇ ಇರತಕ್ಕಂಥ ಸಂದರ್ಭದಲ್ಲಿ ಅದನ್ನು ವಿರೋಧ ಮಾಡತಕ್ಕಂಥ ಹಕ್ಕು ನಮಗಿದೆ. ಆ ನಮ್ಮ ಹಕ್ಕನ್ನೂ ಕೂಡ ಗೌರವಿಸಬೇಕಾಗುತ್ತದೆ. ಜಯಪ್ರಕಾಶ್ ನಾರಾಯಣ್‌ರವರು . . . . . .

ಅಧ್ಯಕ್ಷರು: ಹಾಗಾದರೆ ಕಾನೂನಿನ ಪಾಲನೆ ಎಂದರೆ, ನಾನು ಒಂದು ರೂಲಿಂಗ್ ಕೊಟ್ಟಾಗ ಅದನ್ನು ನೀವು ವಿರೋಧಿಸಬಹುದೇ? ನಾನು ತಮಗೆ ಏನು ಹೇಳಲಿ? ಈ ತರಹ ವಿತಂಡವಾದ ಮಾಡುತ್ತಿದ್ದೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ನಿಮಗೆ ಆ ಮಾತನ್ನು ಹೇಳಲಿಲ್ಲ. ಅಧ್ಯಕ್ಷರು ಕ್ಷಮಿಸಬೇಕು, ನಿಮಗಲ್ಲ ನಾನು ಆ ಮಾತು ಹೇಳುತ್ತಿರುವುದು. ಕಾನೂನು ಪಾಲನೆ ಮಾಡದೇ ಇರುವಾಗ, ಸಂವಿಧಾನಬದ್ಧವಾಗಿ ನಡೆದುಕೊಳ್ಳದೇ ಇರುವಾಗ, ಸಂವಿಧಾನಕ್ಕೆ ವಿರೋಧವಾಗಿ ನಡೆದುಕೊಂಡಾಗ ಅದನ್ನು ಪ್ರತಿಭಟನೆ ಮಾಡತಕ್ಕಂಥ ಹಕ್ಕು ನಮಗಿದೆ. ಜಯಪ್ರಕಾಶ್ ನಾರಾಯಣ್‌ರವರು 1975ನೇ ಮಾರ್ಚ್ 23ನೇ ತಾರೀಖು ರಾಮಲೀಲಾ ಪೆರೇಡ್ ಗ್ರೌಂಡ್‌ನಲ್ಲಿ, ಭಗತ್ ಸಿಂಗ್‌ರನ್ನು ನೇಣು ಹಾಕಿದ ಸ್ಮರಣಾರ್ಥ ಹುತಾತ್ಮರ ದಿನಾಚರಣೆ ಅಂಗವಾಗಿ ಮಾಡಿದಂಥ ಭಾಷಣದ ಸಂದರ್ಭದಲ್ಲಿ ಒಂದು ವಿಚಾರವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಏನೆಂದರೆ:

"If the government difects the officials to implement illegal and unconstitutional matter, it is your right to defy it."

ಎಂದು ಇದು ಜಯಪ್ರಕಾಶ್ ನಾರಾಯಣ್‌ರವರು ಹೇಳಿದ್ದು, ನಾನು ಹೇಳಿದ್ದಲ್ಲ. ಆದ್ದರಿಂದ, ನಾನು ಯಾವ ವಿಚಾರವನ್ನು ಹೇಳುತ್ತಿದ್ದೇನೆಂದರೆ, ಸಂವಿಧಾನವನ್ನು ರಕ್ಷಣೆ ಮಾಡಬೇಕಾಗಿರತಕ್ಕಂಥಾದ್ದು ನಮ್ಮೆಲ್ಲರ ಕರ್ತವ್ಯ ಇದೆ. ನಾವು ಬಿಲ್ ಬಗ್ಗೆ ಚರ್ಚೆ ಮಾಡಬೇಕು, ಚರ್ಚೆ ಮಾಡಲಿಕ್ಕೆ ಅವಕಾಶವಿಲ್ಲ ಎನ್ನುವ ಪ್ರಶ್ನೆ ಬಂದಾಗ ನೀವು ಏನು ಹೇಳಿದಿರಿ: ಮಾಧುಸ್ವಾಮಿಯವರು ಎತ್ತಿದಂಥ ಪ್ರಶ್ನೆಗೆ ನೀವು ಏನು ಹೇಳಿದಿರಿ, ಅದಕ್ಕೆ ಯಾವ ರೀತಿಯ ಉತ್ತರ ಬಂತು? ಈ ಶಾಸನಸಭೆಯಲ್ಲಿ ಶಾಸನಸಭಾ ಸದಸ್ಯರಾದ ನಿಮಗೆ, 1600 ಕೋಟಿ ರೂಪಾಯಿಗಳ ಅಪ್ರಾಪ್ರಿಯೇಷನ್ ಬಿಲ್ ಅನ್ನು ಚರ್ಚೆ ಮಾಡದೇ ಪಾಸ್ ಮಾಡಿರತಕ್ಕಂಥಾದ್ದು ನಿಮಗೆಲ್ಲಾ ಸಮಾಧಾನ ತಂದಿದೆ ಎಂದರೆ ಅದಕ್ಕೆ ನಮ್ಮದೇನೂ ಅಬ್ಜಕ್ಷನ್ ಇಲ್ಲ, ಅದನ್ನೂ ಚರ್ಚೆ ಮಾಡಲು ಅವಕಾಶ ಇಲ್ಲದೇ ಇರುವಾಗ, ಕುಡಿಯುವ ನೀರಿನ ಸಮಸ್ಯೆಯನ್ನು ಚರ್ಚೆ ಮಾಡಿಕೊಂಡು ಕುಳಿತಿರಬೇಕು ಎಂದು ಹೇಳುವಿರಾ? ನಮ್ಮ ಕೆಲಸ ಇದು, ಬಿಲ್ಲುಗಳ ಬಗ್ಗೆ ಚರ್ಚೆ ಮಾಡತಕ್ಕಂಥಾದ್ದು. ಬಿಲ್ಲುಗಳ ಬಗ್ಗೆ ಚರ್ಚೆ ಮಾಡುವ ನಮ್ಮ ಕೆಲಸವನ್ನು ಬಿಟ್ಟು ಕುಡಿಯುವ ನೀರಿನ ಬಗ್ಗೆ ಚರ್ಚೆ ಮಾಡಬೇಕು ಎಂದು ಹೇಳತಕ್ಕಂಥಾದ್ದು ಸರಿಯೇ? ಇಲ್ಲಿ ಯಾರು ಕರ್ತವ್ಯ ನಿರ್ವಹಿಸಬೇಕು? ಇದನ್ನು ಚರ್ಚೆ ಮಾಡಿದರೆ ಅದು ಸಮಯ waste ಮಾಡತಕ್ಕಂಥದ್ದೇ? ನನಗಂತೂ ಹೆಮ್ಮೆ ಇದೆ ಅಧ್ಯಕ್ಷರೆ. ಯಾರು ಬೇಕಾದರೆ ಏನಾದರೂ ಹೇಳಿಕೊಳ್ಳಲಿ. ನಾನು ಇಲ್ಲಿ ಎರಡನೇ ಅವಧಿಯಲ್ಲಿ ಶಾಸಕನಾಗಿದ್ದೇನೆ. ಈ ಎರಡನೇ ಅವಧಿಯಲ್ಲಿ ಮೊಟ್ಟಮೊದಲನೇ ಬಾರಿಗೆ ಕಾನೂನು, ಸಂವಿಧಾನದ ಪ್ರಶ್ನೆಗಳನ್ನು ನಿಜವಾದಂಥ ಶಾಸಕಾಂಗ ಮಾಡಬೇಕಾಗಿರತಕ್ಕಂಥ ಕೆಲಸವನ್ನು ನಾವು ಈ ನಾಲ್ಕು ದಿವಸಗಳಿಂದ ಮಾಡಿದ್ದೇವೆ. We are proud of it. ಇದು ನಮ್ಮ ನಿಜವಾದಂಥ ಕೆಲಸ. ಇದನ್ನು ನಾವು ಮಾಡುತ್ತಿದ್ದೇವೆ. ನಾವು ಸಂವಿಧಾನಬದ್ಧವಾಗಿ ನಮ್ಮ ಕೆಲಸವನ್ನು ಪೂರೈಸುತ್ತಿದ್ದೇವೋ ಅಥವಾ ಇಲ್ಲಿ ನಾವು ಸಮಯವನ್ನು ಹಾಳು ಮಾಡುತ್ತಿದ್ದೇವೋ ಎಂದು ಹೇಳತಕ್ಕಂಥದ್ದರ ಬಗ್ಗೆ ತೀರ್ಮಾ ಕೊಡಬೇಕಾಗಿರತಕ್ಕಂಥದ್ದು ಜನ ಮತ್ತು ನ್ಯಾಯಾಂಗ. ಶಾಸನಸಭಾ ಸದಸ್ಯರಾಗಿ ನಮ್ಮ ಕರ್ತವ್ಯವನ್ನು ನಾವು ಮಾಡುತ್ತಿದ್ದೇವೆ. ನಿಯಮಗಳನ್ನು ಉಲ್ಲಂಘನೆ ಮಾಡಬಾರದೆಂದು ನೀವೇ ಹೇಳಿದಿರಿ. ನೀವು ಬೆಳಿಗ್ಗೆ ಇಲ್ಲಿ ಬಂದ ತಕ್ಷಣ ಬೆಲ್ ಹಾಕಿಬಿಟ್ಟು ಸದನವನ್ನು ಮುಂದೂಡಿ ಅರ್ಧ ಗಂಟೆ ಎಂದು ಹೇಳಿ ಹೊರಟು ಹೋದಿರಿ. ಅರ್ಧ ಗಂಟೆ ಆಯಿತು, ಮುಕ್ಕಾಲು ಗಂಟೆ ಆಯಿತು, ಒಂದು ಗಂಟೆ ಆಯಿತು, ಆದರೂ ಸದನ ಸೇರಲಿಲ್ಲ. ಹಾಗಾದರೆ, ನಾವು ಸುಮ್ಮನೆ ಕುಳಿತಿರಬೇಕು. ಇದಕ್ಕೆ ಸಮಯ ಇಲ್ಲ. ಅರ್ಧ ಗಂಟೆ ಎಂದು ನೀವು ಹೇಳಿದಿರಿ. ಅರ್ಧ ಗಂಟೆ ಎಂದು ಹೇಳಿದವರು ಮತ್ತೆ ಸದನ ಎಷ್ಟು ಗಂಟೆಗೆ ಸೇರಿತು? ಇದು ನಮ್ಮ ಕಡೆಯಿಂದ ತಪ್ಪಾಗಿದೆಯೇ? ಈ ರೀತಿಯಲ್ಲಿ ನಿಯಮಗಳನ್ನು ಪಾಲಿಸಬೇಕಾಗಿರತಕ್ಕಂಥದ್ದು ನಾವು. ನಾವು ನಿಯಮಗಳನ್ನು ಪಾಲಿಸುವಾಗ ನೀವು ಏನು ಹೇಳುತ್ತೀರಿ? ಸಂವಿಧಾನದ ಬಗ್ಗೆ ನೀವು ಹೇಳಿದ್ದನ್ನು ಹೇಳುತ್ತಿದ್ದೀರಿ ಎಂದು ಮುಖ್ಯಮಂತ್ರಿಗಳು ಹೇಳುತ್ತಾರೆ, ಕಾನೂನು ಮಂತ್ರಿಗಳು ಹೇಳುತ್ತಿದ್ದಾರೆ, ಎಲ್ಲರೂ ಹೇಳುತ್ತಿದ್ದಾರೆ. ನಾವು ಹೇಳಿದ್ದಲ್ಲ. ಅದರ ಬಗ್ಗೆ ಇಲ್ಲಿ Supreme Court judgment ಇದೆ. . . . . .

ಅಧ್ಯಕ್ಷರು: ಮಾನ್ಯ ರೆಡ್ಡಿಯವರೆ, ಬೇಗ ಮುಗಿಸಿರಿ. ಬೇಗ ಮುಗಿಸಿ ಸ್ವಾಮಿ. ಏನಾಗಿದೆ ಎಂದರೆ, ಇಷ್ಟೊಂದು lengthy ಆಗಿ ನೀವು ಮಾತನಾಡುವುದಕ್ಕೆ start ಮಾಡಿದರೆ ಬೇರೆಯವರಿಗೆ ಹೇಗೆ ಅವಕಾಶ ಕೊಡುವುದು? ಬೇರೆ ಬೇರೆ ವಿಷಯಗಳನ್ನು ತೆಗೆದುಕೊಳ್ಳುವುದು ಹೇಗೆ? No. It is not correct.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು: ಸಮಯದ ಪರಿಪಾಲನೆ ಬಗ್ಗೆ ಅವರು ಹೇಳುತ್ತಿದ್ದಾರಲ್ಲಾ, ಅವರಿಗೇ ಆ ಸಮಯ apply ಆಗುವುದಿಲ್ಲವೇ ಮಾನ್ಯ ಅಧ್ಯಕ್ಷರೆ? ಸಮಯದ ಪರಿಪಾಲನೆ ಬಗ್ಗೆ ತಮ್ಮನ್ನೇ ಅವರು ಕೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ನೀವು ಹಿರಿಯ ಸದಸ್ಯರು. ಒಂದು ಪಕ್ಷವನ್ನು represent ಮಾಡುತ್ತಿದ್ದೀರೆಂದು ಇಲ್ಲಿಯವರೆಗೆ ನಾನು ಜಾಸ್ತಿ time ಕೊಟ್ಟಿದ್ದೇನೆ. ಇನ್ನು ಮೇಲೆ ಎರಡೆರಡು ನಿಮಿಷ ಸಮಯಾವಕಾಶವನ್ನು ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು: ಸಮಯದ ಪರಿಪಾಲನೆ ಕೇವಲ ಹೇಳಲಿಕ್ಕೆ ಮಾತ್ರವೇ? ಆಚರಣ ಮಾಡಲಿಕ್ಕೆ ಇಲ್ಲವೇ? ಸಮಯದ ಪರಿಪಾಲನೆ ಬರೀ ಹೇಳಲಿಕ್ಕೆ ಮಾತ್ರವೇ? ಅವರು ಆಚರಣೆ ಮಾಡಲಿಕ್ಕೆ ಅಲ್ಲವೇ?

(ಗೊಂದಲ)

Mr. Speaker: Don't test my patience. ದಯಮಾಡಿ, ಬೇಗ ಮುಗಿಸಿ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು: ಸಮಯದ ಬಗ್ಗೆ ಬೇರೆಯವರಿಗೆ ಮಾತ್ರ ಹೇಳುವುದಲ್ಲ. ಆಚರಣೆಗೆ ಕೂಡ ತಂದು ಕಾರ್ಯಗತ ಮಾಡಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, Supreme Court ನಲ್ಲಿ judgment ಕೊಟ್ಟಿರತಕ್ಕಂಥದ್ದು ಈ ರೀತಿ ಇದೆ: The function assigned to the Governor under Article 176 ಯಾವ ಕೇಸ್‌ನಲ್ಲಿ ಅಂದರೆ, Union of India vs. Vallur Basavaiah Chqudary 1979.

ಅಧ್ಯಕ್ಷರು: ಮಾನ್ಯ ರೆಡ್ಡಿಯವರೆ, ಈಗ ಒಂದು ಪ್ರಶ್ನೆ ಕೇಳುತ್ತೇನೆ. ಇದೆಲ್ಲಾ ಮುಗಿದ ಕಥೆ. ಇದೆಲ್ಲವನ್ನೂ ಹೇಳಿದ್ದೀರಿ. ನಾನೊಂದು ತೀರ್ಮ ಕೊಟ್ಟೆ. ಪುನರ್‌ಪರಿಶೀಲನೆ ಮಾಡಬೇಕು ಎನ್ನತಕ್ಕಂಥದ್ದನ್ನು ಮಾಡಿದಿರಿ. ಅದರ ಮೇಲೂ reiterate ಮಾಡಿದೆ. ಆ bill ವಂದನಾ ನಿರ್ಣಯ pass ಆಯಿತು. ಯಾವ ರೀತಿ ಆಯಿತು ಎನ್ನುವ ಪ್ರಶ್ನೆ ಬೇರೆ. ಆ argument ನ್ನೆಲ್ಲಾ ಮತ್ತೆ ಮತ್ತೆ ಏಕೆ ಮಾಡುತ್ತಿದ್ದೀರಿ? ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಆ argument ಮಾಡುತ್ತಿಲ್ಲ. ನಾನು ಮಾಡುತ್ತಿರುವ argument ಇಷ್ಟೆ. ಸಮಯ waste ಮಾಡುತ್ತಿದ್ದೀರಿ, ಸದನದ ಸಮಯವನ್ನು waste ಮಾಡುತ್ತಿದ್ದೀರಿ ಎಂದು ನೀವು ನಮ್ಮನ್ನು ಪ್ರತಿಬಿಂಬಿಸುತ್ತಿದ್ದೀರಲ್ಲಾ.

ಅಧ್ಯಕ್ಷರು: ನಾವು ಸದನದ ಸಮಯವನ್ನು ವ್ಯಯ ಮಾಡತ್ತಿಲ್ಲ, ಎಲ್ಲ ಅಂಕಿ–ಅಂಶಗಳ ಮೇಲೆ ಪ್ರತಿಯೊಂದನ್ನೂ ಇಲ್ಲಿ interpret ಮಾಡುತ್ತಿದ್ದೇನೆಂದು ನಿಮ್ಮ ವಾದವೇ? ಎಷ್ಟು ಸಮಯದಲ್ಲಿ ಅದನ್ನು ನೀವು ವ್ಯಾಖ್ಯಾನಗಳು ಮಾಡಬೇಕಾಗಿತ್ತು, ವಿಚಾರ ಮಾಡಬೇಕಾಗಿತ್ತು ಎಂದು ಹೇಳಿದರೆ ಆಯಿತಪ್ಪ ವ್ಯಾಖ್ಯಾನ ಮಾಡುವುದಕ್ಕೆ ಆಗೋಯ್ತು. ಅದು ಏನು ವಿಷಯ ಇತ್ತು ಅದು ಮುಗಿದುಹೋಯ್ತು. ಮತ್ತೆ ಮತ್ತೆ ವ್ಯಾಖ್ಯಾನ ಮಾಡತಕ್ಕಂಥ ಅಗತ್ಯ ಏನು ಎಂದು ನಾನು ಕೇಳುತ್ತಿರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮತ್ತೆ ಮತ್ತೆ ಇವರು ಏಕೆ ವ್ಯಾಖ್ಯಾನ ಮಾಡಬೇಕು?

ಅಧ್ಯಕ್ಷರು: ಅವರು ಏನೂ ವ್ಯಾಖ್ಯಾನ ಮಾಡಲಿಲ್ಲ. ವ್ಯಾಖ್ಯಾನ ಮಾಡುತ್ತಿರುವವರೇ ನೀವು. ಅವರು ಏನು ಮಾತನಾಡಿದ್ದಾರೆ? This is not correct. ಬೇಗ ಮುಗಿಸಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ನೀವು ಅವರಿಗೆ ಸಲಹೆ ಕೊಡುತ್ತಿರತಕ್ಕಂಥದ್ದು ಸೂಕ್ಷ್ಮವಾಗಿ ಸರಿಯಾಗಿ ಇದೆ. ಅವರು ಬೇಗ ಬೇಗ ಮುಗಿಸಬೇಕು, ಒಬ್ಬೊಬ್ಬರು ಹೆಚ್ಚು ಸಮಯ ತೆಗೆದುಕೊಳ್ಳುವುದು, ಪುನರಾವರ್ತನೆ ಮಾಡತಕ್ಕಂಥದ್ದು ಸರಿಯಲ್ಲ. ಕೆಲವು ವೇಳೆ ಈ ಸದನದಲ್ಲಿ ಕಲಾಪ ನಡೆಯುವಾಗ ಕೆಲವರು ಆಡತಕ್ಕಂಥ ಮಾತುಗಳು ಬಹಳ ಸರಳವಾಗಿ ಮೇಲ್ನೋಟಕ್ಕೆ ಕಾಣುತ್ತದೆ. ಆದರೆ, ಅದರ ಪರಿಣಾಮ ಸ್ವಲ್ಪ ಗೌರವದಿಂದ ಬದುಕತಕ್ಕಂಥವರಿಗೆ ಎಷ್ಟು ಕೆಟ್ಟದಾಗಿ ಆಗುತ್ತದೆಂದು ತಾವು ಸ್ವಲ್ಪ ತಾಳ್ಮೆವಹಿಸಿ ನೋಡಬೇಕು. ನನ್ನ ಕಿರಿಯ ಸಹೋದರ ಮಹಿಮಾ ಪಟೇಲ್‌ರವರ ಭಾಷಣವನ್ನು ಪೂರ್ತಿ ತರಿಸಿಕೊಂಡು ತಾವು ಇವತ್ತು ಓದಿ. ನಾಳೆ ತಾವು ಸದನಕ್ಕೆ ನನಗೆ ಪ್ರತಿಕ್ರಿಯೆ ಕೊಡಿ. ಆ ತರಹ ಅವರು ಮಾತನಾಡಿದಾಗ ನಾವು–ಇಲ್ಲಪ್ಪ, ನೀವು ಎಲ್ಲೋ ಸ್ವಲ್ಪ ಎಡವಿದ್ದೀರಿ. ಅಷ್ಟು ಸರಳ ಅಲ್ಲ. ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ, ಹಾಗಲ್ಲ ಎಂದು ಹೇಳತಕ್ಕಂಥದ್ದಾದರೂ ಒಂದು ಕರ್ತವ್ಯ ಇರುತ್ತದೆಯಲ್ಲವೇ? ಈಗ ಅವರು ಹೇಳಿರತಕ್ಕಂಥದ್ದು ಯಥಾವತ್ತು ಪತ್ರಿಕೆಯಲ್ಲಿ ಪ್ರಿಂಟಾಗಿ, ಅದಕ್ಕೆ ಬದಲಾಗಿ ನಾವು ಏನೂ ಹೇಳದೇ ಹೋದಂಥ ಸಂದರ್ಭದಲ್ಲಿ, ನಾವು ಕೆಲವರೆಲ್ಲಾ ಇಲ್ಲಿ ಇರತಕ್ಕಂಥವರು ಸಾರ್ವಜನಿಕ ದೃಷ್ಟಿಯಲ್ಲಿ ಹೇಗೆ ಕಾಣುತ್ತೇವೆಂದರೆ, ಅವರೇ ಹೇಳಿದ ಭಾಷೆಯಲ್ಲಿ ಆ ಕೆಲಸವನ್ನು ಮಾಡಿದವರ ಹಾಗೆ ಕಾಣುತ್ತೇವೆ. ಕೆಲವು ಕನ್ನಡದ ಮಾತುಗಳು ಬಹಳ ಸರಳವಾಗಿತ್ತು. ಆದರೆ ಅದರ ಒಳ ಪರಿಣಾಮ .....

ಅಧ್ಯಕ್ಷರು: ಅದನ್ನೇ ಮತ್ತೆ ಮತ್ತೆ ಹೇಳುವುದರಲ್ಲಿ ಅರ್ಥ ಏನಿದೆ?

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಹಾಗಲ್ಲ. ನಾನು ಏನು ಹೇಳುತ್ತಿದ್ದೇನೆಂದರೆ, ಇಲ್ಲಿ ಈ ಸದನದಲ್ಲಿ ಚುಚ್ಚುವುದು, ವ್ಯಂಗ್ಯ ಮಾಡತಕ್ಕಂಥದ್ದು, ಕೋಪಕ್ಕೆ ಒಳಗಾಗತಕ್ಕಂಥದ್ದು, ಉದ್ವಿಗ್ನತೆಗೆ ಬರತಕ್ಕಂಥದ್ದು, ಹಾಸ್ಯ ಮಾಡತಕ್ಕಂಥದ್ದು ಇವೆಲ್ಲಾ ಇವೆ. ಆದರೆ, ಅದಕ್ಕೆ ಯಾವುದೋ ಒಂದು ರೀತಿಯ ಮಿತಿ ಇರಬೇಕು. ದಯಮಾಡಿ, ಮಾನ್ಯ ಪ್ರಕಾಶ್‌ರವರ ಅಭಿಪ್ರಾಯವನ್ನು ಕೇಳಿ. He has heard. ಏನು ಆಗುತ್ತದೆ ಅದರ ಪರಿಣಾಮ ಅಂದರೆ ಇಲ್ಲಿರತಕ್ಕಂಥವರಿಗೆ ಏನೂ ಜವಾಬ್ದಾರಿ ಇಲ್ಲ, ಹೊತ್ತು ಹೋಗುವುದಿಲ್ಲ, ಎರಡು ವರ್ಷದಿಂದ ಇವರು ಕುಳಿತುಕೊಂಡು ನೋಡಿ ಸಾಕಾಗಿಬಿಟ್ಟಿದೆ, ಇವರೆಲ್ಲಾ "ನಿಂತುಕೊಂಡು ಉಚ್ಚೆ ಹುಯ್ಯುತ್ತಿದ್ದಾರೆ, ಅದಕ್ಕೆ ನಾವೆಲ್ಲ ಓಡಾಡುವುದಕ್ಕೆ ಶುರು ಮಾಡಿದ್ದೇವೆಂದರೆ" ಏನಿದರ ಅರ್ಥ? You are presiding, we are bearing all these insults and all these things go into the records.

You have pride and pleasure in passing on this to the next generation as the record of this House? It is my humble appeal to you, please, as the Presiding Officer you want this to be a part of the document? I am extremely sorry. ಇದಕ್ಕಿಂತ ನಯವಾಗಿ ಉತ್ತಮವಾಗಿ ಹೇಳುವುದಕ್ಕೆ ಶಕ್ತಿ ಇಲ್ಲ.

ಅಧ್ಯಕ್ಷರು: ಮಾನ್ಯ ರಮೇಶ್‌ಕುಮಾರ್‌ರವರೆ, one thing I will tell you. ಈಗ ನಾನು ಹೇಳುವುದೇನೆಂದರೆ, ಒಂದಲ್ಲ ಹತ್ತು ಸಾರಿ ನಾನು ವಿನಂತಿ ಮಾಡಿದ್ದೇನೆ. ಈ ಅಡ್ಡ ಮಾತುಗಳನ್ನು ಆಡಬೇಡಿ, sarcastic ಆಗಿ ಮಾತನಾಡಬೇಡಿ. ಎಂದೆಲ್ಲ ಹೇಳಿದರೂ ಪದೇ ಪದೇ ಅವರು ಮಾಡಿದರು ಎಂದು ಇವರು, ಇವರು ಮಾಡಿದರು ಎಂದು ಅವರು . . .

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ಪದೇ ಪದೇ ನಾವು ಈ ಕಡೆಯಿಂದ ಎದ್ದು ವಂದನೆ ಹೇಳುವುದಕ್ಕೆ ನಮ್ಮ ವಿರೋಧ ಇದ್ದಿರಲಿಲ್ಲ. ಸಂವಿಧಾನದ ವಿಧಿ ಉಲ್ಲಂಘನೆಗೆ ನಮ್ಮ ವಿರೋಧ. ರಾಜ್ಯಪಾಲರಿಗೆ thanks ಹೇಳುವುದಕ್ಕೆ ನಾವು ವಿರೋಧ ಮಾಡಿಲ್ಲವೆಂದರೆ, ಯಾವುದೋ bus accident, car accident, tea ಕೊಟ್ಟರೆ thanks ಹೇಳುತ್ತಾರೆ. ಏನಿದರ ಅರ್ಥ? ಅಷ್ಟು simplify ಮಾಡಿ ಮಾಡುವುದಾದರೆ ಸಂವಿಧಾನ ಏಕಿರಬೇಕು? ನೀವು ಘಂಟೆ ಹೊತ್ತು ಏಕೆ ಇಲ್ಲಿಗೆ ಬರಬೇಕು? ನೀವು ಬಂದ ತಕ್ಷಣ ನಾವು ಏಕೆ ಎದ್ದು ನಿಂತುಕೊಳ್ಳಬೇಕು? ಸುಮ್ಮನೆ ನಾವೆಲ್ಲಾ ಬಂದು ಹೊಡೆದಾಟ ಮಾಡಿಕೊಂಡು ಹೋಗಿಬಿಡೋಣ. ಇವೆಲ್ಲಾ ಏನೂ ಬೇಕಾಗಿಯೇ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಒಬ್ಬ ಅತ್ಯುತ್ತಮ ಅಧ್ಯಕ್ಷರಾಗಿ ರಮೇಶ್ ಕುಮಾರ್‌ರವರು ಏನೇ ಮಾತನಾಡಿದರೂ ಬಹಳ ಗೌರವದಿಂದ ನಾವು ಆಲಿಸುತ್ತೇವೆ, ನಾವು ಅದಕ್ಕೆ ಗೌರವ ಕೊಡುತ್ತೇವೆ. ಆದರೆ, ನಾನು ಕಳೆದ 15–20 ವರ್ಷಗಳಲ್ಲಿ ಈ ಮನೆಯಲ್ಲಿ ನಮ್ಮ ವಿರೋಧ ಪಕ್ಷದ ಶಾಸಕರು ನಿಮ್ಮ ಬಗ್ಗೆ, (ಅಧ್ಯಕ್ಷರು) ರಾಜ್ಯಪಾಲರ ಬಗ್ಗೆ ಮಾತನಾಡುವಂಥ ಮಾತುಗಳು ಕಡತದಿಂದ ನೀವು ತೆಗೆದು ನೋಡಿದರೆ ಬಹುಶಃ ಇವರಿಗೆ ಪ್ರಜಾತಂತ್ರ ವ್ಯವಸ್ಥೆ ಬಗ್ಗೆ ನಂಬಿಕೆ ಇದೆಯೇ? ಸಂವಿಧಾನದ ಬಗ್ಗೆ ನಿಮಗೇನಾದರೂ ವಿಶ್ವಾಸವಿದೆಯೇ? ಮಾತನಾಡುವಂಥ ಆ ಹಕ್ಕು ಇದೆಯೇ? ಈ ಮಾತು, ಈ ಪ್ರಶ್ನೆ ಬರುತ್ತದೆ. ನಿನ್ನೆ, ಮೊನ್ನೆ ಇಲ್ಲಿ ನಡೆದಂಥ ಕಾರ್ಯಕಲಾಪಗಳಲ್ಲಿ ನೀವೆಲ್ಲ ಯಾವ ರೀತಿಯ ಭಾಷೆಯನ್ನು ಉಪಯೋಗ ಮಾಡಿದ್ದೀರೆಂದು ಕಡತವನ್ನು ತೆಗೆದು ನೋಡಿದರೆ ಬಹುಶಃ ನಾಚಿಕೆಯಿಂದ ತಲೆತಗ್ಗಿಸಬೇಕು. ಆ ರೀತಿ ಅಪಮಾನ ಮಾಡುವಂಥ ಕೆಲಸ ನಡೆಯಿತು. ಆ ಸಂದರ್ಭದಲ್ಲಿ ಮಾನ್ಯ ರಮೇಶ್ ಕುಮಾರ್‌ರವರು ಎದ್ದು ನಿಂತುಕೊಂಡು ಅಧ್ಯಕ್ಷರ ಜೊತೆ ಈ ರೀತಿ ವರ್ತನೆ ಮಾಡಬೇಡಿ ಎಂದು ಹೇಳಿದ್ದಿದ್ದರೆ ನಿಮಗೆ ನಮಸ್ಕಾರ ಹೇಳುತ್ತಿದ್ದೆ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು: ಇತಿಹಾಸದಲ್ಲಿ, ಈ ಒಂದು ಸದನದಲ್ಲಿ ಈ ರೀತಿಯ ಘಟನೆಗಳು ನಡೆದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ರಾಜ್ಯಪಾಲರಿಗೆ ನೀವ್ಯಾರೋ ಏಜೆಂಟ್‌ರು ಎನ್ನುವ ಶಬ್ದವನ್ನು ಉಪಯೋಗಿಸಿದಿರಿ. ರಾಜ್ಯಪಾಲರಿಗೆ, ಅಧ್ಯಕ್ಷರಿಗೆ, ಅದೆಲ್ಲವನ್ನೂ ಇಲ್ಲಿ ಹೇಳಬಾರದು. ಎಲ್ಲವನ್ನೂ ಹೇಳಿದಾಗ ಇಲ್ಲಿ ಕೈಕಟ್ಟಿಕೊಂಡು ಕುಳಿತಿದ್ದಿರಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಬೆಳಿಗ್ಗೆ ಇಲ್ಲಿ ಮಾನ್ಯ ಯಡಿಯೂರಪ್ಪನವರು ಇರಲಿಲ್ಲ. ನಮ್ಮ ಪಕ್ಷದ ಮುಖಂಡರು ಹಾಗೂ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದಂಥ ಶ್ರೀಮಾನ್ ಖರ್ಗೆಯವರೇ ಎದ್ದು ನಿಂತು ತಮ್ಮಲ್ಲಿ ಕ್ಷಮೆಯನ್ನು ಕೋರಿದ್ದಾರೆ. ನಡೆದದ್ದೆಲ್ಲಾ ಸರಿ ಎಂದು ಅವರು ಸಮರ್ಥಿಸಿಕೊಂಡಿಲ್ಲ. ನಮ್ಮ ಇಡೀ ಪಕ್ಷದ ಅಧ್ಯಕ್ಷರು ಹೇಳಿದಾಗ ನಾವೆಲ್ಲರೂ ಒಬ್ಬೊಬ್ಬರು ಎದ್ದು ನಿಂತು ಹೇಳಬೇಕಾಗಿಲ್ಲ. ಹೇಳಬೇಕು ಎಂದರೆ ಹೇಳಿ. ಅದರಿಂದ ತಮಗೆ ತೃಪ್ತಿ ತರುವುದಾದರೆ ಎಲ್ಲರೂ ಎದ್ದು ಹೇಳುವುದಕ್ಕೆ ತಯಾರಿದ್ದೇವೆ. ನಮಗೇನೂ ಅದರ ಬಗ್ಗೆ ಖುಷಿ ಇಲ್ಲ. ತಪ್ಪನ್ನು ಒಪ್ಪಿಕೊಂಡರೆ ಒಂದೇ ತಪ್ಪಾಗುತ್ತದೆ. ತಪ್ಪನ್ನು ಮಾಡಿ ಅದನ್ನು ಸಾಧಿಸಿದರೆ ಮಾಡಿದ್ದೊಂದು ಮತ್ತು ಅದನ್ನು ಸಮರ್ಥಿಸಿಕೊಂಡದ್ದು ಹೀಗೆ ಎರಡಾಗುತ್ತದೆ. ಎರಡೆರಡು ತಪ್ಪು ಮಾಡುವುದಕ್ಕೆ ನಾವು ಸಿದ್ಧವಾಗಿಲ್ಲ. ಅವರು ಬೆಳಿಗ್ಗೆ ಇರಲಿಲ್ಲ. ಹಾಗಾಗಿ, ಅವರಿಗೆ ವಿಷಯ ಗೊತ್ತಿಲ್ಲ. ಮಾನ್ಯ ಖರ್ಗೆಯವರು ಇಲ್ಲಿ ಕುಳಿತು ಕ್ಷಮೆಯನ್ನು ಕೋರಿದ್ದಾರೆ. ನಮಗೇನೂ ಅದರ ಬಗ್ಗೆ ಹೆಮ್ಮೆ ಇಲ್ಲ. ನಡೆದದ್ದು ಎಲ್ಲಾ ಸರಿ ಎಂದು ಹೇಳುತ್ತಿಲ್ಲ.

(ಗೊಂದಲ)

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಅಧ್ಯಕ್ಷರೆ, ನೀವು ನಿರ್ಣಯ ತೆಗೆದುಕೊಂಡಿದ್ದು ತಪ್ಪು ಎಂದು ಹೇಳಿದ್ದೇವೆ. ಏಕೆಂದರೆ, ಹಿಂದಿನ ಸಭಾಧ್ಯಕ್ಷರು ಯಾರೂ ಆ ರೀತಿ ನಿರ್ಣಯ ತೆಗೆದುಕೊಂಡಿರಲಿಲ್ಲ. . . . ಅದರಿಂದ ಆ ಪರಿಸ್ಥಿತಿ ಉದ್ಭವವಾಯಿತು. ನಾವಾಗಿ ನಾವು ಏಕೆ ಸಭಾಧ್ಯಕ್ಷರ ಮೇಲೆ ಮಾಡುವುದಕ್ಕೆ ಹೋಗುತ್ತೇವೆ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ(ಜಲಸಂಪನ್ಮೂಲ): ಮಾನ್ಯ ಅಧ್ಯಕ್ಷರೆ, ನಾನು ಮೊದಲನೇ ಸಾರಿ ಶಾಸಕನಾಗಿ ಬಂದಾಗ ಶ್ರೀಮಾನ್ ರಮೇಶ್ ಕುಮಾರ್‌ರವರು ಸಭಾಧ್ಯಕ್ಷರ ಸ್ಥಾನದಲ್ಲಿ ಕುಳಿತಿದ್ದರು. ನಿಜಕ್ಕೂ ಐದು ವರ್ಷ ಪೂರ್ಣ ಅವರು ಹೇಗೆ ಸಂವಿಧಾನದ ಬಗ್ಗೆ ಗೌರವ ಕೊಟ್ಟರು, ಕಿರಿಯ ಶಾಸಕರಿಗೆ ಯಾವ ರೀತಿ ಮಾರ್ಗದರ್ಶನವನ್ನು ಮಾಡುತ್ತಿದ್ದರು, ನಾನು ಖಂಡಿತ ನೋಡಿ ತುಂಬಾ ಸಂತೋಷ ಪಡುತ್ತಿದ್ದೆ, ಆ ಸ್ಥಾನದಲ್ಲಿ ಕುಳಿತಾಗ ಅವರು ಹೇಳುತ್ತಿದ್ದಂಥದ್ದು ನಿಜಕ್ಕೂ ನಾವೆಲ್ಲಾ ಮೆಚ್ಚಬೇಕು. ಇಡೀ ರಾಜ್ಯ ವಿರೋಧ ಪಕ್ಷ ಇರಲಿ, ಆಡಳಿತ ಪಕ್ಷ ಇರಲಿ, ತಪ್ಪು ಮಾಡುವ ಸಂದರ್ಭದಲ್ಲಿ ನೇರವಾಗಿ ಅವರು ಟೀಕೆ ಮಾಡುತ್ತಿದ್ದರು. ಪ್ರತಿಯೊಂದಕ್ಕೂ ಕೂಡ ಅವರು ಸಂವಿಧಾನವನ್ನು ತರುತ್ತಿದ್ದರು. ಹೊಸದಾಗಿ ಶಾಸಕನಾಗಿ ಬಂದಾಗ ನಾನು ತುಂಬಾ ಸಂತೋಷಪಡುತ್ತಿದ್ದೆ. ಮಾನ್ಯ ಅಧ್ಯಕ್ಷರೆ, ಆ ಸ್ಥಾನದಿಂದ ಕೆಳಗಡೆ ಬಂದಾಗ ಈ ರೀತಿಯಾಗಿ ಮಾತನಾಡಿದರೆ ನನಗೆ ತುಂಬಾ ನೋವಾಗುತ್ತದೆ. ನಮ್ಮ ಹೊಸ ಶಾಸಕರು ಬಹಳ ಜನ ಬಂದಿದ್ದಾರೆ. ಅವರೆಲ್ಲಾ ಮಾತನಾಡಿದ್ದನ್ನು ನಾವು ಕೇಳಿದ್ದೇವೆ. ಏಕೆಂದರೆ, ಮನೆಯಲ್ಲಿರುವಂಥ ಅಪ್ಪ ಸೂಳೆಗಾರಿಕೆ ಮಾಡಿಕೊಂಡು ಬಂದು ತಪ್ಪಾಯಿತು ಮಗನೇ, ಕ್ಷಮಿಸುಬಿಡಪ್ಪಾ ಎಂದು ಕೇಳಿದರೆ, ಆ ಮಗ ಕೇಳತ್ತಾನೆಯೇ? ನಮ್ಮ ಅಪ್ಪ

ಮಾಡಿದ ಹಲ್‌ಕಟ್‌ಗಿರಿ ಕೆಲಸಕ್ಕೆ ಕ್ಷಮೆ ಕೇಳುತ್ತೇನೆಂದರೆ ಮಗ ಏನು ಹೇಳುತ್ತಾನೆ? (ಗೊಂದಲ) ಒಂದೇ ಒಂದು ನಿಮಿಷ. ಕೈಮುಗಿದು ಕೇಳಿಕೊಳ್ಳುತ್ತೇನೆ. ನಾನು ಇಡೀ ಕಾಂಗ್ರೆಸ್ ಪಕ್ಷಕ್ಕೆ ಆ ಮೇಲೆ ಹೇಳುತ್ತೇನೆ. ಮಾತೆತ್ತಿದರೆ ಈ ಸಂವಿಧಾನಕ್ಕೆ ಗೌರವವನ್ನು ಕೊಡುವಂಥ ವ್ಯಕ್ತಿ ಶ್ರೀಯುತ ರಮೇಶ್‌ಕುಮಾರ್‌ರವರು. ಅವತ್ತಿನಿಂದ ನೋಡುತ್ತಾ ಬಂದಿದ್ದೇನೆ. ನಮ್ಮ ಶಾಸಕರು ಮಾತನಾಡುತ್ತಿರುವಂಥ ಸಂದರ್ಭದಲ್ಲಿ ಸಂವಿಧಾನವನ್ನು ಮೇಲೆ ಎತ್ತಿ ಎತ್ತಿ ಹೇಳುತ್ತಿದ್ದಂಥ ಶ್ರೀಮಾನ್ ರಮೇಶ್‌ಕುಮಾರ್‌ರವರು ಇಲ್ಲಿ ಬಂದು ಕುಳಿತು ಧರಣಿ ಮಾಡುತ್ತಿರುವಂಥ ಸಂದರ್ಭದಲ್ಲಿ ಮೂರು ದಿನ ನಾವು ಅನುಭವಿಸಿದ್ದೇವೆ. ಸ್ವಲ್ಪ, ಐದು ನಿಮಿಷ ಅನುಭವಿಸಿ. ಇಲ್ಲಿ ಬಂದು ಕುಳಿತುಕೊಂಡು ನಿಮ್ಮ ಪಕ್ಷ ಎಂದು ಅಂದುಕೊಂಡಿರುವವರು ನಿಮ್ಮ ಜೊತೆಗೆ ಇರುವವರು ಛೇಷ್, ಅಧ್ಯಕ್ಷರೆ, 'ನಿಮ್ಮ ಮಾತು ನಾವು ಕೇಳುವುದಿಲ್ಲರೀ, ನಮ್ಮ ನಾಯಕರ ಮಾತು ಕೇಳುತ್ತೇವೆ, ಹೋಗ್ರೀ, ಕೆಳಗಿಳಿಯಿರಿ, down down Speaker, ಎಂದು ಘೋಷಣೆ, ರಾಜ್ಯಪಾಲರು ಒಂದು ಪಕ್ಷದ ಏಜೆಂಟ್. ನಿಮ್ಮ ಬಾಯಲ್ಲಿ ಆವತ್ತು–ಹುಷಾರ್, ನಾನು ಸಂವಿಧಾನವನ್ನು ಎತ್ತಿ ಹಿಡಿಯುತ್ತಿರುವುದು, ಈ ವಿಧಾನಸಭೆಗೆ ನಾವೆಲ್ಲಾ ಬಂದಿರುವುದು ಸಂವಿಧಾನದ ಪ್ರಕಾರ, ಇನ್ನೊಂದು ಸಾರಿ ಈ ಮಾತು ಹೇಳಿದರೆ ನಿಮ್ಮ ಬಗ್ಗೆ action ತೆಗೆದುಕೊಳ್ಳಬೇಕಾಗುತ್ತದೆ. ನಾನು ಇದರ ಬಗ್ಗೆ ಕಠಿಣವಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎನ್ನುವ ಮಾತನ್ನು ಆವತ್ತು ಹೇಳಿದ್ದರೆ, ನಾನು ಒಪ್ಪುತ್ತಿದ್ದೆ. ಮೂರು ದಿನಗಳಿಂದ ನಿಮ್ಮನ್ನು ನೋಡುತ್ತಿದ್ದೇನೆ. ಎಲ್ಲಿದೆ ನಿಮ್ಮ ಸಂವಿಧಾನ? ಎಲ್ಲಾ, ನಿಮ್ಮ ಆ ಸಂವಿಧಾನಕ್ಕೆ ಬೆಂಕಿ ಹಾಕಿ ಸುಡಬೇಕು. ಇಲ್ಲಾ, ನಿಮ್ಮ ಆಡಿದಂಥ ಮಹಾಪರಾಧ ಕೇಪಲ ಹೇಳುವುದಕ್ಕೆ ಮಾತ್ರ. ಆಚಾರ ಹೇಳುವುದಕ್ಕೆ ಬದನೆಕಾಯಿ ತಿನ್ನುವುದಕ್ಕೆ ಎನ್ನುವ ತರಹದಲ್ಲಿ ಆಗುತ್ತದೆ. ನಿಮ್ಮಂಥವರು ಇನ್ನು ಮುಂದೆ ಸಂವಿಧಾನವನ್ನು ಮುಟ್ಟಬೇಡಿ. ಸಂವಿಧಾನದ ಪ್ರಕಾರ ನೀವು ಹೊಸ ಶಾಸಕರಿಗೆ ಹೇಳುವ ಅಧಿಕಾರ ಇನ್ನು ಮೇಲೆ ನಿಮಗೆ ಇಲ್ಲ. ಒಬ್ಬ ಹಿರಿಯರು, ಉದಾಹರಣೆಗಳನ್ನು ಚೆನ್ನಾಗಿ ಕೊಡುತ್ತೀರಿ. ಚೆನ್ನಾಗಿ ಪ್ರತಿಪಾದನೆ ಮಾಡುವ ಶಕ್ತಿಯನ್ನು ದೇವರು ನಿಮಗೆ ಕೊಟ್ಟಿದ್ದಾನೆ. ಪ್ರತಿಪಾದನೆ ಹೇಗೆ ಬೇಕಾದರೂ ಮಾಡುತ್ತೀರಿ. ಚೆನ್ನಾಗಿ ಮಾತನಾಡುತ್ತೀರಿ. ಸಂವಿಧಾನವನ್ನು ಪೂರ್ಣ ತಿಳಿದುಕೊಂಡಿದ್ದೀರಿ. ನಿಮ್ಮ ಪ್ರತಿಕ್ರಿಯೆ ಏನು? ಯಾವ ರೀತಿ ನಡೆದುಕೊಳ್ಳುತ್ತಿದ್ದೀರಿ? ನಿಮ್ಮನ್ನು ಒಬ್ಬ ಮಾರ್ಗದರ್ಶಿ ಎಂದು ಹೇಗೆ ಶಾಸಕರು, ನಾವು follow ಮಾಡಬೇಕು? ಅದಕ್ಕೋಸ್ಕರ ನಿಮ್ಮನ್ನು ಕೈಮುಗಿದು ಕೇಳುತ್ತೇನೆ. ಒಂದು ರಾಷ್ಟ್ರೀಯ ಪಕ್ಷದ, ಅದಕ್ಕೆ ಎಷ್ಟೋ ವರ್ಷದ ಇತಿಹಾಸ ಇದೆ ಎಂದು ಹೇಳುತ್ತಾರೆ. ಸಂತೋಷ. ಆ ಪಕ್ಷದ ಒಬ್ಬ ಶಾಸಕರಾಗಿ ಮುಂದಿನ ಬೆಂಚ್‌ನಲ್ಲಿ ಕುಳಿತಿದ್ದೀರಿ. ಹಿಂದುಗಡೆ ಬೆಂಚ್‌ನಲ್ಲಿ ಕುಳಿತಿರುವಂಥ ಯಾರೋ ತಪ್ಪು ಮಾಡಿದವರ ಬಗ್ಗೆ ನಾನು ಹೇಳುವುದಿಲ್ಲ. ಮುಂದಿನ ಬೆಂಚ್‌ನಲ್ಲಿ ಕುಳಿತಿರುವಂಥ ನೀವು ನಿಮ್ಮ ಹೊಸ ಶಾಸಕರಿಗೆ–ನೀನು ಮಾಡುತ್ತಿರುವಂಥದ್ದು ತಪ್ಪು, ಆ ಸ್ಪೀಕರ್ ಹುದ್ದೆಗೆ ಈ ರೀತಿಯ ತಪ್ಪು ಘೋಷಣೆಗಳನ್ನು ಕೂಗಬೇಡಿ– ಈ ಮಾತನ್ನು ನೀವು ಹೇಳಿದ್ದರೆ ನಿಜಕ್ಕೂ ನಾನು ಮೆಚ್ಚುತ್ತಿದ್ದೆ. ನೀವು ನಿಜಕ್ಕೂ ಒಳ್ಳೆಯ ಒಬ್ಬ ಮಾರ್ಗದರ್ಶಿ ರಾಜಕಾರಣಿ ಎಂದು ಅಂದುಕೊಳ್ಳುತ್ತಿದ್ದೆವು. ಇದು ಕೇವಲ ಬೂಟಾಟಿಕೆಯ ರಾಜಕಾರಣವನ್ನು ನೀವು ಮಾಡುತ್ತಿರುವುದು. . . . . ಇನ್ನೂ ಮುಗಿದಿಲ್ಲ ಸ್ವಾಮಿ. ಸ್ವಲ್ಪ ತಡೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಬೇಗ ಮುಗಿಸಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಮೂರು–ಮೂರು ದಿನ ಸಭೆಯನ್ನು ಹಾಳು ಮಾಡಿಬಿಟ್ಟರು.

(ಗೊಂದಲ)

ಅಧ್ಯಕ್ಷರು: ಮಾನ್ಯ ಈಶ್ವರಪ್ಪನವರೆ, ಬೇಗ ಮಾತನಾಡಿ ಮುಗಿಸಿ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು: ಸಂವಿಧಾನದ ಹೆಸರು ಹೇಳಿಕೊಂಡು ನೀವು ಅಪಚಾರ ಮಾಡಲಿಲ್ಲವೇ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಬೇಡ ಬಿಡಿ ಹೋಗಲಿ.

(ಗೊಂದಲ)

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಶ್ರೀರಾಮರೆಡ್ಡಿಯವರು ಇನ್ನೂ ಭಾಷಣ ಮುಗಿಸಿಲ್ಲ.

(ಗೊಂದಲ)

ಅಧ್ಯಕ್ಷರು: ಈಶ್ವರಪ್ಪನವರೆ, ಬೇಗ ಮುಗಿಸಿ. ಚರ್ಚೆ ಸುಮ್ಮನೆ ಎಲ್ಲಿಂದ ಎಲ್ಲಿಗೋ ಹೋಗುತ್ತಿದೆ.

ಶ್ರೀ ಮಹಿಮಾ ಜೆ. ಪಟೇಲ್: ನಾನು ಮಾತನಾಡಿದ್ದಕ್ಕೆ ಪ್ರತಿಕ್ರಿಯೆಯಾಗಿ ಹಿರಿಯ ಸದಸ್ಯರು ಮಾತನಾಡಿದ್ದಾರೆ; ನಾನು ಏನೇನು ಮಾತನಾಡಿದ್ದೇನೆ ಅದಕ್ಕೆ ಸಂಪೂರ್ಣವಾಗಿ ನಾನು ಬದ್ಧ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಹಿಮಾ ಪಟೇಲ್‌ರವರೆ, ಒಂದ್ನಿಮಿಷ. ಆಮೇಲೆ ಮಾತನಾಡಿ. ಮಾನ್ಯ ಈಶ್ವರಪ್ಪನವರು ಮುಂದುವರಿಸುತ್ತಾರೆ. ಮಾತು ಮಧ್ಯದಲ್ಲಿ ಮುರಿದುಹೋಗುತ್ತದೆ. ಅವರದ್ದು ಏನೇನಿದೆ ಎಲ್ಲಾ ಪೂರ್ತಿ ಹೊರಗೆ ಬಂದರೆ ನನಗೇನಾದರೂ ಶಕ್ತಿ, ಚೈತನ್ಯ ಇದ್ದರೆ ಉತ್ತರ ಹೇಳುತ್ತೇನೆ. ಇಲ್ಲದಿದ್ದರೆ, ಕ್ಷಮಾಪಣೆ ಕೇಳುತ್ತೇನೆ. ತಾವು ಮುಂದುವರೆಸಿ.

ಶ್ರೀ ಕೆ.ಎಸ್. ಈಶ್ವರಪ್ಪ: ಹೇಳುವುದಕ್ಕೆ ಅವರಿಗೆ ಶಕ್ತಿ, ಚೈತನ್ಯ ಇದೆ. ನಾನು ಆಗಲೇ ಹೇಳಿದೆ, ನಿಮ್ಮ ಮಾತಿಗೆ ಇನ್ನು ಮೇಲೆ ಬೆಲೆ ಇಲ್ಲ. ನಿಮ್ಮ ಶಕ್ತಿ, ಚೈತನ್ಯವನ್ನು ತೆಗೆದುಕೊಂಡು ನಾವು ಏನು ಮಾಡೋಣ? ನೀವು ಯಾವ ರೀತಿ ನಡೆದುಕೊಂಡಿದ್ದೀರಿ ಎಂಬುದನ್ನು ನಮ್ಮ ಶಾಸಕರು ನೋಡಿದ್ದಾರೆ. ಯಾವ ರೀತಿ ನೀವು ನಡೆದುಕೊಂಡಿದ್ದೀರಿ ಎಂಬುದನ್ನು ಇಡೀ ಕರ್ನಾಟಕ ರಾಜ್ಯದ ಜನ ನೋಡಿದ್ದಾರೆ. ಅವರ ಮೂಲಕ ನಿಮಗೆ ನೇರವಾಗಿ ಹೇಳುತ್ತಿದ್ದೇನೆ. ಏಕೆಂದರೆ, ಸಾರ್ವಜನಿಕ ಸಭೆಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ನಾವು ಟೀಕೆ ಮಾಡುತ್ತೇವೆ. ಅವರು ಮಾಡಿದ ರಾಜಕಾರಣ ಏನೆಂದು ನಾವು ರಾಜ್ಯದಲ್ಲಿ ಹೇಳುತ್ತೇವೆ. ನಾವು ಮಾಡಿದ್ದ ತಪ್ಪು ಸಂವಿಧಾನದ ಪ್ರಕಾರ ಎಂದು ಅವರು ಹೇಳಿಕೊಂಡು ಬರಲಿ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಮಾನ್ಯ ಈಶ್ವರಪ್ಪನವರೆ, ಆವತ್ತು ಅಲ್ಲಿ ಕುಳಿತು ಏನು ಮಾತನಾಡಿದ್ದಿರೇಂದು ನಿಮಗೆ ಗೊತ್ತಲ್ಲವೇ? ಅಲ್ಲಿ ಮೂರನೇ ಸಾಲಿನಲ್ಲಿ ಕುಳಿತು ಏನು ಮಾತನಾಡಿದ್ದೀರಿ? ಅದು ಕಡೆಗೆ ಏನಾಯಿತು ಎಂದು ಗೊತ್ತಲ್ಲವೇ? ಅದು ಕಿರಿಯ ರಾಜಕಾರಣಿಗಳಿಗೆ ಮಾರ್ಗದರ್ಶನ ಮಾಡಿದ ಹಾಗೆಯೇ?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ನಾವು ಹೊಸದಾಗಿ ಅಧಿಕಾರಕ್ಕೆ ಬಂದವರು. ಅವರು ಬಹಳ ವರ್ಷಗಳಿಂದ ಅಧಿಕಾರ ನಡೆಸುತ್ತಿದ್ದವರು. ಅವರು ನಮಗೆ ಬುದ್ಧಿ ಹೇಳಬೇಕು. ನಾವು ನಡೆದುಕೊಂಡೆವೆಂದು ನೀವೂ ನಡೆದುಕೊಳ್ಳುತ್ತೀರಾ? ತಮ್ಮ ಮುಖಾಂತರ ಕುಮಾರ್ ಬಂಗಾರಪ್ಪನವರಿಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಇದನ್ನೇ ಮುಂದುವರಿಸಿಕೊಂಡು ಹೋಗುವುದರಲ್ಲಿ ಏನೂ ಅರ್ಥವಿಲ್ಲ. ದಯಮಾಡಿ, ಎಲ್ಲರಲ್ಲೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಚರ್ಚೆ ಒಂದು ಕಡೆಯಿಂದ ಇನ್ನೆಲ್ಲಿಗೋ ಹೋಗುತ್ತಿದೆ. ಎಲ್ಲಾ ಮುಗಿದ ವಿಚಾರಗಳು. ಮತ್ತೆ ಮತ್ತೆ ಪ್ರಸ್ತಾಪ ಮಾಡಿದರೆ ಏನೂ ಉಪಯೋಗವಿಲ್ಲ. Postmortem ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ಸನ್ಮಾನ್ಯ ರಮೇಶ್‌ಕುಮಾರ್‌ರವರಿಗೆ ಪ್ರಾರ್ಥನೆ ಮಾಡುತ್ತೇನೆ. ಈ ವಿಧಾನಮಂಡಲದಲ್ಲಿ, ವಿಧಾನ ಸಭೆಯಲ್ಲಿ ಸಾಕಷ್ಟು ಬಾರಿ ಸಾಕಷ್ಟು ಚರ್ಚೆಗಳಾಗಿವೆ. ಸಂವಿಧಾನಕ್ಕೆ ಎಷ್ಟು ಗೌರವ ಕೊಡಬೇಕು, ಹಿರಿಯರು ನೋಡುತ್ತಿರುತ್ತಾರೆ. ಅಧ್ಯಕ್ಷರ ಪೀಠಕ್ಕೆ ಎಷ್ಟು ಗೌರವ ಕೊಡಬೇಕು ಎಂಬುದನ್ನು ನಮ್ಮೆಲ್ಲಾ ಯುವ ಶಾಸಕರು ನೋಡುತ್ತಿರುತ್ತಾರೆ, ರಾಜ್ಯದ ಜನರು ನೋಡುತ್ತಿರುತ್ತಾರೆ. ರಾಜ್ಯಪಾಲರ ಬಗ್ಗೆ ಯಾವ್ಯಾವ ರಾಜಕೀಯ ಪಕ್ಷಗಳು, ಯಾವ ರೀತಿ ನಡೆದುಕೊಳ್ಳುತ್ತಿವೆ ಎಂಬುದನ್ನು ಜನರು ನೋಡುತ್ತಿರುತ್ತಾರೆ. ಇಂಥ ಸಂದರ್ಭದಲ್ಲಿ ಹಿರಿಯರು, ಸಂವಿಧಾನದ ಬಗ್ಗೆ ಸಾಕಷ್ಟು ತಿಳುವಳಿಕೆ ಇರುವಂಥ ರಮೇಶ್ ಕುಮಾರ್‌ರವರು ಕ್ಷಮೆ ಕೇಳಿದ್ದೇವೆ, ನಮ್ಮ ರಾಜ್ಯಾಧ್ಯಕ್ಷರು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ದೊಡ್ಡತನ. ನಾನು ಅದರ ಬಗ್ಗೆ ಮೆಚ್ಚುತ್ತೇನೆ. ಇಲ್ಲವೆಂದಲ್ಲ. ಆದರೆ, ಇಡೀ ಪಕ್ಷ ಏನು ಮಾಡಿತು ಎಂಬುದನ್ನು ರಾಜ್ಯದ ಜನ ನೋಡುತ್ತಿದ್ದಾರೆ. ನಾನು ಆವತ್ತು ಮಾತನಾಡುತ್ತಿರುವಂಥ ಸಂದರ್ಭದಲ್ಲಿ ನಾನೂ ಕೂಡ ನನ್ನ ಮಿತ್ರರಾದಂಥ ರಾಯರೆಡ್ಡಿಯವರು ಮಾತನಾಡಿದಾಗ ತಪ್ಪು ಎಂದು ಅನಿಸಿತು. ಆ ನಿಮಿಷದಲ್ಲಿಯೇ ನಾನು ಕ್ಷಮೆ ಕೇಳಿಬಿಟ್ಟೆ. ಈ ಪ್ರಶ್ನೆ ಅಲ್ಲ. ನಾವು ಮೂರು-ಮೂರು ದಿನ ವಿಧಾನಸಭೆಯ ಸಮಯವನ್ನು ಹಾಳುಮಾಡಲಿಲ್ಲ. ಅದಕ್ಕೋಸ್ಕರ ನಾನು ಹೇಳುವುದಕ್ಕೆ ಹೊರಟಿರುವುದು, ಇವತ್ತು ಏನು ಘಟನೆ ನಡೆದಿದೆ, ಈ ಮೂರು ದಿನಗಳಿಂದ ನಡೆದಿರುವ ಘಟನೆ ಇನ್ನು ಮುಂದೆ ಹಿರಿಯರಾದಂಥ ತಾವು ಶಾಸಕರುಗಳಿಗೆ, ನಿಮ್ಮ ಪಕ್ಷದ ಶಾಸಕರುಗಳಿಗೆ, ಯಾವ ರೀತಿ ನಡವಳಿಕೆ ಆಗುತ್ತದೆ ಎನ್ನುವ ಸಂದರ್ಭದಲ್ಲಿ ತಾವು ಮಾರ್ಗದರ್ಶನ ಮಾಡಿ. ಹೊಸದಾಗಿ ಬಂದಿರುವಂಥ ಶಾಸಕರೂ ಕೂಡ ನಿಮ್ಮ ನಡವಳಿಕೆ ನೋಡಿಕೊಂಡು ಕಲಿತುಕೊಳ್ಳುವಂಥ ರೀತಿಯಲ್ಲಿ, ಸಂವಿಧಾನ, ಹೇಳಿಕೆ ಮತ್ತು ಕಾರ್ಯರೂಪ ಎರಡೂ ಒಂದೇ ರೂಪದಲ್ಲಿ ಆಗಲಿ ಎಂಬುದು ನನ್ನ ಪ್ರಾರ್ಥನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಮಾನ್ಯ ರಮೇಶ್‌ಕುಮಾರ್‌ರವರು ಹಿರಿಯ ರಾಜಕಾರಣಿಗಳು ಮತ್ತು ಎಲ್ಲಾ ದಿಕ್ಕಿನಲ್ಲೂ ಕೂಡ ಅನುಭವಿಗಳಿದ್ದಾರೆ. ಯಾವುದೇ ರೀತಿಯಲ್ಲೂ ಕೂಡ ಅವರು He is a role model for us. So, clear ಆಗಿ he is a role model for us. xxxxx He is a role model for all the younger generation and we have accepted him as one of our . . . . . .

(ಗೊಂದಲ)

Sri H.C. Balakrishna: For the younger generation of congress Party. That's all. Not for all the younger generations.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು: ಈ role model ಅನ್ನು ನಾವು ಕಳೆದ ಮೂರು ದಿವಸಗಳಿಂದ ನೋಡುತ್ತಿದ್ದೇವೆ. ನಾವೇನೂ ನೋಡಿಲ್ಲ ಎಂದು ಹೇಳಬೇಡಿ. ಕಳೆದ ಮೂರು ದಿವಸಗಳಿಂದ ನೀವು ಏನು ಹೇಳುತ್ತಿದ್ದೀರೋ ಅದನ್ನು ನಾವಲ್ಲ, ಇಡೀ ರಾಜ್ಯದ ಜನತೆ ನೋಡಿದೆ. ಅದರ ಬಗ್ಗೆ ಏನೂ ಮಾತು ನೀವು ಹೇಳಬೇಕಾಗಿಲ್ಲ.

(ಗೊಂದಲ)

ಇಡೀ ಜನತೆ ನೋಡಿದೆ. ನಿಮ್ಮ model ಎಂಥದ್ದು ಎನ್ನುವುದನ್ನು ಜನತೆ ನೋಡಿದೆ. ಜನತೆ ತೀರ್ಮಾನ ಮಾಡುತ್ತಾರೆ. ನೀವು ಅದರ ಬಗ್ಗೆ ಇಲ್ಲಿ ಏನೂ ಉಲ್ಲೇಖ ಮಾಡಬೇಕಾಗಿಲ್ಲ.

(ಗೊಂದಲ)

ಗದ್ದಲ ಮಾಡಿರಬಹುದು. ಗದ್ದಲ ಮಾಡಿ ಇಲ್ಲಿಗೆ ಬಂದಿದ್ದೇವೆ. ಆದರೆ, ನೀವು rule ಮಾಡಿಕೊಂಡು ಅಲ್ಲಿಗೆ ಹೋಗಿದ್ದೀರಿ. ಎಷ್ಟರಮಟ್ಟಿಗೆ ಎನ್ನುವುದನ್ನು ಯೋಚನೆ ಮಾಡಿ.

(ಗೊಂದಲ)

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಅಧ್ಯಕ್ಷರೆ, ರಮೇಶ್‌ಕುಮಾರ್‌ರವರು ನಾಲ್ಕೂವರೆ ವರ್ಷಗಳ ಕಾಲ ಸಭಾಧ್ಯಕ್ಷರಾಗಿ ಸಂವಿಧಾನ ವಿರೋಧಿಯಾದ ಯಾವುದೇ ಒಂದು ತೀರ್ಪನ್ನೂ ಕೂಡ ಕೊಟ್ಟಿಲ್ಲ. x x x x

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ): ಮಾನ್ಯ ಅಧ್ಯಕ್ಷರೆ, ನಾನು ನಿಮ್ಮ ಕ್ಷಮೆಯನ್ನು ಕೋರುತ್ತೇನೆ ಏಕೆಂದರೆ, ಇಂಥ ವಿಚಾರಗಳಲ್ಲಿ ಸಮಯ ಹೋಗಬಾರದು. ಶ್ರೀಮಾನ್ ಈಶ್ವರಪ್ಪನವರು ಹೇಳಿದ ಎಲ್ಲಾ ಮಾತುಗಳನ್ನು ನಾನು ಕೇಳಿದೆ. ಬಹಳ ಗಂಭೀರವಾದಂಥ ಆರೋಪವನ್ನೇ ಹೊರಿಸಿದ್ದಾರೆ. ನಾನು ತಮ್ಮ ಮುಖಾಂತರ ಅವರಲ್ಲಿ ಇಷ್ಟೇ ನಿವೇದಿಸಿಕೊಳ್ಳುತ್ತೇನೆ, ಯಾವ ಕರ್ತವ್ಯವನ್ನು ನಾನು ಒಪ್ಪಿಕೊಂಡಿರುತ್ತೇನೆ, ಯಾವ ಜವಾಬ್ದಾರಿಯನ್ನು ನಾನು ನಿರ್ವಹಿಸುತ್ತಾ ಇರುತ್ತೇನೆ, ಆ ತಕ್ಷಣಕ್ಕೆ ಆ ಕೆಲಸವನ್ನು ಶ್ರದ್ಧೆಯಿಂದ ನಿಷ್ಠೆಯಿಂದ ಮಾಡತಕ್ಕಂಥದ್ದು ನನ್ನ ಸ್ವಭಾವ. ನನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ನಾನು ಮಾಡುವುದಿಲ್ಲ. ಅಲ್ಲಿ ಕುಳಿತಾಗ ಹೇಗೆ ಕೆಲಸ ಮಾಡಬೇಕು, ಹೇಗೆ ಎಲ್ಲರನ್ನೂ ಸಮಾನರಾಗಿ ಕಾಣಬೇಕು, ಹೊಸಬರಿಗೆ ಹೇಗೆ ಪ್ರೋತ್ಸಾಹ ಕೊಡಬೇಕು, ಅಧಿಕಾರದಲ್ಲಿದರೂ ಕೂಡ ಒಂದು ವೇಳೆ ತಪ್ಪು ಮಾಡಿದರೆ ಅವರಿಗೆ ಹೇಗೆ ಕಿವಿ ಮಾತು ಹೇಳಬೇಕು, ಇದರ ಬಗ್ಗೆ ನಾನು ಆ ಸ್ಥಾನದಲ್ಲಿ ಕುಳಿತಾಗ ತಾವು ನನ್ನನ್ನು ಗಮನಿಸಿರಬಹುದು, ನಾನು ಆ ಕೆಲಸವನ್ನು ಇಲ್ಲಿ ಇದ್ದು ಮಾಡಬೇಕೆಂದು ಈಶ್ವರಪ್ಪನವರು ನಿರೀಕ್ಷೆ ಮಾಡಿದರೆ, ಹೇಗೆ? ನಾನು ಇವತ್ತು ವಿರೋಧ ಪಕ್ಷದಲ್ಲಿರತಕ್ಕಂಥ ಒಬ್ಬ ಸಾಮಾನ್ಯ ಸದಸ್ಯ. ಆದುದರಿಂದ ನೀವು ನನ್ನಿಂದ ಏನೇನೆಲ್ಲಾ ನಿರೀಕ್ಷೆ ನನ್ನಿಂದ ಮಾಡಿದಿರಿ ಅದನ್ನೆಲ್ಲಾ ಮಾಡುವುದಕ್ಕೆ ನನಗೆ ನನ್ನದೇ ಆದಂಥ ಇತಿಮಿತಿಗಳಿವೆ. ಅದರ ಔಟ್ ಆಫ್ ಕಾಂಟೆಸ್ಟ್ ಆದರೂ ಹೇಳುತ್ತೇನೆ, ಈ ವಿಷಯ ಎಲ್ಲಾ ಬಂದಾಗ

x ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ನಮ್ಮ ಕೆಲವು ಯಂಗ್ ಗೆಳೆಯರನ್ನು ಕರೆದುಕೊಂಡು ಹೋಗಿ ಕೂಡಿಸಿಕೊಂಡು ಕೌಲ್ ಅಂಡ್ ಶಕ್ದರ್ ಇಟ್ಟುಕೊಂಡು ಕಾನ್‌ಸ್ಟಿಟ್ಯೂಷನ್ ಇಟ್ಟುಕೊಂಡು ರೂಲ್ಸ್ ಆಫ್ ಪ್ರೋಸಿಜೆರ್ ಇಟ್ಟುಕೊಂಡು ಅವರಿಗೆ ಎಲ್ಲಾ ನಾನು ಟ್ರೈನಿಂಗ್ ಕೊಟ್ಟೆ. ಈ ರೀತಿ ಇರುತ್ತದೆ. ಈ ರೀತಿ ಮಾತನಾಡಬೇಕು, ಸನ್ನಿವೇಶ ಹೀಗೆ ಬರುತ್ತೆ, ಎನ್ನುವಂಥ ಮಾತನ್ನು ಹೇಳಿದೆ. ನಾನು ಈ ಸದನಕ್ಕೆ 1978ನೇ ಇಸ್ವಿಯಲ್ಲಿ ಮೊದಲನೆ ಬಾರಿಗೆ ಬಂದ್, 1979 ರಲ್ಲಿ ಶ್ರೀವಾನ್ ದೇವರಾಜ್ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದರು. ನಾವು ಆಡಳಿತದ ಪಕ್ಷದಲ್ಲಿದ್ದೆವು. ಆಗ ಜನತಾ ಪಕ್ಷ ಮೇಲೆ ಕೇಂದ್ರದಲ್ಲಿ ಆಡಳಿತ ನಡೆಸುತ್ತಿತ್ತು, ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದಲ್ಲಿ ಆಗತಕ್ಕಂಥ ಅಪರಾಧಗಳನ್ನು ತನಿಖೆ ಮಾಡಬಹುದಾ ಮಾಡಬಾರದು ಎನ್ನತಕ್ಕಂಥ ವಿಚಾರದಲ್ಲಿ ಒಪ್ಪಿಗೆಯನ್ನು ಹಿಂದಕ್ಕೆ ತೆಗೆದುಕೊಂಡಿದ್ದರ ಬಗ್ಗೆ ದೊಡ್ಡ ಜಿಜ್ಞಾಸೆ ಬಂತು. ಬಿ.ವಿ. ರಾಮಚಂದ್ರರೆಡ್ಡಿಯವರು, ಎಕ್ಸ್ ಎಂಎಲ್‌ಎ ಅವರು ಯಾವ ಪಕ್ಷದಲ್ಲಿ ಇದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಮೈಕಲ್ ಫರ್ನಾಂಡೀಸ್ ಹಾಗೂ ಇನ್ನೂ ಅನೇಕ ಜನ ಸದಸ್ಯರು ಆಗ ವಿರೋಧ ಪಕ್ಷದಲ್ಲಿ ಇದ್ದರು. ಸ್ಪೀಕರ್ ಛೇಂಬರ್ಸ್ ಸೀಟ್ ಏನು ಇದೆ, ಆ ಛೆಂಬರ್ಸ್ ವರೆಗೆ ಹತ್ತಿ, ಆಗ ಪಿ. ವೆಂಕಟರಮಣರವರು ಸ್ಪೀಕರ್ ಆಗಿದ್ದರು. ಅವರ ಕೋಟಿನ ಬಟನ್‌ಗಳನ್ನು ಕಿತ್ತು ಬಿಸಾಕಿದರು. ಅವತ್ತು ಜನತಾ ಪಕ್ಷದಲ್ಲಿ ಇದ್ದಂಥವರು, ಬೆಲ್ ಬಿಸಾಡಿದರು, ಸ್ಪೀಕರ್‌ರವರನ್ನು ತಳ್ಳಿದರು, ಮಾರ್ಷಲ್‌ರವರು ಬಂದು ಅವರನ್ನು ಫಿಜಿಕಲ್ಲಾಗಿ ಒಳಗೆ ಕರೆದುಕೊಂಡು ಹೋಗಿದ್ದನ್ನು ನಾವು ಕಂಡಿದ್ದೇವೆ. ಅದಕ್ಕೆ ಮೊದಲು 1967 ರಿಂದ 70 ರ ಮಧ್ಯೆದಲ್ಲಿ ದಿ: ದಯಾನಂದ ಸಾಗರ್‌ರವರು, ಅಜೀಜ್ ಸೇಠ್‌ರವರು, ಅವರೆಲ್ಲರೂ ಕೂಡ ಈ ಸದನದ ಸದಸ್ಯರಾಗಿದ್ದಂಥ ಸಂದರ್ಭದಲ್ಲಿ ಲಾಸ್ಟ್‌ಗೆ ಎಲ್ಲಿಗೆ ಹೋದರು ಅಂದರೆ ಆ ಅಧ್ಯಕ್ಷರ ಛೇರ್‌ನಲ್ಲಿ ಹೋಗಿ ಅವರು ಕುಳಿತುಕೊಂಡು ಬಿಟ್ಟರು. ತಾವು ಹೇಳಿದಿರಿ, ಅಪ್ಪ ಸೂಳೆಗಾರಿಕೆ ಮಾಡಿಬಿಟ್ಟು ಮಕ್ಕಳಿಗೆ ಬಂದು ಬುದ್ಧಿವಾದ ಹೇಳಿದರು ಎಂದು ಹೇಳಿದಿರಿ, ಮಾಡಬಾರದು, ಸೂಳೆಗಾರಿಕೆ ಮಾಡತಕ್ಕಂಥ ಅಪ್ಪನಿಗೆ ಮಕ್ಕಳಿಗೆ ಬುದ್ಧಿವಾದ ಹೇಳತಕ್ಕಂಥ ಹಕ್ಕು ಖಂಡಿತಾ ಇರುವುದಿಲ್ಲ, ನೀವು ಹೇಳುವ ಮಾತು ನೂರಕ್ಕೆ ನೂರು ಸತ್ಯ. ಆದರೆ ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆ ಮಾಡುವುದು ಸೂಳೆಗಾರಿಕೆ ಎನ್ನುವುದು ನಿಮ್ಮ ಅರ್ಥ ಆದರೆ ಪ್ರಜಾಪ್ರಭುತ್ವಕ್ಕೆ ನನಗೆ ಬೇರೆ ಅರ್ಥ ಇದೆ ಈಶ್ವರಪ್ಪನವರೆ. ಏನು ಮಾಡಬೇಕು ಪ್ರತಿಭಟನೆ ಮಾಡದೆ? ಉದ್ವಿಗ್ನತೆಯಲ್ಲಿ ಕೆಲವು ತಪ್ಪು ಮಾಡಿರಬಹುದು, ಅಸಭ್ಯವಾಗಿ ವರ್ತನೆ ಮಾಡಿರಬಹುದು, ಮನುಷ್ಯ ಗೊತ್ತಿದ್ದೋ ಗೊತ್ತಿಲ್ಲದೋ ತಪ್ಪು ಮಾಡಿದಾಗ ಅದಕ್ಕೆ ಶಿಕ್ಷೆ ಏನು ಕ್ಷಮೆ ಕೋರತಕ್ಕಂಥದ್ದು, ನಿಮ್ಮ ಕ್ಷಮೆ ನಮಗೆ ಬೇಕಾಗಿಲ್ಲ ಎಂದರೆ ನಾವು ಇನ್ನು ಏನು ಮಾಡೋಣ? ಹೋಗಲಿ ಎಲ್ಲರನ್ನೂ ಗಿಲಿಟಿನ್‌ಗೆ ಹಾಕಿಬಿಡೋಣವೆ? ಹಿಟ್ಲರ್ ಅದೇ ತರಹ ಮಾಡಿದ; ಹಾಗೆ ಮಾಡುವುದಕ್ಕೆ ಸಾಧ್ಯ ಇದ್ದರೆ ಎಲ್ಲರನ್ನೂ ಲೈನಾಗಿ ನಿಲ್ಲಿಸಿ ಅವರ್ಯಾರ್ಯಾರು ಮೊನ್ನೆ ಹಾಗೆ ಮಾಡಿದಾದರೆ ಅವರದ್ದು ಎಲ್ಲಾ ಕತ್ತು ತೆಗೆದು ಬಿಡೋಣ, ಬೈ ಎಲೆಕ್ಷನ್ಸ್ ಅಗುತ್ತೆ, ಆಗ ಎಲ್ಲಾ ಒಳ್ಳೆಯ ಉತ್ತಮವಾದಂಥ ತತ್ವಗಳನ್ನು ನೀವು ಬೋಧನೆ ಮಾಡಬಹುದು, ಸತ್‌ಸಂಪ್ರದಾಯ ಇರುವಂಥವರೆಲ್ಲಾ ಸದನದ ಒಳಗೆ ಬರುತ್ತಾರೆ, ಆಗ ರಾಮರಾಜ್ಯ ಸ್ಥಾಪನೆಯಾಗುತ್ತದೆ, ಹಾಗೆ ಮಾಡೋಣವೆ? ಹೇಳಿ, ನನಗೆ ಇಷ್ಟು ದುಃಖವಾಗುತ್ತದೆ, ರೇವುನಾಯಕ್ ಬೆಳಮಗಿಯವರು ಅಲ್ಲಿ ಕುಳಿತಿದ್ದಾರೆ ಕೇಳಿ: ಅವರು ಕ್ಷೇತ್ರದಲ್ಲಿ ತೀವ್ರ ಬರಗಾಲ ಕುಡಿಯುವ ನೀರಿನ ಸಮಸ್ಯೆಯಿತ್ತು. ಮೊದಲನೆಬಾರಿಗೆ ಅವರು ಸದನಕ್ಕೆ ಬಂದಿದ್ದರು, ಪಾಪ ಅವರಿಗೆ ತನ್ನ ಕಷ್ಟ ಹೇಳಿಕೊಳ್ಳುವುದಕ್ಕೆ ಹೇಗೆ ಎಂದು ಗೊತ್ತಿಲ್ಲ,

ಅವರು ಅಂಜುತ್ತಾ ಅಂಜುತ್ತಾ ನನ್ನ ಹತ್ತಿರ ಬಂದರು, ಅವರಿಗೆ ಧೈರ್ಯ ತುಂಬಿ ಅಲ್ಲಿಗೆ ಬನ್ನಿ ಸೀಟ್‌ನಲ್ಲಿ ಕುಳಿತುಕೊಳ್ಳಿ ಎಂದು ಹೇಳಿ ಅವರ ಸಬ್ಜೆಕ್ಟ್ ಅನ್ನು ಅವರ ಹೆಸರಿಗೆ ತೆಗೆದುಕೊಂಡು ಹಾಕಿ, ಅವರನ್ನು ಕರೆದು ಮಂತ್ರಿಗಳನ್ನು ನಿಲ್ಲಿಸಿ ಅವರಿಗೆ ತಕ್ಷಣ ವ್ಯವಸ್ಥೆ ಮಾಡಿಸುತ್ತೇವೆಂದು ಹೇಳಿದಾಗ ಅವರು ಪುನಃ ನನ್ನ ಹತ್ತಿರ ಬಂದು ಥ್ಯಾಂಕ್ಸ್ ಹೇಳಿದರು, ಆ ದಿವಸ ಅವರು ಬಿಜೆಪಿಯಲ್ಲಿ ಇದ್ದರು. ತತ್ವದ ಕಾರಣಕ್ಕಾಗಿ ರಾಜಕೀಯವಾಗಿ ನಿಮ್ಮನ್ನು ವಿರೋಧ ಮಾಡುವುದು ಬೇರೆ. ಅಧಿಕಾರ ಸ್ಥಾನದಿಂದ ಅಧಿಕಾರವನ್ನು ಚಲಾಯಿಸುವಾಗ ನಿಷ್ಪಕ್ಷಪಾತದಿಂದ ನಡೆದುಕೊಳ್ಳತಕ್ಕಂಥದ್ದು ಬೇರೆ. ನನ್ನ ಮನಸ್ಸಿಗೆ ನಾನು ತೃಪ್ತಿಯಾಗಿ ನಡೆದುಕೊಂಡಿದ್ದೇನೆ. ಇಲ್ಲಿ ಆಗತಕ್ಕಂಥ ಗಲಾಟೆಯನ್ನು ನಿಭಾಯಿಸತಕ್ಕಂಥದ್ದಕ್ಕೆ ಯಾವ ವಿಶೇಷವಾದ ಅಧಿಕಾರವನ್ನು ನನ್ನ ಪಕ್ಷ ಆಗಲಿ, ನೀವಾಗಲಿ, ಸದನವಾಗಲಿ ನನಗೆ ಕೊಟ್ಟಿರಲಿಲ್ಲ. ನಾನು ರೋಲ್ ಮಾಡೆಲ್ ಆಗಬೇಕೆಂಬ ಆಸೆ ನನಗೇನೂ ಇಲ್ಲ. ನನಗೆ ನನ್ನ ಮುಖ ಕನ್ನಡಿಯಲ್ಲಿ ನೋಡಿ ಕೊಂಡಾಗ ಲಕ್ಷಣವಾಗಿ ಕಂಡರೆ ನನಗೆ ಅಷ್ಟೇ ಸಾಕು. ನಾನು ಈಗ ಹೋಗಿ ಹೀರೋ ಆಗಬೇಕೆನ್ನುವ ಅಗತ್ಯ ನನಗಿಲ್ಲ. ಆದರೆ ತಮ್ಮಲ್ಲಿ ನಾನು ಅತ್ಯಂತ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ, ಮಾತನಾಡುವಾಗ ಬಹಳ ದುಡುಕುತ್ತೀರಿ, ಬೇಕಾದರೆ ಆ ಸಂವಿಧಾನವನ್ನು ಬೆಂಕಿಹಚ್ಚಿ ಸುಟ್ಟುಹಾಕಿಬಿಡೋಣ ಎಂದು ಈಗ ತಾನೇ ಹೇಳಿದಿರಿ. ಎಷ್ಟು ಜನ ತ್ಯಾಗ, ಬಲಿದಾನ ಮಾಡಿ ರಕ್ತ ಸುರಿಸಿ ಪ್ರಾಣಕೊಟ್ಟು ತಮ್ಮ ಸರ್ವಸ್ವವನ್ನು ಮರೆತು ಆ ಸಂವಿಧಾನವನ್ನು ಸೃಷ್ಟಿ ಮಾಡಿದ್ದಾರೆ. ಬೇಗ ಸುಟ್ಟು ಹಾಕುವುದಕ್ಕೆ ಬಿಡುವುದಿಲ್ಲ ಈಶ್ವರಪ್ಪನವರೆ. ಅದನ್ನು ಸುಟ್ಟು ಹಾಕುವುದಕ್ಕೆ ನಿಮಗೆ ಅರ್ಜೆಂಟ್ ಇರಬಹುದು, ನಾವು ಬಿಡುವುದಿಲ್ಲ, ನಮಗೆ ಅರ್ಥವಾಗುತ್ತೆ ನಿಮ್ಮ ಅರ್ಜೆಂಟ್. ನೀವು ಸ್ವಾತಂತ್ರ್ಯದ ಪ್ರಾರಂಭದಲ್ಲೇ ಇದಕ್ಕೆ ಪ್ರತಿಯಾದಂಥ ಸಂವಿಧಾನವನ್ನು ರೂಪಿಸಲು ಹೊರಟಿರಿ. ನಿಮ್ಮ ಕೈಯಿಗೆ ಅಧಿಕಾರ ಬಂದಾಗ ಅದನ್ನು ಪುನರ್‌ವಿಮರ್ಶೆ ಮಾಡಬೇಕೆಂದು ಪ್ರಯತ್ನ ಪಟ್ಟಿರಿ; ಇವತ್ತು ಅವಕಾಶ ಸಿಕ್ಕರೆ ಏನೆಲ್ಲಾ ಮಾಡಬೇಕೆಂದು ಇದ್ದೀರಿ, ಆದರೆ ಅದು ನಮಗೆ ಪರಮಪವಿತ್ರ ಗ್ರಂಥ, ಅದಕ್ಕೆ ಯಾವ ಅಪಮಾನವನ್ನು ನಾವು ಸಹಿಸುವುದಿಲ್ಲ. ಮತ್ತೊಮ್ಮೆ ತಮಗೆ ಸ್ಪಷ್ಟೀಕರಣ ಕೊಡುತ್ತೇನೆ, ಆಶ್ವಾಸನೆ ಕೊಡುತ್ತೇನೆ, ನನಗೆ ಯಾವ ಅವಕಾಶ ಸಿಕ್ಕಿದರೂ ಕೂಡ ನನ್ನಲ್ಲಿರತಕ್ಕಂಥ ತಿಳುವಳಿಕೆಯನ್ನು ಹಂಚಿಕೊಳ್ಳಲಿಕ್ಕೆ ಒಳ್ಳೆಯದನ್ನು ಹೇಳಲಿಕ್ಕೆ ಆ ಪಕ್ಷ ಈ ಪಕ್ಷ ಎನ್ನುವ ಭೇದ ನೋಡದೆ, ಹೇಳಲಿಕ್ಕೆ ನಾನು ಯಾವಾಗಲೂ ಪ್ರಯತ್ನ ಮಾಡುತ್ತೇನೆ; ಉದ್ದೇಶಪೂರ್ವಕವಾಗಿ ಸ್ಥಾನದಲ್ಲಿ ಅಲ್ಲಿಲ್ಲ ಇಲ್ಲಿ ಇದ್ದೇನೆಂದು ಹೇಳಿ ಅಲ್ಲಿ ಹೇಳಿದ್ದನ್ನೆಲ್ಲಾ ಮರೆತು ನೀವು ಹೇಳಿದಂತೆ, ಬದನೆಕಾಯಿ ತಿನ್ನಬಾರದು ಎಂದರೆ ನಾನು ತಿನ್ನುವುದಿಲ್ಲ, ನಾನು ಉಡುಪಿಯವನೂ ಅಲ್ಲ, ನಾನು ಹರಿಕಥೆ ದಾಸನೂ ಅಲ್ಲ; ನಾನೊಬ್ಬ ರಾಜಕಾರಣಿ, ನನಗೆ ನನ್ನದೇ ಆದಂಥ ತತ್ವ, ನಿಷ್ಠೆ ಇದೆ, ಬದನೆಕಾಯಿ ತಿನ್ನೋದು ಎಂದರೆ ಪ್ಲೇಟ್‌ನಲ್ಲಿ ಹಾಕಿಕೊಂಡು ಹಗಲಿನಲ್ಲಿ ನಡುಬೀದಿಯಲ್ಲಿ ತಿನ್ನೋದು, ಅದಕ್ಕೆ ಏಕಾದಶಿನೂ ಇಲ್ಲ ದ್ವಾದಶಿನೂ ಇಲ್ಲ. ಅವರೆಲ್ಲಾ ನಿಮ್ಮಲ್ಲಿ ಇದ್ದಾರೆ, ಹರಿಕಥೆದಾಸರು, ಉಪನ್ಯಾಸ ಹೇಳುವವರು, ಮಾದ್ವರು, ಉಡುಪಿಯವರು, ಆ ಗಿರಾಕಿಗಳು ಇದ್ದಾರಲ್ಲಾ, ತಿನ್ನಬಾರದೆಂದು ಹೇಳಿ ಬದನೆಕಾಯಿ ತಿನ್ನುವವರು, ಅವರು ನಿಮ್ಮಲ್ಲಿ ಇದ್ದಾರೆ; ನನಗೆ ಇಡೀ ಜೀವನಪರ್ಯಂತ ನನ್ನ ಬದುಕು ನಾನು ಬಂದಿರತಕ್ಕಂಥ ಹಾದಿ, ನಾನು ನಡೆಸಿರತಕ್ಕಂಥ ಹೋರಾಟ ಅದಕ್ಕೆ ಸಾಕ್ಷಿ. ನಾನು ಬದನೆಕಾಯಿ ಕಥೆ ಹೇಳಿ ತಿನ್ನುವವನೋ ಅಲ್ಲವೋ ಎನ್ನುವುದಕ್ಕೆ ದಯಮಾಡಿ ಈ ರೀತಿ ವೈಯಕ್ತಿಕ ವಿಚಾರಗಳಿಗೆ ಸದನದ ಸಮಯವನ್ನು ತೆಗೆದುಕೊಳ್ಳುವುದು

ಬೇಡ. ನಿಮ್ಮ ಬಗ್ಗೆ ನನಗೆ ಗೌರವ ಇದೆ, ಅಪರೂಪಕ್ಕೆ ಒಂದು ಸ್ಥಾನಕ್ಕೆ ಬಂದಿದ್ದೀರಿ. ಒಳ್ಳೆಯ ಕೆಲಸ ಮಾಡಿ, ನಿಮಗೆ ಪ್ರೋತ್ಸಾಹ ಕೊಡುತ್ತೇನೆ, ಸಹಕಾರ ಕೊಡುತ್ತೇವೆ, ಗೌರವ ಕೊಡುತ್ತೇವೆ, ಒಂದು ವೇಳೆ ಎಚ್ಚರ ತಪ್ಪಿದರೆ ಎಲ್ಲಾದರೂ ಹೀಗಾದರೆ, ಹೀಗಲ್ಲಪ್ಪಾ ಹೀಗೆ ಮಾಡಿಕೊಳ್ಳೋಣ ಎಂದು ಹೇಳುತ್ತೇವೆ. ನಡೆಯತಕ್ಕಂಥವನೇ ಎಡುವುದು, ಮಲಗಿರತಕ್ಕಂಥವನು ಎಡುವುದಿಲ್ಲ, ತಪ್ಪುಗಳು ನಮ್ಮಿಂದಲೂ ಆಗಬಹುದು ನಿಮ್ಮಿಂದಲೂ ಆಗಬಹುದು: ದಯಮಾಡಿ ನಾವು ಈ ರೀತಿ ತೆಗೆದುಕೊಂಡು ಹೋಗುವುದು ಬೇಡ, ವೆಂದು ಹೇಳಿ ತಮಗೆ ಬಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನನ್ನದು ಒಂದೇ ಒಂದು ಮಾತು ಏನೆಂದರೆ . . ಎಲ್ಲೋ ಒಂದು ಕಡೆ ಶಾಸಕಾಂಗಕ್ಕೆ . . ಒಂದು ನಿಮಿಷ . .

ಅಧ್ಯಕ್ಷರು: ರೆಡ್ಡಿಯವರು ಮುಗಿಸಿಬಿಡುತ್ತಾರೆ.

ಶ್ರೀ ಜೆ.ಎ. ಶ್ರೀರಾಮರೆಡ್ಡಿ: ನಾನು ಮುಗಿಸಿಲ್ಲ, ಸುಮಾರು ಸಮಯ ಕೊಟ್ಟಿದ್ದಿರಿ ನಾನು ಮುಗಿಸಿಲ್ಲ, ನಾನು ಸುಮ್ಮನೆ ಕುಳಿತಿದ್ದೇನೆ, ಮತ್ತೆ ನೀವು ಉಪ ಮುಖ್ಯಮಂತ್ರಿಗಳು ಇದ್ದೀರಿ, ತಾವು ಉತ್ತರ ಕೊಡುವಾಗ ಏನೆಲ್ಲಾ ಬೇಕೋ ಅದೆಲ್ಲಾ ಕೊಡಿ ನಾವು ಏನೂ ಬೇಡ ಎಂದು ಹೇಳುವುದಿಲ್ಲ. You are free to give answer.

4. ಪ್ರಕಟಣೆ

ಅಧ್ಯಕ್ಷರು: ಕರ್ನಾಟಕ ವಿಧಾನ ಪರಿಷತ್ತು 2006ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕಕ್ಕೆ ಸಹಮತಿಯನ್ನು ನೀಡಿರುವುದಿಲ್ಲವೆಂದು ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈಗ ಬಂದಿರುವ ಸಂದೇಶದಲ್ಲಿ ತಿಳಿಸಿರುತ್ತಾರೆ.

5. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:– ಧರಣಿ ನಡೆದಾಗ 2005–06ನೇ ಸಾಲಿನ ಧನವಿನಿಯೋಗ ವಿಧೇಯಕವನ್ನು ಮಂಡಿಸಿ ಚರ್ಚೆಗೆ ಅವಕಾಶ ಕೊಡದೆ ಮಂಜೂರಾತಿ ಪಡೆದಿದರ ಬಗ್ಗೆ ಆಕ್ಷೇಪಣೆ (ಮುಂದುವರೆದ ಚರ್ಚೆ).

ಅಧ್ಯಕ್ಷರು: ಅವರು ಮುಗಿಸಲಿ ನಂತರ ಮಾತನಾಡಿ. .

ಶ್ರೀ ಜೆ.ಸಿ. ಮಾಧುಸ್ವಾಮಿ: ಇಲ್ಲಿ ರೀ ಕನ್ಸಿಡರೇಷನ್‌ಗೆ ಬರುವುದಕ್ಕೆ ಮೊದಲೇ ಅಲ್ಲಿಂದ ಮಾಹಿತಿ ತರಿಸಿಕೊಳ್ಳಬೇಕು, ಏಕೆ ಸಹಮತಿ ಕೊಟ್ಟಿಲ್ಲ ಅವರು, ಎಂದು ಇಲ್ಲದಿದ್ದರೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. Grounds for rejection ಇಲ್ಲಿಗೆ ಬರಬೇಕಾಗುತ್ತದೆ ಸಾರ್ . .

ಅಧ್ಯಕ್ಷರು: ಅದನ್ನು ಮಿನಿಸ್ಟರ್ ಹೇಳುತ್ತಾರೆ ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಅಲ್ಲಿಂದ ತರಿಸಿ ಕೊಳ್ಳತಕ್ಕಂಥ ಅಗತ್ಯವಿಲ್ಲ, ಅಲ್ಲಿ ಅವರಿಗೆ ಬಹುಮತ ಇತ್ತು. ಅವರಲ್ಲಿ ಕೆಲವು ನಿಯಾಮಾವಳಿಯ ಪ್ರಕಾರ ಭಾರತ ಸಂವಿಧಾನ 205ನೇ (1) ಎ ಎಂದು ಹೇಳಿ . . . ಒಂದ್ನಿಮಿಷ. ಒಂದು ಅಮೆಂಡ್‌ಮೆಂಟ್‌ನ್ನು ತರುವುದಕ್ಕೆ ಛೇರ್ಮನ್ ಜೊತೆಗೆ ಮಾತನಾಡಿದೆವು. ಅವರು ಒಪ್ಪಿಕೊಂಡರು...

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಯಡಿಯೂರಪ್ಪನವರೆ ಅರ್ಜೆಂಟ್ ಮಾಡಬೇಡಿ. ಅಲ್ಲಿಂದ ಬರಲಿ.

ಅಧ್ಯಕ್ಷರು: ಲೇ ಮಾಡಿದ ಮೇಲೆ ನೀವು ಹೇಳಿ ಈಗಲೇ ಅಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈಗಲೇ ಏಕೆ ಹೇಳುತ್ತೀರಿ?

ಅಧ್ಯಕ್ಷರು: ಆಯಿತು. ಲೇ ಮಾಡಿದ ಮೇಲೆ ಅವರು ಹೇಳಲಿ, ರೆಡ್ಡಿಯವರೆ. ಎರಡೇ ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

ಶ್ರೀ ಜೆ.ಎ. ಶ್ರೀರಾಮರೆಡ್ಡಿ: ಆಯಿತು. ನನ್ನ ಮಾತನ್ನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ಆದರೆ, ನನಗೆ ಮಧ್ಯದಲ್ಲಿ ಯಾರೂ ಕೂಡ ಡಿಸ್ಟರ್ಬ್ ಮಾಡಬಾರದು.

(ಗೊಂದಲ)

ಅಧ್ಯಕ್ಷರು: ಅವರು ಮಾತನಾಡಿ ಮುಗಿಸಲಿ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಜೆ.ಎ. ಶ್ರೀರಾಮರೆಡ್ಡಿ: ಪ್ರತಿಯೊಂದಕ್ಕೂ ಒಂದು ಮಿತಿ ಇರುತ್ತದೆ. ದಯವಿಟ್ಟು ಅರ್ಥ ಮಾಡಿಕೊಳ್ಳಿ. ಯಾರೂ ಕೂಡ ಮಿತಿ ಮೀರಿ ವರ್ತನೆ ಮಾಡತಕ್ಕಂಥದ್ದು ಮತ್ತು ಮಾನತಾಡತಕ್ಕಂಥದ್ದು ಸರಿಯಲ್ಲ. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಸುಪ್ರೀಂ ಕೋರ್ಟ್‌ನ ತೀರ್ಪನ್ನು ನಿಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಯೂನಿಯನ್ ಇಂಡಿಯಾ ವರ್ಸಸ್ ವೆಲ್ಲುಮೂರಿ ಬಸವಯ್ಯ ಚೌಧರಿ ಎನ್ನತಕ್ಕಂಥವರ ಕೇಸ್‌ನಲ್ಲಿ ಸುಪ್ರೀಂ ಕೋರ್ಟ್ ಕೊಟ್ಟಿರತಕ್ಕಂಥ ತೀರ್ಪನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. The functions assigned to the Governor under Article 176(1) of addressing the House or Houses of Legislature, at the commencement of the first session of each year, is strictly not a legislative function but the object of this Address is to acquaint the members of the Houses with the policies and programmes of the Government. It is really a policy statement prepared by the Council of Ministers which the Governor has to read out. Then again, the right of the Legislature under Article 175(2), with respect to the Bill then pending in the legislature or otherwise-normally arises when the Governor withholds his assent to a Bill under Article 200, or when the President, for whose consideration a Bill is reserved for assent, returns the Bill withholding his assent. As already stated, a "Bill" is something quite different from a "resolution of the House" and, therefore, there is no question of the Governor sending any message under Article 175(2) with regard to a resolution pending before the House or Houses of the Legislature. ಈ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್‌ನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಪಾಲಿಸಬೇಕೋ ಅಥವಾ ಬಿಡಬೇಕೋ ಎನ್ನತಕ್ಕಂಥದ್ದು ನಿಮಗೆ ಬಿಟ್ಟ ವಿಚಾರ. ನಮ್ಮ ವರ್ತನೆ ಬಗ್ಗೆ ಮತ್ತು ನಮ್ಮ ಪದಗಳು ಸರಿಯಿಲ್ಲವೆಂದು ಮಾನ್ಯ ಕಾನೂನು ಮಂತ್ರಿಗಳು ಹೇಳಿದರು. ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದನ್ನು ನಾನು ಇಲ್ಲಿ ಓದುತ್ತೇನೆ. ತಾವು ಬೆಳಿಗ್ಗೆ ನಡೆದಂಥ ನಡವಳಿಕೆಯ ರೆಕಾರ್ಡ್ಸ್‌ನ್ನು ತರಿಸಿ ನೋಡಿ. ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದು ಏನೆಂದರೆ, "ಹೇ, ಶ್ರೀರಾಮರೆಡ್ಡಿ ಬಾಯಿಗೆ ಬಂದಹಾಗೆ ಮಾತನಾಡಬೇಡ. ಬಾಯಿ ಬಿಗಿಹಿಡಿದು ಮಾತನಾಡಿ. ನಿಮ್ಮ ವರ್ತನೆ ಹದ್ದುಮೀರುತ್ತಿದೆ. ನೀವು ಉಪಯೋಗಿಸುವ ಮಾತು ಸರಿಯಿಲ್ಲ."

ಅಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರೆ, ನೀವು ನೆನ್ನೆದಿವಸ ಏನು ಹೇಳಿದ್ದೀರಿ? ಪಾರ್ಟಿಸನ್, ಮಾಡುತ್ತಿದ್ದೇನೆಂದು ಹೇಳಿದಿರಿ. ಏನ್ರಿ ಪಾರ್ಟಿಸನ್ ನಾನು ಮಾಡಿದ್ದು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಯಾವುದರ ಬಗ್ಗೆ ಹೇಳುತ್ತಿದ್ದೀರಿ?

ಅಧ್ಯಕ್ಷರು: ನೀವು ನನ್ನ ಬಗ್ಗೆ ತಾನೇ ಈಗ ಹೇಳುತ್ತಿರುವುದು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಹೇಳುತ್ತಿರುವುದಲ್ಲ. ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದನ್ನು ನಾನು ಹೇಳುತ್ತಿದ್ದೇನಷ್ಟೆ.

ಅಧ್ಯಕ್ಷರು: ನೀವು ಯಾರ ಬಗ್ಗೆ ಹೇಳುತ್ತಿದ್ದೀರಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಯಾರು ಹೇಳಿದರೆಂದು ನನಗೆ ಗೊತ್ತಿಲ್ಲ. ಮತ್ತೆ ಯಾರು ಎಂದು ಪತ್ರಿಕೆಯಲ್ಲಿಯೂ ಕೂಡ ಹೇಳಿಲ್ಲ.

ಅಧ್ಯಕ್ಷರು: ಇಲ್ಲಿ ಏನಾಗಿದೆ ಎಂದರೆ, ನೀವು ನೆನ್ನೆದಿವಸ ಮಾತನಾಡುತ್ತಾ, ಯಾರೋ ಹೇಳಿದ ಹಾಗೆ ಕೇಳುತ್ತಿದ್ದೀರಿ ಮತ್ತೆ ಪಾರ್ಟಿಸನ್ ಮಾಡುತ್ತಿದ್ದೀರೆಂದು ಹೇಳಿದಿರಿ. ಈ ರೀತಿಯಾಗಿ ನೀವು ಹೇಳಬಹುದೆ? ಹಿರಿಯ ಸದಸ್ಯರು ಹೇಳತಕ್ಕಂಥ ಮಾತು ಇದೆಯೆ? Why do you defend yourself? ತಾವೇ ಎಲ್ಲಾ ತಪ್ಪನ್ನು ಮಾಡುವುದು . .

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಅಧ್ಯಕ್ಷರು ತಾವು ಮಾಡಿರತಕ್ಕಂಥದ್ದು ತಪ್ಪು ಎಂದು ಹೇಳಬಾರದೆ?

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೀವು ಗಲಾಟೆ ಮಾಡಿದರೆಂದು ಹೆದರಿಕೊಂಡು ಯಾರೂ ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳುವುದಿಲ್ಲ. ಇದನ್ನು ತಾವುಗಳು ಚೆನ್ನಾಗಿ ತಿಳಿದುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ನೀವು ಏನು ಮಾತನಾಡಿದರೂ ನಾವು ಸುಮ್ಮನೆ ಇರಬೇಕೆ?

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹಾಗಾದರೆ, ರೆಕಾರ್ಡ್ಸ್ ತೆಗೆದು ನೋಡಿ.

(ಗೊಂದಲ)

ಶ್ರೀ ಕೆ.ಎಂ. ವೆಂಕಟೇಶ್: ತಪ್ಪು ಆಗಿರತಕ್ಕಂಥದ್ದನ್ನು ತಿದ್ದುಕೊಂಡು ಸರಿಯಾಗುವುದು ಸರಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೀವು ಇಷ್ಟು ಜನ ನಿಂತುಕೊಂಡು ಕೂಗಾಡಿದರೆ ನಾನು ಕುಳಿತುಕೊಳ್ಳುತ್ತೇನೆಂದು ತಾವು ತಿಳಿದುಕೊಳ್ಳಬೇಡಿ. ಅದು ಸಾಧ್ಯವಿಲ್ಲ.

(ಗೊಂದಲ)

ಶ್ರೀ ಆರ್. ಅಶೋಕ್: ನೀವು ಈ ಸದನದ ಸಮಯವನ್ನು ಹಾಳು ಮಾಡುತ್ತಿದ್ದೀರಿ. ಮತ್ತೆ ಸರಿಯಾದಂಥ ಚರ್ಚೆ ಏನು ನಡೆಯಬೇಕಾಗಿದೆ ಆ ಒಂದು ಚರ್ಚೆಯಲ್ಲಿ ತಾವು ಭಾಗವಹಿಸುತ್ತಿಲ್ಲ. ಇವತ್ತಿನ ಚರ್ಚೆಯಲ್ಲಿ ಮಾನ್ಯ ಅಧ್ಯಕ್ಷರ ವಿಷಯ ಬಂದಿದೆಯೆ? . . .

(ಗೊಂದಲ)

ಅಧ್ಯಕ್ಷರು: ತಾವು ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದನ್ನು ಓದುವುದು ಬೇಡ. ಯಾರು ಇದನ್ನು ಹೇಳಿದ್ದಾರೆ ಎಂಬುದನ್ನು ಹೇಳಿ. ಇದು ಪತ್ರಿಕೆಯಲ್ಲಿ ಬಂದಿದೆ ಎಂದು ಹೇಳುವುದು ಸರಿಯಲ್ಲ.

(ಗೊಂದಲ)

ಶ್ರೀ ಆರ್. ಅಶೋಕ್: ಮಾನ್ಯ ಶ್ರೀರಾಮರೆಡ್ಡಿಯವರು ಈ ರೀತಿಯಾಗಿ ಪ್ರಸ್ತಾಪ ಮಾಡತಕ್ಕಂಥದ್ದು ಸರಿಯಲ್ಲ. ಸ್ಪೀಕರ್ ಮೇಲೆ ಚರ್ಚೆ ಮಾಡತಕ್ಕಂಥದ್ದು ಸರಿಯಲ್ಲ . . .

ಶ್ರೀ ಕೆ.ಎಂ. ವೆಂಕಟೇಶ್: ಬೇಕಾದರೆ ಇದಕ್ಕೊಂದು ಸಮಯ ನಿಗದಿ ಮಾಡಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸ್ಪೀಕರ್ ಹೇಳಿದ್ದಾರೆಂದು ನಾನು ಹೇಳಿಲ್ಲ.

ಶ್ರೀ ಆರ್. ಅಶೋಕ್: ನೀವು ಏನು ಹೇಳುತ್ತಿದ್ದೀರೆಂದು ನಮಗೆ ಅರ್ಥವಾಗುತ್ತಿದೆ. ಮಾನ್ಯ ಮಹಿಮಾ ಪಾಟೀಲ್‌ರವರು ಹೇಳಿದ್ದಕ್ಕೆ ತಾವು ಏನು ಹೇಳಿದಿರಿ? ನೀವು ಯಾವ ಅರ್ಥದಲ್ಲಿ ಹೇಳುತ್ತಿದ್ದೀರೆಂದು ನಮಗೂ ಸಹ ಅರ್ಥವಾಗುತ್ತಿದೆ.

ಶ್ರೀ ಶ್ರೀರಾಮರೆಡ್ಡಿ: ಗೊತ್ತಾಗಲಿ. ಇದರಿಂದ ಏನೂ ತೊಂದರೆ ಇಲ್ಲ.

(ಗೊಂದಲ)

ಅಧ್ಯಕ್ಷರು: ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದೆಲ್ಲಾ ಸರಿಯಾಗಿರುವುದಿಲ್ಲ. ಆದರೆ ನಮ್ಮಲ್ಲಿ ಏನು ಈ ಒಂದು ಪ್ರೊಸೀಡಿಂಗ್ಸ್ ರೆಕಾರ್ಡ್ ಆಗಿದೆ ಅದರಲ್ಲಿರತಕ್ಕಂಥ ಪದಗಳನ್ನು ತೆಗೆದು ಓದಿ. ಆ ರೀತಿಯಾಗಿ ಯಾವುದಾದರೂ ಇದ್ದರೆ ತೆಗೆಯೋಣ. ಅದು ಬಿಟ್ಟು ಪತ್ರಿಕೆಗಳಲ್ಲಿ ಇರತಕ್ಕಂಥದ್ದನ್ನೆಲ್ಲಾ ಓದುವುದಕ್ಕೆ ಅವಕಾಶ ಇಲ್ಲ. ದಯವಿಟ್ಟು ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದನ್ನು ಓದಬೇಡಿ.

(ಗೊಂದಲ)

ಶ್ರೀ ಆರ್. ಅಶೋಕ್:– ಮಾನ್ಯ ರಾಜ್ಯಪಾಲರ ಬಗ್ಗೆ ಕೂಡ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದಾರೆ. ಹಾಗೆಯೇ ಮಾನ್ಯ ಸ್ಪೀಕರ್ ಬಗ್ಗೆ ಕೂಡ ಇನ್‌ಡೈರೆಕ್ಟ್ ಆಗಿ ಅವಹೇಳನಕಾರಿ ಮಾತುಗಳನ್ನು ಮಾತನಾಡುತ್ತಿದ್ದಾರೆ. ಈ ಸದನವನ್ನು ಸರಿಯಾದ ಚರ್ಚೆ ಮಾಡುವುದಕ್ಕೆ ಉಪಯೋಗ ಮಾಡದೆ ಕಳೆದ ಮೂರು ದಿವಸಗಳಿಂದ ಈ ಸದನವನ್ನು ಮುಂದೂಡಬೇಕೆಂಬ ದೃಷ್ಟಿಯಿಂದ ಈ ರೀತಿಯಾಗಿ ಮಾತನಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ತಮ್ಮ ಬಗ್ಗೆ ಕೂಡ ಪತ್ರಿಕೆಯಲ್ಲಿ ಬಂದಿರತಕ್ಕಂಥ ವಿಷಯವನ್ನು ಇನ್‌ಡೈರೆಕ್ಟ್ ಆಗಿ ಪ್ರಸ್ತಾಪ ಮಾಡುತ್ತಿದ್ದಾರೆ. ಇದನ್ನು ಮೊದಲು ಅವರು ತಮ್ಮ ಗಮನಕ್ಕೆ ತರಬೇಕಾಗಿತ್ತು.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ತಮಗೆ ಏನಾಗಿದೆ? ತಾವು ಏನು ಮಾತನಾಡುತ್ತಿದ್ದೀರೆಂಬುದನ್ನಾದರೂ ಹೇಳಿ. ಅದು ಏನು ಹೇಳಿ?

(ಗೊಂದಲ)

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ್: ರೆಕಾರ್ಡ್ಸ್ ತೆಗೆಸಿ ನೋಡಿ. ರೆಕಾರ್ಡ್‌ನಲ್ಲಿ ಇದ್ದರೆ ತೆಗೆಸಿದರೆ ಆಯಿತು.

(ಗೊಂದಲ)

ಅಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರೆ, ಪ್ರೊಸೀಡಿಂಗ್ಸ್‌ನಲ್ಲಿ ಇದ್ದರೆ ಈ ರೀತಿಯಾಗಿದೆ ಎಂದು ಹೇಳಿ. ಅದು ಏನೆಂಬುದನ್ನು ನೋಡೋಣ. ಅದನ್ನು ಬಿಟ್ಟು ಪತ್ರಿಕೆಯಲ್ಲಿರತಕ್ಕಂಥಾದ್ದನ್ನು ಹೇಳಿದರೆ ಹೇಗೆ? ಈಗ ನೀವು ಹೇಳಿರುವುದನ್ನು ನಾನು ಕೇಳಿದ್ದೇನೆ. ನಾನು ಹೇಳಿರುವುದನ್ನು ನೀವು ಕೇಳಿದ್ದೀರಿ. ಆದ್ದರಿಂದ, ಈ ರೀತಿಯಾಗಿ ಏಕೆ ಮಾತನಾಡುತ್ತೀರಿ?

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ್: ಅದನ್ನು ಇಲ್ಲಿಗೇ ಕೈಬಿಡಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಅದನ್ನೇ ಹೇಳುವುದಕ್ಕೆ ನಿಂತುಕೊಂಡಿದ್ದೇನೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೀವು ಜೋರಾಗಿ ಮಾತನಾಡಿದರೆ ನಮಗೇನೂ ತೊಂದರೆ ಇಲ್ಲ.

(ಗೊಂದಲ)

ಅಧ್ಯಕ್ಷರು: ಈಗ ಸಭಾನಾಯಕರು ಮಾತನಾಡುತ್ತಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ(ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ನಾನು ಈ ಸದನಕ್ಕೆ ಮೊದಲಬಾರಿಗೆ ಆಯ್ಕೆಯಾಗಿ ಬಂದ ದಿವಸದಿಂದಲೂ ನಾನು ಕೊನೆಯ ಬೆಂಚ್‌ನಲ್ಲಿ ಕುಳಿತು ಗಮನಿಸುತ್ತಿದ್ದೆ. ಆದರೆ, ಸದನದ ಈ ಒಂದು ಸ್ಥಾನದಲ್ಲಿ ನಾನು ಕುಳಿತುಕೊಂಡು ಕೆಲಸವನ್ನು ಮಾಡಬೇಕಾದರೆ ಇಲ್ಲಿ ಆಗುತ್ತಿರತಕ್ಕಂಥ ಚರ್ಚೆಗಳ ಬಗ್ಗೆ ನಾನೇನು ಗಮನಿಸುತ್ತಿದ್ದೇನೆ, ಇದಕ್ಕೆ ಯಾವುದೇ ಹೆಚ್ಚಿನ ಪ್ರತಿಕ್ರಿಯೆಯನ್ನು ಕೊಡುವುದಕ್ಕೆ ನಾನು ಹೋಗುತ್ತಿಲ್ಲ. ಇಲ್ಲಿ ಹಿರಿಯ ಸದಸ್ಯರು ಪ್ರತಿಯೊಂದು ಸಂದರ್ಭದಲ್ಲಿ ಅವರಿಗೆ ಬೇಕಾದ ರೀತಿಯಲ್ಲಿ ವಿಶ್ಲೇಷಣೆಯನ್ನು ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಇದಕ್ಕೆ ನಾನು ಉದಾಹರಣೆಯನ್ನು ಕೊಡತಕ್ಕಂಥಾದ್ದು ಎಂದರೆ ಹಿಂದೆ ಇದ್ದಂಥ ಕಾಂಗ್ರೆಸ್ ಮತ್ತು ಜನತಾದಳ ಸರ್ಕಾರ ವಿಶ್ವಾಸವನ್ನು ಪಡೆಯತಕ್ಕಂಥಾದ್ದಕ್ಕೆ ಸನ್ಮಾನ್ಯ ಧರ್ಮಸಿಂಗ್‌ರವರು 27ನೇ ತಾರೀಖಿನ ದಿವಸ ಈ ಸದನದಲ್ಲಿ ವಿಶ್ವಾಸಮತದ ನಿರ್ಣಯವನ್ನು ಮಂಡನೆ ಮಾಡಬೇಕೆಂದು ಇದ್ದಾಗ ಆ ದಿವಸ ಬೆಳಿಗ್ಗೆ ಘನತೆವೆತ್ತ ರಾಜ್ಯಪಾಲರ ಕಛೇರಿಯಿಂದ ಬಂದಂಥ ಅಧಿಕಾರಿಯ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದಾಗ ನಿಮ್ಮ ಬಗ್ಗೆ ಬಹಳ ಎತ್ತರವಾದ ಮಾತುಗಳನ್ನು ಆಡಿ, ಮಾನ್ಯ ರಾಜ್ಯಪಾಲರು ಕಳುಹಿಸಿದಂಥ ಅಧಿಕಾರಿಗಳ ಬಗ್ಗೆ ಆವತ್ತು ಏನೆಲ್ಲ ಚರ್ಚೆಗಳನ್ನು ನಡೆಸಿದರು ಮತ್ತು ಅದಾದನಂತರ ಮಧ್ಯಾಹ್ನದ ಅವಧಿಯಲ್ಲಿ ಅವರು ವಿಶ್ವಾಸಮತವನ್ನು ಪಡೆಯುವುದಕ್ಕೆ ಅವರ ಕೈಯಲ್ಲಿ ಸಾಧ್ಯವಾಗದೆ ತಮ್ಮ ಬಗ್ಗೆ ಯಾವ ರೀತಿಯಾಗಿ ನಡೆದು ಕೊಂಡರು ಎಂಬುದು ನಮಗೆ ಗೊತ್ತಿದೆ. ಇವತ್ತು ಸಂವಿಧಾನ ಮತ್ತು ಕಾನೂನನ್ನು ರಕ್ಷಣೆ ಮಾಡತಕ್ಕಂಥದ್ದರ ಬಗ್ಗೆ ಮಾತನಾಡತಕ್ಕಂಥ ವ್ಯಕ್ತಿಗಳು ಮತ್ತು ಮಾನ್ಯ ಶಾಸಕರುಗಳು ಇವತ್ತು ಏನು ಹೇಳುತ್ತಿದ್ದಾರೆಂದರೆ, ಇವತ್ತಿನದಿವಸ ಕಾನೂನಿನ ಬಗ್ಗೆ ಚರ್ಚೆ ಮಾಡಬೇಕೆಂದರೆ ಬಹಳ ವಿಷಯಗಳನ್ನು ಈ ಸದನದಲ್ಲಿ ಚರ್ಚೆ ಮಾಡಬಹುದಾಗಿದೆ. ಹಿಂದೆ ಯಾವ್ಯಾವ ರೀತಿ ಕಾನೂನನ್ನು ಯಾವ್ಯಾವ ಪಕ್ಷಗಳು ಯಾವ್ಯಾವ ವ್ಯಕ್ತಿಗಳು ಯಾವ ರೀತಿ ದೇಶದಲ್ಲಿ ಪಾಲನೆ ಮಾಡಿಕೊಂಡು ಬಂದಿದ್ದಾರೆ ಮತ್ತು ಇಲ್ಲಿ ಏನು ಮೂರು ದಿವಸಗಳಿಂದ ಸಂವಿಧಾನದ ಬಗ್ಗೆ ಚರ್ಚೆಯನ್ನು ನಡೆಸುತ್ತಿದ್ದಾರೆ, ಸನ್ಮಾನ್ಯ ಸಭಾಧ್ಯಕ್ಷರು

ತಾವು ತಮ್ಮ ರೂಲಿಂಗ್‌ನ್ನು ಕೊಟ್ಟನಂತರ ಮೂರುದಿವಸಗಳಿಂದ ಇಲ್ಲಿ ನಡೆದಿರತಕ್ಕಂಥ ಘಟನೆಗಳ ಬಗ್ಗೆ ನಾವು ಮೆಲುಕು ಹಾಕುವುದಾದರೆ ಐವತ್ತು ವರ್ಷಗಳ ಇತಿಹಾಸದಲ್ಲಿ ಸದನದಲ್ಲಿ ಮಾನ್ಯ ಅಧ್ಯಕ್ಷರು ಕೊಟ್ಟಂಥ ರೂಲಿಂಗ್‌ನ್ನು ಹಿಂದಕ್ಕೆ ಪಡೆಯಬೇಕೆಂಬ ಒತ್ತಾಯ ಆಗಿರತಕ್ಕಂಥ ನಿದರ್ಶನಗಳು ನಮ್ಮ ಕಣ್ಣುಗಳ ಮುಂದೆ ಇಲ್ಲ. ಆದರೆ, ಇವತ್ತು ಏನೊಂದು ಹೊಸ ಸಂಪ್ರದಾಯವನ್ನು ಹಾಕುವುದಕ್ಕೆ ಹೊರಟಿದ್ದಾರೆ, ಇವತ್ತು ನಾನು ಸನ್ಮಾನ್ಯ ಹಿರಿಯ ಸದಸ್ಯರುಗಳಲ್ಲಿ ಮನವಿಮಾಡಿಕೊಳ್ಳುವುದೇನೆಂದರೆ, ನಾವು ಮೊದಲಬಾರಿಗೆ ಈ ಸದನಕ್ಕೆ ಪ್ರವೇಶ ಮಾಡಿದ್ದೇವೆ. ತಾವುಗಳು ಹೆಚ್ಚಿನ ಅನುಭವ ಹೊಂದಿದ್ದೀರಿ ಮತ್ತು ಇವತ್ತು ನಮ್ಮೆಲ್ಲರಿಗಿಂತಲೂ ಹಲವಾರು ಸಂದರ್ಭದಲ್ಲಿ ಅನೇಕ ವರ್ಷಗಳಿಂದ ಈ ಸದನದಲ್ಲಿ ಕೆಲಸ ಮಾಡಿದ್ದೀರಿ. ದಯವಿಟ್ಟು ನಾನು ಮನವಿಮಾಡುತ್ತಿದ್ದೇನೆ. ಈ ಸದನದಲ್ಲಿ ನಡೆಯತಕ್ಕಂಥ ವಿಷಯಗಳನ್ನು ತಿರುಚಿ ಮಾತನಾಡತಕ್ಕಂಥಾದ್ದು ಕಳೆದ ಮೂರು ದಿವಸಗಳಿಂದ ಇದು ಪದೇಪದೇ ನಡೆದಿದೆ. ಇವತ್ತು ಸದನ ಬೆಳಿಗ್ಗೆ ಪ್ರಾರಂಭವಾದಾಗ ತಾವುಗಳು ಒಂದು ಒಳ್ಳೆಯ ರೀತಿಯಲ್ಲಿ ಮತ್ತೆ ಪ್ರಾರಂಭ ಮಾಡಿದ್ದೀರಿ, ಆದ್ದರಿಂದ ನಿಮಗೆ ನಾನು ಅಭಾರಿಯಾಗಿರಬೇಕೆಂದು ಕೇಳಬೇಕೆಂದು ಆ ಸಂದರ್ಭದಲ್ಲಿ ನಾನು ಇಲ್ಲಿ ಕುಳಿತುಕೊಂಡಿದ್ದೆ. ಆದರೆ, ತಾವು ಆರ್ಟಿಕಲ್ 175 ಮತ್ತು 176ರ ವಿಷಯದ ಬಗ್ಗೆ ಈಗಾಗಲೇ ಒಂದು ರೂಲಿಂಗ್ ಕೊಟ್ಟನಂತರ ಪುನಃ ಪುನಃ ಅದೇ ವಿಷಯವನ್ನು ಚರ್ಚೆ ಮಾಡುವ ಮುಖಾಂತರ ಈ ಒಂದು ಚರ್ಚೆಯನ್ನು ಇವತ್ತು ಜೀವಂತವಾಗಿ ಇಡುವುದಕ್ಕೆ ಹೊರಟ್ಟಿದ್ದೀರಿ. ಇವತ್ತು ದಯವಿಟ್ಟು ನಾನು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಪದೇಪದೇ ಮಾನ್ಯ ಅಧ್ಯಕ್ಷರ ವಿಷಯದಲ್ಲಿ ಈ ರೀತಿಯಾಗಿ ಲಘುವಾಗಿ ವರ್ತನೆ ಮಾಡತಕ್ಕಂಥದ್ದು ಯಾರಿಗೂ ಶೋಭೆತರತಕ್ಕಂಥಾದ್ದಲ್ಲ. ಮಾನ್ಯ ಅಧ್ಯಕ್ಷರ ಕೆಲಸದ ಬಗ್ಗೆ ಇವತ್ತು ನೀವು ಬೇರೆಯವರಿಗೇನು ಉಪದೇಶ ಮಾಡುವುದಕ್ಕೆ ಹೊರಟಿದ್ದೀರಿ, ನಿಮ್ಮ ಆತ್ಮವನ್ನು ಈ ಸಂದರ್ಭದಲ್ಲಿ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರನ್ನು ನೀವು ಯಾವ ರೀತಿಯಾಗಿ ಗೌರವದಿಂದ ನಡೆಸಿಕೊಂಡಿದ್ದೀರಿ ಎಂಬುದನ್ನು ದಯವಿಟ್ಟು ನಿಮ್ಮ ಆತ್ಮವನ್ನು ಮುಟ್ಟಿಕೊಂಡು ನಿಮ್ಮ ಆತ್ಮಕ್ಕೆ ಪ್ರಶ್ನೆ ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರ ಮುಖಾಂತರ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಮಗೆ ಹೇಳುವುದಕ್ಕೆ ಮಾನ್ಯ ಅಧ್ಯಕ್ಷರು ಇದ್ದಾರೆ ನಾವು ಎಲ್ಲರೂ ಸೇರಿ ನಮಗೆ ಹೇಳುವುದಕ್ಕೆ ಮಾನ್ಯ ಅಧ್ಯಕ್ಷರನ್ನು ಅಲ್ಲಿ ಕೂಡಿಸಿರುತ್ತೇವೆ.

(ಗೊಂದಲ)

ಈ ರೀತಿ ಹೇಳಿರತಕ್ಕಂಥಾದ್ದರ ಬಗ್ಗೆ ನಾವು ನಿಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ನಾವು ಹದ್ದು ಮೀರಿ ಮಾತನಾಡಿದ್ದೇವೆಂದರೆ ಕಡತ ತರಿಸಿ ನೀವು ನೋಡಬೇಕು. ನಾನು ಕಡತದಲ್ಲಿರತಕ್ಕಂಥಾದ್ದು ಸತ್ಯವೆಂದು ಒಪ್ಪಿಕೊಳ್ಳುತ್ತೇನೆ. ಅದರಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯವಿಲ್ಲ. ಕಡತದಲ್ಲಿ ಹೇಳಿದ್ದರೆ ಅದೇ ಸತ್ಯವೆಂದು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕಾಗಿ ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ಈ ರೀತಿ ಏನು ಪತ್ರಿಕೆಯಲ್ಲಿ ಬಂದಿದೆ, ಅದು ಕಡತದಲ್ಲಿ ಇಲ್ಲದೆ ಹೋದರೆ ಪತ್ರಿಕೆಯ ಮೇಲೆ ಕ್ರಮ ತೆಗೆದುಕೊಳ್ಳಿ. ಕಡತದಲ್ಲಿ ಇದ್ದರೆ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ನೀವೇ ತೀರ್ಮಾನ ಮಾಡಿ. ಅದು ನಿಮ್ಮ ವಿವೇಚನೆಗೆ ಬಿಟ್ಟಂಥ ವಿಚಾರ. ಇದನ್ನು ಯಾರು ಹೇಳಿದರು, ಏಕೆ ಹೇಳಿದರು ಎಂದು ನಾನು ಹೇಳುತ್ತಿಲ್ಲ.

ಶ್ರೀ ಬಸವರಾಜ ಹೊರಟ್ಟಿ: ಇದನ್ನು ಯಾರ ಮೇಲೆ ಹೇಳುತ್ತೀರಿ ಅದು ಬೇಕಲ್ಲವೆ? ಪೇಪರ್‌ನಲ್ಲಿ ಯಾರು ಹೇಳಿದ್ದಾರೆಂದು ಬಂದಿದೆ?

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನಾನು ಏನು ಹೇಳುತ್ತಿದ್ದೇನೆ ಗೊತ್ತಾ? ಕಾನೂನು ಮಂತ್ರಿಗಳಾಗಿ ನೀವು ಅರ್ಥ ಮಾಡಿಕೊಳ್ಳಿ.

ಶ್ರೀ ಬಸವರಾಜ ಹೊರಟ್ಟಿ: ನೀವು ಮಾನ್ಯ ಅಧ್ಯಕ್ಷರಿಗೇ ಹೇಳುವುದಕ್ಕೆ ಹೊರಟಿದ್ದೀರಿ.

ಅಧ್ಯಕ್ಷರು: ಮಾನ್ಯ ಹೊರಟ್ಟಿಯವರೆ, ನೀವು ಕುಳಿತುಕೊಳ್ಳಿ. ಮಾನ್ಯ ಶ್ರೀರಾಮರೆಡ್ಡಿಯವರೆ, ನಾನು ಆಗಲೇ ವಿನಂತಿಯನ್ನು ಮಾಡಿಕೊಂಡಿದ್ದೇನೆ. ಮತ್ತೆ ನಿಮಗೆ ಎಷ್ಟು ನಿಮಿಷವನ್ನು ಕೊಡುವುದು?

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನಾನು ಇಷ್ಟನ್ನು ಹೇಳಿ ಮುಗಿಸುತ್ತೇನೆಂದು ಹೇಳಿದೆ.

ಅಧ್ಯಕ್ಷರು: ನಿಮಗೆ ಇನ್ನು ಎಷ್ಟು ನಿಮಿಷ ಅವಕಾಶವನ್ನು ಕೊಡುವುದು?

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಎರಡೆ ನಿಮಿಷದಲ್ಲಿ ಮುಗಿಸುತ್ತೇನೆಂದು ಹೇಳಿದೆನಲ್ಲಾ.

(ಗೊಂದಲ)

ಅಧ್ಯಕ್ಷರು: ಏನು ನೀವು ಎರಡು ನಿಮಿಷದಲ್ಲಿ ಮುಗಿಸುವುದು? 5 ನಿಮಿಷ ಎಂದು 50 ನಿಮಿಷ ತೆಗೆದುಕೊಂಡಿದ್ದೀರಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನಾನು ನಿಮಗೆ ಎರಡೇ ನಿಮಿಷದಲ್ಲಿ ಮುಗಿಸುತ್ತೇನೆಂದು ಹೇಳಿದೆ.

ಅಧ್ಯಕ್ಷರು: ಆಯಿತು ಮುಗಿಸಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನಾನು ಏನು ವಿನಂತಿಯನ್ನು ಮಾಡುತ್ತೇನೆಂದರೆ, ಈ ಪತ್ರಿಕೆಯಲ್ಲಿ ಬಂದಿರುವಂಥಾದ್ದು ಸುಳ್ಳು ಎಂದರೆ ಪತ್ರಿಕೆಯ ಮೇಲೆ ಕ್ರಮ ತೆಗೆದುಕೊಳ್ಳಿ. ಆದ್ದರಿಂದ ಕಡತವನ್ನು ತರಿಸಿ ನೋಡಿ. ಕಡತದಲ್ಲಿ ಇದು ಇಲ್ಲವೆಂದರೆ ಪತ್ರಿಕೆಯ ಮೇಲೆ ಕ್ರಮ ತೆಗೆದುಕೊಳ್ಳಿ. ಕಡತದಲ್ಲಿ ಇದ್ದರೆ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ನೀವೇ ತೀರ್ಮಾನ ಮಾಡಿ ಎಂದು ನಾನು ಇಷ್ಟೇ ಹೇಳುತ್ತಿರುವಂಥಾದ್ದು. ಇಷ್ಟನ್ನು ಹೇಳಿ ಅಪ್ರಾಪ್ರಿಯೇಶನ್ ಬಿಲ್ ಪಾಸ್ ಮಾಡಲಿಕ್ಕೆ ಅವಕಾಶ ಮಾಡಿಕೊಡದೇ ಇರತಕ್ಕಂಥದ್ದು. ಏನಿದೇ, ಇದರ ಬಗ್ಗೆ ಮಾತನಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಕುಳಿತಿದ್ದಾರೆ, ಅವರು ಸಂವಿಧಾನದ ಬಗ್ಗೆ ನಮಗೆಲ್ಲ ಆತ್ಮವನ್ನು ಮುಟ್ಟಿಕೊಂಡು ನೋಡಿ ಎಂದು ಹೇಳಿದರು. ನಮ್ಮ ಆತ್ಮ ನಮ್ಮ ಹತ್ತಿರ ಭದ್ರವಾಗಿದೆ. ನಾವು ಮಾಡಿರತಕ್ಕಂಥಾದ್ದು ಸರಿಯೋ, ಇವರು ಮಾಡಿರತಕ್ಕಂಥಾದ್ದು ಸರಿಯೋ ಎನ್ನತಕ್ಕಂಥದ್ದನ್ನು ಹೇಳುವುದಕ್ಕೆ ನ್ಯಾಯಾಂಗ ಇದೆ. ಅಲ್ಲಿ ತೀರ್ಮಾನವಾಗುತ್ತದೆ. ಆದರೆ ಇವತ್ತು ಒಂದಂತೂ ಸತ್ಯವನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಮನಿಸಬೇಕು. ನೀವು ಬಿಜೆಪಿಯವರ ಜೊತೆ ಸೇರಿ ಸರ್ಕಾರ ಮಾಡಿದ್ದೀರಿ, ಇವು ಅವರ ಫ್ಯಾಸಿಸ್ಟ್ ಧೋರಣೆಗಳು. ಮಾತನಾಡಲಿಕ್ಕೆ ಅವಕಾಶವನ್ನು ಕೊಡದೆ ಬಿಲ್‌ಗಳನ್ನು ಪಾಸ್ ಮಾಡಿಕೊಳ್ಳತಕ್ಕಂಥ ಬಿಜೆಪಿಯವರ ಫ್ಯಾಸಿಸ್ಟ್ ಧೋರಣೆಗೆ ಬಲಿಯಾಗಬೇಡಿ ಎಂದು ನಾನು ವಿನಂತಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಇಲ್ಲಿಗೆ ಚರ್ಚೆಯನ್ನು ಮುಗಿಸೋಣ. ಆಯಿತು, ಈಗ ಧನವಿನಿಯೋಗದ ಬಗ್ಗೆ. ಸಾಕಷ್ಟು ಜನ ಹಿರಿಯರು ಮಾತನಾಡಿದ್ದಾರೆ, ಮಾನ್ಯ ರಾಜೇಂದ್ರನ್‌ರವರೆ ಕುಳಿತುಕೊಳ್ಳಿ. ಎಲ್ಲರೂ ಮಾತನಾಡಲು ಅವಕಾಶಕೊಡುವ ಅಗತ್ಯವಿಲ್ಲ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ದಯಮಾಡಿ ಮಾನ್ಯ ಪಟೇಲ್‌ರವರಿಗೆ ಅವಕಾಶವನ್ನು ಮಾಡಿಕೊಡಿ. ಅವರ ಬಗ್ಗೆ ಆಪಾದನೆ ಮಾಡಿ ಈಗ ಮಾತನಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು: ಈಗ ನನಗೆ ಅವಕಾಶ ಮಾಡಿಕೊಡಿ ಎಂದು ಕೇಳಿದರೆ ಎಲ್ಲರಿಗೂ ಮಾಡಿಕೊಡುವುದಕ್ಕಾಗುವುದಿಲ್ಲ. ಧನವಿನಿಯೋಗ ವಿಧೇಯಕ ಈಗ ವಾಪಸ್ಸು ಬಂದಿದೆ. ದಯಮಾಡಿ ಅದರ ಬಗ್ಗೆ ಚರ್ಚೆ ಮಾಡಲಿ. ಬೇರೆಯವರಿಗೆ ಅವಕಾಶವನ್ನು ಕೊಡೋಣ. ಇದು ಪೋಸ್ಟ್‌ಮಾರ್ಟ್‌ಂನ ಅಗತ್ಯವಿಲ್ಲ. ಆಯಿತು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು: ಆಯಿತು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ಧನವಿನಿಯೋಗದ ಬಗ್ಗೆ ಮೇಲ್ಮನೆಯಲ್ಲಿ ಏನು ನಡೆದಿದೆ ಎನ್ನುವುದರ ಬಗ್ಗೆ ಅದರ ಕಾಪಿ ಆದರೂ ತರಿಸಿಕೊಡಿ.

ಶ್ರೀ ಎಸ್. ರಾಜೇಂದ್ರನ್: ನಾನು ಮಾತನಾಡಬೇಕು.

ಅಧ್ಯಕ್ಷರು: ಎಲ್ಲರಿಗೂ ಅವಕಾಶ ಕೊಡತಕ್ಕಂಥ ಅಗತ್ಯವಿಲ್ಲ. ಇದರ ಬಗ್ಗೆ ಬೆಳಿಗ್ಗೆಯಿಂದ ಸಾಕಷ್ಟು ಚರ್ಚೆಯಾಗಿದೆ. ಮತ್ತೆ ನನಗೂ ಅವಕಾಶ ಕೊಡಿ ಎಂದರೆ, ಎಷ್ಟು ಜನರಿಗೆ ಮಾತನಾಡಲು ಅವಕಾಶ ಕೊಡುವುದಕ್ಕಾಗುತ್ತದೆ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಧನವಿನಿಯೋಗ ಮೇಲ್ಮನೆಯಲ್ಲಿ ಏಕೆ ಪಾಸ್ ಆಗಲಿಲ್ಲ ಎನ್ನವುದರ ಬಗ್ಗೆ ಮಾಹಿತಿ ಕೊಟ್ಟು ಆಮೇಲೆ ಚರ್ಚೆ ಮಾಡಬೇಕು ಅಲ್ಲವೆ?

ಅಧ್ಯಕ್ಷರು: ಮಾನ್ಯ ಹೆಗ್ಡೆಯವರೆ, ಎಲ್ಲರೂ ಚರ್ಚೆ ಮಾಡಬೇಕೆಂದರೆ ಇಲ್ಲಿರುವ 224 ಜನರಿಗೆ ಎಲ್ಲಿ ಅವಕಾಶವಿದೆ. ಎಲ್ರಿ ಸಮಯ ಇದೆ?

ಶ್ರೀ ಎಸ್. ರಾಜೇಂದ್ರನ್: ನನಗೆ ಅವಕಾಶ ಕೊಡಿ ಎಂದು ಹೇಳುತ್ತಿದ್ದೇನೆ. ತಾವು ಕೋಪಿಸಿಕೊಳ್ಳುವುದು ಬೇಡ.

6. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಕಾರ್ಯದರ್ಶಿ ವಿಧಾನ ಸಭೆ: ಸನ್ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ವಿಧಾನಪರಿಷತ್ತು ಸಹಮತಿ ನೀಡದ 2005–06ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು. (ಅನುಬಂಧ)

7. ಶಾಸನ ರಚನೆ

ಕರ್ನಾಟಕ ಧನವಿನಿಯೋಗ ವಿಧೇಯಕ–2006

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನಪರಿಷತ್ತು ಸಹಮತಿ ನೀಡದ 2005–06ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "ಕರ್ನಾಟಕ ವಿಧಾನಪರಿಷತ್ತು ಸಹಮತಿ ನೀಡದ 2005–06ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನಪರಿಷತ್ತು ಸಹಮತಿ ನೀಡದ 2005–06ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು (ತಿದ್ದುಪಡಿ) ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧ–I)

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನ ಪರಿಷತ್ತು ಸಹಮತಿ ನೀಡದ 2005–06ನೇ ಸಾಲಿನ ಕರ್ನಾಟಕ ಧನವಿನಿಯೋಗ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸ ಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮೇಲ್ಮನೆಯಲ್ಲಿ ಸಾಕಷ್ಟು ಚರ್ಚೆಯಾಗಿ ಉದ್ದೇಶಗಳು ಮತ್ತು ಕಾರಣಗಳು ಹೇಳಿಕೆಗಳ ಈ ಸಂದರ್ಭದಲ್ಲಿ 2005–06ನೇ ಸಾಲಿನ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿ ಬರುವ ಹಲವು ಖರ್ಚುಗಳನ್ನು ಒದಗಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯಿಂದ ವಿನಿಯೋಗಿಸಲು ಭಾರತ ಸಂವಿಧಾನದ 205(1) ಎ–ನ ಅನುಚ್ಛೇದದ ಉಪಬಂಧಗಳನ್ನು ಅನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ ಎಂದು ಅಲ್ಲಿ ಹೇಳಿದಾಗ, ಪ್ರತಿ ಪಕ್ಷದ ನಾಯಕರು 205(1) ಮಾತ್ರ ಇರಬೇಕು. 'ಎ' ಎನ್ನುವ ಅನುಚ್ಛೇದವನ್ನು ತೆಗೆದು ಹಾಕಬೇಕೆಂದು ಗಂಟೆಗಟ್ಟಲೆ ಚರ್ಚೆಯಾಯಿತು. ಮಾನ್ಯ ಸಭಾಪತಿಗಳ ಕೊಠಡಿಯಲ್ಲಿ ಪ್ರತಿ ಪಕ್ಷದ ನಾಯಕರನ್ನು ಕೂಡಿಸಿಕೊಂಡು ತಿದ್ದುಪಡಿಯನ್ನು ಮಾಡಬೇಕೆಂದು ತೀರ್ಮಾನವಾಯಿತು. ತಿದ್ದುಪಡಿಯನ್ನು ನಾನು ಮುಂದಿಟ್ಟೆ. ಅದಾದ ನಂತರ ಬಹುಮತ ಇದೆ ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ ಈ ವಿಧೇಯಕವನ್ನು ತಿರಸ್ಕಾರ ಮಾಡಿದರು. ಅದಕ್ಕೋಸ್ಕರ ಇದು ಮತ್ತೊಮ್ಮೆ ಇಲ್ಲಿಗೆ ಬಂದಿದೆ. ಅದಕ್ಕೋಸ್ಕರ ಇವತ್ತು ಆ ಮಾರ್ಪಾಡಿನೊಂದಿಗೆ ವಿಧೇಯಕವನ್ನು ಇಲ್ಲಿ ಪುನರ್ ಪರಿಶೀಲನೆ ಮಾಡಿ ತಾವು ಒಪ್ಪಿಗೆಯನ್ನು ಕೊಡಬೇಕೆಂದು ಹೇಳಿ, ಮೇಲ್ಮನೆಯಿಂದ ಬಂದಿರುವ ಬಿಲ್‌ನ್ನು ಮತ್ತೆ ಇಲ್ಲಿ ಇಂಟ್ರಡ್ಯೂಸ್ ಮಾಡುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಈ ಬಿಲ್ ಈ ಮನೆಯಲ್ಲಿ ಚರ್ಚೆಯಾಗಲಿಲ್ಲ, ಅದು ನಮ್ಮ ದುರಾದೃಷ್ಟವೆಂದು ನಾನು ಬೆಳಿಗ್ಗೆ ಹೇಳಿದ್ದೇನೆ. ನಾನು ಅದನ್ನು ಮತ್ತೆ ರಿಪೀಟ್ ಮಾಡುವುದಿಲ್ಲ. ಕನಿಷ್ಠ ಯಾವ ಆಧಾರದ ಮೇಲೆ ಮೇಲ್ಮನೆಯಲ್ಲಿ ಆ ಬಿಲ್‌ನ್ನು ಒಪ್ಪಿಲ್ಲ, ಇವರು ಏನು ಹೇಳಿಕೆ ಕೊಟ್ಟಿದ್ದಾರೆ, ಅವರು ಅಲ್ಲಿ ಏನು ತೀರ್ಮಾನ ಮಾಡಿದ್ದಾರೆ ಎಂಬುದು ಮುಖ್ಯ ನಾನು ತಾವು ಹೇಳುತ್ತಿರುವಾಗ ನಾನು ಕೇಳಿದೆ, ಒಂದು ಹೇಳಿಕೆಯನ್ನು ಬೇಗ ತರಿಸಿ ಬಿಡಿ ಎಂದು. ಏತಕ್ಕೆ ಅವರು ಬಿಲ್‌ನ್ನು ವಿತ್‌ಹೇಲ್ಡ್ ಮಾಡಿದ್ದಾರೆ ಅಥವಾ ರಿಜೆಕ್ಟ್ ಮಾಡಿದ್ದಾರೆ ಎನ್ನುವುದು ಗೊತ್ತಿಲ್ಲದೆ ಕತ್ತಲಲ್ಲಿ ಕುಳಿತುಕೊಂಡು ನಾವು ಏಕೆ ಚರ್ಚೆ ಮಾಡಬೇಕು? ಸನ್ಮಾನ್ಯ ಉಪ ಮುಖ್ಯಮಂತ್ರಿಗಳು, ಅದರ ಒಂದು ಎಕ್ಸಾಕ್ಟ್‌ನ್ನು ತರಿಸಲಿ;

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಹೇಳುತ್ತಿದ್ದೇನಲ್ಲಾ. ಚರ್ಚೆಗಳು ಎಲ್ಲಾ ಆಗಿ ಒಪ್ಪಿಗೆ ಕೊಡುವಂಥ ಸಂದರ್ಭದಲ್ಲಿ ಅವರು ರೈಸ್ ಮಾಡಿದ್ದು ಒಂದೇ ಒಂದು ಅಬ್ಜಕ್ಷನ್.

ಶ್ರೀ ಜೆ.ಸಿ. ಮಾಧುಸ್ವಾಮಿ: ಹಾಗೆ ಆಗಲ್ಲ ಸರ್, ಅದನ್ನು ನೀವು ತರಿಸಬೇಕು. ಬಿಲ್ ಯಾವಾಗಲೂ ರಿಜೆಕ್ಟ್ ಆದರೆ ವಿತ್‌ಹೋಲ್ಡ್ ಆದರೆ ತಾವು ಈ ಸಭೆಗೆ ಮಾಹಿತಿ ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾಹಿತಿಯನ್ನು ನಾನು ಕೊಡುತ್ತಿದ್ದೇನೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ಏನು ವೆಂಕಟೇಶ್, ನೀವು ಹೀಗೆ ಮಾತನಾಡಿದರೆ, ...

ಶ್ರೀ ಜೆ.ಎ. ಶ್ರೀರಾಮರೆಡ್ಡಿ: ಯಾವ ಕಾರಣಕ್ಕೋಸ್ಕರವಾಗಿ ಆ ಬಿಲ್ ರಿಜೆಕ್ಟ್ ಆಗಿರುವಂಥದ್ದು . . . . . .

ಶ್ರೀ ಬಿ.ಎಸ್. ಯಡಿಯೂರಪ್ಪ: ಬಹುಮತ ಇದೆ ಎಂದು ರಿಜೆಕ್ಟ್ ಮಾಡಿದರು ಅಷ್ಟೆ. ಏನೂ ಗ್ರೌಂಡ್ಸ್ ಇಲ್ಲ.

ಶ್ರೀ ಜೆ.ಎ. ಶ್ರೀರಾಮರೆಡ್ಡಿ: ಏನೂ ಗ್ರೌಂಡ್ ಇಲ್ಲದಿದ್ದರೆ ಏಕೆ ಆ ಬಿಲ್‌ನ್ನು ರಿಜೆಕ್ಟ್ ಮಾಡಿದರು?

ಶ್ರೀ ಜೆ.ಸಿ. ಮಾಧುಸ್ವಾಮಿ: ಏಕೆ ಬಿಲ್ ರಿಜೆಕ್ಟ್ ಮಾಡಿದರು ಎನ್ನುವುದು ಗೊತ್ತಾಗಬೇಕು ಅಲ್ಲವೆ? ಈ ತರಹ: ಬಿಲ್‌ಗಳಿಗೂ ಹೀಗೆ ಮಾಡಿಕೊಂಡು ಕುಳಿತುಕೊಂಡರೆ ಹೇಗೆ? ಏಕೆ ಬಿಲ್ ರಿಜೆಕ್ಟ್ ಮಾಡಿದರು ಎಂದು ಕೇಳುವ ಅಧಿಕಾರ ನಮಗೆ ಇಲ್ಲವೆ?

(ಗೊಂದಲ)

ಶ್ರೀ ಜೆ.ಎ. ಶ್ರೀರಾಮರೆಡ್ಡಿ: ಅವರಿಗೆ ಬಹುಮತ ಇರಬಹುದು, ಗ್ರೌಂಡ್ಸ್ ಏನಾದರೂ ಇರಬೇಕಲ್ಲವೆ?

(ಗೊಂದಲ)

ಅಧ್ಯಕ್ಷರು: ಏನೇನು ನಡೆಯಿತು ಎನ್ನುವುದನ್ನು ತಾವು ಹೇಳಿಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಒಂದು ನಿಮಿಷ ಹೇಳಿ ಬಿಡುತ್ತೇನೆ ಕೇಳಿ ಸರ್. ವಿಧಾನ ಪರಿಷತ್ತು ಯಾವುದೇ ರೆಕ್ಕೆಂಡೇಶನ್ ಮಾಡದೇ ಇರುವುದರಿಂದ ಬಿಲ್‌ನ್ನು ಈ ಸದನಕ್ಕೆ ತರಲಾಗಿದೆ. ಅಲ್ಲಿ ಚರ್ಚೆಯಾದಂಥ ಕಾಲದಲ್ಲಿ ಮಾನ್ಯ ಸಭಾಪತಿಗಳ ಕೊಠಡಿಯಲ್ಲಿ ಅವರು ಕೇಳಿದಂಥ ಕೆಲವು ಅಬ್ಜಕ್ಷನ್ ಬಗ್ಗೆ ತಿದ್ದುಪಡಿಯನ್ನು ತರುವಂತಹ ಪ್ರಯತ್ನವನ್ನು ಮಾಡಿದೆವು. ಅವರು ತಿದ್ದುಪಡಿಯನ್ನು ತನ್ನಿ, ನಾವು ಒಪ್ಪಿಕೊಳ್ಳುತ್ತೇವೆ ಎಂದು ಹೇಳಿದರು. ಆದಾದ ಮೇಲೆ ಅವರು ಅದನ್ನು ಮತ್ತೆ ರಿಜೆಕ್ಟ್ ಮಾಡಿದರು. ರಿಜೆಕ್ಟ್ ಮಾಡಿದ ನಂತರ ಆ ಬಿಲ್ ಮತ್ತೆ ಈ ಮನೆಗೆ ಬಂದಿದೆ. ಇದಕ್ಕೆ ಬೇರೆ ಏನೂ ಕಾರಣಗಳು ಇಲ್ಲ. ಮಾನ್ಯ ರಾಜ್ಯಪಾಲರು ಬಹಳ ಸ್ಪಷ್ಟವಾಗಿ 205(1)ನೇ ಪದಗಳ ಅಂಕಿಗಳ ಆಧಾರದ ಮೇಲೆ ಒಪ್ಪಿಗೆಯನ್ನು ಕೊಟ್ಟು ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಲಾ ಡಿಪಾರ್ಟ್‌ಮೆಂಟ್‌ನಲ್ಲಿ 205(1)ಅನ್ನುವುದರ ಜೊತೆಗೆ (ಎ) ಎನ್ನುವುದು ಸೇರಿಕೊಂಡಿತ್ತು. 'ಎ' ಎನ್ನುವುದನ್ನು ತೆಗೆದುಹಾಕಬೇಕು ಎಂದು ಹೇಳಿದರು, ಅದಕ್ಕಾಗಿ ನಾವು ತಿದ್ದುಪಡಿಯನ್ನು ತಂದೆವು. ಹಿಂದೆ ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಸಚಿವರಾಗಿ ಈ ಪೂರಕ ಬೇಡಿಕೆಯನ್ನು ತಂದಾಗ ಇದೇ ಒಂದು ಪದ್ಧತಿ ಇತ್ತು. ಆ ಶಬ್ದ ವ್ಯತ್ಯಾಸವಾಗಿದೆ. 'ಎ' ಎನ್ನುವುದನ್ನು ತೆಗೆದುಹಾಕಬೇಕೆಂದು

ಕೇಳಿದರು. ಅದನ್ನು ಒಪ್ಪಿಕೊಂಡು ತಿದ್ದುಪಡಿಯನ್ನು ತಂದೂ ಆಯಿತು. ಅದಾದ ಮೇಲೆ ಬಹುಮತ ಇದೆ ಎಂದು ಅದನ್ನು ವಾಪಸ್ಸು ಕಳುಹಿಸಿದ್ದಾರೆ. ಅದಕ್ಕೋಸ್ಕರ ಅದನ್ನು ಮತ್ತೆ ಇಲ್ಲಿಗೆ ಬಂದಿದೆ. ಇದಕ್ಕೆ ಬೇರೆ ಯಾವ ಕಾರಣಗಳೂ ಇಲ್ಲ. ಅದಕ್ಕಾಗಿ ಒಪ್ಪಿಗೆಯ ಬಗ್ಗೆ ಮತ್ತೊಮ್ಮೆ ಈ ಮನೆಗೆ ಬಂದಿದೆ. ಇದಕ್ಕೆ ಬೇರೆ ಯಾವ ಕಾರಣಗಳೂ ಇಲ್ಲ.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ನಾನು ಮೂರು ಸೆಕೆಂಡ್‌ನಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ನಾನು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದಿಂದ ಎಲಿಕ್ಟ್ ಆದ ಮನುಷ್ಯ, ಮೃಗ ಅಲ್ಲ. ಒಂದು ನಿಮಿಷ ಸಾರ್. please permit me to speak. ಇದು ಡೆಮೋಕ್ರೆಟಿಕ್ ಕಂಟ್ರಿ.

ಅಧ್ಯಕ್ಷರು: ನೀವು ಚರ್ಚೆಯನ್ನು ಮಾಡಿ. ಪ್ರತಿ ಸಾರಿಯೂ ನೀವು ಒಬ್ಬೊಬ್ಬರೇ ಸದಸ್ಯರಿದ್ದರೂ ಕೂಡ ನೀವು ಪೂರ್ಣವಾಗಿ ಮಾತನಾಡುವುದಕ್ಕೆ ನಾನು ಅವಕಾಶವನ್ನು ಕೊಟ್ಟಿದ್ದೇನೆ. ನಾನು ಲೋಕಸಭೆಯ ಸದಸ್ಯನಾಗಿದ್ದೆ, ಅಲ್ಲಿಯೂ ಮಾತನಾಡುವುದಕ್ಕೆ 2–2 ನಿಮಿಷ ಅವಕಾಶವನ್ನು ಕೊಡುತ್ತಾರೆ. ತಾವು ದಯಮಾಡಿ ಕೇಳಿ.

ಶ್ರೀ ಎಸ್. ರಾಜೇಂದ್ರನ್: ನಾನು ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು: ನನಗೆ ಪೂರ್ಣವಾದ ಪ್ರೊಸೀಜರ್‌ಗಳು ಗೊತ್ತು. ತಾವು ಇದನ್ನೇ ಪ್ರಶ್ನೆ ಮಾಡಿಕೊಂಡು ಹೋದರೆ ಹೇಗೆ?

ಶ್ರೀ ಎಸ್. ರಾಜೇಂದ್ರನ್: ನನಗೂ ಕೂಡ ಒಂದು ಸೆಕೆಂಡ್ ಕೊಡಿ ಸ್ವಾಮಿ.

ಅಧ್ಯಕ್ಷರು: ದಿಸ್ ಈಸ್ ನಾಟ್ ಕರೆಕ್ಟ್.

ಶ್ರೀ ಎಸ್. ರಾಜೇಂದ್ರನ್: ಐ ಆ್ಯಮ್ ರೈಟ್.

ಅಧ್ಯಕ್ಷರು: ನೀವು ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು.

ಶ್ರೀ ಎಸ್. ರಾಜೇಂದ್ರನ್: ನಾನು ಒಂದು ನಿಮಿಷದಲ್ಲಿ ಹೇಳುತ್ತೇನೆ. ಮಾನ್ಯ ಈಶ್ವರಪ್ಪನವರು ಒಂದು ಮಾತನ್ನು ಹೇಳಿದರು. ಯೂ ಥಿಂಕ್ ಓವರ್ ಇಟ್. ತಾವು ಕೂಡ ಅರ್ಥವನ್ನು ಮಾಡಿಕೊಳ್ಳಿ. ಥ್ಯಾಂಕ್ಸ್‌ನ್ನು ಹೇಳಬೇಕೇ ಅಥವಾ ಬೇಡವೇ ಎನ್ನುವುದರ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. 175 ಮತ್ತು 171, ಯಾರ್ಯಾರು ಓದಿಲ್ಲವೋ. ಈ ರಾಜ್ಯದಲ್ಲಿ ಹಾಗೂ ಈ ದೇಶದಲ್ಲಿರುವವರಿಗೆಲ್ಲರಿಗೂ 175 ಬಗ್ಗೆ ಈಗ ಗೊತ್ತಾಗಿಬಿಟ್ಟಿದೆ. ಯಾರ್ಯಾರು 150ರ ಮೇಲೆ ಹೋಗಿಲ್ಲವೋ ಎಲ್ಲರಿಗೂ 175 ಅಂದರೆ ಏನು ಅಂತ ಗೊತ್ತಿದೆ. 176 ಏನು ಎಂಬುದು ಗೊತ್ತಿದೆ. ಅದು ಇಲ್ಲ, ಇಲ್ಲಿ ಏನು ಚರ್ಚೆ ಎಂದರೆ ತಾವು ರೂಲಿಂಗ್ ಕೊಟ್ಟ ಮೇಲೆ ನಾವು ನಿಮಗೆ ಅಡ್ಡ ಬರುವುದಿಲ್ಲ. ತಾವು ದೊಡ್ಡ ಪೀಠದ ಮೇಲೆ ಕುಳಿತುಕೊಂಡಿದ್ದೀರಿ. ಆದರೆ ಕಾನ್‌ಸ್ಟಿಟ್ಯೂಷನ್‌ನ್ನು ಕಿತ್ತುಹಾಕಬೇಕೆಂದು ಮಾನ್ಯ ಈಶ್ವರಪ್ಪನವರು ಹೇಳಿದರು. ಹೇಗೆ ಸಾರ್ ಯಡಿಯೂರಪ್ಪನವರೆ, ಬರ್ನ್ ಮಾಡಿ ಎಂದು ಹೇಳಿದ್ದೀರಲ್ಲಾ, ಹೋದವರುಷ . . . . .

(ಗೊಂದಲ)

ಅಧ್ಯಕ್ಷರು: ಮಾನ್ಯ ಈಶ್ವರಪ್ಪನವರೆ, ಅವರು ಏನು ಹೇಳುತ್ತಾರೋ ಹೇಳಲಿ ಬಿಡಿ.

ಶ್ರೀ ಕೆ.ಎಸ್. ಈಶ್ವರಪ್ಪ: ಈಗ ನಾನು ಏನು ಹೇಳಿದೆ ಎಂದರೆ ಸನ್ಮಾನ್ಯ ರಮೇಶ್‌ಕುಮಾರ್‌ರವರು ಸಂವಿಧಾನದ ಬಗ್ಗೆ ಯಾವಾಗಲೂ ಮಾತನಾಡುತ್ತಾರೆ, ಸ್ಪೀಕರ್ ಬಗ್ಗೆ ಧಿಕ್ಕಾರಗಳನ್ನು ಕೂಗಿದಾಗ ರಾಜ್ಯಪಾಲರ ಬಗ್ಗೆ ಏಜೆಂಟ್ ಎಂದು ಕರೆದಾಗ ಆ ಸಂವಿಧಾನವನ್ನು ತೆಗೆದುಕೊಂಡು ಅದರ ಬಗ್ಗೆ ತಾವು ಮಾತನಾಡಲಿಲ್ಲ, ಅದಕ್ಕಾಗಿ ಅದನ್ನು ಸುಟ್ಟುಹಾಕಿ ಎಂದು ಅವರಿಗೆ ಹೇಳಿದ್ದೇವೆಯೇ ವಿನಃ ಸಂವಿಧಾನವನ್ನು ನಾನು ನಮ್ಮ ದೇವರಿಗಿಂತ ಜಾಸ್ತಿ ಪೂಜೆ ಮಾಡುವಂಥವನು . . . . . .

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಈಶ್ವರಪ್ಪನವರೆ, ಒಂದು ನಿಮಿಷ.

ಶ್ರೀ ಕೆ.ಎಸ್. ಈಶ್ವರಪ್ಪ: ಅದಕ್ಕಾಗಿಯೇ ನಾನು ಇದನ್ನು ನಿಮ್ಮ ಗಮನಕ್ಕೆ ತಂದಿದ್ದೇನೆ. ಇದನ್ನು ತಾವು ಎಲ್ಲೆಲ್ಲೋ ಮಿಕ್ಸ್ ಮಾಡಬೇಡಿ. ಸಂವಿಧಾನದ ಬಗ್ಗೆ ಈ ದೇಶದಲ್ಲಿ ಸಂವಿಧಾನವನ್ನು ತರಬೇಕೆಂದು ಹೋರಾಟ ಮಾಡಿದವರಲ್ಲಿ ನಾವೂ ಕೂಡ ಇದ್ದೇವೆ.

ಶ್ರೀ ಎಸ್. ರಾಜೇಂದ್ರನ್: ಇಲ್ಲಾ ನಾವು ಅದಕ್ಕೆ ಹೇಳಲಿಲ್ಲ. ಇದರ ಬಗ್ಗೆ ಯಾರು ಹೋರಾಟ ಮಾಡಿದ್ದಾರೋ ಅದು ಎಲ್ಲಾ ಇಲ್ಲ. ಈಗ ಒಂದು ಮಾತನ್ನು ಹೇಳುತ್ತೇನೆ. ತಾವು ರೂಲಿಂಗ್‌ನ್ನು ಕೊಟ್ಟಿದ್ದೀರಿ, O.K. Well. Fine. ಒಂದು ಹೆಣ್ಣು ಮಗಳಿಗೆ ಎರಡು ಸಲ ತಾಳಿಯನ್ನು ಹಾಕಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಒಂದು ಅವಳು ಡೈವರ್ಸ್ ಮಾಡಿರಬೇಕು, ಇನ್ನೊಂದು ಅವಳ ಕಂಡ ಸತ್ತುಹೋಗಿರಬೇಕು. ಅನಂತರ ಇನ್ನೊಂದು ತಾಳಿಯನ್ನು ಹಾಕಿಕೊಳ್ಳಬಹುದು. ಎರಡು ತಾಳಿಯನ್ನು ಹಾಕಿಕೊಂಡರೆ, ಅಂತಹ ಮೂರ್ಖ ಈ ದೇಶದಲ್ಲಿ ಯಾರೂ ಕೂಡ ಇಲ್ಲ. ಯಾವ ಕಾಲದಲ್ಲಿಯೂ polygamy system ಇರಬಹುದು, ಅದು ಒಂದು ಕಡೆ ಇರಲಿ. Well of the House ನಲ್ಲಿ ಮಾತನಾಡಿರುವ ಬಗ್ಗೆ ಬಹಳ ಗಂಭೀರವಾಗಿ ಮಾನ್ಯ ಸದಸ್ಯರಾದ ಶ್ರೀ ಮಹಿಮಾ ಪಟೇಲ್‌ರವರು ಹೇಳಿದರು. ನನಗೆ ಒಂದು ಡೌಟ್ ಆಗಿದೆ. ನೀರು ಹಾಕಿ ಬಿಟ್ಟರೆ ಏನಾಗುತ್ತದೆ ಅಂತ. ಅಪ್ರೋಪ್ರಿಯೇಷನ್ ಬಿಲ್ ಅಂದರೆ, ನಾನು ಒಂದು ತಮಾಷೆಯಾಗಿ ಏನು ಅನ್ನಪೂರ್ಣ ಹೋಟೆಲ್ ಬಿಲ್ ಎಂದು ಹೇಳಿದರೆ ಅದು ಅಸಹ್ಯ ಆಗುವುದಿಲ್ಲವೆ? well of the House ಅಂದರೆ ಅದರಲ್ಲಿ ನೀರು ಹಾಕಿ ಬಿಟ್ಟರೆ ಏನು ಅನ್ನುವುದು? ಇವರೇ ವೆಲ್ ಆಫ್ ದಿ ಹೌಸ್‌ನಲ್ಲಿ ಇವರೇ ನಿಲ್ಲಿಸಿದ್ದಾರೆ, ನಾವು ನೀರು ಹಾಕುವುದಿಲ್ಲ, ಪೆಟ್ರೋಲೇ ಹಾಕಬೇಕು ಇಲ್ಲಿ, ಕೆರೋಸಿನ್ ಹಾಕಬೇಕು, ಬೆಂಕಿ ಇಡುವುದಕ್ಕೆ ಆಗುತ್ತದೆಯೇ? ಇಲ್ಲ, these are all very important Constitutional matters ಇದರ ಮೇಲೆ ತಾವು ಏನಾದರೂ ಕೂಡ ರೂಲಿಂಗ್‌ನ್ನು ಕೊಡಿ. It is your privilege, your right. But, our privilege. We will not allow even one inch to shake the Constitution. We will not allow. Because ಯಾರು ಶೇಕ್ ಮಾಡಿದರು ಎಂದು ನಾನು ಹೇಳಲಿಲ್ಲ. ನಾನು ಹೇಳುತ್ತೇನೆ. As long as am in the Republic on Party of India and an as M.L.A. of this Karnataka State it is my privilege. I will not bow down my head to anybody. Not necessary. In the Constitution, Article 14 ನಲ್ಲಿ Equal rights ಏನು ಹೇಳಿದೆ, ಅದನ್ನು ಕ್ವೆಶ್ಚನ್ ಮಾಡುವುದಕ್ಕೆ ಯಾರಿಗೂ ಅಧಿಕಾರ ಇಲ್ಲ. ಸಾಧ್ಯವಿಲ್ಲ. That is basic principles, Fundamental right. ಅದು ಒಂದು ಕಡೆ ಇರಲಿ. ನಮ್ಮ ರೈಟ್ಸ್‌ನ್ನು ನಮ್ಮ ಕಡೆಗೆ

ತೋರಿಸಿ. ಆ ಪೀಠದಲ್ಲಿ ಕುಳಿತುಕೊಂಡಿರುವಂತಹ ಸಮಯದಲ್ಲಿ ಮಾನ್ಯ ಜಯಪ್ರಕಾಶ್‌ಹೆಗಡೆಯವರು ಅಲ್ಲಿ ಕುಳಿತುಕೊಂಡರು. ಅವತ್ತು ತಾವು ಕಾಫಿಗೋ ಅಥವಾ ಎಲ್ಲಿಗೋ ಹೋಗಿದ್ದರೋ ಗೊತ್ತಿಲ್ಲ. ಫ್ಯಾನಲ್‌ನಲ್ಲಿ ಇರುವವರಲ್ಲಿ, ಅವರು ಇದ್ದಾಗ ಇಲ್ಲಿ ಮಾನ್ಯ ದೇಶಪಾಂಡೆಯವರು ಒಂದು ಮಾತನ್ನು ಹೇಳಿದರು. ಅವರು ಅದನ್ನು ಕಿವಿಯಲ್ಲಿ ಕೇಳಿದ ತಕ್ಷಣ.....

ಅಧ್ಯಕ್ಷರು: ಮಾನ್ಯ ರಾಜೇಂದ್ರನ್‌ರವರೆ, ತಾವು ಬೇಗನೆ ಮುಗಿಸಿ ಈ ತರಹ ಆದರೆ ಹೇಗೆ?

ಶ್ರೀ ಎಸ್. ರಾಜೇಂದ್ರನ್: ಅವರು ಹೇಳಿದ ತಕ್ಷಣ, ಮಾನ, ಮರ್ಯಾದೆ, ಗೌರವ, ಸೆಲ್ಫ್ ರೆಸ್ಪೆಕ್ಟ್ ಎಲ್ಲವನ್ನೂ ಇಟ್ಟುಕೊಂಡು ನಾನು ಇಲ್ಲಾ ಕುಳಿತುಕೊಳ್ಳುವುದಿಲ್ಲ ಎಂದು ಹೇಳಿ ಬಂದಿರುವವರು ನೀವು. He was the person who said 'ನಾನು ಈ ಪೀಠದಲ್ಲಿ ಕುಳಿತುಕೊಳ್ಳುವುದಕ್ಕೆ ಅರ್ಹತೆ ಇಲ್ಲ. ನನ್ನ ಮೇಲೆ ನೀವು ಇಂಟಿಗ್ರಿಟಿ ಪ್ರಶ್ನೆ ಮಾಡಿರುವುದರಿಂದ ನಾನು ಇಲ್ಲಿ ಕುಳಿತುಕೊಳ್ಳುವುದಿಲ್ಲ' ಎಂದು ನೀವು ಹೇಳಿದಿರಿ. ನಾವು ನಿಮ್ಮ ಬಗ್ಗೆ ಯಾವಾಗಲೂ ತಪ್ಪು ಹೇಳಿಯೇ ಇಲ್ಲ ಇಲ್ಲೆಲ್ಲೋ ಏನೇನೋ ಮಾತುಗಳನ್ನು ಹೇಳಿದ್ದಾರೆ ತಮಗೆ ನೋವಾಗಿದೆ.....

ಶ್ರೀ ಹೆಚ್.ಸಿ. ಬಾಲಕೃಷ್ಣ: ಅವರಿಗೆ ಕೆಳಕ್ಕೆ ಇಳಿಸುತ್ತಾರೆಂದು ಗೊತ್ತು. ಅದಕ್ಕಾಗಿ ಅವರು ಕೆಳಗೆ ಬಂದು ಬಿಟ್ಟರು.

ಶ್ರೀ ಎಸ್. ರಾಜೇಂದ್ರನ್: ಇರಬಹುದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಬಾಲುರವರು ಅಷ್ಟು ಲೈಟ್ ಆಗಿ ಮಾತನಾಡುವುದರಿಂದಲೇ ವಿಧಾನಸಭೆಯಲ್ಲಿ ಕಾನ್‌ಸ್ಟಿಟ್ಯೂಷನ್ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವೇ ಇಲ್ಲವಲ್ಲಾ.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್: ನಾವು ಲೈಟ್ ಆಗಿ ಮಾತನಾಡುತ್ತಿಲ್ಲ. ದಯವಿಟ್ಟು ತಾವು ಇದನ್ನು ಅರ್ಥಮಾಡಿಕೊಳ್ಳಬೇಕು. ನಾನು ಇದನ್ನು ಲೈಟ್ ಆಗಿ ಮಾತನಾಡುತ್ತಿಲ್ಲ. ಈಗ ಏನೇ ಮಾತನಾಡಿದರೂ ಕೂಡ ಸನ್ಮಾನ್ಯ ಅಧ್ಯಕ್ಷರೆ, ನಾವು ಏನೇ ಮಾತನಾಡಿದರೂ ಕೂಡ ಅದನ್ನು ತಾವು ಕುಳಿತುಕೊಂಡು ಪರಿಶೀಲನೆಯನ್ನು ಮಾಡಬೇಕು. ಏನು ಕೆಳಗಡೆ ಇಳಿದುಕೊಂಡು ಬರುವುದಲ್ಲ. ಇದು ಲೈಟಾಗಿ ಮಾತನಾಡುವುದಲ್ಲ. ಅದನ್ನು ದಯಮಾಡಿ ಅರ್ಥಮಾಡಿಕೊಳ್ಳಬೇಕು.

ಅಧ್ಯಕ್ಷರು: ಇದನ್ನು ನಾನು ತೆಗೆದುಕೊಂಡಿದ್ದೇನೆ, ನೀವು ಮಧ್ಯದಲ್ಲಿ ಎರಡು ನಿಮಿಷ ಎಂದು ಹೇಳಿದಿರಿ. ಈ ರೀತಿಯಾಗಿ ಮಾಡಿದರೆ ಹೇಗೆ? ದಯಮಾಡಿ ಬೇಗನೆ ಮುಗಿಸಿಬಿಡಿ.

ಶ್ರೀ ಎಸ್. ರಾಜೇಂದ್ರನ್: ಬಹಳ ಸಂತೋಷ. ನಾನು ಮುಖ್ಯಮಂತ್ರಿಗಳಿಗೆ ಥ್ಯಾಂಕ್ಸ್ ಹೇಳಬೇಕು. ಒಂದೇ ಒಂದು ಎಕ್ಸಾಂಪಲ್‌ನ್ನು ಕೊಡುತ್ತೇನೆ. ಮದುವೆಗೆ ಇನ್‌ವಿಟೇಷನ್‌ನ್ನು ಕೊಟ್ಟರೆ ಅವರು ರಿಸೆಪ್‌ಷನ್‌ಗೆ ಪಾರ್ಟಿಸಿಪೇಟ್ ಮಾಡುವುದಕ್ಕೆ ಬಂದಾಗ ಅವರಿಗೆ ಥ್ಯಾಂಕ್ಸ್ ಹೇಳಿ ಕಳುಹಿಸುತ್ತೇವೆ. ನೀವು ಬಂದಿದ್ದೀರಿ, ಬಹಳ ಸಂತೋಷ ಎಂದು ಹೇಳುತ್ತೇವೆ. ಆದರೆ ಇನ್‌ವಿಟೇಷನ್‌ನ್ನು ಕೊಡುವುದಿಲ್ಲ, ಅವನೇ ಬಂದು ಬಿಡುತ್ತಾನೆ, ಅವನಿಗೆ ನೀವು ಥ್ಯಾಂಕ್ಸ್ ಎಂದು ಏನಾದರೂ ಹೇಳುತ್ತೀರಾ? ಆದರೆ ಅವರಿಗೂ ಕೂಡ ಥ್ಯಾಂಕ್ಸ್ ಹೇಳುತ್ತಾರೆ. ಆದ್ದರಿಂದ ಮಾನ್ಯ ಗೌರ್ನರ್‌ರವರು ನಾವು ಕರೆದಿದ್ದಕ್ಕೆ ಬಂದಿದ್ದಾರೋ, ಇಲ್ಲ ಅವರೇ ಬಂದಿದ್ದಾರೋ ಅವರಿಗೆ ಥ್ಯಾಂಕ್ಸ್

ಹೇಳಬೇಕಾ ಅಥವಾ ಬೇಡ ಎಂಬುದರ ಬಗ್ಗೆ ಚರ್ಚೆ ನಮಗೆ ಇಲ್ಲ. ಇವತ್ತಿನ ದಿವಸ ಥೌಸಂಡ್ ಥ್ಯಾಂಕ್ಸ್ ಗೌರ್ನರ್‌ಗೆ, ಅದು ಒಂದು ಕಡೆ ಇರಲಿ. ಈಗ ಜಿಲ್ಲೆಗಳಲ್ಲಿ ಮಂತ್ರಿಗಳಿಲ್ಲ, ನಮ್ಮ ಜಿಲ್ಲೆಯಲ್ಲಿ ಇಲ್ಲ, ಮಾನ್ಯ ಮುಖ್ಯಮಂತ್ರಿಗಳು ಹೇಳಿರುವ ಪ್ರಕಾರ ಡೆವಲಪ್‌ಮೆಂಟ್ ವರ್ಕ್ಸ್ ಇಲ್ಲ, ಅಲ್ಲಿರುವಂತಹ ಅಧಿಕಾರಿಗಳನ್ನು ಕ್ವೊಶ್ಚನ್ ಮಾಡುವ ಹಾಗಿಲ್ಲ. ಜನರು ಇವುಗಳೆಲ್ಲದರ ಬಗ್ಗೆ ನಮ್ಮನ್ನು ಕೇಳಬಹುದು ಎಂದು ನಾವು ನಿಮಗೆ ಹೇಳಿದೆವು. ಆದ್ದರಿಂದ ಇದರ ಬಗ್ಗೆ ಚರ್ಚೆ ಮಾಡೋಣ. ತಾವು ಇದರ ಬಗ್ಗೆ ಒಂದು ಒಳ್ಳೆಯ ತೀರ್ಮಾನಕ್ಕೆ ಬನ್ನಿ ಎಂದು. But, against the Constitution. 175(1) ಆಗಿರಲಿ, ತಾವು ಏನು ರೂಲಿಂಗ್‌ನ್ನು ಕೊಟ್ಟಿದ್ದೀರೋ that Ruling, everybody should obey ಎಂದು ತಾವು ಹೇಳಿದಿರಿ ಅಲ್ವಾ? I will not oblige. ಇದು ಕಾನ್‌ಸ್ಟಿಟ್ಯೂಷನ್ ವಿರುದ್ಧವಾಗಿ ಹೇಳಿರುವುದು, Republican Party of India will not bow down its head. We will maintain under the leadership of Dr.Baba Saheb Ambedkar. We will maintain the Constitution. Even for shake of an inch of the Constitution we will boycott and we will talk about the incident.

ಅಧ್ಯಕ್ಷರು: ಆಯಿತು, ಕುಳಿತುಕೊಳ್ಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಹೆಗ್ಡೆಯವರೆ, ತಾವು ಈ ರೀತಿಯಾಗಿ ಮಾಡಿದರೆ ಹೇಗೆ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಬಾಲುರವರು ಹೇಳಿರುವ ಬಗ್ಗೆ ನಾನು ಏನು ಮಾಡುತ್ತಿದ್ದೆ ಅಂದರೆ, ಶಾಶ್ವತವಾಗಿ ನಾನು ಅಲ್ಲಿ ಕುಳಿತಿದ್ದರೆ ಅದನ್ನು ಮಾಡುತ್ತಿರಲಿಲ್ಲ. ಶಾಶ್ವತವಾಗಿ ನಾನು ಅಲ್ಲಿ ಕುಳಿತಾಗ ನನ್ನ ಮೇಲೆ ಆಪಾದನೆಯನ್ನು ಮಾಡಿದ್ದರೆ ತಾತ್ಕಾಲಿಕವಾಗಿಯಾದರೂ ನಾನು ಅಲ್ಲಿ ಕುಳಿತುಕೊಳ್ಳದೆ ಬೇರೆಯವರನ್ನು ಅಲ್ಲಿ ಕೂರಿಸಿ ನಾನು ಛೇಂಬರ್‌ಗೆ ಹೋಗುತ್ತಿದ್ದೆ. ನನಗೆ ಅಷ್ಟು ಸ್ವಾಭಿಮಾನವಿದೆ, ದಯವಿಟ್ಟು ನಾನು ಮಾತನಾಡುತ್ತೇನೆ, ಏಕೆಂದರೆ ಯಾವುದೇ ಒಬ್ಬ ವ್ಯಕ್ತಿಗೆ ಸ್ವಾಭಿಮಾನವಿದ್ದಾಗ ಬೈಸಿಕೊಂಡು ಕುಳಿತುಕೊಳ್ಳುವುದಕ್ಕೆ ನಾನು ತಯಾರಿಲ್ಲ. ಅದಕ್ಕಾಗಿ ಅಲ್ಲೇ ಆಗಲಿ ಅಥವಾ ಇಲ್ಲಿಯೇ ಆಗಲಿ, ಆ ರೀತಿಯಾಗಿ ನಡೆದುಕೊಳ್ಳುತ್ತೇನೆ ಎನ್ನುವಂಥಾದ್ದು. ಅದಕ್ಕೆ ಅವಕಾಶ ಬರುತ್ತದೆ, ಅದು ನಿಮ್ಮ ಕೈಯಲ್ಲಿ ಇಲ್ಲ.

ಅಧ್ಯಕ್ಷರು: ಮಾನ್ಯ ಹೆಗ್ಡೆಯವರೆ, ತಾವು ಮಾತನಾಡಿ. ಆ ಕಡೆಗೆ ಏತಕ್ಕೆ ನೋಡುತ್ತಿದ್ದೀರಿ? ಏತಕ್ಕಾಗಿ ಆ ಕಡೆಗೆ ಈ ಕಡೆಗೆ ಮಾತನಾಡುತ್ತಿದ್ದೀರಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ವೆಂಕಟೇಶ್‌ರವರು ಕೊಡುವುದಾಗಿದ್ದರೆ ನಾನು ಅಕ್ಸೆಪ್ಟ್ ಮಾಡುವುದೇ ಇಲ್ಲ. ಆದರೆ ಇವತ್ತು ನಾನು ಅದರ ಬಗ್ಗೆ ಪುನಃ ಚರ್ಚೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸುಪ್ರೀಂಕೋರ್ಟಿನ ಆದೇಶದ ಬಗ್ಗೆ ಹೇಳಿದ್ದಾರೆ. ಅದರಲ್ಲೂ ಕೂಡ ಕ್ಲಿಯರ್ ಆಗಿ ಇದೆ. ಒಂದು ವೇಳೆ ಅಧ್ಯಕ್ಷರು ರೂಲಿಂಗ್‌ನ್ನು ಕೊಟ್ಟಿರುವುದನ್ನು ನಾವು ವಿರೋಧವನ್ನು ಮಾಡಬಾರದು, ಕ್ವೊಶ್ಚನ್ ಮಾಡಬಾರದು, ಸಂವಿಧಾನ ಬಾಹಿರವಾದುದನ್ನು ಕ್ವೊಶ್ಚನ್ ಮಾಡಬಾರದು ಎಂದು ಎಲ್ಲಿಯೂ ಇಲ್ಲ. ಸಂವಿಧಾನಬಾಹಿರವಾಗಿರುವುದನ್ನು . . .

ಅಧ್ಯಕ್ಷರು: ಮಾನ್ಯ ಹೆಗ್ಡೆಯವರೆ, ನೀವು ಬೆಳಿಗ್ಗೆಯಿಂದಲೂ ಇದೇ ಕಥೆಯಾಗಿದೆ. ಹೇಳಿರುವುದನ್ನು ಎಷ್ಟು ಸಾರಿ ಹೇಳುತ್ತೀರಿ? ಬೇರೆ ವಿಚಾರವಿದ್ದರೆ ಹೇಳಿ. 'ಸಂವಿಧಾನಬಾಹಿರ' ನಿಮ್ಮ ಪ್ರಕಾರ ಅದು ಸಂವಿಧಾನಬಾಹಿರವಿರಬಹುದು I can't understand.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಈ ಕಥೆ ಇನ್ನೂ ಹಲವಾರು ವರ್ಷಗಳವರೆಗೆ ಚರ್ಚೆಯಲ್ಲಿ ಇರುತ್ತದೆ.

ಅಧ್ಯಕ್ಷರು: ಡೈಲಿ ಇನ್, ದಿ ಹೌಸ್, ನೀವು ಸೈಡ್‌ಟ್ರಾಕ್ ಮಾಡಿ ಏನೇನೋ ಮಾಡುತ್ತಿದ್ದೀರಲ್ಲಾ?

Sri K. Jaya Prakash Hegde: This, you have created a new precedent. ಇದು ಇನ್ನೂ ಅನೇಕ ವರ್ಷಗಳಲ್ಲಿ ಬರುವವರೆಗೂ ಇದು ಸದನದಲ್ಲಿ ಚರ್ಚೆಗೆ ಬರುತ್ತದೆ.

ಅಧ್ಯಕ್ಷರು: ಆಯಿತು ಸ್ವಾಮಿ, ನೀವು ಅವತ್ತಿನಿಂದಲೂ ಹೇಳಿದ್ದೀರಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಇದು ಇವತ್ತಿಗೆ ಮುಗಿಯುವುದಿಲ್ಲ. This is not the end. This is the begnning of discussion on Constitution.

ಅಧ್ಯಕ್ಷರು: ಆಯಿತು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಆದರೆ ನಾನು ಒಂದು ಮಾತನ್ನು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು: ಹೆಗ್ಡೆಯವರೆ, ಮತ್ತೆ, ಮತ್ತೆ ಅದನ್ನೇ ಏತಕ್ಕಾಗಿ ಹೇಳುತ್ತೀರಿ? ಹೊಸ ಹೊಸ ವಿಚಾರಗಳೇನಾದರೂ ಇದ್ದರೆ ಅದನ್ನು ಹೇಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅಂಬೇಡ್ಕರ್ ಫೋಟೋವನ್ನು ಇಲ್ಲಿಂದಲೇ ತೆಗೆಯುವಂತಹ ಪರಿಸ್ಥಿತಿ ಬರಬಾರದು, ಎಂಬುದು ನನ್ನ ಕಳಕಳಿಯಾಗಿದೆ.

ಅಧ್ಯಕ್ಷರು: ಆಯಿತು ದಯಮಾಡಿಸಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ ಕೊನೆಗೆ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಜ್ಞಾನೇಂದ್ರರವರು ನೀವು ಅವಕಾಶವನ್ನು ಕಳೆದುಕೊಂಡಿರಿ ಅಂದರು. ನಾವು ಅವಕಾಶವನ್ನು ಕಳೆದುಕೊಳ್ಳಲಿಲ್ಲ. ಚೊಚ್ಚಲ ಭಾಷಣ ಮಾಡುವಂತಹ ಅವಕಾಶವನ್ನು ಕೊಟ್ಟು ಮಾನ್ಯ ಮುಖ್ಯಮಂತ್ರಿಗಳನ್ನು ನೀವು ಕರೆದಿರಿ. He has lost his opportunity, ನಮಗೂ ಕೂಡ ಆಸೆ ಇತ್ತು. ಅವರು ಇಲ್ಲಿ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಮೇಲೆ ಅಲ್ಲ, ಕೇವಲ ಚರ್ಚೆಯ ಮೇಲೆ ಉತ್ತರವನ್ನು ಕೊಟ್ಟಿದ್ದರೆ ನಮಗೆ ಬಹಳ ಸಂತೋಷವಾಗುತ್ತದೆ.

ಅಧ್ಯಕ್ಷರು: ಹೆಗ್ಡೆಯವರೆ, ತಾವು ಬೇಗನೆ ಮುಗಿಸಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಆ ಅವಕಾಶವನ್ನು ಕಳೆದುಕೊಂಡಿರಿ. ಕೊನೆಗೆ ನಾನು ಒಂದು ಕಥೆಯನ್ನು ಹೇಳುತ್ತೇನೆ. ಹಿಂದೆ ಮಾನ್ಯ ಎಸ್.ಎಂ. ಕೃಷ್ಣರವರು ಚೀಫ್ ಮಿನಿಸ್ಟರ್ ಆಗಿದ್ದಾಗ ಹೇಳಿದ್ದೆ. ನಾನು ಎಲ್ಲಿಗೂ ಹೋಗುತ್ತಿಲ್ಲ, ನಿಮಗೆ ಅರ್ಥವಾಗದೇ ಇದ್ದರೆ ನಾನು ಏನು ಮಾಡುವುದು? ನೀವು ಅದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಅರ್ಥ ಮಾಡಿಕೊಡಬೇಕಾದಂತಹ ಅಗತ್ಯವಿಲ್ಲ. ನೀವು ಅದನ್ನು ತಿರುಚುವಂತಹ ಅಗತ್ಯವೇನೂ ಇಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅದು ತಿರುಚುವುದಲ್ಲ, ನಾನು ನೇರವಾಗಿ ಹೇಳುತ್ತೇನೆ. ನೀವು ಈಗ ತಿರುಚುತ್ತಿದ್ದೀರಿ ಎಲ್ಲಿಯವರೆಗೆ ತಿರುಚುತ್ತಿದ್ದೀರಿ ಎಂಬುದು ನಮಗೆ ಗೊತ್ತಾಗುತ್ತಿಲ್ಲ. ಅದನ್ನು ನಾವು ನೋಡುತ್ತೇವೆ, ಎಲ್ಲಿಯವರೆಗೆ ತಿರುಚುತ್ತೀರಿ ಅಂತ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ತಿರುಚುತ್ತಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಎಲ್ಲಿಯವರೆವಿಗೆ ತಿರುಚುತ್ತೀರಿ ಅಂತ ನಾವು ನೋಡುತ್ತೇವೆ. ಮಾನ್ಯ ಅಧ್ಯಕ್ಷರೆ, ನಾನು ಒಂದು ಕತೆಯನ್ನು ಹೇಳುತ್ತೇನೆ, ಅಮೇರಿಕಾ ದೇಶದ ಪ್ರೆಸಿಡೆಂಟ್, ನಾನು ಇದರ ಬಗ್ಗೆ ಹಿಂದೆಯೇ ಹೇಳಿದ್ದೆ. ಹಸ್ತಾಂತರವನ್ನು ಮಾಡುವಾಗ . . .

ಅಧ್ಯಕ್ಷರು: ಹೆಗ್ಡೆಯವರೆ, ಇವೆಲ್ಲವನ್ನೂ ತಾವು ಬೇರೆ ಸಮಯದಲ್ಲಿ ಹೇಳಬಹುದು. ನಾನು ನಿಮಗೆ ಬೇರೆ ಸಮಯದಲ್ಲಿ ಅವಕಾಶವನ್ನು ಕೊಡುತ್ತೇನೆ.

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅಧಿಕಾರವನ್ನು ಹಸ್ತಾಂತರ ಮಾಡುವಾಗ ಇನ್ನೊಬ್ಬ ಅಧ್ಯಕ್ಷರಿಗೆ ಎರಡು ಕವರನ್ನು ಕೊಟ್ಟರಂತೆ.

ಅಧ್ಯಕ್ಷರು: ಹೆಗ್ಡೆಯವರೆ, I can't understand ಕರ್ನಾಟಕದ ಧನ ವಿನಿಯೋಗದ ಬಗ್ಗೆ ಮಾತನಾಡಿ ಎಂದರೆ...

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಸಮಸ್ಯೆಯು ಉದ್ಭವವಾದಾಗ, ಫಸ್ಟ್ ಈ ಕವರ್‌ನ್ನು ಓಪನ್ ಮಾಡು ಎಂದು ಹೇಳಿದರಂತೆ. ಅದರಲ್ಲಿ ಬಂದಿತ್ತಂತೆ, ಏನಾದರೂ ಸಮಸ್ಯೆ ಬಂದಾಗ ಹಿಂದಿನ ಸರ್ಕಾರದ ಮೇಲೆ ಆಪಾದನೆಯನ್ನು ಮಾಡು ಎಂದು. ಇನ್ನೊಂದು ಕವರ್‌ನಲ್ಲಿ ಬರೆದಿತ್ತಂತೆ. ವಿರೋಧ ಪಕ್ಷದವರು ಮಾಡುವುದಕ್ಕೆ ಬಿಡುತ್ತಿಲ್ಲವೆಂದು ಹೇಳು ಅಂತ ಬರೆದಿತ್ತಂತೆ, ಇವತ್ತು ಏನಾಗಿದೆ ಎಂದರೆ, ಹಿಂದಿನ ಸರ್ಕಾರದ ಮೇಲೆ ಅಲ್ಲ, ನೇರವಾಗಿ ಎರಡನೇ ಕವರ್‌ನ್ನು ಓಪನ್ ಮಾಡಿಬಿಟ್ಟಿದ್ದಾರೆ. ವಿರೋಧಪಕ್ಷದವರು ಬಿಡುತ್ತಿಲ್ಲವೆಂದು, ವಿರೋಧಪಕ್ಷದವರ ಮೇಲೆ ಗೂಬೆಯನ್ನು ಕೂರಿಸಿ, ಪ್ರಾಯಶಃ ಇಂತಹ ಬಿಲ್ಲುಗಳು ಅಪ್ರೋಪ್ರಿಯೇಷನ್ ಬಿಲ್ ಮೇಲೆ ಚರ್ಚೆಯಾಗಿದ್ದರೆ . . . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಿಮ್ಮವರು ಎಷ್ಟು ದಿನ ವೇಸ್ಟ್ ಮಾಡಿರುವ ಬಗ್ಗೆ ಇಡೀ ದೇಶಕ್ಕೆ ಗೊತ್ತಿದೆ. ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅಪ್ರಾಪ್ರಿಯೇಷನ್ ಬಿಲ್ ಬಗ್ಗೆ ಚರ್ಚೆಯಾಗಿದ್ದರೆ, ಪಾಸ್ ಆಗಿದ್ದರೆ ಅಲ್ಲಿ ವಾಪಸ್ಸು ಬರುತ್ತಿರಲಿಲ್ಲ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಪಾರ್ಲಿಮೆಂಟ್‌ನಲ್ಲಿ ನಿಮ್ಮವರು ಎಷ್ಟು ದಿವಸ ತಡೆಹಿಡಿದಿದ್ದರು ಎಂಬುದು ಗೊತ್ತಿದೆ.

(ಗೊಂದಲ)

(ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಶ್ರೀ ಆರ್. ಅಶೋಕ್: ಬಿ.ಜೆ.ಪಿ.ಯವರನ್ನು ಫಾಲೋ ಮಾಡುತ್ತಿರುವುದನ್ನು ನಾವು ಸ್ವಾಗತ ಮಾಡುತ್ತಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ವೆಂಕಟೇಶ್ ಅವರೇ, ಅದೇನು ಹೇಳುತ್ತಿದ್ದೀರಾ, ಹೇಳಿ ನೋಡೋಣ.

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ದಯವಿಟ್ಟು ಕುಳಿತುಕೊಳ್ಳಿ, ಪ್ಲೀಸ್, ಅಪ್ರಾಪ್ರಿಯೇಷನ್ ಬಿಲ್. . .

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾತನಾಡಿರಿ, ಅನುಮತಿ ಪಡೆದುಕೊಂಡು ಮಾತನಾಡಿ, ಬೇಡವೆಂದು ನಾನು ಹೇಳುವುದಿಲ್ಲ. ಅದೇನು ಮಾತನಾಡುತ್ತೀರೋ, ನೋಡೋಣ.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್: ನೀವೇ ಮಾತನಾಡುತ್ತಿದ್ದೀರಿ, ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸಲಿಕ್ಕೆ ಅವಕಾಶವಾಗಲಿಲ್ಲ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಏನು, X X X

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್: ಈ ರೀತಿ ಮಾತನಾಡಿದರೆ ನಾವೇನು ಹೇಳಲಿಕ್ಕಾಗುತ್ತದೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೂರು ಸಲ ನಾನು ಹೇಳುತ್ತೇನೆ, ರಾಜ್ಯಪಾಲರು ಸಂವಿಧಾನಕ್ಕಿಂತ ದೊಡ್ಡವರೇನಲ್ಲ, ಸಾವಿರ ಸಲ ಆ ಮಾತನ್ನು ಹೇಳುತ್ತೇನೆ, ರಾಜ್ಯಪಾಲರು ಸಂವಿಧಾನಕ್ಕಿಂತ ದೊಡ್ಡವರಲ್ಲ. ಈ ದೇಶದಲ್ಲಿ, ಸಂವಿಧಾನಕ್ಕಿಂತ ಯಾರೂ ದೊಡ್ಡವರಿಲ್ಲ ಈ ಮಾತನ್ನು ನಾನು ಸಾವಿರ ಸಲ ಹೇಳುತ್ತೇನೆ. ಸಾವಿರ ಸಲ ಹೇಳುತ್ತೇನೆ, ಸಂವಿಧಾನಕ್ಕಿಂತ ದೊಡ್ಡವರು ಯಾರೂ ಇಲ್ಲ.

ಶ್ರೀ ಎಂ.ಪಿ. ವೆಂಕಟೇಶ್: ಸನ್ಮಾನ್ಯ ಸಭಾಧ್ಯಕ್ಷರೆ, ಸಂವಿಧಾನಕ್ಕಿಂತ ದೊಡ್ಡವರು ಯರು ಇಲ್ಲವೆಂದು ಅವರು ಹೇಳುತ್ತಿದ್ದಾರೆ.

ಅಧ್ಯಕ್ಷರು: ಸುಮ್ಮನೆ ಕುಳಿತುಕೊಳ್ಳಿ, ಈಗ ನೋಡಿ, ಯಾರೂ ಜವಾಬ್ದಾರಿಯಿಂದ ನಡೆದುಕೊಳ್ಳುತ್ತಿಲ್ಲ, ಈಗ ಏನಾಗಿದೆಯೆಂದರೆ ಈ ಧನವಿನಿಯೋಗ ಬಿಲ್ ಮಂಡನೆಯಾಗಿದೆ, ಅದು ಬಿಟ್ಟು ಬೇರೆ ಯಾವ್ಯಾವುದೋ ವಿಚಾರವನ್ನು ತೆಗೆದುಕೊಂಡು ಎಲ್ಲೆಲ್ಲೋ ಮಾತನಾಡುತ್ತೀರಿ. ಅದಕ್ಕೋಸ್ಕರ ನಾನು ಅವಕಾಶ ಕೊಡುವುದಿಲ್ಲವೆಂದರೆ ನನಗೆ ಕೊಡಲೇಬೇಕೆಂದು ಒಂದು ಪಕ್ಷದ ಸದಸ್ಯರು ಇವರು ಬೇರೆ ಹಠ ಹಿಡಿಯುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಸಾವಿರ ಸಲ ಹೇಳುತ್ತೇನೆ, ಸಂವಿಧಾನಕ್ಕಿಂತ ಯಾರೂ ದೊಡ್ಡವರಿಲ್ಲ, ಏನು ಗೌರವ ಕೊಡುವುದು, ಏನು? ನಾನು ಗೌರವ ಕೊಡುವುದಿಲ್ಲ, x x x x x x ಅದೇನು ಮಾಡುತ್ತೀರೋ ಮಾಡಿ ನೋಡೋಣ.

X ಈ ಪದಗಳನ್ನು ಮಾನ್ಯ ಸಭಾಧ್ಯಕ್ಷರವರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಅಧ್ಯಕ್ಷರು: ಆಯಿತು, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಇದು ಅತಿಯಾಯಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು x x x x x x x x x

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು): ಬಿಡಪ್ಪಾ, ಅವರು ರಾಜ್ಯಪಾಲರಿಗೆ ಗೌರವ ಕೊಡುವುದಿಲ್ಲ ಅಂದರೆ ನಿಮಗೇನಾಗಬೇಕು, ಬಿಟ್ಟಿ ಬಿಡಿ, ಯಾತಕ್ಕೆ ಈಗ ಇದರ ಬಗ್ಗೆ ಚರ್ಚೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸಂವಿಧಾನಕ್ಕಿಂತ ದೊಡ್ಡವರು ಯಾರೂ ಇಲ್ಲ, x x x x ಅದೇನು ಮಾಡುತ್ತೀರೋ ಮಾಡಿ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಮಾನ್ಯ ಯಡಿಯೂರಪ್ಪನವರೆ ದಯಮಾಡಿ ಕುಳಿತುಕೊಳ್ಳಿ, I am on my legs. Please, ಇದೆಲ್ಲಾ ಬಹಳ ಅತಿಯಾಯಿತು, ಇಲ್ಲಿ ಯಾರೂ ಸಹ ಸಂವಿಧಾನವನ್ನು ಅಪಚಾರ ಮಾಡಲಿಕ್ಕೆ ಬಂದಿಲ್ಲ. ನನ್ನ ತೀರ್ಪು ಸಂವಿಧಾನಬದ್ಧವಾಗಿಯೇ ಇದೆ. ಏನೆಂದರೆ ಲೋಕಸಭೆ, ಅಲ್ಲಿಯ ಸಚಿವಾಲಯದ ಸಲಹೆ ಸಹಕಾರ, ಬೇರೆ ಬೇರೆ ಸಹಕಾರವನ್ನು ತೆಗೆದುಕೊಂಡೇ ಕೊಟ್ಟಿದ್ದೇನೆ, ಅದು ಮುಗಿದ ಕಥೆಯಾಗಿದೆ. ಮತ್ತೆ ಮತ್ತೆ ಯಾವ ವಿಚಾರದಲ್ಲಿ ಚರ್ಚೆಯಾಗಬೇಕೋ ಅದನ್ನು ಬಿಟ್ಟು ಹಿರಿಯ ಸದಸ್ಯರು ಏತಕ್ಕೆ ಈ ರೀತಿ ಪೋಸ್ಟ್‌ಮಾರ್ಟಂ ಮಾಡುತ್ತಿದ್ದೀರಿ ಇದು ನನಗೆ ಅರ್ಥವಾಗುತ್ತಿಲ್ಲ. ಈಗ ಏನಾಗಿದೆಯೆಂದರೆ ಕರ್ನಾಟಕ ಧನವಿನಿಯೋಗ ಮಂಡನೆಯಾಗಿದೆ, ಅದರ ಬಗ್ಗೆ ಮಾತನಾಡಿ ಅಂದರೆ ಯಾವ್ಯಾವುದೋ ವಿಚಾರಕ್ಕೆ ಏತಕ್ಕೆ ಹೋಗುತ್ತೀರಿ? ದಯಮಾಡಿ ಇದರ ಬಗ್ಗೆ ಚರ್ಚೆ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು): ಸರ್ ಒನ್ ಮಿನಿಟ್, ಮಾಧುಸ್ವಾಮಿಯವರೆ, ನಾನು ಕ್ಲಿಯರ್ ಮಾಡಿದ ಮೇಲೆ ನೀವು ಬೇಕಾದ ಪ್ರಶ್ನೆಯನ್ನು ಕೇಳಿ, ನಾನು ನಿಮಗೆ ಉತ್ತರಿಸುತ್ತೇನೆ, ಈ ಪೂರಕ ಅಂದಾಜುಗಳ ಬಗ್ಗೆ ಗವರ್ನರ್ ಅವರು 22.2.2006ರಲ್ಲಿ

> "As required by Article 205(1) of the Constitution of India, I T.N. Chaturvedi, Governor of Karnataka do hereby direct that the schedule of additional demands for the year 2005-06 from August 2005 to March 2006 shall be laid before the House/ Houses of Legislature."

ರಾಜ್ಯಪಾಲರ ಅನುಮೋದನೆಯಿಂದ ಇಲ್ಲಿಗೆ ಬಂತು, ಇಲ್ಲಿಂದ ಅನುಮೋದನೆಯನ್ನು ಪಡೆದು ವಿಧಾನಪರಿಷತ್ತಿಗೆ ಹೋಯಿತು. ವಿಧಾನಪರಿಷತ್ತಿಗೆ ಬಂದಾಗ ಏನು ಪ್ರಶ್ನೆ ಬಂತು ಅಂದರೆ, ಅಲ್ಲಿ ಈ ಉದ್ದೇಶಗಳು ಮತ್ತು ಕಾರಣಗಳು ಹೇಳಿಕೆ ಮಾಡುವಂತಹ ದಾಖಲೆಗಳಲ್ಲಿ 205ನೇ (1) ಎನ್ನುವುದರ ಜೊತೆಗೆ "ಎ" ಅನ್ನುವುದು ಸೇರ್ಪಡೆಯಾಗಿದೆ, ಇದು ತಪ್ಪಾಗಿದೆ, ಮತ್ತು ಇದರ ಬಗ್ಗೆ ಚರ್ಚೆಯಾಗಿದೆ, ಹಿಂದೆ ಮಾನ್ಯ ಸಿದ್ದರಾಮಯ್ಯನವರು ಮಂಡನೆ ಮಾಡಿದ ಕಾಲದಲ್ಲಿ, ಮೊದಲಿಂದಲೂ ಇದೇ ಪದ್ಧತಿ ನಡೆದುಕೊಂಡು ಬಂದಿತ್ತು, ಅದು ತಪ್ಪು ಎಂದು ಅಲ್ಲಿ ಚರ್ಚೆಯಾದ ಮೇಲೆ ಇದರ ಮೇಲೆ ತಿದ್ದುಪಡಿ ತರಬೇಕು ಎಂದು ತೀರ್ಮಾನವಾಯಿತು. ಆ ತೀರ್ಮಾನವಾದಾಗ, "ವಿಧಾನಪರಿಷತ್ತಿನ

x ಈ ಪದಗಳನ್ನು ಮಾನ್ಯ ಸಭಾಧ್ಯಕ್ಷರವರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಸದನದಲ್ಲಿ ಉದ್ದೇಶಿಸಿ ಮತ್ತು ಕಾರಣಗಳಲ್ಲಿ ನಮೂದಿಸಿರುವ ಸಂವಿಧಾನ ಅನುಚ್ಛೇದ 205(1)ಎ ಎಂದು ನಮೂದಿಸಿರುವುದಕ್ಕೆ ಅಲ್ಲಿ ತಕರಾರು ಎತ್ತಿದರು, ಅದಕ್ಕೆ ತಿದ್ದುಪಡಿಗಳೊಂದಿಗೆ ಈ ಸದನದಲ್ಲಿ ವಿಧೇಯಕವನ್ನು ಮಂಡಿಸಲಾಗಿದೆ. ಉದ್ದೇಶ ಮತ್ತು ಕಾರಣಗಳು ಬಿಲ್‌ನ ಪಾರ್ಟ್ ಅಂಡ್ ಪಾರ್ಸಲ್ ಆಗಿರುವುದಿಲ್ಲ. ಈ ವಿಧೇಯಕವನ್ನು ತಿಳಿದು ಮತ್ತು ಅರ್ಥೈಸಲು ಉಪಯೋಗಿಸುವುದು, ಇದರಿಂದ ವಿಧೇಯಕಕ್ಕೆ ಯಾವುದೇ ಬಾಧಕವಿರುವುದಿಲ್ಲ." ಆ ತಿದ್ದುಪಡಿಯೊಂದಿಗೆ ಇವತ್ತು ಮತ್ತೆ ಈ ಬಿಲ್ಲನ್ನು ಇಲ್ಲಿ ನಾನು ಇಡುತ್ತಿದ್ದೇನೆ. ಈ ವಿಧೇಯಕ ಮನಿ ಬಿಲ್ ಆಗಿರುವುದರಿಂದ ಸಂವಿಧಾನದ ಅನುಚ್ಛೇದ 198 ರಂತೆ ವಿಧಾನಪರಿಷತ್ತು ಇದನ್ನು ತಿರಸ್ಕರಿಸಲು ಬರುವುದಿಲ್ಲ. ಆದರೆ ರೆಕ್ಕೆಂಡೇಷನ್ ಮಾಡುವ ಅಧಿಕಾರ ಅವರಿಗಿದೆ. ವಿಧಾನಪರಿಷತ್ತು ಮಾಡಿರುವ ತಕರಾರಿನಂತೆ ಈ ಸದನದಲ್ಲಿ ಈ ತಿದ್ದುಪಡಿಗಳೊಂದಿಗೆ ನಾನು ಈ ಒಂದು ಮಸೂದೆಯನ್ನು ಇಲ್ಲಿ ಇಡುತ್ತಿದ್ದೇನೆ. ಉದ್ದೇಶ ಮತ್ತು ಕಾರಣಗಳ ಹೇಳಿಕೆಯಲ್ಲಿ ಭಾರತ ಸಂವಿಧಾನದ 205ನೇ(1)ಎ ಎಂಬ ಪದಗಳು, ಅಂಕಿಗಳು, ಆವರಣಗಳು ಆ ಅಕ್ಷರದ ಬದಲಿಗೆ ಭಾರತದ ಸಂವಿಧಾನದ 205ನೇ(1) ಎಂಬ ಪದಗಳು, ಅಂಕಿಗಳು ಮತ್ತು ಆವರಣಗಳನ್ನು ಪ್ರತ್ಯೋಜಿಸತಕ್ಕದ್ದು. ಕರ್ನಾಟಕ ಧನವಿನಿಯೋಗ ವಿಧೇಯಕ 2006 ಅನ್ನು ತಿದ್ದುಪಡಿಯೊಂದಿಗೆ ಅನುಮೋದಿಸಬೇಕೆಂದು ನಾನು ತಮ್ಮಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ, ಮತ್ತೆ ಈ ಮನೆಯಲ್ಲಿ ಕೇಳುತ್ತಿದ್ದೇನೆ ಸ್ವಾಮಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಕ್ಷಮಿಸಬೇಕು. ತಾವು ಹೇಳಿದಷ್ಟು ಅದು ಲಘುವಾಗಿಲ್ಲ, ಸರ್,(1) ಎಂದು ಕವರ್ ಮಾಡಿದರೆ ಏನಾಗುತ್ತದೆ, 1ಎ ಎಂದು ಕವರ್ ಮಾಡಿದರೆ ಏನಾಗುತ್ತದೆ ಎನ್ನುವುದಕ್ಕೆ ತಾವು ಸ್ವಲ್ಪ ಸಂವಿಧಾನವನ್ನು ನೋಡಬೇಕು. 1ಎ ನಲ್ಲಿ ಮುಂದೆ ಮಾಡಬೇಕಾಗಿರುವ ಎಕ್ಸ್‌ಪೆಂಡೀಚರ್‌ಗೆ ತಾವು ಇಲ್ಲಿ ಅಪ್ರೂವಲ್ ಕೇಳುತ್ತಿದ್ದೀರಿ, ಈ ಸದನದಲ್ಲಿ ಸಮ್ಮತಿಯನ್ನು ಕೇಳುತ್ತಿದ್ದೀರಿ, 1ರಲ್ಲೇ 'ಬಿ'. ಏನಾಗುತ್ತದೆ ಎಂದರೆ . . . . .

> "(1)(b) if any money has been spent on any service during a financial year in excess of the amount granted for that service and for the year, cause to be laid before the House or the House of the Legislature of the State another statement showing the estimated amount of that expenditure or cause to be presented to the Legislative Assembly of the State a demand for such excess, as the case may be." ತಾವು "ಎ" ನಲ್ಲಿ ಕೇಳಿದಾಗ ಏನಾಗಿತ್ತು ..... "(a) if the amount authorized by any law made in accordance with the provisions of article 204 to be expended for a particular service for the current financial year is found to be insufficient for the purposes of that year or when a need has arisen during the current financial year for supplementary or additional expenditure upon some new service not contemplated in the annual financial statement for that year."

This is the difference sir. ನಾನು ಎಲ್ಲದಕ್ಕೂ ತಕರಾರು ಮಾಡುತ್ತೇನೆಂದು ತಾವು ಭಾವಿಸಬಾರದು, ಒಂದೇನಾಗಿತ್ತು, 1.ಎ ನಲ್ಲಿಟ್ಟಾಗ ಆಕಸ್ಮಾತ್ ನೀವು ಇಟ್ಟಿರುವ ಹಣ ನಮಗೆ ಸಾಕಾಗುವುದಿಲ್ಲ, ಇನ್ನೊಂದಷ್ಟು ಹಣವನ್ನು ನಾವು ಮಾರ್ಚ್ ತಿಂಗಳಲ್ಲಿ ಖರ್ಚು ಮಾಡಬೇಕು, ಬಡ್ಜೆಟ್ ಅನ್ನು ಹೆಚ್ಚುವರಿಯಾಗಿ ಖರ್ಚು ಮಾಡಬೇಕೆಂದು ಮುಂದೆ ಬರುವಂತಹ ಖರ್ಚುಗಳಿಗೆ 30ನೇ ತಾರೀಖಿನವರೆಗೆ ಕೇಳುವುದು. ಸರ್, 1(b) is very much clear. ತಾವೇನಾದರೂ ಅದರಲ್ಲಿ ಇಲ್ಲದೇನೇ ಎಕ್ಸಸ್ ಎಕ್ಸ್‌ಪೆಂಡೀಚರ್ ಈಗಾಗಲೇ ಮಾಡಿಬಿಟ್ಟಿದ್ದರೆ ಅದರ ಸಂಪೂರ್ಣವಾದ ಮಾಹಿತಿಯನ್ನು ತಾವು ಈ ಶಾಸನಸಭೆಯಲ್ಲಿ ಮಂಡಿಸಬೇಕು. ಇಲ್ಲ, ಈಗ ನೀವು ಹೊಸದಾಗಿ ಇಂಟ್ರಡ್ಯೂಸ್ ಮಾಡುತ್ತಿರುವುದರಲ್ಲಿ ಕ್ಲಾಸ್ ಚೇಂಜ್ ಮಾಡಿದ್ದೀರಿ, 1(ಎ) ತೆಗೆದು 205(1)ಎ ತೆಗೆದು 1 ಎಂದು ಇಲ್ಲಿ ಅಮೆಂಡ್‌ಮೆಂಟ್ ಇಡುತ್ತಿದ್ದೀರಿ, If you say it is (1), it is inclusive of both the sub-sections (a) and (b). ನಿನ್ನೆ ಪ್ಲೀಸ್. . . .

ಶ್ರೀ ಬಿ.ಎಸ್. ಯಡಿಯೂರಪ್ಪ: ಒರಿಜಿನಲ್ ಇರುವುದೇ ಅದು, ಬೈ ಮಿಸ್ಟೇಕ್ ಅಲ್ಲಿ ನಾವು ತಿದ್ದುಪಡಿಯನ್ನು ತರುತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸರ್, ಐಯಾಮ್ ಹೆಲ್ಪಿಂಗ್ ಯು, ನೀವು ಹೀಗೆ ಮಾಡಿದರೆ ನಾವು ಹೇಗೆ ಮಾತನಾಡುವುದು ಹೇಳಿ ಸರ್, ನೀವು.

ಶ್ರೀ ಬಿ.ಎಸ್. ಯಡಿಯೂರಪ್ಪ: ಪ್ರಿಂಟಿಂಗ್ ಎರರ್ ಇದ್ದುದ್ದನ್ನು ತೆಗೆದುಹಾಕಿ ಮತ್ತೆ ತಿದ್ದುಪಡಿಯನ್ನು ತರುತ್ತಿದ್ದೇವೆ, ಅದನ್ನು ಅಲ್ಲೇ ಮಾಡಬಹುದಾಗಿತ್ತು. ಆಗ ಮಾಡಲಿಲ್ಲ, ಅದಕ್ಕೋಸ್ಕರ ಈಗ ತರುತ್ತಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಹಾಗಿದ್ದ ಮೇಲೆ ಸನ್ಮಾನ್ಯ ಹಣಕಾಸಿನ ಸಚಿವರು ಯಾವ್ಯಾವ ಇಲಾಖೆಗಳಲ್ಲಿ ಯಾವ್ಯಾವ ಹೆಡ್‌ಗಳಲ್ಲಿ ಎಕ್ಸೆಸ್ ಎಕ್ಸ್‌ಪೆಂಡಿಚರ್ ಬಡ್ಜೆಟ್ಟಿಗಿಂತ ಜಾಸ್ತಿ ಈವರೆಗೆ ಆಗಿದೆ, ಅದಕ್ಕೆ ಕಾರಣವೇನು ಎಂಬ ಬಗ್ಗೆ ದಯಮಾಡಿ ಈ ಸಭೆಯ ಮುಂದೆ ಮಂಡಿಸುವ ಜವಾಬ್ದಾರಿ ತಮಗೆ ಈಗ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಸರ್ ಇಲ್ಲಿ ಧನವಿನಿಯೋಗ ಬಿಲ್ ಪಾಸ್ ಆಗಿ ಆ ಮನೆಯಿಂದ ವಾಪಸ್ಸು ಬಂದಿದೆ. ಈಗ ಈ ತಿದ್ದುಪಡಿಗೆ ತಾವು ಅನುಮತಿಯನ್ನು ನೀಡಬೇಕು.

Sri J.C. Madhuswamy: Sir, it is not passed. It is not passed.

ಅಧ್ಯಕ್ಷರು: ಇಲ್ಲಿ ಸ್ವಲ್ಪ ಕೇಳಿ. ಈಗ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್. . . . .

ಶ್ರೀ ಜೆ.ಸಿ. ಮಾಧುಸ್ವಾಮಿ: ಇಲ್ಲಿ, ಆಗಿಲ್ಲ.

ಅಧ್ಯಕ್ಷರು: ಇಲ್ಲಿ ಕೇಳಿ. ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್ ಅಂಡ್ ರೀಸನ್ಸ್‌ಗೆ ಅವರು ಅಮೆಂಡ್ಮೆಂಟ್ ತಂದಿದ್ದಾರೆ, ಬಿಲ್‌ಗೆ ಏನೂ ಅಮೆಂಡ್ಮೆಂಟ್ ಅಲ್ಲ. ಅದನ್ನು See, that can be considered in the House.

ಶ್ರೀ ಜೆ.ಸಿ. ಮಾಧುಸ್ವಾಮಿ: ಅಧ್ಯಕ್ಷರೆ, ಅದನ್ನು ಬಹಳ ಹುಷಾರಾಗಿ ಕೌನ್ಸಿಲ್‌ನಲ್ಲಿ ಮಾಡಿದ್ದಾರೆ, 1(ಎ) ಎಂದು ಪಾಸ್ ಮಾಡುವ ಹಾಗಿದ್ದರೆ ಈಗಾಗಲೇ ಆಗಿರುವ ಎಕ್ಸ್‌ಪೆಂಡಿಚರ್ ಅವರು ಕೇಳಿರುವ ಧನವಿನಿಯೋಗವನ್ನು ಅಲ್ಲಿ ಕೊಟ್ಟುಬಿಡಬೇಕಾಗಿತ್ತು. ಅದು ಆಗುವುದಿಲ್ಲ, ನೀವು ಈಗಾಗಲೇ ಮಾಡಿರುವ ಎಕ್ಸ್‌ಪೆಂಡಿಚರ್ ಬಗ್ಗೆಯೂ ನಮಗೆ ಲೆಕ್ಕ ಬೇಕು, ಮಾಹಿತಿ ಬೇಕು ಅಂದರೆ

1(ಎ) ಕೆಳಗೆ ನಾವು ಡಿಬೇಟ್ ಮಾಡಲಿಕ್ಕಾಗುವುದಿಲ್ಲ, ಎಂಟೈರ್ ಕ್ಲಾಸ್ 1 ಅನ್ನು ಇಲ್ಲಿ ಚರ್ಚೆಗೆ ತರುವ ಉದ್ದೇಶದಲ್ಲಿ ಈ ಬಿಲ್ಲನ್ನು ಅಮೆಂಡ್ಮೆಂಟ್ ಮಾಡಿ ಎಂದು ಕೇಳಿದ್ದಾರೆ. ಸನ್ಮಾನ್ಯ ಅರ್ಥಸಚಿವರು 1(ಎ)ನಲ್ಲಿ ಇದ್ದುದ್ದನ್ನು 1 ರಲ್ಲಿ ತರುತ್ತೇವೆಂದು ಹೇಳಿದ್ದಾರೆ. Now the question of 1(b) arises. 1(ಬಿ) ಏನು ಹೇಳುತ್ತೆ? If any expenditure is already made without sanction it has to be tabled before the House, the entire details has to be table before the House ಎಂದು ಪ್ರಾವಿಷನ್ ಇದೆ, ನಾವು ಕೇಳುವುದಲ್ಲ ಇದು, 1(ಎ) ಆಗಿದ್ದರೆ ನಾವು ಪ್ರಶ್ನೆ ಮಾಡುತ್ತಿರಲಿಲ್ಲ. ನಮಗೆ ಆ ಖರ್ಚು ಬೇಕು, ಸೇರಿಲ್ಲ, ಹೆಚ್ಚುವರಿ ಬೇಕು . . . ಎಂದು ಅಲ್ಲಿಗೇ ನಿಂತುಹೋಗಿಬಿಡುತ್ತಿತ್ತು. ಈಗ ಆಗಿಹೋಗಿರುವ ಖರ್ಚನ್ನು 1(ಬಿ)ನಲ್ಲೇ ಅವರು ಇಲ್ಲಿ ಅಪ್ರೂವಲ್ ತೆಗೆದುಕೊಳ್ಳಬೇಕು. 1(ಬಿ)ನಲ್ಲಿ ನೀವು ತೆಗೆದುಕೊಳ್ಳಬೇಕಾದರೆ You have to place a statement. ಎಲ್ಲೆಲ್ಲಿ ಎಕ್ಸ್‌ಪೆಂಡಿಚರ್ ಜಾಸ್ತಿಯಾಗಿದೆ? ಯಾಕಾಗಿದೆ? ಬಡ್ಜೆಟ್ಟಿನಲ್ಲಿ ಎಷ್ಟಿತ್ತು? ನೀವು ಈಗ ಎಷ್ಟು ಖರ್ಚು ಮಾಡಿದ್ದೀರಿ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಸ್ಟೇಟ್‌ಮೆಂಟ್ ಆಫ್ ಅಬ್ಲಿಕ್ವೆನ್ಸ್‌ನಲ್ಲೇ ತಪ್ಪಾಗಿದೆ. ಅದಕ್ಕೋಸ್ಕರ ಈಗ "ಎ" ಅನ್ನುವುದನ್ನು ತೆಗೆದು ತಿದ್ದುಪಡಿ ಮಾಡುತ್ತಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ನಿಮಗೆ ಕನ್ವಿನ್ಸ್ ಮಾಡುತ್ತಿರುವುದು ಪ್ರಾವಿಷನ್‌ನ್ನು ನೀವು ಚೇಂಜ್ ಮಾಡುತ್ತಿದ್ದಂತೆ ಅಡಾಪ್ಟ್ ಆಗಿಬಿಡುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇಲ್ಲಿ ಪ್ರಶ್ನೆಯೇ ಇಲ್ಲ, ಈ ಮನೆಯಲ್ಲಿ ಈ ಬಿಲ್ ಪಾಸ್ ಆಗಿ ಅಲ್ಲಿ ಹೋಗಿತ್ತು.

ಶ್ರೀ ಜೆ.ಸಿ. ಮಾಧುಸ್ವಾಮಿ: ಈ ಮನೆಯಲ್ಲಿ ಬಿಲ್ ಪಾಸ್ ಆಗಿರುವುದು 205(1)ಎ ಕೆಳಗೆ, ಈಗ ಈ ಮನೆಗೆ ಈ ಬಿಲ್ ಬಂದಿರುವುದು 205(1) ನಲ್ಲಿ. ಈ ಮನೆಯಲ್ಲಿ ಅವತ್ತು "ಬಿ" ಪ್ರಶ್ನೆಯಿರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ರಾಜ್ಯಪಾಲರು ಅನುಮತಿ ಕೊಟ್ಟಿರುವುದು ಸಹ ಅದೇ 1(ಎ) ಮೇಲೆ, ಅದರ ಮೇರೆಗೆ ಈ ಬಿಲ್ ಪಾಸಾಗಿರುವುದು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಸರ್, ಈಗ ಕನ್‌ಫ್ಯೂಸ್ ಮಾಡಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ರಮೇಶ್‌ಕುಮಾರ್‌ರವರೆ, ಆರ್ಟಿಕಲ್ 205(1)ರ ಮೇಲೆಯೇ ಮಾನ್ಯ ರಾಜ್ಯಪಾಲರು ಅನುಮತಿಯನ್ನು ಕೊಟ್ಟಿದ್ದರು. ಅದೇರೀತಿ ಇಲ್ಲಿ ಮಂಡನೆ ಮಾಡಿದ್ದೆವು. ಸ್ಟೇಟ್‌ಮೆಂಟ್ ಆಫ್ ಅಬ್ಲಿಕ್ವೆನ್ಸ್‌ನಲ್ಲಿ ಒಂದು ಮಿಸ್ಟೇಕ್ ಆಗಿ "ಎ" ಎನ್ನುವುದು ಸೇರಿಕೊಂಡಿತ್ತು. 205ನೇ(1)ಎ ಅನ್ನುವುದು ಬೈ ಮಿಸ್ಟೇಕ್ ಆಗಿತ್ತು, ಅದನ್ನು ತಿದ್ದುಪಡಿ ಮಾಡಿ, ನಾವು ಪಾಸ್ ಮಾಡುತ್ತೇವೆಂದು ಹೇಳಿದ್ದರು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಒಪ್ಪಿದ್ದೇವೆ, ತಕರಾರು ಇಲ್ಲ, ಆದರೆ 205(1)ಎ ಆದಮೇಲೆ "ಬಿ" ಬರುತ್ತದೆ, "ಬಿ" ಒಳಗೆ ಏನು ಹೇಳುತ್ತದೆ ತಾವು ದಯಮಾಡಿ ಓದಿ.

(b) is also an integral part of 205(1).

ಶ್ರೀ ಬಿ.ಎಸ್. ಯಡಿಯೂರಪ್ಪ: ಸರ್, ಇದರಲ್ಲಿ ಅನುಚ್ಛೇದ 205(1) ರಲ್ಲಿ ಕ್ಲಾಸ್ ಎ ಮತ್ತು ಕ್ಲಾಸ್ ಬಿ ಎರಡೂ ಕೂಡ 205(1)ರ ಜೊತೆಯಲ್ಲಿ ಓದಬೇಕಾಗುತ್ತದೆ. ಆದ್ದರಿಂದ 205(1)ನ್ನು ನಮೂದಿಸಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: "ಬಿ" ಏನು ಹೇಳುತ್ತದೆ?

ಶ್ರೀ ಬಿ.ಎಸ್. ಯಡಿಯೂರಪ್ಪ: 'ಎ' ಮತ್ತು 'ಬಿ' ಎರಡೂ ಇದರಲ್ಲೇ ಇದೆ. ಮಾನ್ಯ ರಾಜ್ಯಪಾಲರು ಅನುಮೋದನೆ ಮಾಡಿರುವಂತಹ 205(1)ರಲ್ಲಿ ಕ್ಲಾಸ್ 'ಎ' ಮತ್ತು 'ಬಿ' ಎರಡೂ ಇನ್‌ಕ್ಲೂಡ್ ಆಗಿರುತ್ತದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಕೇಳಿ, ದಯಮಾಡಿ ತಾಳ್ಮೆ ಇಟ್ಟುಕೊಳ್ಳಿ. 'ಬಿ' ನಲ್ಲಿ ಏನು ಹೇಳುತ್ತಾರೆಂದರೆ ಯಾವ ಎಕ್ಸ್‌ಪೆಂಡಿಚರ್ ನೀವು ಮಾಡಿದಿರಿ, ಯಾವ ಎಕ್ಸ್‌ಪೆಂಡಿಚರ್‌ಗೆ ಶಾಸನಸಭೆಯ ಅನುಮತಿ ಇರಲಿಲ್ಲ, ಯಾವ ಸನ್ನಿವೇಶದಲ್ಲಿ ನೀವು ಆ ಹಣವನ್ನು ಖರ್ಚು ಮಾಡಬೇಕಾಗಿ ಬಂತು, ಅದರ ಎಲ್ಲಾ ಕಾರಣಗಳನ್ನು, ವಿವರಗಳನ್ನು ಸಭೆಯ ಮುಂದೆ ಇಡಬೇಕೆಂಬುದನ್ನು 'ಬಿ' ಹೇಳುತ್ತದೆ ನೋಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅದನ್ನು ಮಾನ್ಯ ರಾಜ್ಯಪಾಲರು ಒಪ್ಪಿ ಅನುಮೋದನೆ ಮಾಡಿ ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ರಾಜ್ಯಪಾಲರು ಒಪ್ಪಿದರೆ ಮಾತ್ರಕ್ಕೆ ಸಭೆಯ ಹಕ್ಕು ಎಲ್ಲಿ ಹೋಗುತ್ತದೆ?

ಶ್ರೀ ಬಿ.ಎಸ್. ಯಡಿಯೂರಪ್ಪ: ಏನು ಹೇಳುತ್ತಿದ್ದೀರಿ ಸರ್, ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಬಸವರಾಜ ಹೊರಟ್ಟಿ: ಸಭಾಧ್ಯಕ್ಷರೆ, ಮಾನ್ಯ ಗವರ್ನರ್‌ನಿಂದ 205(1) ಎಂದು ಬಂದಿದೆ, "ಎ" ಎಂದು ಬಂದಿಲ್ಲ, ಇಲ್ಲಿ ಅವರಿಂದ ಅಪ್ರೂವಲ್ ಬಂದ ನಂತರ ಇಲ್ಲೇ ಪ್ರಿಂಟ್ ಆಗುವಾಗ ಬೈ ಮಿಸ್ಟೇಕ್ "ಎ" ಎಂದು ಆಗಿದೆ, ಅದರ ಅರ್ಥ ಏನೆಂದರೆ ಯಾವುದೇ ರೀತಿಯ ತಪ್ಪು ಮಾಹಿತಿಯನ್ನು ಸದನಕ್ಕೆ ಕೊಡುವುದಲ್ಲ, ಪ್ರಿಂಟ್ ಆದ ಮೇಲೆ ಅದನ್ನು ಒಪ್ಪಿಕೊಂಡು "ಎ" ಆದುದನ್ನು ತೆಗೆದು 1 ಅಂದರೆ "ಎ" ಮತ್ತು "ಬಿ" ಎರಡೂ ಇದರಲ್ಲಿ ಅಕ್ಟ್ಯಾಕ್ಟ್ ಆಗಿರುವಂತಹ ರೀತಿಯಲ್ಲಿ ಸರಿಮಾಡಿಕೊಂಡು ಕೊಟ್ಟಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅಧ್ಯಕ್ಷರೆ, This is a grate mistake ಈ ರೀತಿ ಬಿಲ್ಲಿನಲ್ಲಿ ಮಿಸ್ಟೇಕ್ ಮಾಡಿರುವವರನ್ನು ಸಭೆಯ ಮುಂದೆ ಕರೆಸಬೇಕು. ತಾವೇನಾದರೂ ಸರ್ಕಾರದವರು 205(1)ರಲ್ಲಿ ಬಿಲ್ ಇಂಟ್ರಡ್ಯೂಸ್ ಆಗಿ ಇಲ್ಲೇನಾದರೂ ಯಾರಾದರೂ ಅಧಿಕಾರಿಗಳು ಮಿಸ್ಟೇಕ್ ಆಗಿ 205(1)ಎ ಎಂದು ಮಿಸ್ಟೇಕ್ ಆಗಿ ಸೇರಿಸುವುದಾದರೆ ಇಟ್ ಈಸ್ ಎ ಗ್ರೇವ್ ಮಿಸ್ಟೇಕ್. ಇಡೀ ಶಾಸನಸಭೆಯನ್ನು ಮಿಸ್‌ಲೀಡ್ ಮಾಡುವ ಒಂದು ಮಿಸ್ಟೇಕನ್ನು ನೀವು ಈ ರೀತಿ ಹಗುರವಾಗಿ ಮಾತನಾಡಲಿಕ್ಕಾಗುತ್ತದೆಯೇ?

ಶ್ರೀ ಬಸವರಾಜ ಹೊರಟ್ಟಿ: ಪ್ರಿಂಟಿಂಗ್ ಎರರ್ ಆಗಿದೆ ಸರ್.

Sri J.C. Madhuswamy: Bill was introduced under 1(a).

(ಗೊಂದಲ)

ಶ್ರೀ ಬಸವರಾಜ ಹೊರಟ್ಟಿ: ರಾಜ್ಯಪಾಲರಿಂದ ಅಪ್ರೂವ್ ಆಗಿ ಬಂದಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ರೆಕಾರ್ಡ್ಸ್ ಕಾಲ್ ಮಾಡಿ ಸರ್.

ಶ್ರೀ ಬಿ.ಎಸ್. ಯಡಿಯೂರಪ್ಪ: ಪೇಜ್ 30 ಅನ್ನು ತೆಗೆದು ಓದಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ದಯಮಾಡಿ ರೆಕಾರ್ಡ್ಸ್ ಅನ್ನು ಕಾಲ್ ಮಾಡಿ. ಡ್ರಾಫ್ಟ್‌ನಲ್ಲಿ 205(1) ಎಂದು ಇತ್ತು. ಇಲ್ಲಿಗೆ ಬಂದಾಗ 1(ಎ) ಹೇಗೆ ಆಗುತ್ತದೆ?

ಶ್ರೀ ಬಿ.ಎಸ್. ಯಡಿಯೂರಪ್ಪ: 'ಬಿ' ಎಂದರೆ ಈಗಾಗಲೇ ಆಗಿರುವಂತಹ ಖರ್ಚು, ಅದು ಕವರ್ ಆಗುತ್ತದೆ. 'ಎ' ನಲ್ಲಿ ಮುಂದೆ ಮಾಡಬೇಕಾದಂತಹ ಖರ್ಚು, ಎರಡೂ ಸ್ಪಷ್ಟವಾಗಿ ಇಲ್ಲಿ ಕೊಟ್ಟಿದ್ದೇವೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಅಧ್ಯಕ್ಷರೆ, ಇದು ಅಪ್ರಾಪ್ರಿಯೇಷನ್ ಬಿಲ್ ಸರ್, It is a constitutionally created provision. ಇಷ್ಟು ಲಘುವಾಗಿ ನಾವು ಇದರ ಬಗ್ಗೆ ತೆಗೆದುಕೊಳ್ಳುವ ಹಾಗಿಲ್ಲ. ನಾನು ಹೇಳುವುದನ್ನು ಕೇಳಿ ಸರ್, ಹಾಗಾದರೆ ನಮ್ಮ ಅಭಿಪ್ರಾಯವನ್ನು ಹೇಳಬಾರದೇ? ಏಕೆ ನೀವು ನಮ್ಮ ಮಾತಿಗೆ ಅಡ್ಡಿಮಾಡುತ್ತೀರಿ? ನಾವು ಹೇಳುವುದನ್ನು ಕೇಳಿ, ನಮ್ಮದು ತಪ್ಪಿರಬಹುದು, ಆಮೇಲೆ ತಾವು ಉತ್ತರಿಸುವಾಗ ನಮ್ಮನ್ನು ಸರಿಮಾಡಿ.

ಶ್ರೀ ಆರ್. ಅಶೋಕ್: ಇದೇ ರೀತಿ ಎಲ್ಲಾ ಫೈನಾನ್ಸ್ ಮಿನಿಸ್ಟರ್ಸ್ ಕೂಡ ಇದೇ ಸೆಕ್ಷನ್‌ನಲ್ಲೇ ಮಂಡನೆ ಮಾಡಿದ್ದಾರೆ. ಆಗ ಶ್ರೀರಾಮರೆಡ್ಡಿಯವರು ಎಲ್ಲರೂ ಇದ್ದರು.

(ಗೊಂದಲ)

ಅಧ್ಯಕ್ಷರು: ಅವರು ಮಾತನಾಡಲಿ ಬಿಡಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಸರ್, ನಾನು ಎದ್ದಿದ್ದೇನೆ, ಅಶೋಕ್‌ರವರೆ, ತಾವು ಹೊಸದಾಗಿ ಮಂತ್ರಿಗಳಾಗಿದ್ದೀರಿ, ದಯವಿಟ್ಟು ಅರ್ಥ ಮಾಡಿಕೊಳ್ಳಿ. ನೀವು ಪಾಸ್ ಮಾಡಿ ಕಳುಹಿಸಿದ್ದೀರಿ, ಅಲ್ಲಿ ರಿಜೆಕ್ಟ್ ಆಗಿದೆ, ಅವರು ಬಹಳ ಬುದ್ಧಿವಂತಿಕೆಯಿಂದ ರಿಜೆಕ್ಟ್ ಮಾಡಿ ಹಿಂದಕ್ಕೆ ಕಳುಹಿಸಿದ್ದಾರೆ. ಆ ಬುದ್ಧಿವಂತಿಕೆಯನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ನೀವು ವಿಫಲರಾಗಿ ಇದನ್ನು ತಂದುಬಿಟ್ಟಿದ್ದೀರಿ. ಆಯಿತು, ನೀವು ವಿಫಲರಾಗಿಲ್ಲ, ಸಕ್ಸೆಸ್ ಆಗಿದ್ದೀರಿ, ಅದಕ್ಕೋಸ್ಕರವೇ ಈ ಬಿಲ್ ವಾಪಸ್ಸು ಬಂದಿರುವುದು. ಅಧ್ಯಕ್ಷರೆ, ನಾನು ಇಷ್ಟೇ ಹೇಳತಕ್ಕಂಥಾದ್ದು. ಇಲ್ಲಿ ನಿನ್ನೆ ಬಿಲ್ ಮೂವ್ ಮಾಡಿರತಕ್ಕಂಥಾದ್ದು 205(1)ಎನಲ್ಲಿ. ಇವತ್ತು (1) ಎಂದು ತೆಗೆದುಕೊಂಡು ಬಂದಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಸರ್, ತಿದ್ದುಪಡಿ ತಂದಿರುವ ಉದ್ದೇಶವೇ ಅದು. ನಮಗೆ ಅಧಿಕಾರವಿದೆ ಅದಕ್ಕೆ ತಿದ್ದುಪಡಿಯನ್ನು ತಂದಿದ್ದೇವೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಸರ್, ಒಂದೇ ಒಂದು ನಿಮಿಷ ತಾವು ಕುಳಿತುಕೊಳ್ಳಿ ನಾನು ಹೇಳುತ್ತೇನೆ, ಇದು ತಿದ್ದುಪಡಿ ಅಲ್ಲ ಸರ್ ಇದು. That is not that easy.

ಶ್ರೀ ಬಸವರಾಜ ಹೊರಟ್ಟಿ: ರಾಜ್ಯಪಾಲರಿಂದ 205(1) ಬಂದಿದೆ. ಇಲ್ಲಿ ಪ್ರಿಂಟಿಂಗ್ ಮಿಸ್ಟೇಕ್ ಆಗಿದೆಯೆಂದು ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಆ ರೆಕಾರ್ಡ್ ತರಿಸಿ, ಆ ರೀತಿ ಮಿಸ್ಟೇಕ್ ಮಾಡಿರುವವರ ಮೇಲೆ ಕ್ರಮ ತೆಗೆದುಕೊಳ್ಳಿ, ಅವರನ್ನು ಸಸ್ಪೆಂಡ್ ಮಾಡಿ, ಅಸೆಂಬ್ಲಿಯೊಳಗೆ ಬಿಲ್ ಅನ್ನು ಅವರೇನು ಹುಡುಗಾಟಕ್ಕೆ ಇಡುತ್ತಿದ್ದಾರೇನು?

(ಗೊಂದಲ)

ಶ್ರೀ ಜೆ.ಎ. ಶ್ರೀರಾಮರೆಡ್ಡಿ: ಆ ರೆಕಾರ್ಡ್ ತರಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈಗ ಈ ಬಿಲ್ ವಿಷಯ ಬೇಡ, ಲಾ ಮಿನಿಸ್ಟರ್ ಈ ಸಭೆಯಲ್ಲಿ ಏನು ಮಾತನ್ನು ಹೇಳಿದ್ದಾರೆ, ಇದು ಇತ್ಯರ್ಥವಾಗಬೇಕು. ಎಲ್ಲಿ ಮಿಸ್ಟೇಕ್ ಆಯಿತು, ಯಾರು ಇದನ್ನು 1(ಎ) ಎಂದು ಮಾಡಿದರು, ದಯಮಾಡಿ ಇದನ್ನು ಟೇಬಲ್ ಮಾಡಬೇಕು, ಚರ್ಚೆಯಾಗಬೇಕು. ಹಾಗಾದರೆ ನಿಮ್ಮ ಆಫೀಸಿನಲ್ಲೇ, he is casting aspersions. ಯಾರು ಮಾಡಿರುವುದು? ದಯಮಾಡಿ ದಾಖಲೆ ತರಿಸಿ, 205(1)ಎ ಎಂದು ಮಿಸ್ಟೇಕ್ ಎಲ್ಲಾಗಿದೆ ಎಂಬುದಕ್ಕೆ ದಾಖಲೆಯನ್ನು ತರಿಸಿ.

ಶ್ರೀ ಬಸವರಾಜ ಹೊರಟ್ಟಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸಭಾಧ್ಯಕ್ಷರೆ, ಈಗ ಮಿಸ್ಟೇಕ್ ಆದದ್ದನ್ನು ತಪ್ಪು ಅಥವಾ ಸರಿ ಎಂದು ನೋಡಬೇಕು, ಅದರಲ್ಲಿ ಎರಡು ಮಾತಿಲ್ಲ. ಇವತ್ತು ನಾವು ಅಮೆಂಡ್‌ಮೆಂಟ್ ತಂದಿರುವುದಕ್ಕೆ ತಾವು ಅನುಮೋದನೆ ಕೊಡಬೇಕು ಎಂಬುದು ನಮ್ಮ ವಾದ. ಈಗ ಮಿಸ್ಟೇಕ್ ಆಗಿದೆ, ಎಲ್ಲಿ ಮಿಸ್ಟೇಕ್ ಆಗಿದೆ, ಯಾರು ಮಿಸ್ಟೇಕ್ ಮಾಡಿದ್ದರೆಂಬುದನ್ನು ನೋಡೋಣ. ಆದರೆ ಸರ್ಕಾರ ಇದನ್ನು ತೆಗೆದುಕೊಳ್ಳುವುದು ಒಂದು ಪರ್ಪಸ್‌ಗಲ್ಲ, ನಮ್ಮ ಉದ್ದೇಶವೇನೆಂದರೆ . .

(ಗೊಂದಲ)

ಶ್ರೀ ಜೆ.ಎ. ಶ್ರೀರಾಮರೆಡ್ಡಿ: ನಾನು ಎದ್ದು ನಿಂತಿದ್ದೇನೆ. ದಯವಿಟ್ಟು ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು: 205(1) ರ ಮೇಲೆ ತನ್ನಿ, ಇದನ್ನು ಅಮೆಂಡ್‌ಮೆಂಟ್ ಮಾಡಿದ್ದಾರೆ.

(ಗೊಂದಲ)

ಶ್ರೀ ಬಸವರಾಜ ಹೊರಟ್ಟಿ: ಈಗ ನೀವೂ ಏನು ಹೇಳುವುದು ಬೇಡ.

ಶ್ರೀ ಜೆ.ಎ. ಶ್ರೀರಾಮರೆಡ್ಡಿ: ನೀವು ಮಧ್ಯೆ ಮಾತನಾಡಿ ಸರ್, ದಯವಿಟ್ಟು ಹೇಳಿ ಸರ್, ಬಿಲ್ ಮೇಲೆ ನಾವು ಮಾತನಾಡಬಾರದೇ? ಮಾತನಾಡುವುದು ಬೇಡ ಎಂದರೆ ಬಿಟ್ಟುಬಿಡಿ.

(ಗೊಂದಲ)

Sri J.C. Madhuswamy: He has presented the Bill. ತಾವು ಬಿಲ್ ಇಟ್ಟಿದ್ದೀರಿ, ಚರ್ಚೆ ಮಾಡಲಿಕ್ಕೆ ನಮಗೆ ಬಿಡಿ.

ಶ್ರೀ ಜೆ.ಎ. ಶ್ರೀರಾಮರೆಡ್ಡಿ: ನಾವು ಅದನ್ನು ಮಾತಾಡುತ್ತಿಲ್ಲ, ದಯವಿಟ್ಟು ಕ್ಷಮಿಸಿ, ನಾವು ಏನು ಹೇಳುತ್ತೇವೆನ್ನುವುದನ್ನು ಒಂದು ನಿಮಿಷ ಕೇಳಿ. ಆಮೇಲೆ ಉತ್ತರವನ್ನು ಕೊಡಿ.

ಅಧ್ಯಕ್ಷರು: ಈಗ ಪ್ರಕಾಶ್ ಅವರು ಮಾತನಾಡುತ್ತಾರೆ ಕೇಳಿ.

(ಗೊಂದಲ)

ಶ್ರೀ ಜೆ.ಎ. ಶ್ರೀರಾಮರೆಡ್ಡಿ: ಒಂದು ನಿಮಿಷ ನಾನು ಮಾತನಾಡಿ ಮುಗಿಸುತ್ತೇನೆ ಸರ್. I will draw the Hon'ble Chair's attention to 205(b). (b)says what?

> "(b) if any money has been spent on any service during a financial year in excess of the amount granted for that service and for that year . . ."

No.1. ""cause to be laid before . . . . . ." ಯಾವುದಾದರೂ ಖರ್ಚು ಮಾಡಿದ್ದರೆ ಕಾರಣ ಕೊಡಬೇಕು.

"cause to be laid before the House or the Houses of the Legislature of the State another statement showing the estimated amount of that expenditure or cause to be presented to the Legislative Assembly of the State a demand for such excess, as the case may be." ನಾವು ಇಲ್ಲಿ ಕೇಳುತ್ತಿರುವುದು ಏನೆಂದರೆ ನೀವ್ಯಾಕೆ ಎಕ್ಸೆಸ್ ಆಗಿ ಸ್ಪೆಂಡ್ ಮಾಡುವಂತಹ ಪರಿಸ್ಥಿತಿ ಬಂತು ಎಂಬುದರ ಬಗ್ಗೆ ಈ ಸದನದಲ್ಲಿ ಕಾಗದಪತ್ರಗಳನ್ನು ಇಡಬೇಕಾಗುತ್ತದೆ. ಇಷ್ಟೇ ನಾವು ಕೇಳುತ್ತಿರುವುದು. ಬೇರೆ ಏನೂ ನಾವು ಕೇಳಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಶ್ರೀರಾಮರೆಡ್ಡಿಯವರೆ ಒಂದು ನಿಮಿಷ, ಈ ಮನೆಯಲ್ಲಿ ಈ ಬಗ್ಗೆ ಚರ್ಚೆಯಾಗಿ ತಾವು ಭಾಗವಹಿಸಿರಬಹುದು, ಭಾಗವಹಿಸದೇ ಇರಬಹುದು, ಈ ಮನೆಯಲ್ಲಿ ಪಾಸ್ ಆಗಿ ಆ ಮನೆಗೆ ಹೋಯಿತು, ಮತ್ತೆ ಇದು ತಮಗೆ ಗೊತ್ತಿರುವಂತಹದ್ದು. ತಾವು ಕಾನೂನು ಪಂಡಿತರೂ ಆಗಿದ್ದೀರಿ. ಅನುಚ್ಛೇದ 205(1) ಎಂದರೆ ಅದು ಹ್ಯಾಂಡೋವರ್ ಆಗಿದ್ದರಿಂದ ಕ್ಲಾಸ್ 'ಎ' ಹಾಗೂ ಕ್ಲಾಸ್ 'ಬಿ' ಎರಡೂ ಕೂಡ 205(1)ರ ಜೊತೆಯಲ್ಲಿಯೇ ಓದಬೇಕಾಗುತ್ತದೆ. ಆದ್ದರಿಂದ ಆರ್ಟಿಕಲ್ 205(1) ಎಂದು ನಾವು ನಮೂದನೆ ಮಾಡಿದ್ದೇವೆ, ಮಾನ್ಯ ಗವರ್ನರ್ ಅವರು ಅದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ, ಇಲ್ಲಿ ಪಾಸ್ ಆಗಿತ್ತು, ಅಲ್ಲಿ ಹೋದಾಗ ಸ್ಟೇಟ್‌ಮೆಂಟ್ ಆಫ್ ಅಬ್ಲೆಕ್ಷನ್‌ನಲ್ಲಿ ಮಿಸ್ಟೇಕ್ ಆಗಿದೆ. ಅದಕ್ಕೋಸ್ಕರ ತಿದ್ದುಪಡಿಯನ್ನು ತಂದಿದ್ದೇವೆ. ಬೇರೆ ಇನ್ಯಾವ ಮಾಹಿತಿ ನಿಮಗೆ ಬೇಕಾಗಿದೆಯೆಂಬ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: 'ಬಿ' ಎಂದರೆ ಈಗಾಗಲೇ ಖರ್ಚಾಗಿರುವಂತಹದ್ದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೀವೇನು ಹೇಳುತ್ತಿದ್ದೀರಿ, ಅದು ನಿನ್ನೆ ನೀವು ಮಂಡಿಸಿದ 205(ಎ)ನಲ್ಲಿ ಇದೆ. ಈಗ ನೀವು ಹೇಳುತ್ತಿರುವುದು ಬೇರೆ. ಅದಕ್ಕೋಸ್ಕರ ನಾವು ಕೇಳುತ್ತಿದ್ದೇವೆ ದಯವಿಟ್ಟು ಅರ್ಥ ಮಾಡಿಕೊಳ್ಳಿ, ನೀವು ಹಣಕಾಸು ಮಂತ್ರಿಗಳಾಗಿದ್ದೀರಿ. ಕಷ್ಟಕ್ಕೆ ಬರುವುದು ನಿಮಗೆ ಹೊರತು ನಮಗಲ್ಲ, ಏಕೆಂದರೆ ನಾಳೆ ಅದನ್ನು ಯಾರಾದರೂ ಪ್ರಶ್ನೆ ಮಾಡಿದರೆ ನಿಮಗೇ ತೊಂದರೆ 'ಬಿ' ನಲ್ಲಿ ಬಹಳ ಸ್ಪಷ್ಟವಾಗಿದೆ ಮಾನ್ಯ ಹಣಕಾಸು ಮಂತ್ರಿಗಳೇ ನೀವು ಯಾವುದಕ್ಕೆ ಹೆಚ್ಚುವರಿಯಾಗಿ ಹಣವನ್ನು ವೆಚ್ಚ ಮಾಡಿದ್ದೀರಿ, ಯಾವ ಕಾರಣಕ್ಕಾಗಿ ಮಾಡಿದ್ದೀರೆನ್ನುವುದನ್ನು, ಎತಕ್ಕೋಸ್ಕರ ಖರ್ಚು ಮಾಡಬೇಕಾದಂಥ ಪರಿಸ್ಥಿತಿ ಬಂತು, ಪ್ಲಾನ್ ಎಕ್ಸ್‌ಪೆಂಡಿಚರ್, ಹೊರಾತಾಗಿ ಏಕೆ ಬೇರೆ ಖರ್ಚು ಮಾಡತಕ್ಕಂಥ ಪರಿಸ್ಥಿತಿ ಬಂತು ಎನ್ನುವುದನ್ನು ನೀವು ಸದನಕ್ಕೆ ತಿಳಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ಎಲ್ಲಾ ವಿವರಗಳನ್ನು ಕೊಟ್ಟಿದ್ದೇನಲ್ಲಾ, ಎಲ್ಲಾ ವಿವರ ಅದರಲ್ಲಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಆಯಿತು. ಇಟ್ಟಿದ್ದೀರಿ, ಚರ್ಚೆ ಮಾಡೋಣ.

Sri S. Rajendran: The House should know what was the purpose.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ವಾಪಸ್ಸು ಬರದೇ ಇದ್ದಿದ್ದರೆ ನಾವು ಚರ್ಚೆ ಮಾಡತಕ್ಕಂಥ ಪ್ರಶ್ನೆಯೇ ಇರುತ್ತಿರಲಿಲ್ಲ. ಇಲ್ಲಿ ವಾಪಸ್ಸು ಬಂದಿರುವುದಕ್ಕೆ ನಾವು ಚರ್ಚೆ ಮಾಡಬೇಕೆಂದು ಹೇಳುತ್ತಿದ್ದೇವೆ ಅಷ್ಟೆ.

ಶ್ರೀ ಎಂ.ಪಿ. ಪ್ರಕಾಶ್(ಹೂವಿನ ಹಡಗಲಿ): ಸನ್ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಕಳೆದ ಎಷ್ಟೋ ವರ್ಷಗಳಿಂದ ಈ ತರಹದ ಪೂರಕ ಬೇಡಿಕೆಗಳ ಪ್ರಶ್ನೆ ಬಂದಂತಹ ಸಂದರ್ಭದಲ್ಲಿ 205 ಅನ್ನು ನಾವು ಯಾವಾಗಲೂ ಕೂಡ ಪ್ರಸ್ತಾಪ ಮಾಡುತ್ತಿದ್ದೇವೆ. 205(1)ರಲ್ಲಿ 'ಎ' ಮತ್ತು 'ಬಿ' ಎನ್ನುವುದು ಎರಡು ಪ್ರತ್ಯೇಕವಾದ ಪರಿಚ್ಛೇದಗಳು ಇದ್ದರೂ ಕೂಡ 205(1) ಎಂದರೆ 'ಎ' ಮತ್ತು 'ಬಿ' ಅದರ ಜೊತೆಯಲ್ಲಿದ್ದಂತಹವೇ ಆಗಿರುತ್ತದೆ ಅದಕ್ಕಾಗಿ ಪ್ರತ್ಯೇಕವಾಗಿ ಪ್ರಶ್ನೆ ಎತ್ತಬೇಕಾಗಿರುವಂತಹದ್ದೇನೂ ಇಲ್ಲ. ಒಂದು ವೇಳೆ ಅಲ್ಲಿ ಆಗಿರತಕ್ಕಂಥದ್ದರಲ್ಲಿ ನೀವು 'ಬಿ'ನಲ್ಲಿ ಏನಾದರೂ ಪ್ರಸ್ತಾಪ ಮಾಡಿ ಹಣ, ಮಂಜೂರಾತಿಗಿಂತಲೂ ಹೆಚ್ಚು ಖರ್ಚು ಮಾಡಿದ್ದೀರಿ ಎನ್ನುವುದಾಗಿದ್ದರೆ, ಅದಕ್ಕೆ ಲೆಕ್ಕ ಪತ್ರವನ್ನು ಕೊಡಬೇಕೆಂಬುದನ್ನು ತಾವು ಕೇಳುತ್ತಿದ್ದೀರಿ. ಅದನ್ನು ಈಗಾಗಲೇ ಕೊಟ್ಟಾಗಿದೆ, ಅದು ಇಲ್ಲದೆ. ಪುಟ 30 ಅನ್ನು ತಾವು ತೆಗೆದುಕೊಂಡರೆ, ಅದರಲ್ಲಿ ಸಂಪೂರ್ಣವಾದ ವಿವರವಿದೆ, ಇಲ್ಲಿ ಬಂದಿರುವುದು ಅವರು ಬಹಳ ತಾಂತ್ರಿಕವಾದ ಕಾರಣಕ್ಕಾಗಿ 201 'ಎ' ಮತ್ತು 'ಬಿ' ನಲ್ಲಿ 'ಬಿ' ಇದ್ದರೆ ಅದಕ್ಕೆ ತಿದ್ದುಪಡಿಮಾಡಬೇಕೆನ್ನುವ ಕಾರಣಕ್ಕಾಗಿಯೇ ಒಂದು ಎಚ್ಚರಿಕೆಯ ರೂಪದಲ್ಲಿ ಆ ತಿದ್ದುಪಡಿ ಏನಿದೆ ಅದು ಒಂದು ತಾಂತ್ರಿಕವಾಗಿರುವ ತಿದ್ದುಪಡಿ ಅಷ್ಟೆ. ಹಿಂದೆ ನೀವು ತೆಗೆದುಕೊಂಡಿರುವ ಎಲ್ಲಾ ವಿಧೇಯಕಗಳಲ್ಲಿ, ನಾವು ಪೂರಕ ವಿಧೇಯಕಗಳನ್ನು ಮಂಡಿಸಿದಾಗ ತಾವು ತೆಗೆದು ನೋಡಿ, ಕಡತವಿದೆ. ಅದರಲ್ಲಿ ಎಲ್ಲವೂ 205(1) ಅನ್ನತಕ್ಕಂಥಾದ್ದೇ ಇದೆ. ಎ(1) ಇದ್ದಂತಹ ಕಾನ್ಸ್ಟಿಟ್ಯೂಷನ್‌ನಲ್ಲಿ 'ಎ' ಮತ್ತು 'ಬಿ' ಅದರ ಭಾಗವೇ ಆಗಿರುತ್ತದೆ. 'ಬಿ'ನಲ್ಲಿ ಏನಾದರೂ ನಿಮಗೆ ಅನುಮಾನ ಬಂದು ಯಾವ ವಿಚಾರದಲ್ಲಿ ಒದಗಿಸಲಾಗಿರತಕ್ಕಂಥ ಹಣಕ್ಕಿಂತ ಹೆಚ್ಚು ಹಣವನ್ನು ಖರ್ಚು ಮಾಡಿದ್ದೀರಿ ಎಂದರೆ ಅದರ ವಿವರವನ್ನು ಕೇಳುವುದು ಸದನದ ಹಕ್ಕು, ಅದನ್ನು ತಾವು ಕೇಳಿದ್ದೀರಿ ಅದನ್ನು ಮಾನ್ಯ ಹಣಕಾಸು ಸಚಿವರು ಆ ಪೂರಕ ಬೇಡಿಕೆಗಳಿಗೆ ಸಂಬಂಧಪಟ್ಟ ದಸ್ತಾವೇಜಿನಲ್ಲಿ ಪುಟ 30ರಲ್ಲಿ ಅದರ ವಿವರಗಳನ್ನು ಕೊಟ್ಟಿದ್ದಾರೆ. ಆ ಕಾರಣಕ್ಕಾಗಿ ಇದನ್ನು ನಾವು Hair splitting argument ಎಂದು ಕರೆಯುತ್ತೇವೆ. ಸುಮ್ಮನೆ ಆ ಕೂದಲುಗಳನ್ನು ಸೀಳುವುದರ ಮೂಲಕವಾಗಿ ಆಶಯಗಳಿಗೆ ಭಂಗ ಬರುವಂತಹದ್ದಾಗಬಾರದು. ಇಲ್ಲಿ ಆಗಿರುವ ವಿಷಯದ ಬಗ್ಗೆ ಒಂದು ತಾಂತ್ರಿಕವಾಗಿರತಕ್ಕಂಥ ಸಣ್ಣ ತಿದ್ದುಪಡಿಯನ್ನು ಅಲ್ಲಿ ವಿಧಾನ ಪರಿಷತ್‌ನವರು ಮಾಡಲಿಲ್ಲವೆನ್ನುವ ಕಾರಣಕ್ಕಾಗಿಯೇ ಅನಿವಾರ್ಯವಾಗಿ ಅವರು ತರಬೇಕಾಯಿತು. ಇಲ್ಲದಿದ್ದರೆ ಅವರು ಸಂಪೂರ್ಣವಾಗಿ ವಿಧೇಯಕವನ್ನು ತಿರಸ್ಕರಿಸಿದರೆ ಅದರ ಪರಿಣಾಮವೇನಾಗುತ್ತದೆಂಬುದೂ ಕೂಡ ವಿಧಾನಪರಿಷತ್‌ನವರಿಗೆ ಗೊತ್ತಿದೆ. ವಿಧಾನಪರಿಷತ್‌ನವರು ಅದನ್ನು ತಿರಸ್ಕರಿಸಿದರೆ ಮತ್ತೆ ಇದು ಇಲ್ಲಿಗೆ ವಾಪಸ್ ಬರುತ್ತದೆಂಬುದು ಗೊತ್ತಿದೆ. ಆ ಕಾರಣಕ್ಕಾಗಿ ಅವರು ಹೇಳಿದರು, ಆ ಅಧಿಕಾರಗಳನ್ನು ಪ್ರಸ್ತಾಪ ಮಾಡದೆ ಅವರು ನೇರವಾಗಿ ಇಲ್ಲಿ ಈ ವಿಧೇಯಕವನ್ನು ಇಲ್ಲಿ ಮತ್ತೆ ಚರ್ಚೆ ಮಾಡುವುದು ಬೇಕಾಗಿಲ್ಲವೆನ್ನುವ ನಿಯಮವನ್ನು ಕೂಡ ರಚನೆ ಮಾಡಿಕೊಂಡಿದ್ದೇವೆ. ಆ ರಚನೆಯ ಹಿನ್ನೆಲೆಯಲ್ಲಿ ನಾವು ವಾಪಸ್ ಕಳುಹಿಸಿದರೆ ಇಲ್ಲಿ ಮತ್ತೆ ಅದು ಮಂಜೂರಾತಿಯಾಗುತ್ತದೆ, ಅದು ಅಲ್ಲಿಗೆ ವಾಪಸ್ ಬರುವುದಿಲ್ಲವೆಂಬುದು ಗೊತ್ತಾಗಿದ್ದರಿಂದ, ಅವರು ಒಂದು ತಾಂತ್ರಿಕ ಕಾರಣವನ್ನಿಟ್ಟುಕೊಂಡಿದ್ದಾರೆ, ಅದನ್ನು ಇವರು ತಿದ್ದುಪಡಿ ಮಾಡಿದ್ದಾರೆ.

ಮಾನ್ಯ ಹಣಕಾಸಿನ ಸಚಿವರು ತಿದ್ದುಪಡಿ ಮಾಡಿದಾಗ ಆ ಗೌರವಾನ್ವಿತವಾದಂಥ ಸದನ ಆ ವಿಚಾರವನ್ನು ಪರಿಗಣಿಸಿಲ್ಲ. ಏಕೆ ಪರಿಗಣಿಸಿಲ್ಲ ಎಂಬುದನ್ನು ಕೆಳಮನೆಯವರು ಮೇಲ್ಮನೆಯ ಅಧಿಕಾರಿಗಳೊಡನೆ ಚರ್ಚೆ ಮಾಡುವುದಕ್ಕೆ ಇದರಲ್ಲಿ ಅವಕಾಶವಿಲ್ಲ. ಅದು ಪರಿಗಣಿಸಿರತಕ್ಕಂಥಾದ್ದು ಯಾವುದೇ ಕಾರಣ ಇರಬಹುದು ಅದು ಅವರ ಸಾರ್ವಭೌಮ ಹಕ್ಕು. ಆದರೆ ಇಲ್ಲಿ ತಾಂತ್ರಿಕ ಕಾರಣಗಳಿಗಾಗಿ ವಾಪಸ್ ಬಂದದ್ದನ್ನು ತಿದ್ದುಪಡಿ ಮಾಡಿದ್ದಾರೆ, 205ನ್ನು 'ಎ' ಮತ್ತು 'ಬಿ' ಅನ್ನು ಜೊತೆಗೆ ಸೇರಿಸಿ ಓದತಕ್ಕದ್ದು, ಮತ್ತೆ ಅವರು ಎತ್ತಿದಂತಹ ಆಕ್ಷೇಪಣೆಯ 'ಬಿ' ಬಗ್ಗೆ, ಅವರು ಪೂರಕ ಬೇಡಿಕೆ ದಸ್ತಾವೇಜಿನಲ್ಲಿ ಪುಟ 30 ರಲ್ಲಿ ಅದರ ವಿವರಗಳನ್ನು ಕೊಟ್ಟಿದ್ದಾರೆ. ಹಿಂದೆ ಇಂತಹ ವಿಚಾರಗಳು ಬಂದಂತಹ ಸಂದರ್ಭದಲ್ಲಿಯೂ ಕೂಡ ಇದು ಪ್ರಸ್ತಾಪವಾಗಿರುವುದರಿಂದ ದಯವಿಟ್ಟು ಇದನ್ನು ಹೆಚ್ಚಾಗಿ ವಿಸ್ತರಿಸುವ ಅಗತ್ಯವಿಲ್ಲ! ಇದನ್ನು ಇಲ್ಲಿಗೇ ಕೈಬಿಟ್ಟು, ಈ ಪೂರಕ ಬೇಡಿಕೆಯನ್ನು ಮಾನ್ಯ ಹಣಕಾಸಿನ ಸಚಿವರು ತಂದಾಗ ಅದಕ್ಕೆ ಒಪ್ಪಿಗೆಯನ್ನು ತಾವು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಮಗೆ ಕೊಟ್ಟಿರುವ ಪುಸ್ತಕದಲ್ಲಿ ಸಿಗುತ್ತಿಲ್ಲ, ಸರ್, ನಮಗೆ ಕೊಟ್ಟಿರುವ ಎಲ್ಲಾ ಪುಸ್ತಕಗಳಲ್ಲೂ, ಅಭಿಯಾಚನೆ, ರಿಕ್ವೆಸ್ಟ್, ಎಸ್ಟಿಮೇಟ್ಸ್, ಮತ್ತು ನಮಗೆ ಈಗಾಗಲೇ ವೆಚ್ಚವಾಗಿರುವ ಮಾಹಿತಿ ನಮ್ಮ ಮುಂದೆ ಇಲ್ಲ, ದಯವಿಟ್ಟು ಹಿರಿಯ ಸದಸ್ಯರು ಅರ್ಥ ಮಾಡಿಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್: ನಾನು ಆಗಲೇ ಹೇಳಿದಂತೆ, ವಿವರಗಳನ್ನು ಕೊಟ್ಟಾಗ . . . . .

ಶ್ರೀ ಜೆ.ಸಿ. ಮಾಧುಸ್ವಾಮಿ: ಪ್ರಶ್ನೆ ಇರುವುದು ಇಷ್ಟೆ, ತಾವೇನು ಅಭಿಯಾಚನೆ ಡಿಮಾಂಡ್ ಇಟ್ಟಿದ್ದೀರಿ, ಎಸ್ಟಿಮೆಟ್ಸ್ ಇಟ್ಟಿದ್ದೀರಿ, 'ಎ' ಕೆಳಗಡೆ ಕವರ್ ಆಗುತ್ತದೆ, 'ಬಿ' ಕೆಳಗಡೆ already made Expenditure ಏನಾದರೂ ಇದ್ದರೆ ದಯವಿಟ್ಟು ಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್: ಅಂತಹದ್ದೇನೂ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಹಣಕಾಸಿನ ಮಂತ್ರಿಗಳು ಅದನ್ನು ಹೇಳಬೇಕಲ್ಲಾ? 205(1) ಎಂದರೆ, ಒಂದು, ನಮಗೆ ಬೇಕಾಗಿರುವ ಹಣ ಕೇಳುವುದು, 'ಬಿ'ನಲ್ಲಿ ನಾವು ಈಗಾಗಲೇ ಖರ್ಚು ಮಾಡಿರುವುದನ್ನು ರ್ಯಾಟಿಫೈ ಮಾಡಿ ಎಂದು ಈ ಸಭೆಯನ್ನು ಕೇಳುವುದು. ನೀವು 205(1)ಎ ನಲ್ಲಿ ನೀವು ಏನು ಕೇಳಿದ್ದಿರೆಂದರೆ, ಅದು ಅಭಿಯಾಚನೆ ಡಿಮ್ಯಾಂಡ್. It was an estimate asked for But, 205(1)ಗೆ ನೀವು ಬರುತ್ತಿದ್ದಂತೆ you have to give a list of expenditure which is already made without sanctioning the budget. ತಾವು ಕೊಡಬೇಕು. It has to be retified in this House. ಅದನ್ನು ತಾವು ಪ್ರತ್ಯೇಕವಾಗಿಯೇ ಕೊಡಬೇಕೆಂದು ಸಂವಿಧಾನ ಹೇಳಿದಾಗ, ಅದನ್ನು ಟೇಬಲ್ ಮಾಡದೆ ನೀವು, ಕಾಲಹರಣ ಮಾಡುತ್ತಿದ್ದಿರೆಂದರೆ ನಾವೇನು ಉತ್ತರ ಹೇಳುವುದು?

ಶ್ರೀ ಎಂ.ಪಿ. ಪ್ರಕಾಶ್: ಅದರ ವಿವರಗಳನ್ನೆಲ್ಲಾ ಕೊಟ್ಟಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇಲ್ಲ ಸರ್, ದಯಮಾಡಿ ನೋಡಿ, ಪುಟ 30 ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಭಿಯಾಚನೆ ಇದೆ, ದಯವಿಟ್ಟು ಎಲ್ಲಿದೆ ತೋರಿಸಿ And the entire book is for estimates, demands.

ಶ್ರೀ ಎಂ.ಪಿ. ಪ್ರಕಾಶ್: 2005–06ನೇ ಸಾಲಿನಲ್ಲಿ ಪೂರಕ ಅಂದಾಜು ಎರಡನೇ ಕಂತು, ಇದು ಪುಟ ಇದು 30 ರಲ್ಲಿ, ಸಾದಿಲ್ವಾರು ನಿಧಿಯ ಮೂಲಕ ಮುಂಗಡಹಣ ಮಂಜೂರಾದ ವಿವರಗಳು. ಇದನ್ನು ಕೊಟ್ಟಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸರ್, ಅದು ಎಲ್ಲಿದೆ, ನಮ್ಮಲ್ಲಿ ಆ ಪುಸ್ತಕವಿಲ್ಲವಲ್ಲಾ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಮಗೆ ಬೇರೆ ಪುಸ್ತಕವನ್ನು ಕೊಟ್ಟಿದ್ದೀರೇನೋ, ಬೇರೆ ಪುಸ್ತಕವೇನಾದರೂ ಕೊಟ್ಟಿದ್ದರೆ ಅದನ್ನಾದರೂ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಪುಟ 30 ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಎಂದಿದೆ.

Sri M.P. Prakash: No, no. I stand corrected. ಪುಟ 85, ಪೂರಕ ಅಂದಾಜುಗಳು ಎಂದಿದೆ, ಅನುಬಂಧ ತೆಗೆದುನೋಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಏನ್ ಸರ್, ನೀವೂ ಹೀಗಾಗಿಬಿಟ್ಟಿರಲ್ಲಾ?

ಶ್ರೀ ಎಂ.ಪಿ. ಪ್ರಕಾಶ್: ನೋಡಿ, Sub-clause (b): ನಲ್ಲಿ . . . . . .

"(b) if any money has been spent on any service during a financial year in excess of the amount granted for that service and for that year, cause to be laid before the House or the Houses of the Legislature of the State another Statement showing the estimated amount of that expenditure or cause to be presented to the Legislative Assembly of the State a demand for such excess, as the case may be." ಎಂದು ತಾವು ಅದರ ಮೇಲೆ ರಿಲೇ ಆಗುತ್ತೀರಿ, ಇಲ್ಲಿ ಅನುಬಂಧ 85ನೇ ಪುಟ ತೆಗೆದುಕೊಳ್ಳಿ, 82, 83, 84ನೇ ಪುಟ ನೋಡಿ.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಪ್ರಕಾಶ್‌ರವರೆ, ನಮಗೆ ಬೇರೆ ಪುಸ್ತಕವೇನಾದರೂ ಕೊಟ್ಟಿದ್ದರೆ ಅದನ್ನಾದರೂ ಹೇಳಿ ಹೋಗಲಿ, 84ನೇ ಪುಟದಲ್ಲಿ ನೀವು ಹೇಳುತ್ತಿರುವುದು ಡೆಟ್ ಸರ್ವಿಸ್ ಇದೆ, ಅಧ್ಯಕ್ಷರೆ, ನಮಗೆ ಬೇರೆ ಪುಸ್ತಕವೇನಾದರೂ ಕೊಟ್ಟಿದ್ದರೆ ಅದನ್ನಾದರೂ ತಿಳಿಸಿ, ದಯವಿಟ್ಟು ಪುಟ 84ನಲ್ಲಿ ಏನಿದೆ ಎಂಬುದನ್ನು ನೋಡಿ 84ರಲ್ಲಿ ಏನಿದೆ, ಮಾನ್ಯ ಹಣಕಾಸು ಮಂತ್ರಿಗಳು ಹೇಳಲಿ. ಅನ್‌ಕ್ಷರ್‌ನಲ್ಲಿ ಏನಿದೆ, 80ನಲ್ಲಿ ಏನಿದೆ ಎಂದು ದಯವಿಟ್ಟು ಹೇಳಿ. ಇಲ್ಲವೆಂದರೆ ನಮಗೆ ಬೇರೆ ಪುಸ್ತಕವನ್ನು ಕೊಟ್ಟಿದ್ದೇವೆಂದಾದರೂ ಹೇಳಲಿ.

ಅಧ್ಯಕ್ಷರು: ಇಲ್ಲಿ ಏನಾಗಿದೆ ಎಂದರೆ, ಇವರಿಗೆ ಕೊಟ್ಟಿರುವ ಪುಸ್ತಕದಲ್ಲಿ ಒಂದು ತರಹ ಇರುವುದು: ಅವರಿಗೆ ಕೊಟ್ಟಿರುವ ಪುಸ್ತಕದಲ್ಲಿ ಒಂದು ತರಹ ಇರುವುದು. This is very bad.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೋಡಿ ಸರ್; ನಾವು ಏನು ಮಾಡುವುದು? ನೀವು ಕೊಡುವ ಮಾಹಿತಿಯ ಮೇಲೆ ಮಾತನಾಡಿದರೂ ತಪ್ಪಾ? 84ರಲ್ಲಿ ಏನಿದೆ, 80ರಲ್ಲಿ ಏನಿದೆ, 81ರಲ್ಲಿ ಏನಿದೆ ಎಂಬುದನ್ನು ನೋಡಿ ಸರ್.

(ಗೊಂದಲ)

ಅಧ್ಯಕ್ಷರು: ಅಧಿಕಾರಿಗಳು ಅತ್ಯಂತ ಬೇಜವಾಬ್ದಾರಿತನದಿಂದ ಕೆಲಸ ಮಾಡುತ್ತಿದ್ದಾರೆ ಅಂತ ನನಗನ್ನಿಸುತ್ತಾ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಬೇಜವಾಬ್ದಾರಿತನವನ್ನು ಹಾಗೇ ಬಿಡಲಿಕ್ಕೆ ಆಗುವುದಿಲ್ಲ. ಏನು ಈ ತರಹ ಆದರೆ? ನಾವೇನು ಬೇಕಾಗಿ ಮಾಡುತ್ತಿದ್ದೇವೆ ಏನು?

ಶ್ರೀ ಬಿ.ಎಸ್. ಯಡಿಯೂರಪ್ಪ: ಅಧ್ಯಕ್ಷರೆ, ನಾವು ಕೊಟ್ಟಿರುವ ಪುಸ್ತಕದಲ್ಲಿ ಎಲ್ಲಾ ವಿವರ ಇದೆ. ಅವರು x x x ಏನು ಮಾಡುವುದು?

(ಗೊಂದಲ)

(ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಿದರು)

ಅಧ್ಯಕ್ಷರು: ಹಾಗಲ್ಲ ಯಡಿಯೂರಪ್ಪನವರೆ, You cannot Any like that. ಅದು ಕರೆಕ್ಟಾಗಲಿ. ಈ ಕಡೆ ಕೊಟ್ಟಿರುವುದರಲ್ಲಿ ಒಂದು ತರಹ ಇರೋದು. ಇವರು ಹೇಳೋದೇ ಒಂದು ತರಹ ಇರುವುದು, This is very bad. ಅದು ಏನು ತಪ್ಪಾಗಿದೆ ಅನ್ನೋದನ್ನು ಮಾನ್ಯ ಯಡಿಯೂರಪ್ಪನವರೆ ತಾವು ನೋಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ಇದು ಗೌರವ ತರುವಂತಹುದಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ನೀವು ಉಪಮುಖ್ಯಮಂತ್ರಿಗಳಾದ ಮೇಲೆ ಬೇರೆ ಯಾರೂ ಮಾತನಾಡಲೇಬಾರದು ಅಂತ ಬಯಸುವುದು ಸರಿಯಲ್ಲ. ಇದು ಯಾರಿಗೂ ಗೌರವ ತರುವಂಥಾದ್ದು ಅಲ್ಲ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ನಾವು ಏನೂ ಮಾತನಾಡಬಾರದು ಅನ್ನುವುದು ಶಾಸನಸಭೆ ದೃಷ್ಟಿಯಿಂದ ಒಳ್ಳೆಯದಲ್ಲ. ತಾವು ರೆಕಾರ್ಡ್ಸ್ ತೆಗೆಸಬೇಕು.

ಅಧ್ಯಕ್ಷರು: ಅದು ಸದಭಿರುಚಿಯದಲ್ಲ, ಅದನ್ನು ತೆಗೆದುಹಾಕೋಣ. ಮಾನ್ಯ ಯಡಿಯೂರಪ್ಪನವರೆ, ನೀವು ಸ್ವಲ್ಪ ಕೋಪ ಮಾಡುತ್ತೀರಿ. ತಾವು ಉಪ ಮುಖ್ಯಮಂತ್ರಿಗಳು. ಹೇಳುವುದು ಸದಸ್ಯರು ಕರ್ತವ್ಯ. ಏನಾದರೂ ತಪ್ಪಾಗಿದ್ದರೆ ತಿದ್ದುಪಡಿ ತಂದಿದ್ದಾರೆ, ಅದನ್ನು ಒಪ್ಪಿ ನೀವು ಪಾಸ್ ಮಾಡಬೇಕು. ನಿಮಗೆ ಕೇಳತಕ್ಕಂಥ ಹಕ್ಕಿದೆ. ನಾನು ಇಲ್ಲ ಅಂತ ಹೇಳಿದ್ದೀನಾ?

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಹಿಂದೆ ಆದರೂ ಕೂಡ ಪ್ರತಿಯೊಂದು ಬಾಬತ್ತಿನ ವಿಚಾರದಲ್ಲಿ ಇದರಲ್ಲಿ ವಿವರಗಳಿರುತ್ತವೆ. ಹಾಗೆ ಬಂದಿರುವ ಸಂಪ್ರದಾಯ ಮತ್ತು ಪರಿಸ್ಥಿತಿ ಏನೆಂದರೆ ಪ್ರತಿ ಇಲಾಖೆಗೂ ಈ ವಿಚಾರಗಳನ್ನು ಪ್ರಸ್ತಾಪ ಮಾಡಿದರೆ 60–70 ಈ ತರಹದ ಪುಸ್ತಕಗಳನ್ನು ಕೊಡಬೇಕಾಗುತ್ತದೆ. ಈಗ ಉದಾಹರಣೆಗೆ ಪುಟ 3ನ್ನು ತೆಗೆದುನೋಡಿ: ಅದರಲ್ಲಿ ಕೃಷಿ ಮತ್ತು ತೋಟಗಾರಿಕೆ, ಬಾಬತ್ತು ಸಂಖ್ಯೆ 1, ಪ್ರಸ್ತುತ ಸಾಲಿನಲ್ಲಿ ಒದಗಿಸಿರುವ ಅನುದಾನ ಸಾಲದಿರುವುದರಿಂದ ಸಿಬ್ಬಂದಿ ವೇತನಕ್ಕಾಗಿ 3.80 ಲಕ್ಷ ರೂ.ಗಳನ್ನು ಹೆಚ್ಚುವರಿಯಾಗಿ ಅಭಿಯಾಚನೆಗೆ ಸೇರಿಸಿದೆ. ಅದೇ ರೀತಿ ಬಾಬತ್ತು 2 ಮತ್ತು 4. ಪ್ರಸ್ತುತ ಸಾಲಿನಲ್ಲಿ ಒದಗಿಸಿರುವ ಅನುದಾನ ಸಾಲದಿರುವುದರಿಂದ ಪ್ರಯಾಣವೆಚ್ಚ, ಪೂರಕವೆಚ್ಚ ಮತ್ತು ಇತರ ಖರ್ಚುಗಳಿಗಾಗಿ 127.38 ಲಕ್ಷಗಳನ್ನು ಹೆಚ್ಚುವರಿಯಾಗಿ ಅಭಿಯಾಚನೆಯಲ್ಲಿ ಸೇರಿಸಲಾಗಿದೆ. ಇದಕ್ಕೆಲ್ಲ ವಿವರಗಳಿರುತ್ತವೆ. ಇದರಲ್ಲಿ ಸೇರಿಸಿರುವುದಕ್ಕೆ ಪ್ರತ್ಯೇಕವಾಗಿ ಯಾರೂ ಕೂಡ ಕೊಡುತ್ತಾ ಇಲ್ಲ. ಕೊಡಬೇಕೆಂದು ಒತ್ತಾಯ ಮಾಡಿರುವಂತಹ ಉದಾಹರಣೆಗಳು ಈ ಸದನದಲ್ಲಿ ಯಾವಾಗಲೂ ನಡೆದಿಲ್ಲ. ಹಿಂದೆ ಎಲ್ಲ ಕಾಲದಲ್ಲಿ, ನಾವೆಲ್ಲ ಸರ್ಕಾರದಲ್ಲಿದ್ದಾಗ ತಾವೂ ಇದ್ದಾಗ ಈ ಪೂರಕ ಅಂದಾಜು ಪಟ್ಟಿಯನ್ನು ಇದೇರೀತಿ ಕೊಡಲಾಗಿತ್ತು. ಪ್ರತಿ ಇಲಾಖೆಗೆ ಪ್ರತಿ ಬಾಬತ್ತಿಗೆ ಪ್ರತ್ಯೇಕವಾಗಿರುವುದು ಇರುವುದಿಲ್ಲ. ಅದರ ವಿವರಗಳೆಲ್ಲಾ ಇಲ್ಲಿ ಇರುವುದರಿಂದ ದಯವಿಟ್ಟು ಇದನ್ನೊಂದು ಸಣ್ಣ ತಾಂತ್ರಿಕ ಕಾರಣಕ್ಕಾಗಿ ಅದನ್ನು ದೊಡ್ಡದು ಮಾಡಿ ವಾದ ಮಾಡುವುದು ಸೂಕ್ತವಾದದ್ದಲ್ಲ. ಇಲ್ಲಿ ಯಾವುದೇ ತರಹದ ತಪ್ಪನ್ನೂ ಮಾಡಿಲ್ಲ ಮತ್ತು ಇದರಿಂದ ಯಾವ ಅಪರಾಧವೂ ಕೂಡ ಆಗಿಲ್ಲ.

X ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ತಾವು 205 (1)ಬಿ ಓದಿ. ಯಾವ ವೆಚ್ಚವನ್ನು ಆ ವರ್ಷದಲ್ಲಿ ಅನುಮೋದನೆಯಿಲ್ಲದೆ ಮಾಡಿರುತ್ತಾರೋ ಅಂತಹ ವೆಚ್ಚವನ್ನು ಸರಿದೂಗಿಸಿ, ಸಕ್ರಮಗೊಳಿಸುವುದಕ್ಕೆ ಇರುವ ನಿಯಮ ಇದು. ಅಂತಹ ಸನ್ನಿವೇಶದಲ್ಲಿ ಅವರು ಕಾರಣಗಳನ್ನು ಸಭೆಯಲ್ಲಿ ಇಡಬೇಕು ಮತ್ತು ಸಭೆಯ ಒಪ್ಪಿಗೆಯನ್ನು ಪಡೆಯಬೇಕು. ಇಲ್ಲೇನು ಹೇಳುತ್ತದೆ, ಮಾನ್ಯ ಪ್ರಕಾಶರು ಓದಿ ಹೇಳಿದರು, ಪುಟ 3ರಲ್ಲಿ, "ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ಅನುದಾನ ಸಾಲದಿರುವುದರಿಂದ ಸಿಬ್ಬಂದಿ ವೆಚ್ಚಕ್ಕಾಗಿ 3.8 ಲಕ್ಷ ರೂಗಳನ್ನು ಹೆಚ್ಚುವರಿಯಾಗಿ ಅಭಿಯಾಚಿಸಲಾಗಿದೆ! ಅಷ್ಟು ಕಾರಣ ಸಾಕಾ? ಈಗ ಅಕೌಂಟೆಂಟ್ ಜನರಲ್ ಇದ್ದಾರೆ, ಸಿಎಜಿ ಇದ್ದಾರೆ. ಪ್ರತಿ ವರ್ಷ Demand of grantsನ್ನು ಒಂದೊಂದು ಇಲಾಖೆಗೆ ನಾವು ಕೊಡುತ್ತೇವೆ, ಅಲ್ಲಿ ಅದು ಹೇಗೆ ಖರ್ಚಾಯಿತು ಅಂತ ಆಮೇಲೆ ಆಡಿಟ್ ಆಗುತ್ತದೆ, ಅವರ ಅಬ್ಸರ್ವೇಶನ್ಸ್ ಇರುತ್ತದೆ. ಅವೆಲ್ಲ ಕೂಡ ಪಿಎಸಿ ಮುಂದೆ ಬರುತ್ತದೆ. ಇವನ್ನೆಲ್ಲಾ ಚರ್ಚಿಸಿದ್ದೇವೆ. ನಾವು ಏನು ಕೇಳುತ್ತಿದ್ದೇವೆಂದರೆ ಸವಿವರವಾದ ಕಾರಣಗಳನ್ನು ಒದಗಿಸಿದರೆ, ಅದೂ ನಾವೇನು ಮುಲಾಜಿಗೆ ಕೇಳುತ್ತಾ ಇಲ್ಲ. ಸಂವಿಧಾನಬದ್ಧವಾಗಿ ಕೇಳುತ್ತಿದ್ದೇವೆ, ಹಿಂದಿನಿಂದ ಸಂಪ್ರದಾಯ ಅಂದರೆ ಯಾರೂ ಕೇಳಲಿಲ್ಲ, ನಾವು ಕೇಳುತ್ತಾ ಇದ್ದೇವೆ. ನಾನು ಏನು ಹೇಳುತ್ತೇನೆ ಅಂದರೆ ಒಂದು ವೇಳೆ ದೂರದೃಷ್ಟಿಯಿಲ್ಲದೆ ಖರ್ಚು ಮಾಡಿದ್ದರೆ, ಆಡಳಿತದಲ್ಲಿ ದೋಷವಿದ್ದರೆ, ಸಲಹೆ ಕೊಡುವಾಗ ಮುಂದೆ ಈ ರೀತಿ ಸರಿಪಡಿಸಿಕೊಳ್ಳಬೇಕು, ಇದು ಅವಾಯ್ಡಬಲ್ ರೀಸನ್, ಇದು ಅನ್‌ಅವಾಯ್ಡ್‌ಬಲ್ ರೀಸನ್–ಹೀಗೆ ಹೋಗಿ ಅಂತ ಸೂಚನೆ ಕೊಟ್ಟು ಸರ್ಕಾರ ನಡೆಸುವುದಕ್ಕೆ ನಾವು ಸಲಹೆ ಕೊಡುತ್ತೇವೆ. ತಾಂತ್ರಿಕ ದೋಷ ಅಂತ ಹೇಳಿ ಪದ್ಧತಿ ನಡೆದುಕೊಂಡು ಬಂದಿದೆ ಅಂತ ಹೇಳಿ ಸಂವಿಧಾನಬದ್ಧವಾಗಿ ನಮಗಿರುವ ಹಕ್ಕು ಅದನ್ನು ಖಾತ್ರಿಪಡಿಸುವುದಿಲ್ಲ ಅಂದರೆ ಬಹಳ ಖೇದವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅಧ್ಯಕ್ಷರೆ, ನಾನು ತಮ್ಮ ಮೂಲಕ ಮಾನ್ಯ ರಮೇಶ್‌ಕುಮಾರರನ್ನು, ಮತ್ತಿತರ ಸದಸ್ಯರನ್ನು ಕೇಳುವುದು, ಅವರು ಏನು ವಿವರ ಬೇಕೋ ಕೇಳಲಿ. ಈಗ ತಾನೇ ಮಾನ್ಯ ಎಂ.ಪಿ. ಪ್ರಕಾಶರು ಹೇಳಿದಂತೆ ಕೃಷಿ ಮತ್ತು ತೋಟಗಾರಿಕೆ ಬಗ್ಗೆ ವಿವರವಾದ ಮಾಹಿತಿಯನ್ನು ಯಾವರೀತಿ ನಾವು ಖರ್ಚು ಮಾಡಿದ್ದೇವೆ ಅಂತ ಹೇಳಿ ಅಲ್ಲಿ ಕೊಟ್ಟಿದ್ದೇವೆ. ಮತ್ತೆ ಅಭಿಯಾಚನೆ 2ರಲ್ಲಿ ಪಶುಸಂಗೋಪನೆ ಮತ್ತು ಮೀನುಗಾರಿಕೆ–ಅದರಲ್ಲಿ ಖರ್ಚಾಗಿದ್ದರ ವಿವರವನ್ನು ಈ ಕಡೆ ಕೊಟ್ಟಿದ್ದೇವೆ. ಹೀಗೆ ಪ್ರತಿಯೊಂದು ಅಭಿಯಾಚನೆಗೂ ವಿವರಗಳನ್ನು ನಾವು ಕೊಟ್ಟಿದ್ದೇವೆ. ಇದು ಮೊದಲನೆಯದು. ಎರಡನೆಯದು ಯಾವ ಖರ್ಚಿನ ಬಗ್ಗೆ ನಿಮ್ಮ ಆಕ್ಷೇಪಣೆಯಿದೆ ಅಂತ ಹೇಳಿದರೆ ಅದಕ್ಕೆ ವಿವರ ಕೊಡಲು ನಾವು ಇಷ್ಟಪಡಬಹುದು. ಇದರಲ್ಲಿ ನೂರಕ್ಕೆ 90ರಷ್ಟು ಭಾಗ ಹಿಂದೆ ಅಧಿಕಾರದಲ್ಲಿದ್ದ ನೀವೇ ಮಾಡಿದಖರ್ಚು. ಅವರೇ ಇರಲಿ ಯಾರೇ ಇರಲಿ ಸರ್ಕಾರ ಅಂದರೆ ಅದು ನಿರಂತರ ವ್ಯವಸ್ಥೆ. ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಅದಕ್ಕಾಗಿ ನಾವು ಮಾಹಿತಿ, ವಿವರಗಳನ್ನು ರಾಜ್ಯಪಾಲರ ಅನುಮತಿ ಪಡೆದು ಪುಸ್ತಕದಲ್ಲಿ ಕೊಟ್ಟಿದ್ದೇವೆ. ಈ ಪದ್ಧತಿ ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳಿದಂತೆ ಕಳೆದ 25–30 ವರ್ಷದಿಂದ ನಡೆದುಬಂದಿರುವುದು. ಏನು ವ್ಯತ್ಯಾಸವಾಗಿದೆ ಹೇಳಿ ಅಂತ ನಾವು ನಿಮಗೆ ಕೇಳುತ್ತಿರುವುದು. ನಿಮಗೇನು ಬೇಕು? ಅಬ್ಜೆಕ್ಷನ್ ಮಾಡಬೇಕೆಂದೇ ಅಬ್ಜೆಕ್ಷನ್ ಮಾಡಿದರೆ ನನ್ನದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು: ಈಗ ಮಾನ್ಯ ಯಡಿಯೂರಪ್ಪನವರೆ, ಆ ತರಹವೆಲ್ಲ ಭಾವಿಸುವುದು ಬೇಡ. ಅವರು ಏನು ಕೇಳುತ್ತಾರೋ ಅದಕ್ಕೆ ಹೇಳಿ.

ಶ್ರೀ ಎಂ.ಪಿ. ಪ್ರಕಾಶ್: ನಾನು ಒಂದು ಉದಾಹರಣೆ ಹೇಳುತ್ತೇನೆ: ಪ್ರಯಾಣವೆಚ್ಚದ ವಿಚಾರದಲ್ಲಿ ಪೂರಕ ಅಂದಾಜಿಗಿಂತ ಹೆಚ್ಚು ಖರ್ಚು ಮಾಡಲಾಗಿದೆ. ಯಾವುದೋ ಒಂದು ತುರ್ತಾದ ಪರಿಸ್ಥಿತಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಪ್ರಯಾಣ ಮಾಡಿರುತ್ತಾರೆ. ಅದರ ವಿವರ ಸರಿಯೋ ಅಲ್ಲವೋ ಎಂಬ ಬಗ್ಗೆ ಲೆಕ್ಕಪರಿಶೋಧಕರು ಮುಂದೆ ಅದರ ಬಗ್ಗೆ ಪ್ರಸ್ತಾಪ ಮಾಡುತ್ತಾರೆ, ಅದಕ್ಕೆ ಏನು ಉತ್ತರ ಕೊಡಬೇಕೋ ಅದನ್ನು ಕೊಡುತ್ತೇವೆ. ಆದರೆ ಇಲ್ಲಿರುವುದು ಪೂರಕ ಅಂದಾಜುಗಳು. ಇದಕ್ಕೆ ಪ್ರತಿಯೊಂದಕ್ಕೂ ವಿವರ ಕೊಡಬೇಕು ಅಂತ ನಾವು ಬಯಸಬಾರದು, ಅದು ಸಾಧ್ಯವಾಗದಂಥಾದ್ದು. ಬಹುಮಟ್ಟಿಗೆ ಕೆಲಸಗಳು ಹೆಚ್ಚಾಗುತ್ತದೆ. ಆ ಕಾರಣಕ್ಕಾಗಿಯೇ ಸರ್ಕಾರ ಅಸ್ತಿತ್ವಕ್ಕೆ ಬಂದು ಇಲ್ಲಿಯವರೆಗೂ ಕೂಡ ಇದೇ ತರಹವಾಗಿ ಇರತಕ್ಕಂಥ ಪೂರಕ ಅಂದಾಜು ಪಟ್ಟಿಯನ್ನೇ ಮಾನ್ಯ ಸದಸ್ಯರಿಗೆ ಕೊಡುತ್ತಿರುತ್ತೇವೆ. 2004–05ರ ಪೂರಕ ಅಂದಾಜು ಪಟ್ಟಿಯನ್ನು ತಾವು ಗಮನಿಸಬಹುದು. ಕಳೆದ ವರ್ಷದಲ್ಲಿ ಕೂಡ ನಾವೇನು ಪೂರಕ ಅಂದಾಜುಪಟ್ಟಿಯನ್ನು ಕೊಟ್ಟಿದ್ದೆವು ಅದರಲ್ಲೂ ಕೂಡ ಇದೇ ತರಹ ಇರತಕ್ಕಂಥ ವ್ಯವಸ್ಥೆ ಇದೆ. ಯಾವ ಯಾವ ಇಲಾಖೆಯ ಬಾಬತ್ತಿನಲ್ಲಿ ನಾವು ಹೆಚ್ಚು ಖರ್ಚು ಮಾಡಬೇಕಾಗಿರತಕ್ಕದ್ದು ಇರುತ್ತದೆ, ಅದಕ್ಕೆ ನಾವು ಕೇಳಿಕೊಂಡಿರುತ್ತೇವೆ. ಈ ಹಿಂದೆ ಯಾವುದೇ ಸದನದಲ್ಲಿ ಮಾಡಲಿಲ್ಲವೆಂದರೆ ಈಗ ನಾವು ಕೇಳುತ್ತಿದ್ದೇವೆ, ಆದ್ದರಿಂದ ನೀವು ಕೊಡಿ ಎಂದು ಹೇಳುವುದಾದರೆ What an amount of labour we have to put into? ಅದೂ ಅಲ್ಲದೆ, ಇದಕ್ಕೆ ಲೆಕ್ಕಪರಿಶೋಧಕರಿರುತ್ತಾರೆ. ಈಗ ಕುಡಿಯುವ ನೀರಿನ ವಿಚಾರದಲ್ಲಿ ಬರುತ್ತದೆ, ಒಂದು ತತ್‌ಕ್ಷಣದಲ್ಲಿ ಕುಡಿಯುವ ನೀರಿನ ವಿಚಾರಕ್ಕಾಗಿ ಹೆಚ್ಚು ಖರ್ಚು ಮಾಡಬೇಕಾದ ಅಗತ್ಯವಿರುತ್ತದೆ. ಅದಕ್ಕಾಗಿ ಇದನ್ನೆಲ್ಲಾ ನೋಡಿಕೊಳ್ಳುತ್ತಾ ಕೂಡುವುದಕ್ಕಾಗುವುದಿಲ್ಲ. ಅದಕ್ಕೆ ನಾವು ಹೆಚ್ಚು ಖರ್ಚು ಮಾಡಿರುತ್ತೇವೆ. ಹೆಚ್ಚು ಖರ್ಚು ಮಾಡಿರತಕ್ಕದ್ದನ್ನು ಆ ಗ್ರಾಮೀಣಾಭಿವೃದ್ಧಿ ಇಲಾಖೆಯ ಶೀರ್ಷಿಕೆಯಡಿಯಲ್ಲಿ ನಾವು ಹೆಚ್ಚು ಹಣವನ್ನು ಖರ್ಚು ಮಾಡಿದ್ದೇವೆ, ಅದನ್ನು ಕೊಡಿ ಎಂದು ಕೇಳುತ್ತೇವೆ. ಇದನ್ನು ನಾವು ಬಿಟ್ಟು ವಿತ್ತಂಡವಾದದ ಮೂಲಕವಾಗಿ 'ಎ' ಮತ್ತು 'ಬಿ' ಒಂದರಲ್ಲಿ ಇರುತ್ತದೆಂದರೆ ನಾವು ಇಷ್ಟು ದೀರ್ಘವಾಗಿ ಈ ತರಹದ hair-splitting argument ಗಳನ್ನು ಮಾಡಿಕೊಳ್ಳುತ್ತಾ ಹೋದರೆ ಬಹುಶಃ ನಾವು ಎಲ್ಲಿಯೂ ಕೂಡ ಗೊತ್ತುಗುರಿಯನ್ನು ಮುಟ್ಟುವುದಕ್ಕಾಗುವುದಿಲ್ಲ. ತಾವು ಸಕಾರಾತ್ಮಕವಾದ ಧೋರಣೆಯಿಂದ ಈ ಸರ್ಕಾರಕ್ಕೆ ಸಹಾಯ ಮಾಡಬೇಕು, ಸಹಕಾರ ಕೊಡಬೇಕು ಎನ್ನುವುದಿದ್ದರೆ ತಾವು ಅದನ್ನು ಕೊಡಬಹುದು. ಆದರೆ ನಾವು ಹೇಳುವುದೇ ಸರಿಯಾದುದು ಎನ್ನುವ ಮಾತನ್ನು ಹೇಳುವುದಾಗಿದ್ದರೆ ಅದಕ್ಕೆ ಕೊನೆ ಇಲ್ಲದಂಥ ರೀತಿಯಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅಸೆಂಬ್ಲಿ ಎಂದರೆ ಏನು ತಿಳಿದುಕೊಂಡು ಬಿಟ್ಟಿದ್ದೀರಿ? You must tighten your staff.

ಅಧ್ಯಕ್ಷರು: ಏನು ಮಾಧುಸ್ವಾಮಿಯವರೆ? ಏನು ಹೇಳುತ್ತಿದ್ದೀರಿ? ಯಾವುದು ಹೇಳುತ್ತಿದ್ದೀರಿ?

ಶ್ರೀ ಜೆ.ಸಿ. ಮಾಧುಸ್ವಾಮಿ: ನೀವು ಅಧ್ಯಕ್ಷರು, ನಿಮ್ಮ ಸ್ಟಾಫನ್ನು ನೀವು ನಿಗ್ರಹ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ಈ ಸ್ಟಾಫ್ ಇರುವುದೇ ನಮಗೆ ಗೈಡ್ ಮಾಡುವುದಕ್ಕೋಸ್ಕರ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಿಮಗಲ್ಲ. ಅಧ್ಯಕ್ಷರಿಗೆ ಗೈಡ್ ಮಾಡುವುದಕ್ಕೆ ಇರುವುದು ಈ ಸ್ಟಾಫ್. ನಿಮಗೆ ಗೈಡ್ ಮಾಡುವುದಕ್ಕೆ ಅಲ್ಲಿದ್ದಾರೆ.

ಅಧ್ಯಕ್ಷರು: ಆಯಿತು ಬಿಡಿ ಮಾಧುಸ್ವಾಮಿಯವರೆ, ಅದೊಂದು ದೊಡ್ಡವಿಚಾರ ಎಂದು ಭಾವಿಸಬೇಡಿ. ಮಾನ್ಯ ಯಡಿಯೂರಪ್ಪನವರೆ, ನಾನು ನಿಮಗೊಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ನಾನೂ ನಿಮ್ಮ ಹಾಗೆ ಹೊಸಬ. ನನಗನಿಸಿದ್ದು. ಆದರೆ ಈ ಅಧಿಕಾರಿಗಳಿದ್ದಾರಲ್ಲಾ, ಅಧಿಕಾರಿಗಳು ತಾಂತ್ರಿಕವಾಗಿ ಏನೇನು ಅಗತ್ಯತೆ ಇದೆ, ಏನು ಮಾಡಬೇಕು, ಎನ್ನುವುದನ್ನು ಸಂಬಂಧಪಟ್ಟ ಖಾತಾ ಸಚಿವರಿಗೆ ಗೈಡ್ ಮಾಡತಕ್ಕದ್ದು ಅವರ ಕರ್ತವ್ಯ. ಈ ತರಹ ಮಾಡಿದರೆ ಹೇಗೆ? ಅಧಿಕಾರಿಗಳಿಗೆ ಸ್ವಲ್ಪ ಸೂಕ್ತವಾದ ತಿಳುವಳಿಕೆಯನ್ನು ಹೇಳುವುದು ಒಳ್ಳೆಯದು. ನನಗೆ ಅನಿಸಿದ್ದು ಹೇಳಿದೆ ಸ್ವಾಮಿ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಮಾಧುಸ್ವಾಮಿಯವರು ಎತ್ತಿರತಕ್ಕದ್ದು ಬೇರೆ ವಿಷಯ.

ಅಧ್ಯಕ್ಷರು: ಏಕೆ ತಾಂತ್ರಿಕವಾಗಿ 1ಎ ಎಂದು ಬಂತು? Who is responsible for that? ನಾನು ಅದನ್ನು ಒಪ್ಪುವುದಿಲ್ಲ ಮಾನ್ಯ ಪ್ರಕಾಶ್‌ರವರೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಹೇಳಿದ್ದು ಅಧಿಕಾರಿಗಳು ಎಂದರೆ ಇಲ್ಲಿ ಅವರಿಂದ ನೀವು ವಿವರಗಳನ್ನು ಪಡೆಯಬೇಕೇ ವಿನಹಾ ಲೆಜಿಸ್ಲೇಚರ್ ಸ್ಟಾಫ್‌ನಿಂದ ಪಡೆಯಿರಿ ಎನ್ನತಕ್ಕದ್ದು ಸರಿಯಾದುದಲ್ಲವೆಂದಿದ್ದಾರೆ. ಅದು ಒಪ್ಪುವಂಥ ಮಾತೇ ಅದು. ವಿಧಾನಮಂಡಲದ ಸಿಬ್ಬಂದಿ ಇರುವುದು ಇದರ ವಿವರಗಳನ್ನು ಕೊಡುವುದಕ್ಕೆ ಮಾತ್ರೆ ಇದೆ, ಆದ್ದರಿಂದ ಇದಕ್ಕೆ ನಾವು ವಿಧಾನಮಂಡಲದ ಸಿಬ್ಬಂದಿಯನ್ನು ಉಪಯೋಗಿಸಬೇಕಾದ ಅಗತ್ಯ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈ ಚರ್ಚೆ ಲೆಜಿಸ್ಲೇಚರ್‌ಗೆ ಏನು ಸಂಬಂಧ?

Hon. Speaker: Ministry staff should be alert.

ಶ್ರೀ ಜೆ.ಸಿ. ಮಾಧುಸ್ವಾಮಿ: ಈ ಚರ್ಚೆ ಲೆಜಿಸ್ಲೇಚರ್ ಸ್ಟಾಫ್‌ಗೆ ಏನು ಸಂಬಂಧ ಎಂದು ನನಗೆ ಗೊತ್ತಾಗುತ್ತಿಲ್ಲ. ನೀವು ಆ ಅಧಿಕಾರಿಗಳನ್ನು ಕೇಳಿ. ನಾವೇನು ಬೇಡ ಎಂದಿದ್ದೀವಾ?

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಹೇಳಿದ್ದೇನೆಂದರೆ ಪ್ರತಿ ಸಂದರ್ಭದಲ್ಲೂ ಸಹಿತ ಸದನದಲ್ಲಿ ಮಾತುಕತೆಯಾಗತಕ್ಕ ಸಂದರ್ಭದಲ್ಲಿ ಅವರು ಪೂರಕವಾದ ವಿಚಾರಗಳನ್ನು ಪದೇ ಪದೇ ಬಂದು ಹೇಳಬೇಕಾದ ಅಗತ್ಯ ಇಲ್ಲ. ನಿಯಮಾವಳಿಗೇನಾದರೂ ವಿರುದ್ಧವಾಗಿರತಕ್ಕದ್ದು ಚರ್ಚೆಯಾದಾಗ ಅಲ್ಲಿ ಆ ಸಚಿವಾಲಯ ನಮಗೆ ಸಹಕಾರವನ್ನು ಕೊಡಬಹುದು. ಆದರೆ ಉಳಿದಂತೆ ನಾವು ಈ ಅಧಿಕಾರಿಗಳ ಮೂಲಕವಾಗಿ ತೆಗೆದುಕೊಳ್ಳತಕ್ಕ ವಿವರಗಳೇನು ಇವೆ, ಅದು ಯಾವಾಗಲೂ ಕೂಡ ಮಾನ್ಯತೆ ಇರತಕ್ಕದ್ದು. ಯಾರೂ ಕೂಡ ಬೃಹಸ್ಪತಿಗಳಾಗಿರುವುದಿಲ್ಲ. ನಿನ್ನೆ ಮೊನ್ನೆ ಅಧ್ಯಕ್ಷರಾಗಿರಬಹುದು. ನಿನ್ನೆ ಮೊನ್ನೆ ನಾವು ಮಂತ್ರಿಗಳಾಗಿರುತ್ತೇವೆ. ಆ ಮಂತ್ರಿಗಳಾಗಿರತಕ್ಕಂಥವರಿಗೆ ಸಹಕಾರವನ್ನು ಕೊಡುವುದಕ್ಕಾಗಿ ಸುಮಾರು ವರ್ಷಗಳಿಂದಾಗಿರತಕ್ಕ

ಅಧಿಕಾರಿಗಳು ತಮ್ಮ ಅನುಭವವನ್ನು ಹೇಳುತ್ತಾರೆ. ಸದನದ ಒಳಗಡೆಗೇ ಬಂದು ಅವರು ಮಾತನಾಡುವುದಕ್ಕೆ ಅಧಿಕಾರ ಇಲ್ಲ ಎನ್ನುವ ಕಾರಣಕ್ಕಾಗಿ ಪದೇ ಪದೇ ನಾವು ಅವರ ಹತ್ತಿರ ಸಲಹೆಯನ್ನು ಪಡೆಯುತ್ತೇವೆ. ಮಾನ್ಯ ಮಾಧುಸ್ವಾಮಿಯವರು ಎತ್ತಿರತಕ್ಕದ್ದು ಸರಿಯಾದಂಥಾದ್ದೇ. ಪದೇ ಪದೇ ಅವರೂ ಕೂಡ ಬಂದು ನಮಗೆ ಹೇಳಬೇಕಾದ ಅಗತ್ಯ ಇಲ್ಲ. ಯಾವುದಾದರೂ ವಿಷಯ ಇದ್ದರೆ ನಾವಾಗಿಯೇ ನಿಮ್ಮ ಸಲಹೆಯನ್ನು ಕೇಳಿದರೆ ಪುಸ್ತಕ ಬೇಕು, ನಿಯಮ ಬೇಕು ಎಂದಾಗ ಅಂಥದ್ದಕ್ಕೆ ಸಹಕಾರವನ್ನು ಕೊಡಬಹುದು. ಉಳಿದಂತೆ ತಮ್ಮ ಸಹಕಾರ ಎಲ್ಲವೂ ಕೂಡ ಕಾರ್ಯದರ್ಶಿಗಳ ಮೂಲಕ ಅಥವಾ ಅವರ ಆಪ್ತಸಹಾಯಕರ ಮೂಲಕ ಸ್ಪೀಕರ್‌ರವರಿಗೆ ಕೊಡಬೇಕೇ ವಿನಹಾ ಸದಸ್ಯರಿಗೆ ಕೊಡತಕ್ಕ ಸಂಪ್ರದಾಯ ಇಲ್ಲ. ಆದ್ದರಿಂದ ದಯವಿಟ್ಟು ಅದನ್ನು ಮಾಡದೇ ಇರಬೇಕು. ಅದರಲ್ಲಿ ನಾನು ವಿನಯದಿಂದ ಕೇಳತಕ್ಕದ್ದು ತೀರಾ ತಾಂತ್ರಿಕ ಕಾರಣಗಳನ್ನು ಒಡ್ಡದೆ ಇದು ಅತ್ಯಂತ ಮುಖ್ಯವಾಗಿರತಕ್ಕ ಪೂರಕ ಬೇಡಿಕೆಗಳಿಗೆ ತಾವು ಸಹಕಾರವನ್ನು ಕೊಡಬೇಕು.

ಅಧ್ಯಕ್ಷರು: ಮಾನ್ಯ ರಮೇಶ್‌ಕುಮಾರ್‌ರವರೆ ಇಲ್ಲಿ ನೋಡಿ. "Statement of Objects and Reasons-technically is not part of the Bills. It only helps in understanding the necessity and scope of the Bill. The Court cannot rely on it, and construing the Act as it refers to the Bill as introduced and the Bill may undergo considerable changes before it is passed." ಆ ತರಹ ಎಲ್ಲಾ ಇದೆ. ಏಕೆಂದರೆ ಟೆಕ್ನಿಕಲ್ ಆಗಿ ಕೆಲವು ತಾಂತ್ರಿಕ ತೊಂದರೆಗಳಾಗಿದ್ದರೆ ಸರಿಪಡಿಸಿಕೊಂಡು ನಾವು ಬಿಲ್‌ನ್ನು ಪಾಸ್ ಮಾಡಬಹುದು. there are Rulings. Please consider.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ತಾಂತ್ರಿಕ ಕಾರಣಗಳನ್ನು ನಾವು ಕೇಳುತ್ತಿಲ್ಲ. ಹಿರಿಯ ಸದಸ್ಯರು, ಸಚಿವರಾಗಿ ಕೆಲಸ ಮಾಡಿ ಅನುಭವ ಇರತಕ್ಕ ಮಾನ್ಯ ಪ್ರಕಾಶ್‌ರವರಲ್ಲಿ ನಾನು ಇಷ್ಟೇ ವಿನಂತಿಯನ್ನು ಮಾಡುತ್ತೇನೆ. ಇದು ವಿತ್ತಂಡವಾದವೂ ಅಲ್ಲ. Hair-splitting argument ಕೂಡ ಮಾಡುತ್ತಿಲ್ಲ. ಸಕಾರಾತ್ಮಕವಾಗಿ ಸಹಕಾರವನ್ನು ಕೊಡಬೇಕೆನ್ನುವ ಉದ್ದೇಶವೂ ನನಗೆ ಇದೆ. ಈ ಸದನದಲ್ಲಿ ನಾವು ಎಂದಾದರೂ ಸ್ಟಾಚ್ಯುಟರಿ ಕಮಿಟಿ ರಿಪೋರ್ಟ್ಸ್‌ನ್ನು ಪಿಎಸಿಯದ್ದಾಗಲಿ, ಎಸ್ಟಿಮೇಟ್ಸ್‌ದ್ದಾಗಲೀ, ಅಂಡರ್ ಟೇಕಿಂಗ್ ಕಮಿಟಿ ರಿಪೋರ್ಟ್ ಬಗ್ಗೆಯಾಗಲೀ ನಾವು ಚರ್ಚೆಯನ್ನು ಮಾಡುತ್ತೇವಾ? ಮಾಡಿದ್ದೇವಾ? ಮಾಡುವುದಿಲ್ಲ. ಸ್ಟಾಚ್ಯುಟರಿ ಕಮಿಟಿ ರಿಪೋರ್ಟ್‌ಗಳನ್ನು ಸದನದಲ್ಲಿ ಚರ್ಚೆ ಮಾಡುವುದಿಲ್ಲ. ಸದನದಲ್ಲಿ ಚರ್ಚೆ ಮಾಡುವುದಕ್ಕೆ ವ್ಯವಸ್ಥೆ ಇಲ್ಲ. ಬಜೆಟ್, ಡಿಮಾಂಡ್ಸ್ ಬಂದಾಗ ಅದರಮೇಲೆ ಹೊರಟುಬಿಡುತ್ತೇವೆ. ಇದಕ್ಕೆ ಬಂದಾಗ ಕಾರಣಗಳೇನಾದರೂ ಇದ್ದು ನಿಜವಾಗಿಯೂ ಕೂಡ ಸೀರಿಯಸ್ ಆಗಿ ಇರತಕ್ಕಂಥ ರೀಸನ್ಸ್ ಯಾವುದಾದರೂ ಇದ್ದರೆ ಸರ್ಕಾರ, ಅಂದಿನ ಸರ್ಕಾರ ಯಾವುದೇ ಆಗಿರಲಿ, ದೂರದೃಷ್ಟಿಯ ಅಭಾವದಿಂದ, ಸದುದ್ದೇಶದ ಅಭಾವದಿಂದ, ಜ್ಞಾನದ ಅಭಾವದಿಂದ, ಶ್ರದ್ಧೆಯ ಅಭಾವದಿಂದ ನಿಷ್ಠೆಯ ಅಭಾವದಿಂದ ತಪ್ಪುಗಳನ್ನು ಮಾಡಿದ್ದರೆ ಅಂಥ ವಿಚಾರಗಳಲ್ಲಿ ಎಚ್ಚರಿಗೆಯಿಂದ ಇರಿ ಎಂದು ಹೇಳತಕ್ಕದ್ದಕ್ಕೇ ಒಂದು ಪ್ರಯತ್ನವನ್ನು ಮಾಡುವುದಕ್ಕೆ ನಾವು ವಿವರಗಳನ್ನು ಕೇಳುತ್ತಿದ್ದೇವೆ. ಮತ್ತೆ ಯಾವ ಉದ್ದೇಶವೂ ಅಲ್ಲ. ವಿವರ ಕೊಡಬೇಕಾದ ಅಗತ್ಯ ಇಲ್ಲ ಎಂದು ಹೇಳಿದರೆ, ಸಾಂಪ್ರದಾಯಿಕವಾಗಿ ಬೆಳೆದುಕೊಂಡು ಬಂದಿದೆ ಎಂದರೆ ಪ್ರತಿಯೊಂದಕ್ಕೂ ಕೂಡ ಸಂಪ್ರದಾಯವನ್ನು ನೀವು ಸಂವಿಧಾನಬದ್ಧವಾಗಿರತಕ್ಕಂಥ ಹಕ್ಕಿಗೆ ಅಡ್ಡ ಇಟ್ಟು ನಮ್ಮ ಹಕ್ಕನ್ನು ಉಲ್ಲಂಘನೆ ಮಾಡುತ್ತೀರಾ? ನಾನು ಇಷ್ಟೇ ಕೇಳುತ್ತೇನೆ.

(ಗೊಂದಲ)

ನಾವು ಅಸಹಾಯಕರು ಸ್ವಾಮಿ. ಇದಕ್ಕಿಂತ ಸರಳವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ನಿಮಗೆ ಕೈಜೋಡಿಸಿ ನಾವು ಕುಳಿತುಬಿಡುತ್ತೇವೆ, ನಾವು ಇನ್ನು ಮಾತನಾಡುವುದಿಲ್ಲ. We are fined.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ಸ್ಪಷ್ಟವಾಗಿ ಹಿಂದೆ ಕೊಟ್ಟಿರುವ ರೂಲಿಂಗನ್ನು ಕೂಡ ಉಲ್ಲೇಖನ ಮಾಡಿದ್ದೀರಿ. ಮಾನ್ಯ ರಮೇಶ್‌ಕುಮಾರ್‌ರವರಿಗೂ ಕೂಡ ಇಂಥ ಉಲ್ಲೇಖಗಳು ಇಲ್ಲಿ ಚರ್ಚೆಯಾಗಿರುವುದು ಗೊತ್ತಿದೆ. ವಿವರಗಳನ್ನು ಕೇಳುವುದು ತಪ್ಪು ಎಂದು ನಾನು ಹೇಳುವುದಿಲ್ಲ. ಇಲ್ಲಿ ಸದುದ್ದೇಶ ಮತ್ತು ನಿಷ್ಠುರತೆ ಅಥವಾ ನಿಷ್ಠೆ ಈ ಪ್ರಶ್ನೆಗಳೂ ಕೂಡ ಉದ್ಭವವಾಗುವುದಿಲ್ಲ. ತಾವು ಕೇಳಿದ್ದೀರಿ. ಕೇಳಿದ ವಿವರಕ್ಕೆ ತಮಗೆ ಸಂಬಂಧಪಟ್ಟಂತೆ ಈಗ ಒಂದು ಸಣ್ಣ ಉದಾಹರಣೆ. ಅದೇ ಪುಟ 3ರಲ್ಲಿಯೇ ತೆಗೆದುಕೊಳ್ಳಿ. "2005–06ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ನವೋಡ್ ಅಭಿವೃದ್ಧಿ ಕಾರ್ಯಕ್ರಮಕ್ಕೆ ಕೇಂದ್ರ ಪುರಸ್ಕೃತ ಯೋಜನೆಯಡಿ ಆಯವ್ಯಯದಲ್ಲಿ ಅನುದಾನ ಕಲ್ಪಿಸದ ಕಾರಣ ರೂ. 19–00 ಲಕ್ಷಗಳನ್ನು ಸಾದಿಲ್ವಾರು ನಿಧಿಯಿಂದ ಬಿಡುಗಡೆ ಮಾಡಿದ್ದು, ಈಗ ಈ ನಿಧಿಗೆ ಇಷ್ಟೇ ಮೊತ್ತದ ಮರುಪಾವತಿಯ ಅಗತ್ಯವಿರುವುದರಿಂದ ಅಭಿಯಾಚನೆಯಡಿ ಸೇರಿಸಲಾಗಿದೆ. ಸದರಿ ಯೋಜನೆಯು ಶೇ. 100 ರಷ್ಟು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಯಾವುದೇ ನಗದು ಹಣ ಹೊರ ಹೋಗುವುದಿಲ್ಲ." ಇದಕ್ಕಿಂತ ಹೆಚ್ಚು ವಿವರಗಳನ್ನು ಇನ್ನೇನು ಕೊಡಲಿಕ್ಕಾಗುತ್ತದೆ?

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಹೆಲಿಕಾಪ್ಟರ್‌ನ್ನು ಕೊಂಡುಕೊಂಡರು ಎಂದು ಹೇಳಿ ಯಾವ ಯಾವ ಭಾಷೆಯನ್ನು ಉಪಯೋಗಿಸಿ, ಯಾವ ಯಾವ ಮಾತುಗಳನ್ನು ಉಪಯೋಗಿಸಿ ಯಾವ ಯಾವ ರೀತಿ ಚರ್ಚೆ ಮಾಡಿದ್ದಾರೆಂದು ಸ್ವಲ್ಪ ಕಡತ ತೆಗೆಸಿ.

ಶ್ರೀ ಎಂ.ಪಿ. ಪ್ರಕಾಶ್: ತಾವೇ ಅಧ್ಯಕ್ಷರಾಗಿರತಕ್ಕ ಸಂದರ್ಭದಲ್ಲಿ ಹಿಂದಿನ ಸರ್ಕಾರದ ಮುಖ್ಯಮಂತ್ರಿಗಳು ಒಬ್ಬ ಶಾಸಕರಿಗೆ ಸಾದಿಲ್ವಾರು ಖರ್ಚಿನಲ್ಲಿ ಏಷ್ಯನ್ ಗೇಮ್ಸ್‌ನಲ್ಲಿ 20 ಲಕ್ಷ ರೂ.ಬೆಲೆ ಬಾಳತಕ್ಕ ಪ್ಲಾಟನ್ನು ಕೊಟ್ಟಿರತಕ್ಕಂಥದ್ದರ ವಿವರದ ಬಗ್ಗೆಯೂ ಚರ್ಚೆಯನ್ನು ಮಾಡಿದ್ದೇವೆ. ಅದನ್ನು ಕೊಡಲಿಕ್ಕೆ ಸಾಧ್ಯವಿಲ್ಲದೇ ಇರುವಂಥದ್ದು. ಆದರೂ ಕೊಟ್ಟಿರತಕ್ಕಂಥದ್ದು. ಯಾವ ಕಾರಣಕ್ಕಾಗಿ ಕೊಟ್ಟಿರಿ ಎನ್ನುವ ವಿವರ ಕೂಡ ಅದರಲ್ಲಿ ಇರಲಿಲ್ಲ. ನಿಮಗೆ ಅದು ಗೊತ್ತಿದೆ. ತಮ್ಮ ಎದುರಿಗೆ ಈ ಬಗ್ಗೆ ಚರ್ಚೆಯಾಗಿರತಕ್ಕದ್ದು ಇದೆ ಕಳೆದ ಬಾರಿ ಹಿಂದಿನ ಮುಖ್ಯಮಂತ್ರಿಗಳು ಅಂದರೆ ಅವರ ನೇತೃತ್ವದಲ್ಲಿದ್ದಂಥಾದ್ದು ಅಲ್ಲ, ಹಿಂದಿನ ಸರ್ಕಾರದಲ್ಲಿ ಮುಖ್ಯಮಂತ್ರಿಗಳಾಗಿದ್ದಂಥವರು ಅವರ ಹೆಸರನ್ನು ಹೇಳಿ ಎಂದರೆ ನಾನು ಹೇಳಬಹುದು. ಆದರೆ ಅದು ಸರಿಯಾದುದಲ್ಲ ಎನ್ನುವ ಕಾರಣಕ್ಕಾಗಿ ಹೇಳುತ್ತೇವೆ. ಒಬ್ಬ ಸದಸ್ಯರಿಗೆ 20 ಲಕ್ಷ ರೂ. ಬೆಲೆ ಬಾಳುವ ಫ್ಲಾಟನ್ನು ಇದರಲ್ಲಿ ಕೊಟ್ಟಿರುವ ವಿವರ ಇದೆ. ಅಭಿಯಾಚನೆಯಲ್ಲೇ ಅದರ ಪ್ರಸ್ತಾಪವನ್ನು ಮಾಡಿದರು ಕಾನೂನುಬದ್ಧವಾಗಿಲ್ಲದಿದ್ದರೂ ಕೂಡ. ಅದಕ್ಕೂ ನಾವು ಒಪ್ಪಿಗೆಯನ್ನು ಕೊಟ್ಟಿದ್ದೇವೆ. ಆದ್ದರಿಂದ ವಿವರಗಳನ್ನು ಕೊಟ್ಟಿರತಕ್ಕಂಥಾದ್ದು ಮತ್ತು ಹಿಂದೆ ಮಾನ್ಯ ಸ್ಪೀಕರ್‌ರವರು ಈ ಬಗ್ಗೆ ತಾಂತ್ರಿಕ ಕಾರಣಗಳ ಮೂಲಕವಾಗಿ ಇಂಥದ್ದರ ಬಗ್ಗೆ ಚರ್ಚೆಯಾಗಬಾರದು ಎನ್ನುವುದಲ್ಲಿ, ಅಕಸ್ಮಾತ್ ಏನಾದರೂ ಕೂಡ ಖರ್ಚು ಹೆಚ್ಚಾಗಿರತಕ್ಕಂಥದ್ದು ಇದ್ದರೆ ಆ ವಿಚಾರದಲ್ಲಿ ಲೆಕ್ಕಪರಿಶೋಧಕರು ಅದನ್ನೆಲ್ಲಾ ಹೇಳುತ್ತಾರೆ. ಆದ್ದರಿಂದ 205 ನ್ನು ನೀವು 'ಎ'. 'ಬಿ' ಎಂದು ಹೇಳಿ ಪರಿಗಣಿಸಿ ವಿವರಗಳು ಇಲ್ಲ ಎಂದು ಹೇಳುವಂಥದ್ದು ಸಾಧುವಾದುದಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಒಂದು . . . . .

ಅಧ್ಯಕ್ಷರು: ಬಸವರಾಜ್‌ರವರೆ. ಶ್ರೀರಾಮರೆಡ್ಡಿಯವರು ನಿಂತಿದ್ದಾರೆ ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೋ ಕೇಳಿ. ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾತನಾಡಿ.

ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ): ಮಾನ್ಯ ಅಧ್ಯಕ್ಷರೆ, ಈ ಒಂದು ವಿವರವಾದಂಥ ಬೇಡಿಕೆಗಳನ್ನು ಈ ಒಂದು ಸದನ ತಿಳಿದುಕೊಳ್ಳಬೇಕೆನ್ನುವ ವಿಚಾರವನ್ನು ಇವತ್ತು ಆ ಭಾಗದಲ್ಲಿ ಎತ್ತಿರುವುದನ್ನು ನಾವು ಸ್ವಾಗತ ಮಾಡುತ್ತೇವೆ. ಇವತ್ತು ಎಲ್ಲಾ ವಿವರವನ್ನೂ ಪುಟ ನಂ.1 ರಲ್ಲಿ ಕೊಟ್ಟಿದ್ದಾರೆ. 29 ಇಲಾಖೆಗಳಲ್ಲಿ ಏನೇನು ಹೆಚ್ಚುವರಿಯಾಗಿ ನಾವು ಖರ್ಚು ಮಾಡಿದ್ದೇವೆ ಎನ್ನುವುದನ್ನು ಪ್ರತಿಯೊಂದು ಪುಟಗಳಲ್ಲೂ ಕೂಡ ವಿವರವಾಗಿ ಕೊಟ್ಟಿದ್ದಾರೆ. ಇನ್ನೂ ಸಹ ಸದಸ್ಯರುಗಳು ಇದರಿಂದ ತೃಪ್ತರಾಗಲಿಲ್ಲವೆಂದರೆ ಬಹುಶಃ ಈ ಒಂದು ಸದನದಲ್ಲಿ ನಾನು ಕೂಡ 94 ರಿಂದ 99 ರವರೆಗೆ ಇದ್ದೆ. ಈಗ ಮತ್ತೆ ಈ ಸದನದಲ್ಲೂ ಕೂಡ ಇದ್ದೇನೆ. ಈ ತರಹ ನಾವು ಚರ್ಚೆಯನ್ನು ಮಾಡಲಿಲ್ಲ. ಬಹುಶಃ ನಮಗೆ ಒಂದು, ಆ ಸರ್ಕಾರಗಳ ಮೇಲೆ ವಿಶ್ವಾಸ ಇತ್ತು. ಆ ಸರ್ಕಾರಗಳು ಮಾಡುವಂಥ ವೆಚ್ಚಗಳ ಮೇಲೆ ವಿಶ್ವಾಸ ಇತ್ತು. ಆ ಒಂದು ಹಿನ್ನೆಲೆಯಲ್ಲಿ ಪೂರಕವಾದ ಬೇಡಿಕೆಗಳನ್ನು ಮಂಡಿಸಿದಾಗ ನಾವು ಸಹಕಾರವನ್ನು ನೀಡುತ್ತಿದ್ದೆವು. ಇವತ್ತು ಕೂಡ ಈ ಒಂದು ಸಂಪ್ರದಾಯದ ಪ್ರಕಾರ ಈ ಪೂರಕ ಅಂದಾಜುಗಳ ಅನುಚ್ಛೇದದಲ್ಲಿ ಯೋಜನೆ ಮತ್ತು ಯೋಜನೇತರಗಳಲ್ಲಿ ಏನು ನಾವು ಅಡಕ ಮಾಡಲಿಲ್ಲವೋ ಅದನ್ನು ಹೆಚ್ಚುವರಿಯಾಗಿ ಎಲ್ಲೆಲ್ಲಿ ವೆಚ್ಚ ಮಾಡಿದ್ದೇವೋ ಎನ್ನುವ ವಿವರವನ್ನು ಕೊಟ್ಟಿದ್ದಾರೆ. ಇದಕ್ಕೂ ಹೆಚ್ಚಿನ ವಿವರ ಬೇಕು ಅಂತ ಮಾನ್ಯ ಸದಸ್ಯರೇನಾದರೂ ಬಯಸಿದರೆ ನಿಜವಾಗಲೂ ಕೊಡೋಣ, ಕೊಡುವುದು ತಪ್ಪು ಅಂತ ಅಲ್ಲ. ಆದರೆ ಈ ಸದನದಲ್ಲಿ ಸಂಪ್ರದಾಯದ ಪ್ರಕಾರ ಏನು ನಡೆದುಕೊಂಡುಬಂದ ಪದ್ಧತಿ ಇತ್ತೋ ಆ ಪ್ರಕಾರ ಈ ಬೇಡಿಕೆಗೆ, ಅನುದಾನಕ್ಕೆ ತಾವೆಲ್ಲರೂ ಮಂಜೂರಾತಿ ಕೊಡಬೇಕು ಎಂಬುದು, ಇದೇ ಸಹಕಾರ ಕೊಡುವ ರೀತಿ. ಏಕೆಂದರೆ ನೀವು ಪ್ರಶ್ನೆ ಮಾಡಿದ್ದು ತಪ್ಪು ಅಂತ ನಾನು ಹೇಳುವುದಿಲ್ಲ. ಸಹಕಾರ ಕೊಡಿ. ನಿಮಗೆ ಕೊಟ್ಟಿರುವುದನ್ನು ಸಂಪೂರ್ಣವಾಗಿ ಓದಿ. ಇವತ್ತು ಕೇವಲ ಇದನ್ನು ಚರ್ಚೆ ಮಾತ್ರ ಮಾಡುವುದಲ್ಲ. ಇಷ್ಟನ್ನೂ ಸಮಗ್ರವಾಗಿ ನೀವು ಓದಿಬಿಟ್ಟು ಇದರಲ್ಲಿ ಎಲ್ಲೆಲ್ಲಿ ನಿಮಗೆ ಸಂದೇಹ ಬರುತ್ತಾ ಇದೆ, ಎಲ್ಲೆಲ್ಲಿ ಅತಿ ಹೆಚ್ಚು ವೆಚ್ಚವಾಗಿದೆ, ಎಲ್ಲೆಲ್ಲಿ ನಿಮಗೆ ಅಪವ್ಯಯ ಆಗಿದೆ ಅಂತ ಅನ್ನಿಸಿದೆಯೋ ಅದರ ಬಗ್ಗೆ ಸಮಗ್ರವಾದಂಥ ವಿವರವನ್ನು ಪೂರಕ ಬೇಡಿಕೆಗಳಿಗೆ ಸಹಕಾರ ಕೊಟ್ಟ ಮೇಲೆ ನೀವು ಕೇಳಿ ಅಂತ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಕಾಶ್‌ರವರು ಒಂದು ವಿಚಾರ ಹೇಳಿದರು. ತಾಂತ್ರಿಕ ಕಾರಣಗಳನ್ನೊಡ್ಡಿ ಇದನ್ನು ದಯವಿಟ್ಟು ತಡೆಹಿಡಿಯಬೇಡಿ ಅಂತ. ಅಷ್ಟು ಕೀಳುಮಟ್ಟದ ರಾಜಕಾರಣ ಮಾಡಲು ನಾವ್ಯಾರೂ ಇಲ್ಲಿ ಬಂದಿಲ್ಲ. 'ಎ' ಮತ್ತು 'ಬಿ' ಅನ್ನು ಒಂದಾಗಿಯೇ ಓದಬೇಕೆಂದು ನಮ್ಮ ಹಣಕಾಸು ಸಚಿವರು ಹೇಳುತ್ತಾರೆ. ಹೌದಾ? 'ಎ' ಮತ್ತು 'ಬಿ' ಒಂದೇ ಕಂಟೆಂಟ್ ಆದರೆ content is same, we can read together. If the content of A and B is same, there is no wrong in taking to consideration. But the content of A is different Content of A and content of B is one and same

ಆಗ ನೀವು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಅವು ಬೇರೆಬೇರೆಯಾಗಿದ್ದರೆ ಒಂದಾಗಿ ಹೇಗೆ ಓದಿಕೊಳ್ಳುವುದು ನಾವು? ಹೇಳಿ ಸಾರ್? ನೀವು ಹೇಳಿದಿರಿ ಒಂದಾಗಿ ಓದಿಕೊಳ್ಳಬೇಕು ಅಂತ, ಈಗ ಬೇರೆಬೇರೆಯಾಗಿ ಅಂತ ಹೇಳುತ್ತೀರಿ: ನಾವು ಏನಂತ ತಗೋಬೇಕು ಸಾರ್ ಹಾಗಾದರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅದು ಖರ್ಚಾಗಿರುವುದು, ಇದು ಖರ್ಚು ಮಾಡ ಬೇಕಾಗಿರುವುದು. ಎರಡೂ ಒಟ್ಟಿಗೆ ಓದಬೇಕು ಅಂತ ಸಂವಿಧಾನದಲ್ಲಿದೆ ಅಂತ ನಾನು ಹೇಳುತ್ತಿರುವುದು. ಹೊಸದಾಗಿ ನಾನೇನೂ ಹೇಳುತ್ತಾ ಇಲ್ಲ. ಸಂವಿಧಾನದಲ್ಲಿ ಏನಿದೆ ಅದನ್ನು ನಿಮಗೆ ಹೇಳುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನಾನು ಮುಗಿಸುತ್ತೇನೆ ಸಾರ್. ನಾವು ಏನು ಕೇಳುತ್ತಿದ್ದೇವೆ, ಬಿ ಏನು ಹೇಳುತ್ತದೆ ಅಂದರೆ ನೀವು ಖರ್ಚು ಮಾಡಿದ್ದರ ಬಗ್ಗೆ ಯಾಕೆ ಏನು ಅಂತ ನಾವು ಪ್ರಶ್ನಿಸುತ್ತಿಲ್ಲ. ಆದರೆ ಅನುದಾನಕ್ಕಿಂತ ಹೆಚ್ಚುವರಿ ಖರ್ಚು ಮಾಡಬೇಕಾದ ಪರಿಸ್ಥಿತಿ ಏನಿತ್ತು? ಅದನ್ನು ವಿವರಿಸಿ ಅಂತ ನಾವು ಕೇಳುತ್ತಾ ಇರುವುದು ಅಷ್ಟೇ. That is what we say. ಆದರೆ ವಿವರವಾಗಿ ಈ ಪುಸ್ತಕದಲ್ಲಿ ಕೊಟ್ಟಿದ್ದೇವೆ ಅಂತ ನೀವು ಹೇಳುತ್ತಿದ್ದೀರಿ. ಅದರ ಬಗ್ಗೆ ನಮಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ, ನೀವು ಏಕೆ ಮಾಡಿದಿರಿ ಅಂತಲೂ ನಾವು ಕೇಳುತ್ತಾ ಇಲ್ಲ. ನಾವು ಕೇಳುತ್ತಾ ಇರುವುದು, ನೀವು ಯಾವ್ಯಾವುದಕ್ಕೆ ಎಷ್ಟೆಷ್ಟು ಖರ್ಚು ಮಾಡಲಾಗಿದೆ ಅಂತ ನೀವೇನು ಕೊಟ್ಟಿದ್ದೀರಿ ಹಾಗೆ ಹೆಚ್ಚುವರಿ ಖರ್ಚು ಮಾಡಿದ್ದಕ್ಕೆ ಕಾರಣ ಕೊಡಬೇಕು ಅಂತ ಸೆಕ್ಷೆನ್ 'ಬಿ' ಹೇಳುವುದು. ಇಲ್ಲಿ ನೋಡಿ: If any money has been spent and any service during the Financial Year, any excess of the amount granted for such service and for that year, cause to be laid before the House. It is not the list. Cause to be placed before the House or Houses of the Legislature. Another statement showing the estimated amount of that expenditure of cause to be presented to the Legislative Assembly of the State. Demad for such excesses as the cause may be. ಕಾರಣ ಕೊಡಿ ಅಂತ ನಾವು ಕೇಳುತ್ತಿದ್ದೇವೆ ಅಷ್ಟೇ. ಇನ್ನೊಂದು ಸ್ಟೇಟ್‌ಮೆಂಟ್ ಕೊಡಿ ಅಂತ ಕೇಳುತ್ತಿರುವುದು. ಆದರೆ ನೀವು ಯಾಕೆ ಮಾಡಿದಿರಿ ಅಂತ ಕೇಳುತ್ತಾ ಇಲ್ಲ. ಇದು Constitutional provision.

ಅಧ್ಯಕ್ಷರು: ಆಯಿತು, ಈಗ ಪ್ರಕಾಶ್ ಅವರು . . . . . .

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ನಾನು ಹಣಕಾಸು ಸಚಿವನಲ್ಲ. ಅವರು ಎತ್ತಿರುವಂತಹ ಸಮಸ್ಯೆ ಏನು? 'ಬಿ' ಅಡಿ ಕೊಡಬೇಕಾದ ವಿವರಗಳನ್ನು ನೀವು ಕೊಟ್ಟಿಲ್ಲ. ತಾಂತ್ರಿಕ ಕಾರಣ; ನೀವು ಹೇಗೆ ತಪ್ಪಾಗಿ ಭಾವಿಸಿದಿರಿ ಎಂಬ ವಿಚಾರವನ್ನು ಹೇಳಿದ್ದಾರೆ. ಇಲ್ಲಿ ತಾವು ಎರಡು ಮೂರು ವಿಷಯಗಳನ್ನು ಗಮನಿಸಿರಿ. 95–96ನೇ ಸಾಲಿನ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನಲ್ಲೂ, ಅದಕ್ಕೆ ಅಗತ್ಯಬಿದ್ದರೆ ಅದಕ್ಕೇನು ಜಿ.ಓ. ಇದೆ ಅಂತಲೂ ಕೊಡುತ್ತೇವೆ. ನಮಗೆ ನೆನಪಿದ್ದಂತೆ ಅಂದಾಜು ಸಮಿತಿಯಲ್ಲಿ ಕೊಟ್ಟಿರುವ ಮಾರ್ಗದರ್ಶನದ ಮೇರೆಗೆ 205(1) ಅಂತಲೇ ಬರೆದಿದ್ದೇವೆ. ಇಂಟ್ರೊಡಕ್ಟರಿ ನೋಟ್ ಅದು.

1995–96ನೇ ಸಾಲಿನಿಂದ ಪ್ರತಿವರ್ಷದಲ್ಲೂ ಬರೆದಿರುವುದರಲ್ಲಿ ಕೂಡ ಈ ಪದ್ಧತಿಯನ್ನೇ 205(1) ಅಂತಲೇ ಬರೆಯುತ್ತೇವೆ. I ಅಂದರೆ ಅದರಲ್ಲಿರುವ 'ಎ' ಮತ್ತು 'ಬಿ' ಎರಡೂ ಅಡಕವಾಗಿದೆ ಅಂತ ಅದರ ಅರ್ಥ. ಆ ಎರಡೂ ಅಡಕವಾಗಿರುವುದರ ಬಗ್ಗೆ ವಿವರಗಳನ್ನು ಕೊಡಬೇಕು ಅಂತ ನಾವು ಕೇಳಿದ್ದೀರಿ. ವಿವರಗಳಿಗೆ ಸಕಾರಣವನ್ನೂ ಕೊಡಬೇಕು ಅಂತಲೂ ತಾವು ಹೇಳಿದ್ದೀರಿ. ಅಧ್ಯಕ್ಷರೆ, ಎರಡನೆಯದು ತಾವು ಯೋಚನೆ ಮಾಡಬೇಕು. ಈಗ ಎರಡು ಮೂರು ಸಂದರ್ಭಗಳಲ್ಲಿ ಉದಾಹರಣೆಗಳನ್ನು ಕೊಟ್ಟೆ Urban Development Demand No.19 ಎಂಬುದು 2005–06 ಸಾಲಿನದ್ದು. ಇದರ ವಿವರಗಳು ಬೇಕು ಅಂದರೆ, ಮಾನ್ಯ ರಮೇಶ್‌ಕುಮಾರ್ ಹಾಗೂ ಮಾನ್ಯ ಮಾಧುಸ್ವಾಮಿಗಳಿಗೆ ಇದು ಗೊತ್ತಾಗುತ್ತದೆ. ಆದ್ದರಿಂದ ಈ ಸಂದರ್ಭದಲ್ಲಿ. ನಾನು ಹೇಳತಕ್ಕದ್ದು ಇಷ್ಟೇ : Item No. 1-2:- Project cost to be given to BMRTL is Rs.250.00 lakhs. Out of which Rs.100.00 lakhs had come from GOI, and the balance of Rs.150.00 lakhs will be met out of infrastructure cess allotted to BMRTL. There is no cash outflow. Hence included in the Demand.

ಶ್ರೀ ಜೆ.ಸಿ. ಮಾಧುಸ್ವಾಮಿ: ಅರ್ಥ ಸಚಿವರು ಯಾರು ಅಂತ ಹೇಳಿಬಿಟ್ಟರೆ ಒಳ್ಳೆಯದು. ಅವರೇ ರಿಪ್ಲೈ ಮಾಡಲಿ.

ಶ್ರೀ ಎಂ.ಪಿ. ಪ್ರಕಾಶ್: ದಯವಿಟ್ಟು ಒಂದ್ನಿಮಿಷ. ಈ ಖರ್ಚೆಲ್ಲಾ ಆಗಿದ್ದು ಯಾವಾಗ? ಮಾನ್ಯ ನಮ್ಮ ನಾಯಕರಾದ ಧರಂಸಿಂಗ್‌ರವರ ನೇತೃತ್ವದ ಸರ್ಕಾರದಲ್ಲಿ ನಾವೆಲ್ಲಾ ಭಾಗಿಗಳಾಗಿದ್ದ ಸರ್ಕಾರದಲ್ಲಿ ಆಗಿರುವಂತಹ ಖರ್ಚು. ಈ ಒಂದು ತಿಂಗಳಿನಲ್ಲಿ ಮಾನ್ಯ ಕುಮಾರಸ್ವಾಮಿಯವರಾಗಲಿ, ಯಡಿಯೂರಪ್ಪನವರಾಗಲಿ ಮಾಡಿರತಕ್ಕಂಥ ಖರ್ಚಿನ ವಿವರವಲ್ಲ. ಅದೂ ಕೂಡ ಮಾನ್ಯ ರಮೇಶ್‌ಕುಮಾರ್‌ರವರಿಗೆ ಗೊತ್ತಿದೆ. ಆ ವಿವರಗಳನ್ನೇ ಇದರಲ್ಲಿ ಕೊಟ್ಟಿರುವುದು. ಪ್ರತಿವರ್ಷವೂ ಇದೇ ಸಂಪ್ರದಾಯವನ್ನು ಇಟ್ಟುಕೊಂಡೇ ಬಂದಿರುವ ನಾವು ಈಗ ಮಾತ್ರ ಹೀಗೆ ಮಾಡಬೇಕೆಂದರೆ ಹೇಗೆ? ನೋಡಿ, ನೀವೂ ಐದು ವರ್ಷ ಸ್ಪೀಕರ್ ಆಗಿದ್ದಿರಿ. ಆಗ ಈ ಚರ್ಚೆ ಬಂತಾ? ಕೇಳಲಿಲ್ಲ ಅನ್ನುವ ಪ್ರಶ್ನೆಯಲ್ಲ. ಇಲ್ಲಿ ಎಸ್ಟಿಮೇಟ್ ಕಮಿಟಿಯದ್ದು. ಆಮೇಲೆ ಒಂದು ಸೆಕ್ಷನ್ ಅಂದರೆ 'ಎ' 'ಬಿ' ಅಂತೆಲ್ಲಾ ಇದ್ದರೂ ಕೂಡ ಆ 'ಎ''ಬಿ'ಗಳೆರಡನ್ನೂ ಒಳಗೊಂಡಿರುವುದೇ 205. ಇಲ್ಲ ಅಂತ ಯಾರೂ ಹೇಳುವುದಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಸ್ಪೀಕರ್ ಆಗಿ ನಾನಿದ್ದಾಗ ಯಾರಾದರೂ ಸದಸ್ಯರು ಈ ಸದನದಲ್ಲಿ ಎದ್ದು 205 (1ಬಿ) ಪ್ರಕಾರ ನನಗೆ ವಿವರಣೆ ಬೇಕು ಅಂತ ಕೇಳಿ ನಾನು ಅವರಿಗೆ ಅವಕಾಶ ಕೊಡದೇ ಹೋದರೆ ತಮ್ಮ ಅಭಿಪ್ರಾಯ ಸರಿ. ಯಾರೂ ಕೇಳದೇ ಇದ್ದಾಗ ನಾನಾಗಿಯೇ ನಾನೇ ಹೇಳಬೇಕಾ?

ಶ್ರೀ ಎಂ.ಪಿ. ಪ್ರಕಾಶ್: ತಮ್ಮ ಅಭಿಪ್ರಾಯವನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ಇನ್ನೂ ಹೇಳಬೇಕಾಗಿರುವುದು ಏನೆಂದರೆ, ವಿವರಗಳು ಎಂದರೆ . . .

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಪ್ರಕಾಶ್‌ರವರೆ, We have highest respect for you. I don't know. ಇದ್ಯಾಕೋ ನಮಗೆ ಗೊತ್ತಾಗುತ್ತಿಲ್ಲ. ತಾವೇಕೆ the way you are missing link is very unfortunate.

ಶ್ರೀ ಎಂ.ಪಿ. ಪ್ರಕಾಶ್: ಈ ಸರ್ಕಾರಕ್ಕೆ ಯಾವುದೇ ತರಹವಾಗಿರುವ ಸಕಾರಾತ್ಮಕವಾದ ಸಹಕಾರ ಕೊಡುವುದಾದರೆ. . .

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್: ಅವರು ಆ ಭಾಗದಲ್ಲಿ ಕುಳಿತವರು ಸ್ವಲ್ಪ ಯೋಚನೆ ಮಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್: ಹಣಕಾಸಿನ ವಿಧೇಯಕದಲ್ಲಿ ಪೂರಕವಾಗಿರುವ ಅಭಿಯಾಚನೆಯಲ್ಲೂ ತಕರಾರುಗಳಾಗಿರುವ ಉದಾಹರಣೆಗಳಿವೆ. ಇಲ್ಲಿ ಖರ್ಚಾಗಿರುವ ಹಣ ಹಿಂದಿನ ಸರ್ಕಾರದಲ್ಲಿದ್ದ ನಾವುಗಳು ಖರ್ಚು ಮಾಡಿರುವ ಹಣವಾಗಿದೆ. ಈ ವಿಚಾರಗಳಲ್ಲಿ ಹಿಂದೆ ಆಗಿರುವ ವಿವರಗಳನ್ನು ಕೇಳಿದರೆ. . .

ಶ್ರೀ ಕೆ.ಆರ್. ರಮೇಶ್‌ಕುಮಾರ್: ಸರ್ಕಾರ ಯಾವುದೇ ಆಗಿರಲಿ, ನಾವು ವಿವರಣೆಗಳನ್ನು ಕೇಳಿದ್ದೇವೆ. ಒಂದು ವೇಳೆ ಅವರ ಸರ್ಕಾರ ಇದ್ದಾಗ ತಪ್ಪು ಮಾಡಿದ್ದರೆ, ಅದು ಸರಿಯಾಗುತ್ತಿತ್ತೇ?

ಶ್ರೀ ಎಂ.ಪಿ. ಪ್ರಕಾಶ್: ಅದಕ್ಕಾಗಿಯೇ, ತಾವು ಹಿರಿಯರಿದ್ದೀರಿ ಮತ್ತು ಬುದ್ಧಿವಂತರೂ ಕೂಡ ಇದ್ದೀರಿ. ವಿವರಗಳು ಎಂದರೆ ಏನು? ಈಗ ನಾನು ಒಂದು ಉದಾಹರಣೆ ಹೇಳಿದೆ. ಈ ವಿವರಗಳೆಂದರೆ ಏನು? ಮಾನ್ಯ ಮಾಧುಸ್ವಾಮಿಯವರೆ, ತಾವು ಕೇಳಿ. ಜಯಪ್ರಕಾಶ್ ಹೆಗ್ಡೆಯವರೆ ತಾವೇ ಹೇಳಿ, ಆಯವ್ಯಯದಲ್ಲಿ ಅನುದಾನ ಕೊರತೆ ಇರುವುದರಿಂದ ಕಟ್ಟಡದ ಪೂರಕ ವೆಚ್ಚಗಳಿಗಾಗಿ ಹೆಚ್ಚುವರಿ 45 ಲಕ್ಷ ರೂ.ಗಳನ್ನು ಅಭಿಯಾಚನೆಯಲ್ಲಿ ಸೇರಿಸಿದೆ. ಇದು ವಿವರ ಅಲ್ಲವೇ? ಇದು ವಿವರ ಅಲ್ಲವೆಂದರೆ ಇನ್ಯಾವುದು ವಿವರ?

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ಈ ಬೇಡಿಕೆಯನ್ನು ಪ್ರೊಜೆಕ್ಟ್ ಮಾಡಿರುವುದು ಯಾರು? ಸದನದ ಮುಂದೆ ಈ ಬೇಡಿಕೆಗಳನ್ನು ಮಂಡಿಸಿರುವುದು ಯಾರು? ಫೈನಾನ್ಸ್ ಮಿನಿಸ್ಟರ್ ಸುಮ್ಮನೆ ಕುಳಿತಿದ್ದಾರೆ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ತಾವು ಹಿರಿಯರಿದ್ದೀರಿ. ತಾವು ಒಂದು ಸರ್ಕಾರವನ್ನು ನಡೆಸಿರುವುದರ ಅನುಭವ ಇರುವುದರಿಂದ ಯೋಚನೆ ಮಾಡಬೇಕು . . . ನಾಳೆ ಈ ಸದನ ಇಂತಹ ತಾಂತ್ರಿಕ ಕಾರಣಗಳಿಗಾಗಿ ಇದಕ್ಕೆ ನಾವು ಮಂಜೂರಾತಿ ಕೊಡದಿದ್ದರೆ, ಮುಜುಗರ ಉಂಟಾಗುವುದು ಯಾರಿಗೆ? ಸರ್ಕಾರಕ್ಕೆ ಮುಜುಗರವುಂಟಾಗುತ್ತದೆ. ಸರ್ಕಾರದ ಭಾಗವಾಗಿ ನಾವೆಲ್ಲರೂ ಇದ್ದೇವೆ. ನಮ್ಮ–ನಿಮ್ಮೆಲ್ಲರ ಸಂಬಳ–ಸಾರಿಗೆಗಳ ವಿಚಾರದಿಂದ ಹಿಡಿದು ಪ್ರತಿಯೊಂದಕ್ಕೂ ಖರ್ಚು ಮಾಡಿರುವುದಕ್ಕೆ ಲೆಕ್ಕಪರಿಶೋಧಕರು ವಿವರಗಳನ್ನು ಕೊಡಬಹುದು. ಆದರೆ, ಇಲ್ಲಿರತಕ್ಕಂಥಾದ್ದನ್ನು ನಾವು ಕೊಟ್ಟ ಮೇಲೆ, ಇದು ವಿವರಗಳಲ್ಲ ಅನ್ನುವಂತಾದರೆ ಇನ್ನು ಯಾವ ತರಹದಲ್ಲಿ ಹೇಳಬೇಕೋ ನನಗೆ ಅರ್ಥವಾಗುತ್ತಿಲ್ಲ. ಇದಕ್ಕಿಂತ ಯಾವ ನಮೂನೆಗಳ ಹೆಸರುಗಳನ್ನು ಕೊಡಬೇಕೋ ಗೊತ್ತಿಲ್ಲ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಶ್ರೀರಾಮರೆಡ್ಡಿಯವರೆ, ಸ್ವಲ್ಪ ನನಗೂ ಮಾತನಾಡಲು ಬಿಡಿ. ನಾವು ಇಷ್ಟು ಹೊತ್ತಿನ ತನಕವೂ ಸುಮ್ಮನೆ ಕುಳಿತು ಕೇಳಿದ್ದೇವೆ. ದಯವಿಟ್ಟು ಕೇಳಿ. ಮಾನ್ಯ ಉಪ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರೆ, ಪ್ರಕಾಶ್‌ರವರೆ, ಅಧ್ಯಕ್ಷರೆ, ಪ್ರತಿ ವರ್ಷವೂ ಕೊಡುವುದು ಇಷ್ಟೇ. ಅದರಲ್ಲೇನೂ ಸಂಶಯವಿಲ್ಲ. ಆದರೆ, ಏನಾಗುತ್ತಿತ್ತು ಎಂದರೆ, ಇಲ್ಲಿ ಮೊದಲು ಚರ್ಚೆ ನಡೆಯುತ್ತಿತ್ತು. ಅದಕ್ಕೆ ಮಧ್ಯದಲ್ಲೇ ಹಣಕಾಸು ಸಚಿವರು ಉತ್ತರ ಕೊಟ್ಟುಬಿಟ್ಟರು. ಆಗ ಅವರು ಏನೇನು ವಿವರಗಳನ್ನು ಕೇಳಿದ್ದರೋ, ಎಲ್ಲವನ್ನೂ ಹೇಳಿಬಿಟ್ಟಿದ್ದರು. ಹೋದ ಸಲ ಇದರ ಮೇಲೆ ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಮಂತ್ರಿಗಳಾಗಿದ್ದ ಸಿದ್ದರಾಮಯ್ಯನವರು ಅರ್ಧ ತಾಸು ಹೇಳಿಬಿಟ್ಟಿದ್ದಾರೆ. ಆಗ ಚರ್ಚೆ ಆಗದಿದ್ದುದರಿಂದ ಈಗ ಸಮಸ್ಯೆ ಬಂದಿದೆ. ಇದಕ್ಕಿಂತಲೂ ಹೆಚ್ಚಿಗೆ ಕೊಡುವ ಪ್ರಶ್ನೆಯೇನೂ ಇಲ್ಲ. ಆದರೆ, ಇಲ್ಲಿ ಪ್ರಶ್ನೆ ಇರುವುದೇನೆಂದರೆ, ಚರ್ಚೆಯಾಗದೇ ಇದ್ದುದ್ದರಿಂದ ಇವೊತ್ತು ಅವರು ಕೇಳುವಂತಾದ್ದಕ್ಕೆ ಆಗ ಅಬ್ಜೆಕ್ಷನ್ ಏನಾದರೂ ತೆಗೆದಿದ್ದರೆ, ಕೆಲವು ಉತ್ತರಗಳನ್ನು ಕೊಡುತ್ತಿದ್ದರು. ಆದರೆ, ಅದು ಆಗದಿದ್ದುದ್ದರಿಂದ ಈ ಎಲ್ಲಾ ಪ್ರಶ್ನೆಗಳು ಬಂದಿದೆ. ಆದುದರಿಂದ, ಇದನ್ನು ಸುಮ್ಮನೆ ಬೆಳೆಸುವುದಕ್ಕೆ ಹೋಗಬೇಡಿ. ಇದಕ್ಕಿಂತಲೂ ಹೆಚ್ಚಿಗೆ ಏನೂ ಮಾಡುವುದಕ್ಕಾಗುವುದಿಲ್ಲ. ದಯವಿಟ್ಟು ಅದನ್ನು ಮುಗಿಸಿಬಿಡಿ.

(ಗೊಂದಲ)

ಅಧ್ಯಕ್ಷರು: ರೆಡ್ಡಿಯವರೆ, ಈಗ 2006ರ ಧನ ವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಿ ಅಂಗೀಕರಿಸೋಣ. ಇದೆಲ್ಲಾ ಏಕೆ?

(ಗೊಂದಲ)

ಅಧ್ಯಕ್ಷರು: ರೆಡ್ಡಿಯವರೆ, ಕುಳಿತುಕೊಳ್ಳಿ. ಸಹಕಾರ ಕೊಡಿ. ಈಗ ಕರ್ನಾಟಕ ಧನ ವಿನಿಯೋಗ ವಿಧೇಯಕ, 2006 ಅನ್ನು ಪುನರ್ ಪರ್ಯಾಲೋಚಿಸುವುದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅಧ್ಯಕ್ಷರೆ, ಮಾನ್ಯ ಹಣಕಾಸು ಮಂತ್ರಿಗಳು ವಿಧೇಯಕವನ್ನು ಪರ್ಯಾಲೋಚಿಸಲು ಸಭೆ ಮುಂದೆ ಮಂಡಿಸಿಯೇ ಇಲ್ಲ.

ಅಧ್ಯಕ್ಷರು: ಮಂಡಿಸಿದ್ದಾರೆ, ಹೇಳಿದ್ದಾರೆ ಅದಾದ ಮೇಲೆ ಮಾನ್ಯ ರಾಜೇಂದ್ರನ್‌ರವರು ಮಾತನಾಡಿದರು.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ಫೈನಾನ್ಸ್ ಮಿನಿಸ್ಟರ್ ನಮಗೆ ರಿಪ್ಲೈ ಮಾಡುವುದು ಬೇಡವೇ?

ಅಧ್ಯಕ್ಷರು: ಆಯಿತು, ಏನೋ ಮಾತನಾಡಿ. ಈಗ ನೀವು ಉತ್ತರ ಕೊಡಿ. ನಾನು ನಿಮಗೆ ಹೇಳುವುದೇನೆಂದರೆ, ಈಗ ಅವರು ಕೆಲವೊಂದು ವಿಚಾರಗಳನ್ನು ಏನು ಎತ್ತಿದ್ದಾರೆ, ಅದಕ್ಕೆ ಅರ್ಥಮಂತ್ರಿಗಳಾಗಿ ನೀವು ಹೇಳಿ. ಯಡಿಯೂರಪ್ಪನವರೆ, ಬ್ರೀಫ್ ಆಗಿ ಉತ್ತರ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು): ಕಳೆದ 15–20 ವರ್ಷಗಳಿಂದ ನಾನು ಅಲ್ಲಿ ಕುಳಿತಿದ್ದೇನೆ. ಪೂರಕ ಅಂದಾಜುಗಳ ಬೇಡಿಕೆ ವಿಷಯ ಬಂದಾಗ ಖರ್ಚು–ವೆಚ್ಚ ಮಾಡಿದಂಥಾದ್ದು ಸರಿಯಿಲ್ಲದಿದ್ದರೆ, ಅನಗತ್ಯ ಖರ್ಚು ಮಾಡಿದ್ದರೆ, ದುರುಪಯೋಗಪಡಿಸಿಕೊಂಡಿದ್ದರೆ ಅಥವಾ ಬಜೆಟ್‌ನಲ್ಲಿ ಯಾಕೆ ಸರಿಯಾದ ರೀತಿಯಲ್ಲಿ ಇದನ್ನು ಅಳವಡಿಸಿಕೊಳ್ಳಲಿಲ್ಲ ಎನ್ನುವ ಪ್ರಶ್ನೆಗಳು ಬಂದು ಗಂಟೆಗಟ್ಟಲೆ ಚರ್ಚೆಯಾಗಿರುವುದನ್ನು ನಾನು ನೋಡಿದ್ದೇನೆ. ನಾವು ಪ್ರತಿಯೊಂದು

ಅಭಿಯಾಚನೆಯಲ್ಲೂ ಸಹ ಯಾವುದಕ್ಕೆ ಎಷ್ಟೆಷ್ಟು ಖರ್ಚು ಮಾಡಿದ್ದೇವೆ ಎನ್ನುವಂಥ ಸಂಪೂರ್ಣ ವಿವರಗಳನ್ನು ಕೊಟ್ಟಿದ್ದೇವೆ. ಒಟ್ಟು 1638.82 ಕೋಟಿ ರೂಪಾಯಿಗಳ ಪೂರಕ ಅಂದಾಜನ್ನು ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸಲಾಗಿದೆ. 1638.82 ಕೋಟಿ ರೂಪಾಯಿಗಳಲ್ಲಿ 481.34 ಕೋಟಿ ರೂಪಾಯಿಗಳಷ್ಟು ಹಣ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದಿದೆ. ಪೂರಕ ಅಂದಾಜುಗಳಲ್ಲಿ ಕೋರಲಾಗಿರುವ ಪ್ರಸ್ತಾವನೆಗಳಲ್ಲಿ ಕೆಲವು ಮುಖ್ಯವಾದ ಪ್ರಸ್ತಾವನೆಗಳು ಈ ಕೆಳಕಂಡಂತಿದೆ.

ಕೃಷಿ ಮತ್ತು ತೋಟಗಾರಿಕೆ ಇಲಾಖೆ ಬೇಡಿಕೆಯಲ್ಲಿ ಕೇಂದ್ರ ಸರ್ಕಾರ ಕೃಷಿ ಯಾಂತ್ರೀಕರಣ ಯೋಜನೆಯಲ್ಲಿ ಹೆಚ್ಚುವರಿಯಾಗಿ 10 ಕೋಟಿ 98 ಲಕ್ಷ ರೂಪಾಯಿಗಳಷ್ಟು ಹಣ ಒದಗಿಸಿದೆ. ಈ ಹಣವನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ಬಿಡುಗಡೆ ಮಾಡುವ ಪ್ರಸ್ತಾವನೆ ಮಂಡಿಸಲಾಗಿದೆ. ಬೇಡಿಕೆ ಸಂಖ್ಯೆ 5ರಲ್ಲಿ ಗೃಹ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ವೀರಪ್ಪನ್‌ನನ್ನು ಕೊಂದ ಎಸ್‌ಟಿಎಫ್‌ನ ಅಧಿಕಾರಿಗಳಿಗೆ ಬಹುಮಾನ ನೀಡುವುದಕ್ಕೋಸ್ಕರ 6 ಕೋಟಿ ರೂಪಾಯಿಗಳನ್ನು ಒದಗಿಸಿದೆ. ಇದಲ್ಲದೆ, ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಯಾವುದೇ ಕಾನೂನಿನ ತೊಂದರೆಗಳಿಲ್ಲದೆ ಸುಗಮವಾಗಿ ನಡೆಸಿದ ಪೊಲೀಸ್ ಇಲಾಖೆಗೆ 9 ಕೋಟಿ 95 ಲಕ್ಷ ರೂಪಾಯಿಗಳನ್ನು ನೀಡುವ ಪ್ರಸ್ತಾವನೆ ಮಂಡಿಸಲಾಗಿದೆ. ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಏತಕ್ಕೆ ಆ ಖರ್ಚು ಬಂತು ಎಂದರೆ, ಬಸ್‌ಗಳನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ, ಹೋಮ್‌ಗಾರ್ಡ್ಸ್ ನೇಮಿಸಿಕೊಳ್ಳಬೇಕಾಗುತ್ತದೆ. ಮತ್ತು ಯಾವುದು ಸೆನ್ಸಿಟಿವ್ ಪೊಲೀಸ್ ಸ್ಟೇಷನ್‌ಗಳಿವೆ, ಅಲ್ಲಿಗೆ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನೇಮಿಸಬೇಕಾಗುತ್ತದೆ. ಈ ರೀತಿಯಾದಂಥ ಖರ್ಚುಗಳಿಗೆ 9 ಕೋಟಿ 95 ಲಕ್ಷ ರೂಪಾಯಿಗಳ ಪ್ರಸ್ತಾವನೆ ಮಂಡಿಸಲಾಗಿದೆ. ಬೇಡಿಕೆ ಸಂಖ್ಯೆ 7ರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಕೇಂದ್ರ ಸರ್ಕಾರದಿಂದ ಎಂಎನ್‌ಪಿ ಕಾರ್ಯಕ್ರಮದಡಿ ಹೆಚ್ಚುವರಿ ಹಣ ಪಡೆಯುವುದರಿಂದ ರಾಜ್ಯ ಸರ್ಕಾರದ ಪಾಲಿಗೆ ಸುಮಾರು 76 ಕೋಟಿ 49 ಲಕ್ಷ ರೂಪಾಯಿಗಳಷ್ಟು ಹಣವನ್ನು ಕುಡಿಯುವ ನೀರಿಗಾಗಿ ನೀಡಲಾಗಿದೆ. ಅಂತೆಯೇ ಕೇಂದ್ರ ಸರ್ಕಾರದಿಂದ ತ್ವರಿತ ನೀರು ಸರಬರಾಜು ಯೋಜನೆಯಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಭಾರತ ನಿರ್ಮಾಣ ಯೋಜನೆಯಡಿ ಹಣ ಬಂದಿರುವುದರಿಂದ 199 ಕೋಟಿ 27 ಲಕ್ಷ ರೂಪಾಯಿಗಳನ್ನು ನೀಡಬೇಕಾಗಿದೆ. ಇದಲ್ಲದೆ, ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸರ್ಕಾರಿ ಖಾತರಿಯಲ್ಲಿ ನೀಡುವ ಬದಲು ಆಯೋಗದ ಮುಖೇನ 40 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಹೀಗಾಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸುಮಾರು 235 ಕೋಟಿ 76 ಲಕ್ಷ ರೂಪಾಯಿಗಳ ಪೂರಕ ಅಂದಾಜು ನೀಡುವ ಪ್ರಸ್ತಾವನೆಯನ್ನು ಮಂಡಿಸಲಾಗಿದೆ. ಬೇಡಿಕೆ ಸಂಖ್ಯೆ 9ರಲ್ಲಿ ಸಹಕಾರ ಇಲಾಖೆಗೆ ಸಂಬಂಧಿಸಿದಂತೆ ನಬಾರ್ಡ್ ಸಹಯೋಗದಿಂದ ಆರ್‌ಐಡಿಎಫ್ ಯೋಜನೆಯಡಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಮಾರುಕಟ್ಟೆಗಳನ್ನು ನಿರ್ಮಿಸುವುದಕ್ಕೋಸ್ಕರ 6 ಕೋಟಿ 11 ಲಕ್ಷ ರೂಪಾಯಿಗಳು ಬಂದಿದ್ದು, ಅದನ್ನು ಬಿಡುಗಡೆ ಮಾಡಲಾಗಿದೆ. ಬೇಡಿಕೆ ಸಂಖ್ಯೆ 10 ರಲ್ಲಿ ಕಂಡುಬಂದಂತೆ ಕೇಂದ್ರ ಸರ್ಕಾರ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವುದಕ್ಕೋಸ್ಕರ 6 ಕೋಟಿ 46 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದ್ದು, ಈ ಹಣವನ್ನು ಸಂಬಂಧಿಸಿದ ಇಲಾಖೆಗೆ ಬಿಡುಗಡೆ ಮಾಡುವುದಕ್ಕೆ ಪೂರಕ ಅಂದಾಜಿನಲ್ಲಿ ಅವಕಾಶ

ಮಾಡಿಕೊಟ್ಟಿದ್ದೇವೆ. ಬೇಡಿಕೆ ಸಂಖ್ಯೆ 11ರಲ್ಲಿ ಕಂಡುಬಂದಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಪೋಷಕಾಂಶದ ಕೊರತೆಯಿಂದ ತೊಂದರೆಗೀಡಾಗಿರುವ ಹೆಣ್ಣುಮಕ್ಕಳಿಗೆ ಪೌಷ್ಟಿಕ ಆಹಾರ ನೀಡಲು ಕೇಂದ್ರ ಸರ್ಕಾರದಿಂದ 5 ಕೋಟಿ 16 ಲಕ್ಷ ಅನುದಾನ ಬಿಡುಗಡೆಯಾಗಿದೆ. ಈ ಹಣವನ್ನು ಸದರಿ ಇಲಾಖೆಗೆ ಬಿಡುಗಡೆ ಮಾಡುವ ಬಗ್ಗೆ ಪ್ರಸ್ತಾವನೆ ಮಂಡಿಸಲಾಗಿದೆ. ಬೇಡಿಕೆ ಸಂಖ್ಯೆ 13ರಲ್ಲಿ ಸಬ್ಸಿಡಿ ಆಧಾರದಲ್ಲಿ ಪಡಿತರ ಮೂಲಕ ನೀಡುವ ಆಹಾರ ಪದಾರ್ಥಗಳಿಗೆ 180 ಕೋಟಿ ರೂಪಾಯಿಗಳ ಹೆಚ್ಚಿನ ಸಬ್ಸಿಡಿಯನ್ನು ಈ ಹಿಂದೆ ಆಯವ್ಯಯದಲ್ಲಿ ನಿಗದಿಪಡಿಸಲಾಗಿತ್ತು. ಇದು ಸಾಕಾಗಲಿಲ್ಲವೆಂದು ಕಂಡುಬಂದಿದ್ದರಿಂದ ಹೆಚ್ಚುವರಿಯಾಗಿ 180 ಕೋಟಿ ರೂಪಾಯಿಗಳನ್ನು ನೀಡಲು ಪ್ರಸ್ತಾವನೆಯನ್ನು ಮಂಡಿಸುತ್ತಿದ್ದೇನೆ. ಬೇಡಿಕೆ ಸಂಖ್ಯೆ 14ರಲ್ಲಿ ಕಂಡುಬಂದಂತೆ 2005ನೇ ಫರ್ಷದ ಜೂನ್‌ನಿಂದ ಅಕ್ಟೋಬರ್‌ವರೆಗೆ ಕರ್ನಾಟಕ ಪ್ರವಾಹ ಹಾನಿಯಿಂದ ಸಾಕಷ್ಟು ತೊಂದರೆ ಅನುಭವಿಸಿದ್ದು, ಈ ಸಮಸ್ಯೆಯನ್ನು ನಿವಾರಿಸಲು ಈವರೆಗೆ 357 ಕೋಟಿ ರೂಪಾಯಿಗಳಷ್ಟು ಹಣವನ್ನು ಕೇಂದ್ರ ಸರ್ಕಾರ ಸಹಾಯಧನವಾಗಿ ನೀಡಿದೆ. ಜೊತೆಗೆ, ರಾಜ್ಯ ಸರ್ಕಾರ 123 ಕೋಟಿ 51 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ.

ಶ್ರೀ ಧರ್ಮಸಿಂಗ್: ಕೇಂದ್ರ ಸರ್ಕಾರದಿಂದ ಒಂದು ಪೈಸೆಯೂ ಬಂದಿಲ್ಲ, ಕೇಂದ್ರ ಸರ್ಕಾರ ಕೊಟ್ಟಿಲ್ಲವೆಂದು ವಿರೋಧ ಪಕ್ಷದ ನಾಯಕರಾಗಿದ್ದಾಗ ನೀವು ಸಾರಿ ಸಾರಿ ಹೇಳಿದಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅದರ ಬಗ್ಗೆ ಹೇಳಿ, ಚರ್ಚೆ ಮಾಡೋಣ. ಇವೊತ್ತು ಏಕೆ ಈ ಪರಿಸ್ಥಿತಿ ಬಂದಿದೆ ಎಂಬುದು ನನಗೆ ಅರ್ಥವಾಗುತ್ತದೆ. ತಾವು ಈ ಚರ್ಚೆಯಲ್ಲಿ ಭಾಗವಹಿಸಿದ್ದಿದ್ದರೆ ಈ ರೂಪಕ್ಕೆ ಬರುತ್ತಿರಲಿಲ್ಲ. ತಾವು well ನಲ್ಲಿದ್ದಿರಿ. ಈ ಸರ್ಕಾರಕ್ಕೆ ಯಾವುದೇ ರೀತಿಯ ಸಹಕಾರ ಕೊಡದೆ ಈ ತರಹದ ಗೊಂದಲದಲ್ಲೇ ಇರಬೇಕೆಂದು ನೀವು ತೀರ್ಮಾನ ಮಾಡಿದ್ದಿರಿ. ಇಂತಹ ಒಂದು ನಿರ್ಧಾರಕ್ಕೆ ತಾವು ಬಂದಿದ್ದರಿಂದ . . .

ಶ್ರೀ ಧರ್ಮಸಿಂಗ್: ನಾವು ಬಂದಿಲ್ಲ, ನೀವು ಮಾಡುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಹೇಳುತ್ತೇನೆ ಕೇಳಿ . . . . ಹಾಗಾಗಿ, ಇವೊತ್ತು ಈ ಪರಿಸ್ಥಿತಿ ಬಂದಿದೆ.

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಉಪ ಮುಖ್ಯಮಂತ್ರಿಗಳೇ, ಈಗ ಕೌನ್ಸಿಲ್‌ನಲ್ಲಿ ಕೂಡ ಅಪ್ರೋಪ್ರಿಯೇಷನ್ ಬಿಲ್ಲಿನ ಬಗ್ಗೆ ಚರ್ಚೆಯಾಗಿದೆ. ಅಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಇವತ್ತು ತಾವು ಬಂದಿದ್ದೀರಿ. ಇಲ್ಲಿ ಬಂದು ಹೇಳತಕ್ಕ ಕಾಲದಲ್ಲಿ ನಮಗೆ 1638 ಕೋಟಿ ರೂಪಾಯಿಗಳಿಗೆ ಒಪ್ಪಿಗೆ ಕೊಡುವುದಕ್ಕೆ ಅಭ್ಯಂತರವಿಲ್ಲ. ಈಗಾಗಲೇ 'ಧರ್ಮ್‌ಸಿಂಗ್‌ರವರ ಸರ್ಕಾರವೆಂದು' ನಮ್ಮ ಮಾನ್ಯ ಪ್ರಕಾಶ್‌ರವರು ಹೇಳಿದರು. ಧರ್ಮ್‌ಸಿಂಗ್ ಮತ್ತು ಜನತಾದಳ (ಎಸ್) ಎರಡೂ ಕೂಡಿದ್ದ ಸರ್ಕಾರ ಅದು. ಅದರಲ್ಲಿ ಅವರೂ ಉಪ ಮುಖ್ಯಮಂತ್ರಿಗಳಾಗಿದ್ದರು, ಮಂಜುನಾಥ್‌ರವರಿದ್ದರು, ಹೊರಟ್ಟಿಯವರಿದ್ದರು.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾವು ಅದನ್ನು ಇಲ್ಲವೆಂದು ಹೇಳಲಿಲ್ಲವಲ್ಲಾ?

ಶ್ರೀ ಎನ್. ಧರ್ಮ್‌ಸಿಂಗ್: ನಾನು ಅವರು ಹೇಳಿದ್ದಕ್ಕೆ ಹೇಳುತ್ತಿದ್ದೇನೆ. 'ಧರ್ಮ್‌ಸಿಂಗ್‌ರವರ ಕಾಲದಲ್ಲಿ' 'ಧರ್ಮ್‌ಸಿಂಗ್‌ರವರು ಖರ್ಚು ಮಾಡಿದ್ದು' ಎಂದು ಹೇಳಿದರು. ಅದರಲ್ಲಿ ತಾವೂ ಕೂಡ ಭಾಗಿಯಾಗಿದ್ದಿರಿ. ತಾವೂ ಕೂಡ ಸರ್ಕಾರದಲ್ಲಿದ್ದಿರಿ. ಆದ್ದರಿಂದ ಆ ರೀತಿ ಹೇಳತಕ್ಕದಲ್ಲ. ನಾನು ಏಕೆ ಎದ್ದು ನಿಂತು ಕೇಳಿದೆನೆಂದರೆ 357 ಕೋಟಿ ರೂಪಾಯಿ ಕೇಂದ್ರ ಸರ್ಕಾರದ ನೆರವು ಇವತ್ತು ರಾಜ್ಯ ಸರ್ಕಾರಕ್ಕೆ ಬಂದಿದೆ. ಯಾವಾಗಲೂ ಕೂಡ ವಿರೋಧ ಪಕ್ಷದಲ್ಲಿದ್ದಾಗ ತಮ್ಮ ಮಾತಿಗೆ

F-24

F-24

ಫುಲ್ ಸ್ಟಾಪ್, ಕಾಮ ಇಲ್ಲ, ಹೇಳಿದ್ದೇ ಹೇಳಿದ್ದು. ನಾವು ಹೋಗಿ ಪ್ರಧಾನ ಮಂತ್ರಿಗಳಾದ ಮಾನ್ಯ ಮನ್‌ಮೋಹನ್ ಸಿಂಗ್‌ರವರನ್ನು ಭೇಟಿ ಮಾಡಿದೆವು. ಆಗ ಅನಂತ್‌ಕುಮಾರ್‌ರವರಿದ್ದರು, ನೀವಿದ್ದಿರಿ, ಎಲ್ಲರೂ ಇದ್ದೆವು. ಆದರೆ ಹೊರಗಡೆ ಬಂದು ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ಒಂದು ನಯಾಪೈಸೆ ಕೇಂದ್ರ ಸರ್ಕಾರದವರು ಕೊಡಲಿಲ್ಲವೆಂದು ಹೇಳಿದಿರಿ. ಇವತ್ತು ನಿಮ್ಮ ಬಾಯಿಂದಲೇ ಬರುತ್ತಿದೆ, ಅದಕ್ಕೆ I am very happy. 357 ಕೋಟಿ ರೂಪಾಯಿಗಳ ನೆರವು ಕೇಂದ್ರ ಸರ್ಕಾರದಿಂದ ಬಂದಿದೆ ಎನ್ನತಕ್ಕದ್ದನ್ನು ಈಗಾಗಲೇ ತಾವು ಒಪ್ಪಿದ್ದೀರಿ. ಅದಕ್ಕೆ I am very happy.

ಶ್ರೀ ಜಗದೀಶ್ ಶೆಟ್ಟರ್: ನಾಲ್ಕು ಸಾವಿರ ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಕೇಳಿದ್ದಿರಿ. ಅದರ ಮೇಲೆ ಪ್ಲಾನನ್ನು ಹಾಕಿಕೊಂಡಿದ್ದಿರಿ. ನೀವು ಕೇಳಿದ್ದೆಷ್ಟು? ಅವರು ಕೊಟ್ಟಿದ್ದೆಷ್ಟು?

(ಗೊಂದಲ)

ಶ್ರೀ ಅಪ್ಪಾಜಿ ಎಸ್. ನಾಡಗೌಡ: ಹಿಂದೆ ನೆರೆ ಹಾವಳಿಯಲ್ಲಿ ತಾವು ಎಷ್ಟು ಕೊಟ್ಟಿರಿ ಹೇಳಿ? ಕೇಳಿದ್ದು ಎಷ್ಟು? ನೀವು ಕೊಟ್ಟಿದ್ದು ಎಷ್ಟು? ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಹಿಂದಿನ ಕೇಂದ್ರ ಸರ್ಕಾರವಿದ್ದಾಗ ಕೊಟ್ಟಿತ್ತು. ಆದರೆ ನೀವು ಕೇಳಿದ್ದು ಎಷ್ಟು? ಅವರು ಕೊಟ್ಟಿದ್ದು ಎಷ್ಟು ಎಂಬುದನ್ನು ಟ್ಯಾಲಿ ಮಾಡಿ.

ಶ್ರೀ ಎನ್. ಧರ್ಮಸಿಂಗ್: ಮೊದಲು ಯಾರೂ ಕೊಟ್ಟಿಲ್ಲವೆಂದಾಗಿದೆ.

ಶ್ರೀ ಜಗದೀಶ್ ಶೆಟ್ಟರ್: ಟ್ಯಾಲಿ ಮಾಡಿ, ನೀವು ಕೇಳಿದ್ದು ನಾಲ್ಕು ಸಾವಿರದ ಕೋಟಿ ರೂಪಾಯಿಗಳು.

(ಗೊಂದಲ)

ಅಧ್ಯಕ್ಷರು: ಈಗ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಅರ್ಥ ಸಚಿವರು ಉತ್ತರ ಕೊಡುತ್ತಿದ್ದಾರೆ. ಬೇಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೇನರಸೀಪುರ): ಮಾನ್ಯ ಅಧ್ಯಕ್ಷರೆ, ಕಳೆದ 19ನ್ನೇ ತಾರೀಖಿನಿಂದ ನೋಡುತ್ತಿದ್ದೇವೆ. ಮೊದಲನೆಯದಾಗಿ ಸಂವಿಧಾನದ ಬಗ್ಗೆ ತಾವು ಸ್ವಲ್ಪ ಪಾಠವನ್ನು ನಮ್ಮ ಶಾಸಕರಿಗೆ ಹೇಳಿಸಿಕೊಡಬೇಕೆಂದು ಕೇಳುತ್ತಿದ್ದೇನೆ. ಏಕೆಂದರೆ, ಕಳೆದ 54 ವರ್ಷದಲ್ಲಿ ಯಾವುದೇ ಸಂವಿಧಾನದ ಬಗ್ಗೆ ಚರ್ಚೆಯಾಗಿಲ್ಲ. ಏಕೆಂದರೆ ನಮ್ಮ ಮಾನ್ಯ ನಾಯಕರಾದ ಧರ್ಮಸಿಂಗ್‌ರವರು ಬಿಳ್ಕೆಯವರು, ಕೆಲಸ ಮಾಡಿದ್ದಾರೆ, ಇದರ ಬಗ್ಗೆ ಹಿಂದೆ ಮುಂದೆ ಹೇಳುವಂಥದ್ದು ಇಲ್ಲ. ನನಗೆ ಒಳಗೊಂದು ಹೊರಗೊಂದು ಹೇಳುವಂಥ ಅಭ್ಯಾಸವಿಲ್ಲ. ಏಕೆಂದರೆ, ಸಂವಿಧಾನದ ಬಗ್ಗೆ ಎಂದು ಹೇಳ್ತಿ ಕಳೆದ 19ನ್ನೇ ತಾರೀಖಿನಿಂದ ಯಾವಾವ ರೀತಿ ಸದನ ನಡೆಯುತ್ತಿದೆಯೆಂದು ಇಡೀ ರಾಜ್ಯದ ಜನತೆ ನೋಡುತ್ತಿದ್ದೆ. ಅದರಿಂದ ಈ ಸದನದ ಗೌರವ ಹೋಗುತ್ತಿದೆಯೋ, ಅಥವಾ ಗೌರವ ಹೆಚ್ಚಾಗುತ್ತಿದೆಯೋ ಎಂಬುದು ನನಗೆ ಗೊತ್ತಿಲ್ಲ. ಅದನ್ನು ಮಾನ್ಯ ಹಿರಿಯ ಶಾಸಕರಿದ್ದೀರಿ, ಅದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇವತ್ತಿನ ದಿವಸ ಹಣಕಾಸು ಸಚಿವರು ಅಧಿಕಾರ ವಹಿಸಿಕೊಂಡು 15 ದಿವಸಗಳಾಗಿದೆ. ಅವರು ಮಂಡನೆ ಮಾಡಿದರು. ಕಳೆದ 30 ವರ್ಷದಿಂದ ಹೇಗೆ ಮ್ಯಾಡ್ತಿದ್ದಾರೆಂಬುದನ್ನು ಹೇಳ್ತಿದ್ದಾರೆ. ಏಕೆಂದರೆ ಮಾನ್ಯ ಧರ್ಮಸಿಂಗ್ ಸಾಹೇಬರು ಕೇಂದ್ರ ಸರ್ಕಾರ 357 ಕೋಟಿ ರೂಪಾಯಿಗಳನ್ನು ಕೊಟ್ಟಿತ್ತು ಎಂದು ಹೇಳಿದ್ದಾರೆ. ಮಾನ್ಯ ದೇವೇಗೌಡರು

ಪಾರ್ಲಿಮೆಂಟ್‌ನಲ್ಲಿ ಆವತ್ತು ಮಾತನಾಡಿದ್ದಕ್ಕೋಸ್ಕರ 357 ಕೋಟಿ ರೂಪಾಯಿಗಳನ್ನು ಕೊಟ್ಟರು ಎಂಬುದನ್ನು ಮರೆಯಬಾರದು. ಅಲ್ಲಿಯವರೆಗೆ ಕರ್ನಾಟಕದ ಬಗ್ಗೆ ಲೆಕ್ಕಕ್ಕೇ ಇರಲಿಲ್ಲ. ಕೇಂದ್ರ ಸರ್ಕಾರ ಇದನ್ನು ಲೆಕ್ಕಕ್ಕಿಟ್ಟಿದ್ದರಾ? ಸದನದ ಅಧ್ಯಕ್ಷರ ಬಗ್ಗೆಯೂ 19ನೇ ತಾರೀಖಿನಿಂದ ಏನೇನು ನಡೆಯಿತು ಎಂಬ ಬಗ್ಗೆ ಸಹ ತಾವೆಲ್ಲರೂ ಅರ್ಥ ಮಾಡಿಕೊಳ್ಳಿ. ಹಿಂದಿನ ಐದು ವರ್ಷದಲ್ಲಿ ಧರ್ಮಸಿಂಗ್ ಸಾಹೇಬರಿದ್ದರು, ಖರ್ಗೆ ಸಾಹೇಬರಿದ್ದರು, ರಮೇಶ್‌ಕುಮಾರ್ ಅವರು ಇರಲಿಲ್ಲ, ನಾನು ಮತ್ತು ಮಾಧುಸ್ವಾಮಿಯವರು, ವಾಟಾಳ್‌ನಾಗರಾಜ್ ಸಾಹೇಬರು ಇರಲಿಲ್ಲ. ಈ ಕಡೆ ಮಾನ್ಯ ರಾಜೇಂದ್ರನ್‌ರವರು ಮತ್ತು ಶ್ರೀರಾಮರೆಡ್ಡಿಯವರು ಇರಲಿಲ್ಲ. ಐದು ವರ್ಷ ಸದನದಲ್ಲಿ ಚರ್ಚೆ ನಡೆದದ್ದು ಏನು ಸ್ವಾಮಿ? ಒಬ್ಬ ಸದನದಲ್ಲಿ ಇಲ್ಲದಿರುವ ವ್ಯಕ್ತಿಯ ಬಗ್ಗೆ ಅವಹೇಳನ ಮಾಡತಕ್ಕ ಚರ್ಚೆ ಸದನದಲ್ಲಿ ನಡೆಯಿತೇ ಹೊರತು ಒಳ್ಳೆಯ ಕೆಲಸದ್ದು ಏನಾದರೂ ಐದು ವರ್ಷ ಚರ್ಚೆ ನಡೆಯಿತೆ? ಉದಾಹರಣೆಗೆ ನನ್ನದೇ, ತಗೊಳ್ಳಿ. ಇವತ್ತು ಹೇಳುತ್ತೇನೆ, ನಾನು ಸದನದಲ್ಲಿದ್ದೇನೆ: ಚರ್ಚೆ ಮಾಡುವುದಕ್ಕೆ ನನ್ನ ಬಗ್ಗೆ, ನನ್ನ ರಾಜಕೀಯ ಜೀವನದ ಬಗ್ಗೆ ಏನಾದರೂ ಇದ್ದರೆ ಹೇಳಿ. ನಾನು ಎರಡು ಸಲ ಗೆದ್ದಿದ್ದೇನೆ, ಒಂದು ಸಲ ಸೋತಿದ್ದೇನೆ. ನಾವು ಇಲ್ಲದೇ ಹೋದಂಥ ಸಂದರ್ಭದಲ್ಲಿ ಈ ಸದನವನ್ನು ಯಾವ ರೀತಿ ದುರುಪಯೋಗ ಮಾಡಿದರು ಎಂಬುದು ಈ ಸದನದ ಕಡತದಲ್ಲಿದೆ, ಬೇಕಾದರೆ ತೆಗೆದು ನೋಡಲಿ. ಏಕೆಂದರೆ ನಾನು ಕಳೆದ 19ನೇ ತಾರೀಖಿನಿಂದ ಸದನವನ್ನು ನೋಡುತ್ತಿದ್ದೇನೆ. ನನಗೆ ಅಷ್ಟು ಪಾಂಡಿತ್ಯವಿಲ್ಲ. ಈ ಸದನ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ಇಡೀ ರಾಷ್ಟ್ರ ನೋಡುತ್ತಿದೆ, ಈ ರಾಜ್ಯದ ಐದು ಕೋಟಿ ಜನರು ನೋಡುತ್ತಿದ್ದಾರೆ. ಉದಾಹರಣೆಗೆ, ಈ ಹಣಕಾಸು ಇಲಾಖೆಯ ಬಗ್ಗೆ ತಾವೆಲ್ಲರೂ ಚರ್ಚೆ ಮಾಡುತ್ತಿದ್ದೀರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ರೈತಾಪಿ ಜನರಿಗೆ ಜೋಳವನ್ನು ಖರೀದಿ ಮಾಡಲು ಹಣಕಾಸು ಇಲಾಖೆಗೆ ಒಂದು ಪತ್ರವನ್ನು ಕಳಿಸಿಕೊಟ್ಟೆ. ಅದು ಏನಾಗಿದೆ ಕೇಳಿ ಸ್ವಾಮಿ? ಎಷ್ಟು ತಿಂಗಳು ಆ ಕಡತ ಎಲ್ಲಿ ಬಿದ್ದಿತ್ತು ಎಂದು ಹೇಳಿ ಆರು ತಿಂಗಳಿಂದ ಆ ಕಡತ ಹೊರಕ್ಕೆ ಬರತೆ? ರೈತರ ಬಗ್ಗೆ ಯಾರಾದರೂ ಕೇಳಿದ್ದಾರಾ? ರೈತ ಸಂಘದವರು ಜೋಳ ಖರೀದಿಯಲ್ಲಿ ಇವತ್ತು ಬೆಂಬಲ ಬೆಲೆ ಕೊಡುತ್ತಿಲ್ಲವೆಂದು ಹೇಳಿದರು. ನಾವು ಸಹಕಾರಿ ಇಲಾಖೆಯಿಂದ ಜೋಳವನ್ನು ಖರೀದಿ ಮಾಡುತ್ತೇವೆಂದು ಹಣಕಾಸು ಇಲಾಖೆಯವರು ಅನುಮತಿ ಕೊಡಿ ಎಂದು . . .

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ಅಪ್ರೋಪ್ರಿಯೇಷನ್ ಬಿಲ್ಲಿನ ಬಗ್ಗೆ . . .

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಖರ್ಗೆ ಸಾಹೇಬರೆ, ನಾನು ಹೇಳುತ್ತಿದ್ದೇನೆ, ತಾವು ಹಿರಿಯರಿದ್ದೀರಿ, ನಾನಿನ್ನು ಕೋ-ಆಪರೇಷನ್ ಇಲಾಖೆಯ ಬಗ್ಗೆ ಹೇಳುತ್ತಿಲ್ಲ. ರೈತರಿಗೆ ಅನ್ಯಾಯವಾಗಿರುವ ಬಗ್ಗೆ ಹೇಳುತ್ತಿದ್ದೇನೆ. ನಾನು ಯಾರನ್ನೂ ದ್ವೇಷಣೆ ಮಾಡುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಮಗೆ ಅದು ಗೊತ್ತಾಗಬೇಕಲ್ಲಾ? ಇದೇನು ಅಪ್ರೋಪ್ರಿಯೇಷನ್ ಬಿಲ್ಲೋ . . . . . (ಗೊಂದಲ)

ಅಧ್ಯಕ್ಷರು: ಸಾಮಾನ್ಯವಾಗಿ ರೇವಣ್ಣನವರು ಎದ್ದೇಳುವುದೇ ಇಲ್ಲ, ಅವರ ಭಾವನೆಗಳನ್ನು ಏನೋ ಹೇಳುತ್ತಿದ್ದಾರೆ. ಅವರು ಹಿಂದಿನ ಸರ್ಕಾರದಲ್ಲಿ ಸಚಿವರಾಗಿದ್ದವರು, ಅವರು ಸಾಮಾನ್ಯವಾಗಿ ಮಾತನಾಡಲು ಏಳುವುದಿಲ್ಲ.

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ: ಹಿಂದಿನ ಸರ್ಕಾರದ ಒಬ್ಬರು ಮಂತ್ರಿಯಾಗಿದ್ದವರು ಯಾವ ಸರ್ಕಾರದ ಬಗ್ಗೆ ಟೀಕೆ ಮಾಡುತ್ತಿದ್ದಾರೆ?

ಶ್ರೀ ಹೆಚ್.ಡಿ. ರೇವಣ್ಣ: ನಾನು ಯಾರ ಬಗ್ಗೆಯೂ ವೈಯಕ್ತಿಕವಾಗಿ ಟೀಕೆ–ಟಿಪ್ಪಣಿ ಮಾಡಲು ನಿಂತಿಲ್ಲ. ಐದು ವರ್ಷ ಸದನದಲ್ಲಿ ನಾವು ಇಲ್ಲದಿದ್ದಾಗ ಮಾತನಾಡಲು ಅವಕಾಶ ಕೊಟ್ಟಿರಲ್ಲಾ, ಆಗ ನೀವೆಲ್ಲಾ ಸುಮ್ಮನೆ ಕುಳಿತಿದ್ದಿರಲ್ಲಾ, ಹೇಗೆ ಸುಮ್ಮನೆ ಕುಳಿತಿದ್ದೀರಿ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ಹಿಂದಿನ ಸದನದಲ್ಲಿ ನಾನು ಇದ್ದೆ, ನಾನು ಮತ್ತು ಕೆ.ಬಿ. ಮಲ್ಲಿಕಾರ್ಜುನ್‌ರವರು ಎದ್ದು ಮಾನ್ಯ ದೇವೇಗೌಡರನ್ನು ಡಿಫೆಂಡ್ ಮಾಡಿದೆವು.

ಶ್ರೀ ಹೆಚ್.ಡಿ. ರೇವಣ್ಣ: ನಾನು ಡಿಫೆಂಡ್ ಮಾಡಿ ಎಂದು ಹೇಳುತ್ತಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಆಗ ಕೆ.ಹೆಚ್. ಹನುಮೇಗೌಡರು ಭಾರತೀಯ ಜನತಾ ಪಾರ್ಟಿಯಲ್ಲಿದ್ದು ಮಾನ್ಯ ದೇವೇಗೌಡರನ್ನು ಅಟ್ಯಾಕ್ ಮಾಡಿದ್ದು, ಜಮೀನು ವಿಷಯ ಮಾತನಾಡಿದ್ದು.

ಶ್ರೀ ಹೆಚ್.ಡಿ. ರೇವಣ್ಣ: ನಾನು ಈ ಸದನದಲ್ಲಿ ಇಲ್ಲದಿರುವ ವ್ಯಕ್ತಿಗಳ ಬಗ್ಗೆ ಮಾತನಾಡುತ್ತಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಈ ಸದನದಲ್ಲಿ ಅವರು ಮಾತನಾಡಿದ್ದು ಎಲ್ಲರೂ ಕುಳಿತುಕೊಂಡು ಚಪ್ಪಾಳೆ ತಟ್ಟಿದ್ದರು. ನಿಯಮ 72ನಲ್ಲಿ ಕೆ.ಹೆಚ್. ಹನುಮೇಗೌಡರು ಒಂದು ಗಂಟೆ ಮಾತನಾಡಿದರು. ನಾವು ಆವತ್ತು ಅದಕ್ಕೆ ವಿರೋಧ ಮಾಡಿದೆವು.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಜಯಪ್ರಕಾಶ್ ಹೆಗ್ಡೆಯವರೆ, ನಾನು ಕೇಳುತ್ತಿರುವುದು ಸದನದಲ್ಲಿ ಇರುವ ವ್ಯಕ್ತಿಗಳ ಬಗ್ಗೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಬಹುಶಃ ಮಾನ್ಯ ದೇವೇಗೌಡರು ಮತ್ತು ಮಕ್ಕಳದ್ದು ಚರ್ಚೆ, ಶೂನ್ಯವೇಳೆಯಲ್ಲಿ ಮೂರು ಗಂಟೆ ನಡೆದಿದೆ, ಯಾರು ಮಾಡಿದ್ದಾರೆ ಅವರು ಕೂಡ ಈಗ ಅವರೊಂದಿಗೆ ಕೂಡಿದ್ದಾರೆ. ಇದು ನಡೆದಿರೋದು, ಅದನ್ನು ಹೇಳುತ್ತಿದ್ದೇನೆ. ಏನೂ ಉಳಿದಿಲ್ಲ. ಈಗೇನು ಮುಖ್ಯಮಂತ್ರಿಯಾಗಿ ಇವರದ್ದು ಏನೂ ಉಳಿದಿಲ್ಲ, ನಿಮ್ಮದೂ ಏನೂ ಉಳಿದಿಲ್ಲ, ಯಾರದ್ದು ಏನೂ ಉಳಿದಿಲ್ಲ. ಅದು ದಾಖಲೆಗೆ ಹೋಗಿದೆ. ಶೂನ್ಯವೇಳೆಗೆ ಪ್ರತಿ Assemblyಗೆ ಇರತಕ್ಕದ್ದೇ ಮೂರು ಗಂಟೆ, ಪ್ರತಿ Assembly ಮೂರು ತಾಸು ಆ ಮನೆತನದ್ದು ಇರುತ್ತಿತ್ತು, ಸುಮ್ಮನೆ ಅದರ ಬಗ್ಗೆ ಈಗ ಹೇಳಿದರೆ ಉಪಯೋಗವಿಲ್ಲ, ಯಾರು ನಿಮ್ಮನ್ನು ಮಾಡುತ್ತಿದ್ದರೋ ಅವರ ಜೊತೆಗೆ ನೀವು ಈಗ ಇದ್ದೀರಿ, ಅದು ಮಾನ್ಯ ದೇವೇಗೌಡರಿಗೆ ನೋವಾಗಿರುವುದು.

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಮಾನ್ಯ ರೇವಣ್ಣನವರು ಗೋವಿನ ಜೋಳದ ಖರೀದಿಯ ಬಗ್ಗೆ ಹೇಳಿದರು.

(ಗೊಂದಲ)

ಅಧ್ಯಕ್ಷರು: ತಾವು ಕುಳಿತುಕೊಳ್ಳಿ. ಬೇರೆ ಸಮಯದಲ್ಲಿ ತಮಗೆ ಮಾತನಾಡಲು ಅವಕಾಶ ಕೊಡುತ್ತೇನೆ. ಮಾನ್ಯ ರೇವಣ್ಣನವರೆ, ಬೇಗ ಮುಗಿಸಿ. ಧನವಿನಿಯೋಗ ಮಸೂದೆಯ ಮೇಲೆ ಮಾನ್ಯ ಅರ್ಥಸಚಿವರು ಉತ್ತರ ಕೊಡುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ನಾನು ಯಾರ ಬಗ್ಗೆ ವೈಯಕ್ತಿಕವಾಗಿ ಟೀಕೆ ಟಿಪ್ಪಣಿಯನ್ನು ಮಾಡಲು ಹೋಗುವುದಿಲ್ಲ. ನಾನು ಯಾವ ಬಗ್ಗೆಯೂ ಟೀಕೆ ಟಿಪ್ಪಣಿಯನ್ನು ಮಾಡಲು ಸದನಕ್ಕೆ ಬಂದಿಲ್ಲ. ನಾನು ಹಿಂದೆ ಒಬ್ಬ ಸದಸ್ಯನಾಗಿದ್ದೆ, ಮಾಜಿ ಸದಸ್ಯನಾಗಿದ್ದೆ. ಈಗ ಹಾಲಿ ಸದಸ್ಯನಾಗಿದ್ದೇನೆ. ಈ ರಾಜ್ಯದಲ್ಲಿ ಭ್ರಷ್ಟಾಚಾರದ ಬಗ್ಗೆ ಚರ್ಚೆ ಮಾಡುವುದಾದರೆ, ಯಾರ್ಯಾರು ರಾಜಕಾರಣಿಗಳು ಭ್ರಷ್ಟಾಚಾರಿಗಳು ಎಂದು ಬೇಕಾದರೆ ಒಂದು ದಿನ ಚರ್ಚೆಗೆ ಇಡಿ, ನಾನು ತಯಾರಿದ್ದೇನೆ. ಏಕೆಂದರೆ ನಾನು ಈಗ ಸದನದಲ್ಲಿದ್ದೇನೆ. ಉತ್ತರ ಹೇಳಲು ನಾನು ತಯಾರಿದ್ದೇನೆ. ಬೇಕಾದರೆ ಒಂದು ದಿನ ಇದರ ಬಗ್ಗೆ ಚರ್ಚೆಗೆ ಪೂರ್ಣವಾಗಿ ಇಟ್ಟುಕೊಂಡುಬಿಡಿ, ಕೈಮುಗಿಯುತ್ತೇನೆ. ಏಕೆಂದರೆ, ಇದಲ್ಲದೆ ಹಣಕಾಸು ಇಲಾಖೆಗೆ ಹೋದಂಥ ಕಡತ ಎಷ್ಟು ದಿವಸ ಇರುತ್ತದೆ? ರೈತರ ಕಡತಗಳು ಎಷ್ಟು ದಿವಸ ಇರುತ್ತದೆ?

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಮಾನ್ಯ ಅಧ್ಯಕ್ಷರೆ . . .

(ಗೊಂದಲ)

ಶ್ರೀ ಬಿ.ಸಿ. ಪಾಟೀಲ್: ಮಾನ್ಯ ಪ್ರಕಾಶ್ ಹುಕ್ಕೇರಿಯವರೇ ತಾವು ಮಂತ್ರಿಯಾಗಿದ್ದಾಗ ಒಂದು ದಿವಸ ಎದ್ದು ನಿಂತಿಲ್ಲ, ಒಂದು ನಿಮಿಷ ಎದ್ದು ನಿಂತಿಲ್ಲ. ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಿ. ಮಂತ್ರಿಯಾಗಿದ್ದಾಗ ಒಂದೂ ಮಾತನಾಡಿಲ್ಲ ಕುಳಿತುಕೊಳ್ಳಿ, ನೀವೇನು ಮಾಡಿದ್ದೀರಿ ಎಂಬುದು ನಮಗೆ ಗೊತ್ತಿದೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಐದು ದಿವಸ ಬಾವಿಯಲ್ಲಿ ಕುಳಿತಿರಲಿಲ್ಲವೆ?

(ಗೊಂದಲ)

ಶ್ರೀ ಜೆ.ಟಿ. ದೇವೇಗೌಡ: ಪೂರಕ ಅಂದಾಜುಗಳನ್ನು ಹಣಕಾಸು ಸಚಿವರು ಮಂಡಿಸಿದ್ದಾರೆ. ಎಲ್ಲರಿಗೂ ಮಾಹಿತಿಯನ್ನು ಒದಗಿಸಿದ್ದಾರೆ. ಇದರ ಬಗ್ಗೆ ಚರ್ಚೆಯಾಗಿದೆ. ಸಮಗ್ರವಾದ ಅಂಕಿ ಅಂಶವನ್ನು ಕೊಟ್ಟಿದ್ದಾರೆ. ಅದಕ್ಕೆ ಅನುಮೋದನೆ ಕೊಡಿ. ಮುಂದಿನ ಬಜೆಟ್‌ನಲ್ಲಿ ಏನು ಮಾಹಿತಿ ಬೇಕು ಕೊಡುವುದಕ್ಕೆ ಅವರೂ ಸಮರ್ಥರಾಗಿದ್ದಾರೆ, ಮಾಹಿತಿ ಕೊಡುತ್ತಾರೆ. ಅವರೇನೂ ಅಸಮರ್ಥರಲ್ಲ. ಹಣಕಾಸು ಸಚಿವರು ಸಮರ್ಥರಾಗಿದ್ದಾರೆ. ಮುಂದಿನ ಬಜೆಟ್‌ಗೆ ಎಲ್ಲಾ ಮಾಹಿತಿಯನ್ನು ಒದಗಿಸುವ ಶಕ್ತಿ ಅವರಿಗಿದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ತಾವು ಮುಗಿಸಿ. ಧನ ವಿನಿಯೋಗ ವಿಧೇಯಕದ ಬಗ್ಗೆ ಉತ್ತರ ಕೊಡುತ್ತಿದ್ದಾರೆ, ದಯಮಾಡಿ ಸಹಕರಿಸಿ.

ಶ್ರೀ ಜೆ.ಟಿ. ದೇವೇಗೌಡ: ಎಲ್ಲಾ ಸದಸ್ಯರಿಗೂ ಅವರು ಮಾಹಿತಿ ಕೊಟ್ಟಿದ್ದಾರೆ. ಅದನ್ನು ಮತ್ತೆ ಓದತಕ್ಕ ಅವಶ್ಯಕತೆ ಇಲ್ಲ.

ಅಧ್ಯಕ್ಷರು: ಏಕೆ ಈ ರೀತಿ ಮಾಡುತ್ತಿದ್ದೀರಿ?

ಶ್ರೀ ಜೆ.ಟಿ. ದೇವೇಗೌಡ: ಅದನ್ನು ಮಂಡಿಸಿದ್ದೀರಿ, ಅನುಮೋದನೆಗೆ ಅವಕಾಶ ಕೊಡಿ ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು: ಹಣಕಾಸು ಸಚಿವರು ಉತ್ತರ ಕೊಟ್ಟಮೇಲೆ ಅನುಮೋದನೆ ಅಲ್ಲವೆ?

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಮಾನ್ಯ ರೇವಣ್ಣನವರು ರೈತರ ಬಗ್ಗೆ ಹೇಳಿದರು.

(ಗೊಂದಲ)

ಅಧ್ಯಕ್ಷರು: ಅವರು ಮಂತ್ರಿಗಳಾಗಿದ್ದವರು ಏನೋ ವಿವರಣೆ ಕೊಡುತ್ತಾರೆ. ಏಕೆ ತಾವು ಈ ರೀತಿ ಮಾಡತ್ತೀರಿ?

ಶ್ರೀ ಬಿ.ಸಿ. ಪಾಟೀಲ್: ಪ್ರಕಾಶ್ ಹುಕ್ಕೇರಿಯವರು ಮಂತ್ರಿಯಾಗಿದ್ದಾಗ ಒಂದು ದಿವಸ ಎದ್ದು ನಿಂತು ಉತ್ತರ ಕೊಟ್ಟಿರಲಿಲ್ಲ. ಒಂದು ದಿವಸ ರೈತರ ಬಗ್ಗೆ ಮಾತನಾಡಿಲ್ಲ.

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಈ ಆವರ್ತ ನಿಧಿಯನ್ನು ಯಾರು ತಂದರು? ಯಾವ ಸರ್ಕಾರ ತಂದಿತು? ಕಳೆದ 18 ತಿಂಗಳಿನಲ್ಲಿ ನಾವು ರೈತರಿಗೆ 200 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಗೋವಿನ ಜೋಳ ಖರೀದಿ ಮಾಡುವುದಕ್ಕೆ, ಈರುಳ್ಳಿ ಖರೀದಿ ಮಾಡುವುದಕ್ಕೆ ಒಂದು ದಿವಸ ನಾವು ಆ ಫೈಲನ್ನು ಇಟ್ಟುಕೊಂಡಿಲ್ಲ. ಅದರ ಬಗ್ಗೆ ನೀವು ಹೇಳಬೇಕು.

(ಗೊಂದಲ)

ಅಧ್ಯಕ್ಷರು: ಅರ್ಥ ಸಚಿವರು ಉತ್ತರ ಕೊಡಲು ಎದ್ದಿದ್ದಾರೆ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ಶಿವರಾಂ: ಅವರು ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ, ಅವರು ಕೊಟ್ಟಿರುವುದನ್ನು ಹೇಳುತ್ತಿದ್ದಾರೆ, ನೀವು ಏನೇನೋ ಮಾತನಾಡಿದರೆ ಹೇಗೆ? ಬೆಳೆ ವಿಮೆ ತಂದಿರತಕ್ಕದ್ದು ನಮ್ಮ ಸರ್ಕಾರ. ಅಪ್ರೋಪ್ರಿಯೇಷನ್ ಬಿಲ್ಲಿನ ಬಗ್ಗೆ ಮಾತನಾಡುವಾಗ ಮಧ್ಯೆ ಮಧ್ಯೆ ಮಾತನಾಡುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು: ರೀ, ಕುಳಿತುಕೊಳ್ಳಿ. ಯಾರ್ರಿ ನೀವು? ಪ್ರತಿ ಸಲ ಇದೇ ತರಹ ಮಾಡುತ್ತೀರಿ. ಎಷ್ಟು ಹೇಳಿದರೂ ನಿಮಗೆ ಅಷ್ಟೆ. ದಯಮಾಡಿ ಕುಳಿತುಕೊಳ್ಳಿ. ಅವರು ಉತ್ತರ ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಬೇಡಿಕೆ ಸಂಖ್ಯೆ 16ರಲ್ಲಿ ಕಂಡುಬರುವಂತೆ ಹಿಂದಿನ ಆಯವ್ಯಯ ಚರ್ಚೆಯ ಸಮಯದಲ್ಲಿ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಕಟ್ಟದೆ ಬಾಕಿ ಉಳಿದಿದ್ದ ಮನೆಗಳನ್ನು ಪೂರ್ಣಮಾಡುವುದಕ್ಕೋಸ್ಕರ ತೀರ್ಮಾನ ಮಾಡಲಾಗಿದೆ. ಇದಲ್ಲದೆ ಪ್ರತಿ ಗ್ರಾಮಪಂಚಾಯಿತಿಗೆ ಹೆಚ್ಚಿನ 40 ಮನೆಗಳನ್ನು ನಿರ್ಮಿಸಲು ಸಹ ತೀರ್ಮಾನಿಸಲಾಗಿತ್ತು. ಈ ತೀರ್ಮಾನವನ್ನು ಅನುಷ್ಠಾನ ಮಾಡುವುದಕೋಸ್ಕರ 55 ಕೋಟಿ 21 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಅಲ್ಲದೆ ಆಶ್ರಯ ಮನೆಗಳ ಯೋಜನೆ ಅನುಷ್ಠಾನಗೊಳಿಸುವುದಕ್ಕೋಸ್ಕರ ಸುಮಾರು 46 ಕೋಟಿ 40 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವ ಪ್ರಸ್ತಾವನೆಯನ್ನು ಇಲ್ಲಿ ಮಂಡನೆ ಮಾಡಿದ್ದೇನೆ. ಬೇಡಿಕೆ ಸಂಖ್ಯೆ 18ರಲ್ಲಿ ಕಂಡುಬರುವಂತೆ ಮೈಸೂರು ಲ್ಯಾಂಪ್ಸ್ ಸಂಸ್ಥೆ 12.43 ಕೋಟಿ ರೂಪಾಯಿಗಳಿಗೆ ತನ್ನ ಆಸ್ತಿಗಳನ್ನು ಅಡವಿಟ್ಟು ಬ್ಯಾಂಕ್‌ಗಳಿಂದ ಸಾಲವನ್ನು ಪಡೆದುಕೊಂಡಿತ್ತು. ಈ ಸಂಸ್ಥೆಯ ಆಸ್ತಿಗಳ ಮೇಲೆ ಹಕ್ಕನ್ನು ಪುನರ್ ಸ್ಥಾಪಿಸಲು ಈ ಸಾಲವನ್ನು ಸರ್ಕಾರ ಮರುಪಾವತಿ

ಮಾಡಲು ಒಪ್ಪಿದ್ದು, ಮೈಸೂರು ಲ್ಯಾಂಪ್ಸ್ ಸಂಸ್ಥೆಯ ಆಸ್ತಿಗಳ ಮೇಲೆ ರಾಜ್ಯ ಸರ್ಕಾರ ಮತ್ತೊಮ್ಮೆ ಹತೋಟಿಯನ್ನು ಪಡೆದುಕೊಂಡಂತಾಗಿದೆ. ಇದಲ್ಲದೆ ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯನ್ನು ಪುನಃಶ್ಚೇತನಗೊಳಿಸುವುದಕ್ಕೋಸ್ಕರ 15 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಇಲ್ಲಿ ಮಾಡಿದ್ದೇವೆ. ಬೇಡಿಕೆಯ ಸಂಖ್ಯೆ 20 ರಲ್ಲಿ ಕಂಡುಬರುವಂತೆ 2005ನೇ ಸಾಲಿನಲ್ಲಿ ಮಳೆ ಬಂದು ರಸ್ತೆಗಳೆಲ್ಲಾ ಹಾಳಾದ ಕಾರಣ ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಲೋಕೋಪಯೋಗಿ ಇಲಾಖೆಗೆ ಹೆಚ್ಚುವರಿಯಾಗಿ 202 ಕೋಟಿ 5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವಂಥ ಪ್ರಸ್ತಾವನೆಯನ್ನು ಇಲ್ಲಿ ಮಂಡಿಸಲಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಮಗೆ ಇದರ ಬಗ್ಗೆ ಡೀಟೇಲ್ಸ್ ಕೊಡಬೇಕು. 202 ಕೋಟಿ ರೂಪಾಯಿಗಳನ್ನು ನೀವು ಕಂಟಿನ್‌ಜೆನ್ಸಿ ಫಂಡ್‌ನಿಂದ ಡ್ರಾ ಮಾಡಿ ನಮ್ಮ ಕ್ಷೇತ್ರಗಳಲ್ಲಿ ಒಂದೂ ಗುಂಡಿ ತುಂಬಿಲ್ಲ. ಆದ್ದರಿಂದ ಅದರ ಕಾಗದ ಪತ್ರಗಳನ್ನು ಟೇಬಲ್ ಮಾಡಬೇಕು. 202 ಕೋಟಿ ರೂ. ಎಲ್ಲಿಗೆ ಖರ್ಚಾಯಿತು ಎಂಬುದನ್ನು ಹೇಳಬೇಕಲ್ಲಾ We want to know it first. ಬನ್ನಿ ನಮ್ಮ ಭಾಗದಲ್ಲಿರುವ ರಸ್ತೆಯನ್ನು ನೋಡಿ. ಅದಕ್ಕೆ ನಾವು ಕಾರಣ ಕೊಡಿ ಎಂದು ಕೇಳುತ್ತಿದ್ದೇವೆ. ನೀವು ನಮಗೆ ಅದರ ಬಗ್ಗೆ ಡೀಟೇಲ್ಸ್‌ನ್ನು ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇದರ ಬಗ್ಗೆ ನೀವು ಚರ್ಚೆ ಮಾಡಬೇಡಿ ಎಂದು ನಾನು ಹೇಳಿಲ್ಲ. ಎಲ್ಲಾ ವಿವರವನ್ನು ಕೊಡಲು ನಾನು ಸಿದ್ಧನಿದ್ದೇನೆ. ಚರ್ಚೆಗೂ ನಾವು ಸಿದ್ಧರಿದ್ದೇವೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಯಡಿಯೂರಪ್ಪನವರೆ, ನಿಮಗೆ ಸಹಾಯವಾಗುತ್ತದೆ ಎಂಬ ಕಾರಣಕ್ಕೋಸ್ಕರ ನಮಗೆ ವಿವರ ಕೊಡಿ ಎಂದು ನಾವು ಹೇಳಿದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಶ್ರೀರಾಮರೆಡ್ಡಿಯವರು ತಾವು ಹೇಳುವುದು ಸರಿ, ಪೂರಕ ಬೇಡಿಕೆಯ ಪುಸ್ತಕವನ್ನು ತಮಗೆ ಕೊಟ್ಟು ನಾಲ್ಕು ದಿವಸಗಳಾಯಿತು. ಇಲ್ಲಿ ಅದರ ಬಗ್ಗೆ ಚರ್ಚೆ ಮಾಡಬೇಡಿ ಎಂದು ನಾವು ಹೇಳಿದ್ದೇವೇನು?

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಹೇಳಿದ್ದು ಅದರ ವಿವರ ಗೊತ್ತಾಗಲಿ. 202 ಕೋಟಿ ರೂ ಕೊಟ್ಟಿದ್ದೇವೆಂದು ಹೇಳುತ್ತಾರಲ್ಲಾ, ಯಾವ ರಸ್ತೆಯಲ್ಲಿ ಕೆಲಸ ಮಾಡಿದ್ದಾರೆ ತೋರಿಸಲಿ?

ಅಧ್ಯಕ್ಷರು: ಆಯಿತು. ಅವರು ಹೇಳುತ್ತಿದ್ದಾರೆ, ಸ್ವಲ್ಪ ತಾಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಬೇಡಿಕೆಯ ಸಂಖ್ಯೆ, 22ರಲ್ಲಿ ಕಂಡುಬರುವಂತೆ ಮಂಡ್ಯ, ಹಾಸನ, ಶಿವಮೊಗ್ಗ, ಬೆಳಗಾವಿ ಜಿಲ್ಲೆಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ತೆರೆಯಲು ಉದ್ದೇಶಿಸಲಾಗಿದೆ. ಇದರ ಕಟ್ಟಡ ನಿರ್ಮಾಣ ಕೆಲಸ 2006ರ ಒಳಗಾಗಿ ಮುಗಿಯಬೇಕಾಗಿದೆ. ಹೆಚ್ಚುವರಿಯಾಗಿ 20 ಕೋಟಿ ರೂಪಾಯಿಗಳನ್ನು ನೀಡುವ ಪ್ರಸ್ತಾವನೆಯನ್ನು ಮಂಡಿಸಲಾಗಿದೆ. ಬೇಡಿಕೆಯ ಸಂಖ್ಯೆ 22ರಲ್ಲಿ ಕಂಡುಬರುವಂತೆ ಮೈಸೂರಿನಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ಹೊಸದಾಗಿ ಪ್ರಾರಂಭವಾಗಿದ್ದು ವಿದ್ಯುತ್ ಕಂಪನಿಗೆ ಶೇರು ಬಂಡವಾಳವಾಗಿ 50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವ ಪ್ರಸ್ತಾವನೆ ಮಾಡಲಾಗಿದೆ. ನಾನು ಇಲ್ಲಿ

ಪ್ರಮುಖವಾಗಿ ಎರಡು ಮಾತನ್ನು ಹೇಳಲು ಇಷ್ಟಪಡುತ್ತೇನೆ. ನಮ್ಮ ಅಧಿಕಾರಿಗಳಿಂದ ಯಾವುದೇ ತಪ್ಪಾಗಿಲ್ಲ. ಮಾನ್ಯ ರಾಜ್ಯಪಾಲರಿಂದ ಇದಕ್ಕೆ ಅನುಮೋದನೆಯನ್ನು ಪಡೆದು ಇಲ್ಲಿಗೆ ಕಳಿಸಿಕೊಡುವ ಪ್ರಯತ್ನವನ್ನು ನಾವು ಮಾಡಿದ್ದೇವೆ. ಉದ್ದೇಶ ಮತ್ತು ಕಾರಣಗಳ ಹೇಳಿಕೆಯಲ್ಲಿ ಭಾರತದ ಸಂವಿಧಾನ 205(1ಎ) ಅನುಚ್ಛೇದದ ಬದಲಾಗಿ 205(1) ಮಾತ್ರ ಇಡಬೇಕಾಗಿದೆ. ಅದಕ್ಕೆ ಅಫಿಶಿಯಲ್ ಅಮೆಂಡ್‌ಮೆಂಟ್ ಮೂವ್ ಮಾಡಿ ಎಂದು ಆ ಮನೆಯಲ್ಲಿ ಹೇಳಿದರು. ಮೂವ್ ಮಾಡಿದೆವು, ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಒಪ್ಪಿಗೆಯಾಯಿತು, ಕಾಂಗ್ರೆಸ್‌ನ ನಮ್ಮ ಸ್ನೇಹಿತರಿಗೆ ಬಹುಮತ ಇದೆಯೆಂದು ಅಲ್ಲಿ ಅದನ್ನು ರಿಜೆಕ್ಟ್ ಮಾಡಿದರು. ಅದಕ್ಕಾಗಿ ಇದು ಇಲ್ಲಿಗೆ ವಾಪಸ್ ಬಂತು. ಆದ್ದರಿಂದ ನಾನು ಇದರ ಬಗ್ಗೆ ರಾಜಕಾರಣ ಬೆಳೆಸಲು ಇಷ್ಟಪಡುವುದಿಲ್ಲ. ನನಗೆ ನೆನಪಿರುವ ಪ್ರಕಾರ ಫೈನಾನ್ಷಿಯಲ್ ಬಿಲ್ ಕಳೆದ ಹತ್ತಾರು ವರ್ಷದಲ್ಲಿ ಯಾವುದನ್ನೂ ವಾಪಸ್ ಕಳುಹಿಸಿದಂಥ ಉದಾಹರಣೆಗಳು ಇಲ್ಲ. ನಾನು ಅದರ ಬಗ್ಗೆ ಟೀಕೆ ಮಾಡುವುದಕ್ಕೆ ಇಚ್ಛೆ ಪಡುವುದಿಲ್ಲ. ಈ ಸಂದರ್ಭದಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಚರ್ಚೆ ಮಾಡುವುದಕ್ಕೆ ಬೇಕಾದಷ್ಟು ಅವಕಾಶಗಳು ಇದೆ. ಇವನ್ನು ನಾನು ಯಾವ ತಿದ್ದುಪಡಿಯೊಂದಿಗೆ ಈ ಒಂದು ಉದ್ದೇಶ ಮತ್ತು ಕಾರಣಗಳ ಹೇಳಿಕೆಯಲ್ಲಿ ಭಾರತದ ಸಂವಿಧಾನ 205 (1ಎ) ಎಂಬ ಪದಗಳು, ಅಂಕಿಗಳು, ಆವರಣಗಳು ಹಾಗೂ ಅಕ್ಷರಗಳ ಬದಲಿಗೆ ಭಾರತದ ಸಂವಿಧಾನ 205(1) ಎಂಬ ಪದಗಳು, ಅಂಕಿಗಳು, ಆವರಣಗಳು ಹಾಗೂ ಅಕ್ಷರಗಳನ್ನು ಪ್ರತ್ಯೋಜಿಸಲಾಗಿದ್ದು ಕರ್ನಾಟಕ ಧನವಿನಿಯೋಗ ವಿಧೇಯಕ 2006ಕ್ಕೆ ತಿದ್ದುಪಡಿಯೊಂದಿಗೆ ಅನುಮೋದನೆಯನ್ನು ಮಾಡಬೇಕೆಂದು ಕೋರುತ್ತಿದ್ದೇನೆ.

ಪರ್ಯಾಲೋಚನಾ ಪ್ರಸ್ತಾವ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ "2006ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಪ್ರಸ್ತಾವ ಏನೆಂದರೆ:–

ಅಧ್ಯಕ್ಷರು: "ಖಂಡ 2 ಮತ್ತು 3, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಎಸ್. ಯಡಿಯೂರಪ್ಪ (ಹಣಕಾಸು ಸಚಿವರು ಮತ್ತು ಉಪ ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, "2006ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪುನರ್ ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ "2006ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪುನರ್ ಅಂಗೀಕರಿಸುವುದು".

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಪುನರ್ ಅನುಮೋದನೆ ನೀಡಲಾಯಿತು.)

ಅಧ್ಯಕ್ಷರು: ಈಗ ಸದನವನ್ನು 2006ನೇ ಮಾರ್ಚ್ 16ನೇ ಗುರುವಾರದಂದು ಬೆಳಿಗ್ಗೆ 11 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 7 ಗಂಟೆ 59 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 16ನೇ ಮಾರ್ಚ್ ಮಾಹೆ 2006ರ ಗುರುವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

ಕರ್ನಾಟಕ ವಿಧಾನ ಪರಿಷತ್ತು ಸಹಮತಿ ನೀಡಿದ ಕರ್ನಾಟಕ ಧನವಿನಿಯೋಗ ವಿಧೇಯಕ, 2006 (2006ರ ವಿಧಾನಸಭೆಯ ವಿಧೇಯಕ ಸಂಖ್ಯೆ 2)

2005–06ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

2005–06ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ,

1. ಸಂಕ್ಷಿಪ್ತ ಹೆಸರು: ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ ಅಧಿನಿಯಮ 2006 ಎಂದು ಕರೆಯತಕ್ಕದ್ದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2005–06ನೇ ಹಣಕಾಸು ವರ್ಷಕ್ಕಾಗಿ 16388245000 ರೂಪಾಯಿಗಳ ನೀಡಿಕೆ: ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ 2005–06ನೇ ಹಣಕಾಸು ಅವಧಿಯಲ್ಲಿ ಸಂದಾಯ ಮಾಡುವಾಗ ಒದಗಿ ಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಮೊತ್ತದಲ್ಲಿ **ಒಂದು ಸಾವಿರದ ಆರುನೂರ ಮೂವತ್ತೆಂಟು ಕೋಟಿ ಎಂಬತ್ತೆರಡು ಲಕ್ಷದ ನಲವತ್ತೈದು ಸಾವಿರ ರೂಪಾಯಿಗಳಿಗೆ** ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದ್ದು ಮತ್ತು ಉಪಯೋಗಿಸತಕ್ಕದ್ದು.

3. ಧನವಿನಿಯೋಗ: ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

(ಲಕ್ಷ ರೂ.ಗಳಲ್ಲಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ವಿಧಾನ ಸಭೆಯಿಂದ ಪುರಸ್ಕೃತ ವಾದುದು	ಮೊಬಲಗು ಸಂಚಿತ ನಿಧಿಯಿಂದ ಪ್ರಭೃತ ವಾದುದು	ಒಟ್ಟು
1	2		3	4	5
1	ಕೃಷಿ ಮತ್ತು ತೋಟಗಾರಿಕೆ	ರಾಜಸ್ವ	1308.36	---	1308.36
2	ಪಶುಸಂಗೋಪನೆ ಮತ್ತು ಮೀನುಗಾರಿಕೆ	ರಾಜಸ್ವ	312.61	---	312.61
3	ಆರ್ಥಿಕ	ರಾಜಸ್ವ	1036.50	---	1036.50
		ಬಂಡವಾಳ	25.00	---	25.00
4	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	ರಾಜಸ್ವ	469.04	475.50	944.54
5	ಒಳಾಡಳಿತ ಮತ್ತು ಸಾರಿಗೆ	ರಾಜಸ್ವ	1683.85	---	1683.85
7	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್	ಬಂಡವಾಳ	23576.00	---	23576.00
8	ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ	ರಾಜಸ್ವ	363.34	0.46	363.80
9	ಸಹಕಾರ	ರಾಜಸ್ವ	55.00	---	55.00
		ಬಂಡವಾಳ	980.50	---	980.50
10	ಸಮಾಜ ಕಲ್ಯಾಣ	ರಾಜಸ್ವ	651.55	---	651.55
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	ರಾಜಸ್ವ	516.45	---	516.45
12	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು	ರಾಜಸ್ವ	285.50	---	285.50
13	ಆಹಾರ ಮತ್ತು ನಾಗರೀಕ ಸರಬರಾಜು	ರಾಜಸ್ವ	18002.00	---	18002.00
14	ಕಂದಾಯ	ರಾಜಸ್ವ	49554.00	---	49554.00
15	ಮಾಹಿತಿ ತಂತ್ರಜ್ಞಾನ	ರಾಜಸ್ವ	318.00	---	318.00
		ಬಂಡವಾಳ	610.00	---	610.00
16	ವಸತಿ	ರಾಜಸ್ವ	6025.78	---	6025.78
		ಬಂಡವಾಳ	4640.00	---	4640.00

17	ಶಿಕ್ಷಣ	ರಾಜಸ್ವ	2241.16	---	2241.16
18	ವಾಣಿಜ್ಯ ಮತ್ತು ಕೈಗಾರಿಕೆ	ರಾಜಸ್ವ	236.76	---	236.76
		ಬಂಡವಾಳ	2821.69	---	2821.69
19	ನಗರಾಭಿವೃದ್ಧಿ	ರಾಜಸ್ವ	100.00	---	100.00
20	ಲೋಕೋಪಯೋಗಿ	ರಾಜಸ್ವ	20512.92	---	20512.92
		ಬಂಡವಾಳ	5103.72	---	5103.72
21	ಜಲಸಂಪನ್ಮೂಲ	ರಾಜಸ್ವ	371.56	---	371.56
		ಬಂಡವಾಳ	6550.00	---	6550.00
22	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	ರಾಜಸ್ವ	2751.82	---	2751.82
24	ಇಂಧನ	ಬಂಡವಾಳ	5000.00	---	5000.00
25	ಕನ್ನಡ ಮತ್ತು ಸಂಸ್ಕೃತಿ	ರಾಜಸ್ವ	151.70	---	151.70
26	ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ	ರಾಜಸ್ವ	188.40	---	188.40
27	ಕಾನೂನು	ರಾಜಸ್ವ	40.74	50.00	90.74
28	ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ	ರಾಜಸ್ವ	1166.66	12.94	1179.60
29	ಋಣ ಮೇಲುಸ್ತುವಾರಿ	ರಾಜಸ್ವ	---	39.46	39.46
		ಬಂಡವಾಳ	---	5653.48	5653.48
	ಒಟ್ಟು:	**ರಾಜಸ್ವ**	**108343.70**	**578.36**	**108922.06**
		ಬಂಡವಾಳ	**49306.91**	**5653.48**	**54960.39**
	ಒಟ್ಟು ಮೊತ್ತ:		**157650.61**	**6231.84**	**163882.45**

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2005–06ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿ ಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 205ನೇ (1) ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಬಿ.ಎಸ್ ಯಡಿಯೂರಪ್ಪ
ಉಪ ಮುಖ್ಯಮಂತ್ರಿ ಹಾಗೂ
ಹಣಕಾಸು ಸಚಿವರು.

ಟಿ. ರಾಜಣ್ಣ
ಕಾರ್ಯದರ್ಶಿ

* * * * *

(B) 025253

HIGH COURT PRESS, BANGALORE-1